ಬೆಂಗಳೂರು
ಬುಧವಾರ, 1 ಏಪ್ರಿಲ್ 2026
ಸಂಪುಟ 33, ಸಂಚಿಕೆ 150, ಪುಟಗಳು 12+4
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
RNI: 58231/94
REG No.KA/BG GPO/2532/2021-23
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಕೇರಳ ಬಿಜೆಪಿ ಪ್ರಣಾಳಿಕೆ ಬಿಡುಗಡೆ | ೦೮
ಇನ್‌ಫ್ಲುಯೆನ್ಸರ್ಸ್ ಮೇಲೆ ಹದ್ದಿನ ಕಣ್ಣು | ೦೮
ಟೆನಿಸ್ ದಂತಕಥೆ ಲಿಯಾಂಡರ್ ಬಿಜೆಪಿಗೆ | ೦೮

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ, ತಿಥಿ: ಚತುರ್ದಶಿ, ನಕ್ಷತ್ರ: ಉತ್ತರೆ

ದಿನದ ಮಾತು

ಪ್ರಪಂಚವು ಭಗವದಾನಂದ ಮತ್ತು ವಿಷಯ ಸುಖವೆಂಬ ಹಾಲು ನೀರುಗಳ ಬೆರಕೆ. ಹಂಸದಂತೆ ನೀರನ್ನು ತ್ಯಜಿಸಿ ಹಾಲನ್ನು ಮಾತ್ರ ಸೇವಿಸಬೇಕು.

▲ ಶ್ರೀ ರಾಮಕೃಷ್ಣ ಪರಮಹಂಸ

ಸಿಲಿಂಡರ್ ನಿರ್ಭರದಿಂದ ಆತ್ಮನಿರ್ಭರವಾಗುವತ್ತ

ಖಾರಾ ಬಾತ್

• ವಿನಾಯಕ ಭಟ್ಟ ಮೂರೂರು

• ಪುಟ ೬

ಕಿರುಸುದ್ದಿ

ಜೈಶ್ ಮುಖ್ಯಸ್ಥ ಮಸೂದ್ ಅಜರ್ ಸಹೋದರ ಹತ್ಯೆ

• **ಹೊಸದಿಲ್ಲಿ:** ಜೈಶ್-ಎ-ಮೊಹಮ್ಮದ್ ಮುಖ್ಯಸ್ಥ ಮೌಲಾನಾ ಮಸೂದ್ ಅಜರ್‌ನ ಹಿರಿಯ ಸಹೋದರ, ಭಾರತಕ್ಕೆ ಮೋಸ್ಟ್ ವಾಂಟೆಂಡ್ ಆಗಿದ್ದ ಉಗ್ರ ಮೊಹಮ್ಮದ್ ತಾಹಿರ್ ಅನ್ವರ್ ಪಾಕಿಸ್ತಾನದಲ್ಲಿ ನಿಗೂಢವಾಗಿ ಮೃತಪಟ್ಟಿದ್ದಾನೆ.

• ಪುಟ ೮

ಕಾಲ್ತುಳಿತ: 9 ಭಕ್ತರ ಸಾವು

• ಪುಟ ೮

ಅಸ್ಸಾಂ ಬಿಜೆಪಿ ಪ್ರಣಾಳಿಕೆ: ಏನಾಸಂ ಜಾರಿ ಭರವಸೆ

• ಪುಟ ೮

ಪರಮಾಣುನಗರ ಇಸ್ಫಾಹಾನ್ ಮೇಲೆ ಅಮೆರಿಕ ಬಾಂಬ್ ದಾಳಿ

ಟ್ಯಾಂಕರ್ ನಾಶಗೈದ ಇರಾನ್ | 2ನೇ ತಿಂಗಳಿಗೆ ಕಾಲಿಟ್ಟ ಯುದ್ಧ


ಮತ್ತೆ ಯುದ್ಧೋನ್ಮಾದ

• **ದುಬೈ:** ಇರಾನ್‌ನ ಪ್ರಮುಖ ಪರಮಾಣು ಕೇಂದ್ರವಿರುವ ಇಸ್ಫಾಹಾನ್ ನಗರದ ಮೇಲೆ ಮಂಗಳವಾರ ಅಮೆರಿಕ ದಾಳಿ ನಡೆಸಿದ್ದು, ಇದಕ್ಕೆ ಪ್ರತಿಯಾಗಿ ಇರಾನ್ ಪರ್ಷಿಯನ್ ಕೊಲ್ಲಿಯಲ್ಲಿ ಕುವೈತ್‌ನ ತೈಲ ಟ್ಯಾಂಕರ್ ಮೇಲೆ ದಾಳಿ ಮಾಡಿದೆ.

ಅಮೆರಿಕದ ಪಡೆಗಳು ಇಸ್ಫಾಹಾನ್‌ನಲ್ಲಿರುವ ಮದ್ದು ಗುಂಡು ಡಿಪೋವನ್ನು 2,000 ಪೌಂಡ್ (ಸುಮಾರು 907-ಕಿಲೋಗ್ರಾಂ) ಬಂಕರ್ ಬಸ್ಟರ್ ಬಾಂಬ್‌ಗಳೊಂದಿಗೆ ಸ್ಫೋಟಿಸಿವೆ ಎಂದು ಅಮೆರಿಕ ಹೇಳಿಕೊಂಡಿದ್ದು, ವಿಡಿಯೋವೊಂದನ್ನು ಸಹ ಬಿಡುಗಡೆ ಮಾಡಿದೆ. ದಾಳಿ ನಡೆಸಲು ಹೆಚ್ಚಿನ ಪ್ರಮಾಣದ ಪೆನೆಟ್ರೇಟರ್ ಮದ್ದುಗುಂಡುಗಳನ್ನು ಬಳಸಲಾಗಿದೆ ಎಂದು ಅಧಿಕಾರಿ ಹೇಳಿದರು. ಯುದ್ಧವು ಎರಡನೇ ತಿಂಗಳಿಗೆ ಕಾಲಿಡುತ್ತಿದ್ದಂತೆ, ಪಾಕಿಸ್ತಾನ, ಈಜಿಪ್ಟ್, ಸೌದಿ ಅರೇಬಿಯಾ ಮತ್ತು ಟರ್ಕಿ ಮಧ್ಯಸ್ಥಿಕೆ ವಹಿಸಲು ಪ್ರಯತ್ನಿಸುತ್ತಿರುವಾಗ, ಈ ದಾಳಿಯು ಭಯ ಹೆಚ್ಚಿಸಿದೆ.



ತೀವ್ರಗೊಂಡ ಸಂಘರ್ಷ: ಅಮೆರಿಕ ಮತ್ತು ಇಸ್ರೇಲ್ ಮೊದಲ ದಾಳಿ ನಡೆಸಿದ ಒಂದು ತಿಂಗಳ ನಂತರ ಈ ಬೆಳವಣಿಗೆ ನಡೆದಿದೆ. ಈ ಯುದ್ಧದಿಂದಾಗಿ ಇಲ್ಲಿಯವರೆಗೆ 3,000ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ. ಜಾಗತಿಕ ತೈಲ ಹಾಗೂ ನೈಸರ್ಗಿಕ ಅನಿಲ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿದೆ. ಮಂಗಳವಾರ ಅಮೆರಿಕದಲ್ಲಿ ಗ್ಯಾಸೋಲಿನ್ ಬೆಲೆ ಪ್ರತಿ ಗ್ಯಾಲನ್‌ಗೆ 4 ಡಾಲರ್ ದಾಟಿದೆ. ➡ಪುಟ ೨



ಯುದ್ಧ ವೆಚ್ಚ ಭರಿಸಲು ಗಲ್ಫ್‌ಗೆ ಟ್ರಂಪ್ ಮನವಿ ಸಾಧ್ಯತೆ

ಇರಾನ್ ಯುದ್ಧದ ವೆಚ್ಚ ಭರಿಸಲು 200 ಶತಕೋಟಿ ಡಾಲರ್ ನೀಡಲು ಅಮೆರಿಕ ಅಧ್ಯಕ್ಷ ಟ್ರಂಪ್ ಗಲ್ಫ್ ರಾಷ್ಟ್ರಗಳಿಗೆ ಮನವಿ ಮಾಡುವ ಸಾಧ್ಯತೆಯಿದೆ. ಸೋಮವಾರ ಶ್ವೇತಭವನದ ವಕ್ತಾರೆ ಕ್ಯಾರೊಲಿನ್ ಲೀವಿಟ್ ತಾವು ಅಧ್ಯಕ್ಷರಿಗೆ ಇಂತಹದ್ದೊಂದು ಸಲಹೆ ನೀಡಿರುವುದಾಗಿ ಹೇಳಿಕೊಂಡಿದ್ದಾರೆ. ಇರಾಕ್‌ನಿಂದ ಕುವೈತ್‌ಗೆ ವಿಮೋಚನೆ ನೀಡಿದ್ದಾಗ 34 ರಾಷ್ಟ್ರಗಳ ಒಕ್ಕೂಟವನ್ನು ಅಮೆರಿಕವೇ ನೇತೃತ್ವ ವಹಿಸಿತ್ತು. ಅಂದಿನ ಯುದ್ಧ ವೆಚ್ಚ 54 ಶತಕೋಟಿ ಡಾಲರ್‌ನಲ್ಲಿ ಬಹುತೇಕ ಹಣವನ್ನು ಯುಎಇ ಭರಿಸಿತ್ತು.

ತೈಲ ಮಾರುಕಟ್ಟೆ ಮೇಲೆ ಪರಿಣಾಮ

ಹಾರ್ಮುಜ್ ಜಲಸಂಧಿ ಮೇಲೆ ಇರಾನ್ ನಿಯಂತ್ರಣ ಸಾಧಿಸಿರುವುದರಿಂದ ಜಾಗತಿಕ ತೈಲ ಬೆಲೆ ಏರಿಕೆಯಾಗಿದೆ.



ಫೆ.28ರಿಂದ ಬ್ರೆಂಟ್ ಕ್ರೂಡ್ ತೈಲದ ಬೆಲೆ ಶೇ.45ರಷ್ಟು ಹೆಚ್ಚಾಗಿದ್ದು, ಮಂಗಳವಾರ ಪ್ರತಿ ಬ್ಯಾರೆಲ್‌ಗೆ 106 ಡಾಲರ್ ತಲುಪಿದೆ. ಜಲಸಂಧಿಯನ್ನು ಮುಕ್ತಗೊಳಿಸದಿದ್ದರೆ ಖಾರ್ಗ್ ದ್ವೀಪದ ತೈಲ ರಫ್ತು ಕೇಂದ್ರದ ಮೇಲೆ ದಾಳಿ ನಡೆಸುವುದಾಗಿ ಟ್ರಂಪ್ ಎಚ್ಚರಿಸಿದ್ದಾರೆ.

ಗಲ್ಫ್‌ನಲ್ಲಿ 57 ಸಾವಿರ ಸೈನಿಕರ ನಿಯೋಜನೆ!

ಕತಾರ್, ಕುವೈತ್, ಬಹ್ರೈನ್, ಯುಎಇ, ಸೌದಿ ಅರೇಬಿಯಾ, ಇರಾಕ್, ಜೋರ್ಡನ್, ಸಿರಿಯಾ ಮೊದಲಾದ ಗಲ್ಫ್ ರಾಷ್ಟ್ರಗಳಲ್ಲಿನ ಅಮೆರಿಕ ಸೇನಾ ನೆಲೆಗಳಲ್ಲಿ 57,000 ಸೈನಿಕರನ್ನು ನಿಯೋಜನೆ ಮಾಡಿಕೊಂಡಿದೆ. ➡ಪುಟ ೨

ಹಾರ್ಮುಜ್ ಮುಚ್ಚಿದ್ದರೂ ಯುದ್ಧ ನಿಲ್ಲಿಸ್ತಾರಾ ಟ್ರಂಪ್?

• **ವಾಷಿಂಗ್ಟನ್:** ಹಾರ್ಮುಜ್ ಜಲಸಂಧಿ ಬಹುತೇಕ ಮುಚ್ಚಿದ್ದರೂ ಸರಿ, ಇರಾನ್ ಯುದ್ಧವನ್ನು ನಿಲ್ಲಿಸಲು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸಿದ್ಧವಾಗಿದ್ದಾರೆಂದು ಅವರ ಆಪ್ತ ವಲಯಗಳು ತಿಳಿಸಿವೆಯೆಂದು ದಿ ವಾಲ್ ಸ್ಟ್ರೀಟ್ ಜರ್ನಲ್ ವರದಿ ಮಾಡಿದೆ. ಸದ್ಯ ಇರಾನ್ ನಿಯಂತ್ರಣದಲ್ಲಿರುವ ಹಾರ್ಮುಜ್ ಜಲಸಂಧಿಯನ್ನು ವಶಪಡಿಸಿ ಸಂಪೂರ್ಣ ತೆರೆಯುವುದಕ್ಕಾಗಿ ಕಾರ್ಯಾಚರಣೆ ಕೈಗೆತ್ತಿಕೊಂಡರೆ ಗುರಿ ಸಾಧಿಸಲು ಇನ್ನೂ ನಾಲ್ಕರಿಂದ ಆರು ವಾರಗಳವರೆಗೆ ಯುದ್ಧ ನಡೆಸುವ ಅಗತ್ಯವಿರುವುದನ್ನು ಟ್ರಂಪ್ ಮತ್ತವರ ಆಪ್ತ ವಲಯ ಮನಗಂಡಿದೆ ಎಂದು ವರದಿಯಾಗಿದೆ. • ವಿವರ ಪುಟ ೮



ಇಂಧನ ಬೇಕಿದ್ದರೆ ಜಲಸಂಧಿಗೆ ತೆರಳಿ!

ಇರಾನ್ ಯುದ್ಧದಲ್ಲಿ ಬೆಂಬಲಿಸದ ಮಿತ್ರರಾಷ್ಟ್ರಗಳಿಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ನಿಮಗೆ ಬೇಕಿರುವ ತೈಲ ನೀವೇ ಸಂಗ್ರಹಿಸಿಕೊಳ್ಳಿ ಎಂದು ಎಚ್ಚರಿಕೆ ನೀಡಿದ್ದಾರೆ. • ವಿವರ ಪುಟ ೮

ಗೂಗಲ್, ಮೈಕ್ರೋಸಾಫ್ಟ್‌ಗೆ ಇರಾನ್ ದಾಳಿ ಬೆದರಿಕೆ • ಪುಟ ೮

ತೆರಿಗೆ ಪಾವತಿಸದ ವಿಧಾನಸೌಧ, ವಿಕಾಸಸೌಧ

ಸರ್ಕಾರಿ ಕಟ್ಟಡ ಕರ ₹473 ಕೋಟಿ ಬಾಕಿ

• **ಬೆಂಗಳೂರು:** ಸಾಮಾನ್ಯ ಜನರ ಸಣ್ಣಪುಟ್ಟ ಆಸ್ತಿ ತೆರಿಗೆ ಬಾಕಿ ಇದೆ ಎಂದು ಆಸ್ತಿ ಹರಾಜು ಹಾಕಲು ಮುಂದಾಗುವ ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ)ದ ನಗರಪಾಲಿಕೆ ಅಧಿಕಾರಿಗಳು, ನೂರಾರು ಕೋಟಿ ರೂಪಾಯಿ ಬಾಕಿ ಉಳಿಸಿಕೊಂಡಿರುವ ವಿಧಾನಸೌಧ, ವಿಕಾಸಸೌಧದಂತಹ ಸರ್ಕಾರಿ ಕಟ್ಟಡಗಳ ವಿರುದ್ಧ ಕ್ರಮ ಜರುಗಿಸಲು ಏಕೆ ಹಿಂದೇಟು ಹಾಕುತ್ತಿದ್ದಾರೆ ಎಂದು ಬಿಜೆಪಿ ನಾಯಕ ಎನ್. ಆರ್. ರಮೇಶ್ ಪ್ರಶ್ನಿಸಿದ್ದಾರೆ.



ಜಿಬಿಎ ಕೇಂದ್ರ ಕಚೇರಿಯಲ್ಲಿ ತೆರಿಗೆ ಬಾಕಿ ಉಳಿಸಿಕೊಂಡಿರುವ ಸರ್ಕಾರಿ ಕಟ್ಟಗಳ ದಾಖಲೆ ಬಿಡುಗಡೆ ಮಾಡಿ, ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ನಗರದ ಪ್ರಮುಖ ಸರ್ಕಾರಿ ಕಟ್ಟಡಗಳು ಮತ್ತು ಇಲಾಖೆಗಳು ಬರೋಬ್ಬರಿ 472.66 ಕೋಟಿ ಮೊತ್ತದ ಸೇವಾ ತೆರಿಗೆಯನ್ನು (ಸರ್ವಿಸ್ ಟ್ಯಾಕ್ಸ್) ಬಾಕಿ ಉಳಿಸಿಕೊಂಡಿರುವ ಬಗ್ಗೆ ದಾಖಲೆ ಬಿಡುಗಡೆ ಮಾಡಲಾಗಿದೆ. ರಾಜ್ಯದ ಆಡಳಿತ ಶಕ್ತಿ ಕೇಂದ್ರಗಳಾದ ವಿಧಾನಸೌಧ ಮತ್ತು ವಿಕಾಸಸೌಧಗಳೇ ಪಾಲಿಕೆಗೆ ಕೋಟ್ಯಂತರ ರೂಪಾಯಿ ಬಾಕಿ ಇಟ್ಟಿವೆ.

ವಿಧಾನಸೌಧ, ವಿಕಾಸಸೌಧ, ಬಹುಮಹಡಿ ಕಟ್ಟಡ, ಕುಮಾರಕೃಪಾ ಅತಿಥಿಗೃಹ ಮತ್ತು ರಾಜಭವನಗಳಿಂದ ಮಾತ್ರವೇ ಪಾಲಿಕೆಗಳಿಗೆ ಒಟ್ಟು 14.94 ಕೋಟಿ ರೂ.ಗಳಷ್ಟು ಬೃಹತ್ ಪ್ರಮಾಣದ ಸೇವಾ ತೆರಿಗೆ ಬಾಕಿ ಉಳಿಸಿಕೊಂಡಿದೆ. ➡ಪುಟ ೨

ಬೃಹತ್ ಬಾಕಿ ವಸೂಲಿ ಮಾಡಿ

ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರಿಗೆ ಪತ್ರ ಬರೆದು ಮನವಿ ಮಾಡಲಾಗಿದ್ದು, ಸಾಮಾನ್ಯ ಜನರಂತೆ ಸರ್ಕಾರಿ ಕಟ್ಟಡಗಳಿಗೂ ಒಂದೇ ಕಾನೂನು ಅನ್ವಯವಾಗಲಿ. 473 ಕೋಟಿ ಬಾಕಿ ಉಳಿಸಿಕೊಂಡಿರುವ ಇಲಾಖೆಗಳಿಗೆ ನೋಟಿಸ್ ನೀಡಿ, ತಕ್ಷಣವೇ ಕಟ್ಟಡಗಳನ್ನು ಜಪ್ತಿ ಮಾಡುವ ಧೈರ್ಯ ತೋರಲಿ. ➡ಪುಟ ೨

ದಾಖಲೆ ಬಿಡುಗಡೆ ಮಾಡಿದ ಬಿಜೆಪಿ ನಾಯಕ ರಮೇಶ್



ಪ್ರಮುಖ ಕಟ್ಟಡಗಳ ಬಾಕಿ ವಿವರ

ವಿಕಾಸಸೌಧ	4.24 ಕೋಟಿ
ಬಹುಮಹಡಿ ಕಟ್ಟಡ	3.38 ಕೋಟಿ
ಕುಮಾರಕೃಪಾ ಅತಿಥಿಗೃಹ	3.01 ಕೋಟಿ
ವಿಧಾನಸೌಧ	2.15 ಕೋಟಿ
ರಾಜಭವನ	1.89 ಕೋಟಿ
ವಿಧಾನಸೌಧ ಕ್ಯಾಂಟೀನ್	7.40 ಲಕ್ಷ
ವಿಕಾಸಸೌಧದ ಕ್ಯಾಂಟೀನ್	17.65 ಲಕ್ಷ

ರೂ.ಗಳಲ್ಲಿ

“ ಜನಸಾಮಾನ್ಯರ ಮೇಲೆ ಪ್ರತಾಪ ತೋರಿಸುವುದನ್ನು ಬಿಟ್ಟು ಮೊದಲು ಸರ್ಕಾರದಿಂದ ಬರಬೇಕಾದ ಬೃಹತ್ ಬಾಕಿಯನ್ನು ಜಿಬಿಎ ವಸೂಲಿ ಮಾಡಲಿ.

■ ಎನ್.ಆರ್.ರಮೇಶ್, ಬಿಜೆಪಿ ನಾಯಕ

ಅಹಿಂಸಾ ತತ್ವ ಮರು ಸ್ಥಾಪನೆ ಅತಿ ಅವಶ್ಯ



ಸಾಮ್ರಾಟ್ ಸಂಪ್ರತಿ ಮ್ಯೂಸಿಯಂ ಲೋಕಾರ್ಪಣೆ ಮಾಡಿದ ನಮೋ

• **ಗಾಂಧಿನಗರ:** ಜಗತ್ತು ಅಸ್ಥಿರತೆ ಮತ್ತು ಅರಾಜಕತೆಯಲ್ಲಿ ತೊಳಲಾಡುತ್ತಿರುವ ಪ್ರಸ್ತುತ ಸನ್ನಿವೇಶದಲ್ಲಿ ಶಾಂತಿ, ಅಹಿಂಸಾ ತತ್ವ ಮರು ಸ್ಥಾಪನೆ ತೀರಾ ಅಗತ್ಯವೆಂದು ಪ್ರಧಾನಿ ನರೇಂದ್ರ ಮೋದಿ ಪ್ರತಿಪಾದಿಸಿದ್ದಾರೆ.

ಗುಜರಾತಿನಲ್ಲಿ ಮೈದಳೆದಿರುವ ನೂತನ ಸಾಮ್ರಾಟ್ ಸಂಪ್ರತಿ ಮ್ಯೂಸಿಯಂ, ಪ್ರಸಕ್ತ ಹಿಂಸಾತ್ಮಕ ಜಾಗತಿಕ ಸನ್ನಿವೇಶಗಳ ಹಿನ್ನೆಲೆಯಲ್ಲಿ ಶಾಂತಿ-ಅಹಿಂಸೆಗಳ ಅನಿವಾರ್ಯತೆಯ ಬಲಿಷ್ಠ ಸಂದೇಶ ಸಾರಿದೆ. ಈ ಸಂದೇಶವಿಂದು ಮಹತ್ವಪೂರ್ಣ ಕೂಡ ಎಂದು ಮೋದಿ ಹೇಳಿದರು. ಈಗಿನ ಜಾಗತಿಕ ಸನ್ನಿವೇಶ ಉಲ್ಲೇಖಿಸಿ, ಮ್ಯೂಸಿಯಂನ ದಂತಕಥೆ, ಸಂದೇಶಗಳು ಕೇವಲ ಭಾರತಕ್ಕೆ ಮಾತ್ರವಲ್ಲ, ಇಡೀ ಜಗತ್ತಿಗೆ ಮಹತ್ವಪೂರ್ಣವಾದದ್ದು. ➡ಪುಟ ೨

ಹಿಂದಿ ಮಾತು, ಕಲಿಕೆ ತಪ್ಪಲ್ಲ: ಬಿಎಸ್‌ವೈ

• **ಬೆಂಗಳೂರು:** ದೇಶದ ಉದ್ದಗಲಕ್ಕೆ ಹಿಂದಿ ಭಾಷೆ ಇಲ್ಲದಿದ್ದರೆ ಬೇರೆ ಭಾಷೆಯಲ್ಲಿ ಮಾತಾಡಲು ಬರುವುದಿಲ್ಲ. ಹಿಂದಿ ಮಾತಾಡುವುದು, ಕಲಿಯುವುದು ತಪ್ಪು ಅಲ್ಲ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅಭಿಪ್ರಾಯಪಟ್ಟಿದ್ದಾರೆ.



ರಾಜ್ಯ ಸರ್ಕಾರದ ತೀರ್ಮಾನಕ್ಕೆ ಮಾಜಿ ಸಿಎಂ ಬೇಸರ

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಶಿಕ್ಷಣದಲ್ಲಿ ಹಿಂದಿ ಭಾಷೆ ಕಡ್ಡಾಯವಲ್ಲ ಎಂಬ ಸರ್ಕಾರದ ತೀರ್ಮಾನವನ್ನು ಖಂಡಿಸಿದರು. ಕೆಲವರು ಹಿಂದಿ ಭಾಷೆಯ ಬಗ್ಗೆ ತಮ್ಮದೇ ಆದ ಮಾತು ಗಳನ್ನಾಡುತ್ತಾರೆ. ಇದು ಕನ್ನಡಕ್ಕೆ ಮಾಡುವ ದ್ರೋಹ ಅಲ್ಲ, ನಾನು ಅತ್ಯಂತ ವಿನಯದಿಂದ ಕನ್ನಡಿಗರಲ್ಲಿ ವಿನಂತಿ ಮಾಡುತ್ತೇನೆ. ಹಿಂದಿ ಭಾಷೆ ಕಲಿಯುವುದರಿಂದ ಕನ್ನಡ ಭಾಷೆಗೆ ಆಘಾತ ಆಗುವುದಿಲ್ಲ, ಆದ್ದರಿಂದ ದಯವಿಟ್ಟು ಈ ಬಗ್ಗೆ ಗೊಂದಲ ಉಂಟುಮಾಡಬಾರದು ಎಂದು ಹೇಳಿದರು. ➡ಪುಟ ೨

ಮತ್ತೆ ಯುದ್ಧೋನ್ಮಾದ

ಪುಟ ೧➡ **ಇಸ್ಫಾಹಾನ್ ಮೇಲಿನ ದಾಳಿ:** ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇಸ್ಫಾಹಾನ್ ಮೇಲಿನ ದಾಳಿಯ ದೃಶ್ಯಗಳನ್ನು ಹಂಚಿಕೊಂಡಿದ್ದಾರೆ. ಈ ನಗರ, ಇರಾನ್‌ನ ಮೂರು ಪ್ರಮುಖ ಪರಮಾಣು ಪುಷ್ಟೀಕರಣ ಕೇಂದ್ರಗಳಲ್ಲಿ ಒಂದನ್ನು ಹೊಂದಿದ್ದು, ಅಲ್ಲಿ ಹೆಚ್ಚಿನ ಪ್ರಮಾಣದ ಯುರೇನಿಯಂ ಸಂಗ್ರಹಿಸಲಾಗಿದೆ ಎಂದು ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ. ಉಪಗ್ರಹ ದೃಶ್ಯಗಳ ಪ್ರಕಾರ, ನಗರದ ದಕ್ಷಿಣ ಭಾಗದ ಪರ್ವತ ಪ್ರದೇಶದಲ್ಲಿ ಸ್ಫೋಟಗಳು ಸಂಭವಿಸಿವೆ. ಜೂನ್‌ನಲ್ಲಿ ಇರಾನ್ ಶೇ.60ರಷ್ಟು ಶುದ್ಧೀಕರಿಸಿದ ಯುರೇನಿಯಂ ಹೊಂದಿದ್ದ 18 ಕಂಟೈನರ್‌ಗಳನ್ನು ಈ ಪ್ರದೇಶದ ಸಮೀಪವಿರುವ ಕೇಂದ್ರಕ್ಕೆ ಸ್ಥಳಾಂತರಿಸಿತ್ತು ಎಂದು ತಿಳಿದುಬಂದಿದೆ.

ಗಲ್ಫ್‌ನಲ್ಲಿ 57 ಸಾವಿರ ಸೈನಿಕರ ನಿಯೋಜನೆ!

ಪುಟ ೧➡ ಮಧ್ಯಪ್ರಾಚ್ಯದಲ್ಲಿ ಯುಎಸ್‌ಎಸ್ ಟ್ರಿಪೋಲಿ ಯುದ್ಧನೌಕೆಯಲ್ಲಿ 3,500+ ಮತ್ತು ವಾಯುಪಡೆಯ ಸಾವಿರ ಸೈನಿಕರಿದ್ದಾರೆ. ಅಮೆರಿಕ ಸೈನಿಕರು ನುಗ್ಗಿದರೆ ಪ್ರಖರ ದಾಳಿ ನಡೆಸುವುದಾಗಿ ಇರಾನ್ ಎಚ್ಚರಿಕೆ ನೀಡಿದೆ. ಅಮೆರಿಕ ಸೈನಿಕರು ಯಾವಾಗ ಬರುತ್ತಾರೆಂದು ನಮ್ಮವರು ಕಾಯುತ್ತಿದ್ದಾರೆ. ಅವರನ್ನು ಮತ್ತವರ ಮಿತ್ರರಾಷ್ಟ್ರಗಳನ್ನು ಒಂದೇ ಬಾರಿಗೆ ಮುಗಿಸುತ್ತೇವೆ ಎಂದಿದೆ.

ಡ್ರೋನ್, ಕ್ಷಿಪಣಿ ದಾಳಿ

ದುಬೈ ಕರಾವಳಿಯಲ್ಲಿ ಕುವೈತ್ ತೈಲ ಟ್ಯಾಂಕರ್ ಮೇಲೆ ಇರಾನ್ ಡ್ರೋನ್ ದಾಳಿ ನಡೆಸಿದ್ದರಿಂದ ಬೆಂಕಿ ಕಾಣಿಸಿಕೊಂಡಿದ್ದರೂ, ಯಾವುದೇ ತೈಲ ಸೋರಿಕೆಯಾಗಿಲ್ಲ. ಡ್ರೋನ್ ಪತನಗೊಂಡ ಪರಿಣಾಮ ನಾಲ್ವರು ಗಾಯಗೊಂಡಿದ್ದಾರೆ. ಸೌದಿ ಅರೇಬಿಯಾ ತನ್ನ ರಾಜಧಾನಿಯತ್ತ ಬಂದ ಮೂರು ಬ್ಯಾಲಿಸ್ಟಿಕ್ ಕ್ಷಿಪಣಿಗಳನ್ನು ಹೊಡೆದುರುಳಿಸಿದೆ. ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ, ತಮಗೆ ಕೇವಲ ಅಮೆರಿಕ ಸೇನೆಯೇ ಗುರಿ ಎಂದು ಹೇಳಿದ್ದಾರೆ.


ಲೆಬನಾನ್, ಇರಾನ್‌ನಲ್ಲಿ ಸಾವು-ನೋವು

ದಕ್ಷಿಣ ಲೆಬನಾನ್‌ನಲ್ಲಿ ಮೂವರು ಶಾಂತಿ ಪಾಲಕರು ಮೃತಪಟ್ಟ ನಂತರ ವಿಶ್ವಸಂಸ್ಥೆಯ ಭದ್ರತಾ ಮಂಡಳಿ ತುರ್ತುಸಭೆ ಕರೆದಿದೆ. ಲೆಬನಾನ್‌ನಲ್ಲಿ 1,200 ಜನರು ಮೃತಪಟ್ಟಿದ್ದು, 10 ಲಕ್ಷಕ್ಕೂ ಹೆಚ್ಚು ಜನರು ಸ್ಥಳಾಂತರಗೊಂಡಿದ್ದಾರೆ. ಇರಾನ್‌ನಲ್ಲಿ 1,900, ಇಸ್ರೇಲ್‌ನಲ್ಲಿ 19 ಮತ್ತು ಅಮೆರಿಕದ 13 ಸೈನಿಕರು ಮೃತಪಟ್ಟಿದ್ದಾರೆ.

ಷೇರು ಮಾರುಕಟ್ಟೆ ತಲ್ಲಣ

ಇಸ್ಫಾಹಾನ್ ಮತ್ತು ತೈಲ ಟ್ಯಾಂಕರ್‌ಗಳ ಮೇಲಿನ ಹೊಸ ದಾಳಿಗಳಿಂದಾಗಿ ಬ್ರೆಂಟ್ ಕಚ್ಚಾತೈಲದ ಬೆಲೆ ಪ್ರತಿ ಬ್ಯಾರೆಲ್‌ಗೆ 107116 ಅಮೆರಿಕ ಡಾಲರ್‌ಗೆ ಏರಿಕೆಯಾಗಿದ್ದು, ಇದು ಭಾರತದ ಮೇಲೂ ಪರಿಣಾಮ ಬೀರಿದೆ. ರೂಪಾಯಿ ಮೌಲ್ಯ ದಾಖಲೆ ಮಟ್ಟಕ್ಕೆ ಕುಸಿದಿದೆ. ಭಾರತೀಯ ಷೇರು ಮಾರುಕಟ್ಟೆಯ ನಿಫ್ಟಿ ಮತ್ತು ಸೆನ್ಸೆಕ್ಸ್ ಸೂಚ್ಯಂಕಗಳು ತೀವ್ರ ಕುಸಿತ ಕಂಡಿವೆ.

ರಾಮ ಬಾಣ



ಬಿಸಿಲಿನ ತಾಪಮಾನ: ಕಚೇರಿ ವೇಳಾಪಟ್ಟಿ ಬದಲಾವಣೆ

ಬೆಂಗಳೂರು: ಬಿಸಿಲಿನ ತಾಪಮಾನದ ಹಿನ್ನೆಲೆಯಲ್ಲಿ ಬೆಳಗಾವಿ ವಿಭಾಗದ ವಿಜಯಪುರ ಮತ್ತು ಬಾಗಲಕೋಟೆ ಹಾಗೂ ಕಲಬುರಗಿ ವಿಭಾಗದ ಎಲ್ಲಾ ಜಿಲ್ಲೆಗಳಿಗೆ ಪ್ರಸ್ತುತ ಜಾರಿಯಲ್ಲಿರುವ ಸರ್ಕಾರಿ ಕಚೇರಿಗಳ ವೇಳಾಪಟ್ಟಿಯ ಬದಲಾಗಿ ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಬೆಳಿಗ್ಗೆ 8 ಗಂಟೆಯಿಂದ ಮಧ್ಯಾಹ್ನ 1.30 ಗಂಟೆ ವರೆಗೆ ಬದಲಾವಣೆ ಮಾಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಆದೇಶಿಸಿದೆ. ಈ ಎಲ್ಲಾ ಜಿಲ್ಲೆಗಳಲ್ಲಿನ ಸರ್ಕಾರಿ ನೌಕರರು ಬದಲಾದ ಸಮಯದಲ್ಲಿ ಎಂದಿನಂತೆ ಯಾವುದೇ ಲೋಪ, ಅಡೆತಡೆಯಿಲ್ಲದೆ ಕರ್ತವ್ಯವನ್ನು ನಿರ್ವಹಿಸಬೇಕು, ಸಾರ್ವಜನಿಕರಿಗೆ ಯಾವುದೇ ಅನಾನುಕೂಲತೆ ಆಗದಂತೆ ಮತ್ತು ಡಿಸಿ, ಜಿಲ್ಲಾ ಪಂಚಾಯ್ತಿ ಸಿಇಒ ಸೇರಿದಂತೆ ಹೊರೊಯ ಅಧಿಕಾರಿಗಳು ತುರ್ತು ಸಂದರ್ಭದಲ್ಲಿ ಯಾವುದೇ ಕಾರ್ಯನಿರ್ವಹಿಸಲು ನಿರ್ದೇಶಿಸಿದಲ್ಲಿ ಸಮಯದ ಪರಿಮಿತಿಯಿಲ್ಲದೆ ಕರ್ತವ್ಯ ನಿರ್ವಹಿಸಬೇಕೆಂದು ತಿಳಿಸಲಾಗಿದೆ.

ಕಿಡಿ ನುಡಿ

ವಾಸುದೇವರಾವ್ ಕಕ್ಕೆನೇಜಿ

ರಸ್ತೆ ಸ್ವಚ್ಛಗೊಳಿಸುವವನು ತನ್ನ ಕೆಲಸವನ್ನು ಶ್ರದ್ಧೆಯಿಂದ ಮಾಡಿದಾಗ ಊರು ಸ್ವಚ್ಛವಾಗುತ್ತೆ, ಶಿಕ್ಷಕನು ತನ್ನ ಸೇವೆಯನ್ನು ಜ್ಞಾನ ಸೇವೆ ಎಂಬ ಭಾವದಿಂದ ಮಾಡಿದಾಗ ವಿದ್ಯಾರ್ಥಿಗಳ ಭವಿಷ್ಯ ರೂಪುಗೊಳ್ಳುತ್ತೆ, ಇಂಜಿನಿಯರ್ ತನ್ನ ಹೊಣೆಗಾರಿಕೆಯನ್ನು ಸೇವಾಭಾವದಿಂದ ನಿರ್ವಹಿಸಿದಾಗ ಸೇತುವೆಗಳು ಸುರಕ್ಷಿತವಾಗಿರುತ್ತವೆ
- ಡಾ/ವೀರೇಂದ್ರ ಹೆಗ್ಗಡೆ

- ಇನ್ನು ಸುಲಭವಾಗಿ ಹೇಳುವುದಾದರೆ ನಮ್ಮ ಪಾಲಿಗೆ ಬಂದ ಕೆಲಸವನ್ನು ಶ್ರದ್ಧೆಯಿಂದ ಮಾಡುವುದೇ ಕರ್ಮಯೋಗ, ಅದೇ ನಿಜವಾದ ದೇವರ ಪೂಜೆ!

ದಿನ ಭವಿಷ್ಯ

ಮೇಷ ಶೀಘ್ರ ಪ್ರಗತಿ ಸಾಧಿಸಬೇಕು ಎನ್ನುವುದು ನಿಮ್ಮ ಆಸೆ. ತಾಳ್ಮೆ ಬೆಳೆಸಿಕೊಳ್ಳಿ. ದುಡುಕು ಹಾನಿ ತಂದೀತು. ಕೌಟುಂಬಿಕ ಸಹಕಾರ.

ವೃಷಭ ಕೆಲಸದಲ್ಲಿ ಪ್ರಗತಿ. ಹಿರಿಯರ ಮೆಚ್ಚುಗೆ. ಮನೆಯಲ್ಲಿ ಕೆಲವು ಬದಲಾವಣೆ ಆದೀತು. ಆರೋಗ್ಯ ಸಮಸ್ಯೆ ನಿವಾರಣೆ, ನಿರಾಳತೆ.

ಮಿಥುನ ಕಾರ್ಯ ಪೂರೈಸಲು ಹೆಚ್ಚು ಪರಿಶ್ರಮ ಬೇಕು. ಅರ್ಥಕ್ಕೆ ಕೈ ಬಿಡಬೇಡಿ. ವಿವಾಹ ಪ್ರಸ್ತಾಪ ಸಫಲ ಆಗಲಿದೆ. ಆರೋಗ್ಯ ಸಮಸ್ಯೆ ಸಂಭವ.

ಕಟಕ ಈ ದಿನ ನಿಮಗೆ ಪ್ರತಿಕೂಲ. ಪ್ರಮುಖ ಕಾರ್ಯ ಇಂದು ಬೇಡ. ಸಂಗಾತಿ ಜತೆ ಸಂಘರ್ಷ ಸಂಭವ. ತಾಳ್ಮೆಯ ವ್ಯವಹಾರ ಅಗತ್ಯ.

ಸಿಂಹ ಎಲ್ಲ ಸುಸೂತ್ರವಾಗಿ ನಡೆದರೂ ಮನಸ್ಸಿಗೆ ಸಮಾಧಾನವಿರದು. ಏನೋ ಅತೃಪ್ತಿ. ಕೆಲವರ ವರ್ತನೆಗೆ ಅಸಹನೆ. ಧ್ಯಾನ, ಅಧ್ಯಾತ್ಮ ಸಹಕಾರಿ.

ಕನ್ಯಾ ಆಪ್ತರ ಜತೆಗಿನ ಭಿನ್ನಮತ ಪರಿಹರಿಸಿ. ಪ್ರೀತಿಗೆ ಸಂಬಂಧಿಸಿದ ಬಿಕ್ಕಟ್ಟು ನಿವಾರಿಸಿ. ವೃತ್ತಿಯಲ್ಲಿ ವಾಗ್ವಾದ, ಸಂಘರ್ಷ ನಡೆದೀತು.

ತುಲಾ ಕೆಲ ಕೌಟುಂಬಿಕ ವಿಚಾರ ಇತ್ಯರ್ಥಕ್ಕೆ ದಿನ ಮೀಸಲು. ಉತ್ಸಾಹ ಹೆಚ್ಚುವ ಬೆಳವಣಿಗೆ. ಕಾರ್ಯ ಪ್ರಗತಿ. ಆರ್ಥಿಕ ಸ್ಥಿತಿಯಲ್ಲಿ ಪ್ರಗತಿ.

ವೃಶ್ಚಿಕ ನಿಮ್ಮ ಸುತ್ತಮುತ್ತ ಹರ್ಷದ ವಾತಾವರಣ. ಇತರರ ಉತ್ಸಾಹದಲ್ಲಿ ಭಾಗಿ. ಸಣ್ಣ ವಿಷಯಕ್ಕೆ ವಾಗ್ವಾದ ನಡೆಸಲು ಹೋಗದಿರಿ. ಖರ್ಚು ನಿಯಂತ್ರಣ.

ಧನು ನಿಮ್ಮ ಕಾರ್ಯಕ್ಕೆ ಸಹೋದ್ಯೋಗಿ ಬೆಂಬಲ. ಖರೀದಿ ಹುಮ್ಮಸ್ಸಿನಿಂದ ಖರ್ಚು ಹೆಚ್ಚಬಹುದು. ಆಸ್ತಿ ಖರೀದಿಗೆ ಕಾಲ ಸದ್ಯ ಕೂಡಿಬರದು.

ಮಕರ ಪ್ರಮುಖ ಕಾರ್ಯ ಇಂದು ಸಾಧಿಸುವಿರಿ. ವೃತ್ತಿಯಲ್ಲಿ ಯಶಸ್ಸು. ಸ್ವಂತ ಉದ್ಯೋಗಿಗಳಿಗೆ ಆರ್ಥಿಕ ಉನ್ನತಿ. ಕೌಟುಂಬಿಕ ಪರಿಸ್ಥಿತಿ ಸಮಾಧಾನಕರ.

ಕುಂಭ ಯುವಜನರು ಹೆತ್ತವರ ಜತೆ ಸಂಘರ್ಷ ನಡೆಸಿಯಾರು. ಉದ್ದಿಮೆಯಲ್ಲಿ ಧನಹಾನಿ. ಇತರರ ಮನಸ್ಸಿಗೆ ಘಾಸಿ ಎಸಗದಿರಿ. ವಿನಯವಿರಲಿ.

ಮೀನ ಕಾರ್ಯ ಸರಾಗ. ಅಡ್ಡಿಗಳ ನಿವಾರಣೆ. ಖರ್ಚು ಕಡಿಮೆ ಮಾಡಲು ಗಮನ ಕೊಡಿ. ಸಣ್ಣ ಸಮಸ್ಯೆಯೊಂದು ನೆಮ್ಮದಿ ಕೆಡಿಸುವುದು.

ರಾಹುಕಾಲ: 12.00-1.30
ಗುಳಿಕಕಾಲ: 10.30-12.00

ಅದೃಷ್ಟ ಸಂಖ್ಯೆ : 4,0,5,1

ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಪರ ಬಿ.ವೈ.ವಿಜಯೇಂದ್ರ ಪ್ರಚಾರ

ಕಾಂಗ್ರೆಸ್ ಹಣ ಕೆಲಸ ಮಾಡಲ್ಲ



ಬಾಗಲಕೋಟೆಯಲ್ಲಿ ಸೋಲುವ ಭಯದಿಂದ ಮುಖ್ಯಮಂತ್ರಿಗಳು 10-15 ಮಂತ್ರಿಗಳ ಜೊತೆ ಸೂಟ್‌ಕೇಸ್ ಸಮೇತ ಠಿಕಾಣಿ ಹೂಡಿದ್ದಾರೆ. ದಾವಣಗೇರೆ, ಬಾಗಲಕೋಟೆಯಲ್ಲಿ ಸೋಲಿನ ಭಯದಲ್ಲಿ ಝಂಡಾ ಹಾಕಿಕೊಂಡು ಕೂತಿದ್ದಾರೆ. ಎರಡೂ ಕಡೆಗಳಲ್ಲಿ ಬಿಜೆಪಿ ಗೆಲುವು ನಿಶ್ಚಿತ.
■ ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಬಾಗಲಕೋಟೆ: ವಿಶೇಷ ಕ್ಯಾಬಿನೆಟ್ ಮಾಡಿ ಮುಳುಗಡೆ ಪ್ರದೇಶದ ರೈತರಿಗೆ ಪರಿಹಾರ ಕೊಡುತ್ತೇವೆ ಎಂದು ಪೊಳ್ಳು ಭರವಸೆ ನೀಡಿ ಇಲ್ಲಿವರೆಗೆ ಎಷ್ಟು ಸಾವಿರ ಕೋಟಿ ಬಿಡುಗಡೆ ಮಾಡಿದ್ದೀರಿ. ನಮ್ಮ ನಡೆ ಕೃಷ್ಣೆ ಕಡೆ ಎಲ್ಲಿ ಹೋಯ್ತು ಎಂದು ಜನರಿಗೆ ಉತ್ತರ ಕೊಡಿ. ಗ್ಯಾರಂಟಿ ಬಗ್ಗೆ ವಿಶ್ವಾಸ ಇದ್ದರೆ ಸೂಟ್‌ಕೇಸ್ ಸಮೇತ ಏಕೆ ಠಿಕಾಣಿ ಹೂಡಿದ್ದೀರಿ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಮುಖ್ಯಮಂತ್ರಿಗಳ ವಿರುದ್ಧ ಪ್ರಶ್ನೆಯ ಸುರಿಮಳೆಗೈದರು.

ಉಪಚುನಾವಣೆ ನಿಮಿತ್ತ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಪರವಾಗಿ ನವನಗರದಲ್ಲಿ ಮನೆ ಮನೆಗೆ ತೆರಳಿ ಪ್ರಚಾರ ನಡೆಸಿ ಮಾತನಾಡಿದ ಅವರು, ಕೃಷ್ಣಾ ಮೇಲ್ದಂಡೆ ಯೋಜನೆ ಅನುದಾನ ವಿಚಾರಕ್ಕೆ ಸಿಎಂಗೆ ತಿರುಗೇಟು ನೀಡಿ ಬೊಗಳೆ ಹೊಡೆದುಕೊಂಡೆ 3 ವರ್ಷ ಆಡಳಿತ ನಡೆಸಿದ್ದಾರೆ ಎಂದರು. ನಾಲ್ಕು ತಿಂಗಳ ಹಿಂದೆ ವಿಶೇಷ ಕ್ಯಾಬಿನೆಟ್ ಮಾಡಿ ಮುಳುಗಡೆ ಪ್ರದೇಶ ರೈತರಿಗೆ ಒಂದು ಎಕರೆ ನೀರಿವಾರಿ ಭೂಮಿಗೆ 40 ಲಕ್ಷ ರೂ., ಖುಷ್ಕಿ ಜಮೀನಿಗೆ 30ಲಕ್ಷ ರೂ.ಅಂತೆ ಎಷ್ಟು ಬಿಡುಗಡೆಯಾಗಿದೆ ಉತ್ತರ ಕೊಡಲಿ. 2010ರಲ್ಲಿ ಸುಪ್ರೀಂಕೋರ್ಟ್ ಆದೇಶ ಹೊರತಾಗಿಯೂ ಆಂಧ್ರ, ತೆಲಂಗಾಣ ಡಿಸ್ಪ್ಯೂಟ್ ಆಯ್ತು ಅಂತ ಕೇಂದ್ರದಲ್ಲಿ ಯುಪಿಎ ಸರ್ಕಾರ ಇದ್ದಾಗ ನಾಲ್ಕು ವರ್ಷ ಮುಂದೆ ಹೋಗಲು ಬಿಡದೇ ಕೇಂದ್ರದ ಮೇಲೆ ಗೂಬೆ ಕೂಡಿಸಿಕೊಂಡು ತಮ್ಮ ವೈಫಲ್ಯ ಮುಚ್ಚಿಕೊಳ್ಳುವ ಕುತಂತ್ರ. ಷಡ್ಯಂತ್ರ ಮಾಡುವಲ್ಲಿ ಕಾಂಗ್ರೆಸ್ ಮೇಲುಗೈ ಸಾಧಿಸಿದೆ ಎಂದು ಕಿಡಿಕಾರಿದರು.

ಸರ್ಕಾರಕ್ಕೆ ರೈತರ ಬಗ್ಗೆ, ಉತ್ತರ ಕರ್ನಾಟಕ ಬಗ್ಗೆ ಕಾಳಜಿ ಇಲ್ಲ. ನೀರಾವರಿ ಯೋಜನೆಗೆ ಹಣ ಒದಗಿಸಲು ಸಮಯವಿಲ್ಲ. ಹಣವಂತೂ ಮೊದಲೇ ಇಲ್ಲ. ಬಿಜೆಪಿ ಮೇಲೆ ಭ್ರಷ್ಟಾಚಾರದ ಸುಳ್ಳು ಆರೋಪ ಹೊರಿಸಿ ಅಧಿಕಾರಕ್ಕೆ ಬಂದು ಹಗರಣಗಳ ಆಗರವಾಗಿ ನಿಂತಿದೆ ಎಂದರು.

ವಿಧಾನ ಪರಿಷತ್ ಸದಸ್ಯ ಪಿ.ಎಚ್.ಪೂಜಾರ ಮಾತನಾಡಿ, ಅಭಿವೃದ್ಧಿಯನ್ನು ಸಹಿಸದ ಕಾಂಗ್ರೆಸ್ ಗೂಬೆಕೂರಿಸಿ ಅಧಿಕಾರಕ್ಕೆ ಬರುವ ನೀಚ ಬುದ್ಧಿಯನ್ನು ಮೈಗೂಡಿಸಿಕೊಂಡಿದ್ದು ಬಾಗಲಕೋಟೆಯ ಬುಡಾ, ಆರ್‌ಟಿಒ ಡ್ರೈವಿಂಗ್ ಟ್ರ್ಯಾಕ್, ಮೇಲ್ದರ್ಜೆಗೆ ಏರಿಸಿದ ನಗರಸಭೆ, ಜಿಲ್ಲಾಡಳಿತ ಭವನದ ನವೀಕರಣ ಸೇರಿದಂತೆ ಸಾಲು ಸಾಲು ಬಿಜೆಪಿ ಅಭಿವೃದ್ಧಿ ಕಾರ್ಯಗಳನ್ನು ನೋಡಿ ಕಣ್ತುಂಬಿಕೊಳ್ಳಲಿ. ಸುಳ್ಳು ಹರಡುವುದನ್ನು ಬಿಟ್ಟು ಇನ್ನಾದರೂ ಪಾಠ ಕಲಿಯಲಿ. ವೀರಣ್ಣ ಚರಂತಿಮಠರ ಗೆಲುವನ್ನು ತಡೆಯಲು ಸಾಧ್ಯವಿಲ್ಲ ಎಂದರು.

ರಾಷ್ಟ್ರಪತಿ ದ್ರೌಪದಿ ಮುರ್ಮು ಆಗಮನ



ಬೆಂಗಳೂರು: ತುಮಕೂರಿನ ಸಿದ್ದಗಂಗಾ ಮಠದಲ್ಲಿ ಬುಧವಾರ (ಏ.1) ಆಯೋಜಿಸಲಾಗಿರುವ ಡಾ. ಶ್ರೀ ಶಿವಕುಮಾರ ಮಹಾಸ್ವಾಮಿಗಳ 119ನೇ ಜಯಂತೋತ್ಸವ ಹಾಗೂ ಗುರುವಂದನಾ ಕಾರ್ಯಕ್ರಮದಲ್ಲಿ ಭಾಗವಹಿಸಲು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮಂಗಳವಾರ ರಾತ್ರಿ ಭಾರತೀಯ ವಾಯುಸೇನೆಯ ವಿಶೇಷ ವಿಮಾನದ ಮೂಲಕ ಬೆಂಗಳೂರಿನ ಎಚ್‌ಎಎಲ್ ವಿಮಾನ ನಿಲ್ದಾಣಕ್ಕೆ ಆಗಮಿಸಿದರು.

ರಾಷ್ಟ್ರಪತಿಗಳನ್ನು ರಾಜ್ಯಪಾಲ ಥಾವರಚಂದ್ ಗೆಹಲೋತ್, ಕೇಂದ್ರ ಸಚಿವ ವಿ. ಸೋಮಣ್ಣ, ಸಚಿವ ರಾಮಲಿಂಗರೆಡ್ಡಿ, ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್, ಕರ್ನಾಟಕ ಪೊಲೀಸ್ ಮಹಾನಿರ್ದೇಶಕ ಡಾ. ಎಂ.ಎ ಸಲೀಮ್, ಬೆಂಗಳೂರು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್, ಬೆಂಗಳೂರು ನಗರ ಜಿಲ್ಲಾಧಿಕಾರಿ ಜಗದೀಶ್ ಜಿ, ಸೇರಿದಂತೆ ಹಿರಿಯ ಅಧಿಕಾರಿಗಳು, ಗಣ್ಯರು ರಾಷ್ಟ್ರಪತಿ ಅವರನ್ನು ಸ್ವಾಗತಿಸಿದರು.

ಸರ್ಕಾರಿ ಕಟ್ಟಡ ಕರ ₹473 ಕೋಟಿ ಬಾಕಿ

ಪುಟ ೧➡ ಜಿಬಿಎ ವ್ಯಾಪ್ತಿಯಲ್ಲಿರುವ ಎಲ್ಲ ಸರ್ಕಾರಿ ಕಟ್ಟಡಗಳಿಂದ ಪಾಲಿಕೆಗಳಿಗೆ ಒಟ್ಟು 472 ಕೋಟಿ ಸೇವಾ ತೆರಿಗೆ ಬಾಕಿ ಉಳಿಸಿಕೊಂಡಿವೆ ಎಂದು ಆರೋಪಿಸಿದರು.

ಗುಬ್ಬಿ ಮೇಲೆ ಬ್ರಹ್ಮಾಸ್ತ್ರ ಬೇಡ: ಕೇವಲ 50 ಸಾವಿರದಿಂದ 5 ಲಕ್ಷದವರೆಗೆ ತೆರಿಗೆ ಬಾಕಿ ಇರುವ ಮಧ್ಯಮ ಮತ್ತು ಕೆಳ ಮಧ್ಯಮ ವರ್ಗದವರ ಆಸ್ತಿಗಳನ್ನು ಹರಾಜು ಹಾಕಲು ಮುಂದಾಗಿರುವ ಪಾಲಿಕೆ ಅಧಿಕಾರಿಗಳ ಧೋರಣೆ ಸರಿಯಲ್ಲ. ಬೃಹತ್ ಟೆಕ್ ಪಾರ್ಕ್‌ಗಳು, ಮಾಲ್‌ಗಳು ಮತ್ತು ಶಿಕ್ಷಣ ಸಂಸ್ಥೆಗಳಿಂದ ತೆರಿಗೆ ವಸೂಲಿ ಮಾಡದ ಅಧಿಕಾರಿಗಳು ಸಾಮಾನ್ಯ ಜನರ ಮೇಲೆ ದರ್ಪ ತೋರುತ್ತಿದ್ದಾರೆ ಎಂದು ರಮೇಶ್ ಕಿಡಿಕಾರಿದರು.

ಬೃಹತ್ ಬಾಕಿ ವಸೂಲಿ ಮಾಡಿ



ಪುಟ ೧➡ 18 ವರ್ಷಗಳಿಂದ ತೆರಿಗೆ ಕಟ್ಟದ ವಿಧಾನಸೌಧ, ವಿಕಾಸಸೌಧಗಳಿಗೆ ಕನಿಷ್ಠ ಒಂದು ದಿನವಾದರೂ ಬೀಗ ಜಡಿಯುವ ಮೂಲಕ ಕಾನೂನು ಎಲ್ಲರಿಗೂ ಒಂದೇ ಎಂಬುದನ್ನು ಸಾರಿ ಹೇಳಲಿ. ಜಿಬಿಎ ಮುಖ್ಯ ಆಯುಕ್ತರು ಮತ್ತು ಕಂದಾಯ ಇಲಾಖೆಯ ವಿಶೇಷ ಆಯುಕ್ತರು ಈ ಕೂಡಲೇ ಸೇವಾ ತೆರಿಗೆ ಬಾಕಿ ಉಳಿಸಿಕೊಂಡ ಸರ್ಕಾರಿ ಇಲಾಖೆಗಳ ಮುಖ್ಯಸ್ಥರಿಗೆ ಡಿಮ್ಯಾಂಡ್ ನೋಟಿಸ್ ಜಾರಿಗೊಳಿಸಬೇಕು ಎಂದು ಎನ್.ಆರ್. ರಮೇಶ್ ಆಗ್ರಹಿಸಿದರು.

ಹಿಂದಿನ ಬಿಬಿಎಂಪಿ ಎಂಟು ವಲಯಗಳಲ್ಲಿರುವ ಸರ್ಕಾರಿ ಕಟ್ಟಡಗಳು 2025 ರ ಆರ್ಥಿಕ ವರ್ಷದವರೆಗೆ ಬಾಕಿ ಉಳಿಸಿಕೊಂಡಿರುವ ಸೇವಾ ತೆರಿಗೆಯ ವಲಯವಾರು ವಿವರ

ವಲಯದ ಹೆಸರು	ಬಾಕಿ ಮೊತ್ತ (ಕೋಟಿ ರೂ.ಗಳಲ್ಲಿ)
ಪೂರ್ವ ವಲಯ	246
ಯಲಹಂಕ	67.48
ರಾಜರಾಜೇಶ್ವರಿ ನಗರ	57.52
ಮಹದೇವಪುರ	39.13
ದಕ್ಷಿಣ ವಲಯ	33.70
ಬೊಮ್ಮನಹಳ್ಳಿ	05.68
ದಾಸರಹಳ್ಳಿ	04.17
ಪಶ್ಚಿಮ ವಲಯ	03.61
ದಾಸರಹಳ್ಳಿ	04.17
ಪಶ್ಚಿಮ ವಲಯ	03.61

ಹಿಂದಿ ಮಾತು, ಕಲಿಕೆ ತಪ್ಪಲ್ಲ: ಬಿಎಸ್‌ವೈ

ಪುಟ ೧➡ **ಬಿಜೆಪಿ ಅಭ್ಯರ್ಥಿಗಳ ಗೆಲುವು ನಿಶ್ಚಿತ:** ಉಪ ಚುನಾವಣೆ ಪ್ರಚಾರಕ್ಕೆ ಸಂಬಂಧಿಸಿದ ಪ್ರಶ್ನೆಗೆ ಉತ್ತರಿಸಿದ ಅವರು, ಮಂಗಳವಾರ ಮತ್ತು ಬುಧವಾರ ದಾವಣಗೆರೆಯಲ್ಲಿ ಪ್ರಚಾರ ಮಾಡುತ್ತೇನೆ, ಏಪ್ರಿಲ್ 5 ಮತ್ತು 6ರಂದು ಬಾಗಲಕೋಟೆಯಲ್ಲಿ ಚರಂತಿಮಠ ಪರವಾಗಿ ಪ್ರಚಾರಕ್ಕೆ ಹೋಗುತ್ತೇನೆ. ಎರಡೂ ಕಡೆ ದೊಡ್ಡ ಅಂತರದಲ್ಲಿ ನಮ್ಮ ಅಭ್ಯರ್ಥಿಗಳು ಗೆಲ್ಲುತ್ತಾರೆ. ನನಗೆ ನೂರಕ್ಕೆ ನೂರು ವಿಶ್ವಾಸವಿದೆ ಎಂದು ಭವಿಷ್ಯ ನುಡಿದರು.

ಇಡೀ ಸರ್ಕಾರವೇ ಉಪಚುನಾವಣೆ ಪ್ರಚಾರದಲ್ಲಿದೆ. ಸ್ವತಃ ಮುಖ್ಯಮಂತ್ರಿಗಳೇ ನಾಲ್ಕೈದು ದಿನ ಅಲ್ಲಿ ಹೋಗಿ ಕುಳಿತಿದ್ದಾರೆ. ಅದರರ್ಥ ಚುನಾವಣಾ ಸೋಲಿನ ಭಯ ಅವರಿಗೆ ಕಾಡುತ್ತಿದೆ ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಜನ ಕಾಂಗ್ರೆಸ್‌ನವರಿಗೆ ತಕ್ಕ ಪಾಠ ಕಲಿಸಲಿ ಎಂದು ಹೇಳಿದರು.

ರಾಜ್ಯದಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜನಹಿತ ಮರೆತು ತುಘಲಕ್ ದರ್ಬಾರ್ ನಡೆಸುತ್ತಿದ್ದಾರೆ. ಅಜೀರ್ಣವಾಗುವಷ್ಟು ಬಹುಮತ ಕಾಂಗ್ರೆಸ್‌ಗೆ ಈಗಾಗಲೇ ಇದೆ, ಮತ್ತೊಮ್ಮೆ ಚುನಾವಣೆ ಗೆದ್ದರೆ ಅಧಿಕಾರ ಮದದಿಂದ ಇನ್ನೂ ಹೆಚ್ಚು ಭ್ರಷ್ಟಾಚಾರಕ್ಕೆ ಅವಕಾಶ ಕೊಟ್ಟಂತಾಗುತ್ತದೆ. ಆದ್ದರಿಂದ ಎರಡೂ ಕ್ಷೇತ್ರಗಳ ಮತದಾರರು ಈ ಬಾರಿ ಕಾಂಗ್ರೆಸ್‌ಗೆ ತಕ್ಕ ಪಾಠ ಕಲಿಸಬೇಕು. ಬಿಜೆಪಿಯ ಇಬ್ಬರು ಅಭ್ಯರ್ಥಿಗಳನ್ನು ಮತದಾರರು ಗೆಲ್ಲಿಸಿಕೊಡಲಿ ಎಂದು ಮನವಿ ಮಾಡಿದರು.

ಬಿಜೆಪಿ ಪರ ಪ್ರಚಾರಕ್ಕೆ ಹಸಿರು ನಿಶಾನೆ

ಬಾಗಲಕೋಟೆ ಉಪ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಪರ ಬಿಜೆಪಿ ಉಚ್ಚಾಟಿತ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಪ್ರಚಾರ ನಡೆಸಲಿರುವ ಹಿನ್ನೆಲೆಯಲ್ಲಿ ಅವರ ಪ್ರಚಾರಕ್ಕೆ ಬಿ.ಎಸ್. ಯಡಿಯೂರಪ್ಪ ಹಸಿರು ನಿಶಾನೆ ತೋರಿದ್ದಾರೆ. ಯಾರೇ ಬಂದರೂ ಪ್ರಚಾರ ನಡೆಸಲು ಅವಕಾಶವಿದೆ. ಅವರು ಪ್ರಚಾರಕ್ಕೆ ಬರಲಿ, ಸ್ವಾಗತ ಮಾಡುತ್ತೇನೆ ಎಂದು ಯಡಿಯೂರಪ್ಪ ಹೇಳಿದರು.

ಸಿಂದಗಿಯಲ್ಲಿ ಬೈಕ್ ಸವಾರ ಸಜೀವ ದಹನ

ಸಿಂದಗಿ: ಸಾರಿಗೆ ಬಸ್ ಹಾಗೂ ಬೈಕ್ ಮುಖಾಮುಖಿ ಡಿಕ್ಕಿಯಾಗಿ ಸ್ಥಳದಲ್ಲಿಯೇ ಸಾರಿಗೆ ಬಸ್ ಧಗಧಗ ಹೊತ್ತಿ ಉರಿದಿದ್ದು, ಬೈಕ್ ಸವಾರ ಸಜೀವ ದಹನಗೊಂಡಿರುವ ಹೃದಯ ವಿದ್ರಾವಕ ಘಟನೆ ಸಿಂದಗಿ ತಾಲೂಕಿನ ಕನ್ನೊಳ್ಳಿ ಟೋಲ್‌ಗೇಟ್ ಬಳಿ ನಡೆದಿದೆ. ಮೃತಪಟ್ಟವನನ್ನು ಜಿಲ್ಲೆಯ ದೇವರಹಿಪ್ಪರಗಿ ತಾಲೂಕಿನ ಮುಳಸಾವಳಗಿ ಗ್ರಾಮದ ಅಭಿಷೇಕ ಸಾಯಬಗೌಡ ನಾಗರಾಳ ಎಂದು ಗುರುತಿಸಲಾಗಿದೆ. ಸಾರಿಗೆ ಬಸ್ ಹಾಗೂ ಬೈಕ್ ಡಿಕ್ಕಿಯ ರಭಸಕ್ಕೆ ಬೈಕ್ ಟ್ಯಾಂಕಿನ ಪೆಟ್ರೋಲ್ ಚೆಲ್ಲಿ, ಬಸ್‌ಗೆ ಬೆಂಕಿ ತಗುಲಿಕೊಂಡಿದ್ದು, ಬೆಂಕಿ ಬಸ್‌ಗೆ ಆವರಿಸಿಕೊಂಡಿದೆ. ಅದೃಷ್ಟವಶಾತ್ ಪ್ರಯಾಣಿಕರು ಬಚಾವ್ ಆಗಿದ್ದು, ಬಸ್ ಅಡಿ ಸಿಲುಕಿದ್ದ ಬೈಕ್ ಸವಾರ ಸಜೀವ ದಹನಗೊಂಡಿದ್ದಾನೆ. ಸ್ಥಳಕ್ಕೆ ಸಿಂದಗಿ ಅಗ್ನಿಶಾಮಕ ಸಿಬ್ಬಂದಿ ದೌಡಾಯಿಸಿ ಬೆಂಕಿ ನಂದಿಸಲು ಯತ್ನಿಸಿದ್ದು, ಸ್ಥಳಕ್ಕೆ ಪೊಲೀಸ್‌ರು ಭೇಟಿ ನೀಡಿ ಪರಿಶೀಲಿಸಿದರು. ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿತು. ಸಿಂದಗಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.



ಬೆದರಿಸಿ 25 ಲಕ್ಷ ರೂ.ವಂಚನೆ

ರಾಮನಗರ: ಐವರು ಮಹಿಳೆಯರ ಗುಂಪೊಂದು ಚಿತ್ರಮಂದಿರದ ಮಾಲೀಕ ನನ್ನು ಬೆದರಿಸಿ ಬರೋಬ್ಬರಿ 25 ಲಕ್ಷ ರೂಪಾಯಿಯನ್ನು ದೋಚಿರುವ ಘಟನೆ ನಗರದಲ್ಲಿ ಬೆಳಕಿಗೆ ಬಂದಿದೆ. ಲೇಡಿ ಗ್ಯಾಂಗ್ ನಿಂದ ಸುಲಿಗೆಗೆ ಒಳಗಾದ ಅಗ್ರಹಾರ ಬಡಾವಣೆಯ ನಿವಾಸಿಯಾಗಿರುವ 52 ವರ್ಷದ ವ್ಯಕ್ತಿ ಪೊಲೀಸರಿಗೆ ದೂರು ನೀಡಿದ್ದಾರೆ. ಸಂತ್ರಸ್ತ ವ್ಯಕ್ತಿ ನೀಡಿರುವ ದೂರಿನ ಪ್ರಕಾರ, ಆರೇಳು ತಿಂಗಳ ಹಿಂದೆ ರಾಮನಗರದ ಕೋತ್ತೀಪುರದ ಬಳಿ ವಾಸವಿದ್ದ ಆರೋಪಿ ಮಹಿಳೆಯೋರ್ವಳು ಸಿನಿಮಾ ನೋಡುವ ನೆಪದಲ್ಲಿ ತನ್ನ ಥಿಯೇಟರ್‌ಗೆ ಬಂದಿದ್ದಳು. ಬಳಿಕ ತನ್ನನ್ನು ಪರಿಚಯಿಸಿಕೊಂಡು ಮದುವೆಯಾಗಲು ಇಚ್ಛೆ ಇದೆ ಎಂದು ಹೇಳಿದ್ದಳು. ಆದರೆ ತಾನದನ್ನು ನಿರಾಕರಿಸಿದ ನಂತರ, ಆಕೆ ಮತ್ತಿಬ್ಬರು ಮಹಿಳೆಯರೊಂದಿಗೆ ಇನ್ನೊಮ್ಮೆ ಭೇಟಿ ನೀಡಿದ್ದಳು. ಬಳಿಕ ಮಹಿಳೆಯರೆಲ್ಲರೂ ಸೇರಿ ಒಂದಲ್ಲ ಒಂದು ನೆಪದಲ್ಲಿ ತನ್ನನ್ನು ಬೆದರಿಸಿ ಹಣ ಹಾಗೂ ಚಿನ್ನಾಭರಣಗಳನ್ನು ಸುಲಿಗೆ ಮಾಡಿದ್ದಾರೆ ಎಂದು ಉಲ್ಲೇಖಿಸಿದ್ದಾರೆ. ಈ ಸಂಬಂಧ ಐಜೂರು ಠಾಣೆಯಲ್ಲಿ ದೂರು ದಾಖಲಾಗಿದೆ.

ಚಲಿಸುತ್ತಿದ್ದ ಕಾರಿಗೆ ಬೆಂಕಿ

ದೇವನಹಳ್ಳಿ: ಚಲಿಸುತ್ತಿದ್ದ ಕಾರಿನಲ್ಲಿ ಆಕಸ್ಮಿಕವಾಗಿ ಬೆಂಕಿ ಕಾಣಿಸಿಕೊಂಡಿರುವ ಪರಿಣಾಮ, ಕಾರು ಸಂಪೂರ್ಣವಾಗಿ ಸುಟ್ಟುಹೋಗಿರುವ ಘಟನೆ ಹೊಸಕೋಟೆ-ದಾಬಸ್‌ಪೇಟೆ ಹೆದ್ದಾರಿಯಲ್ಲಿ ನಡೆದಿದೆ. ನಗರದ ಹೊರವಲಯದಲ್ಲಿರುವ ದಾಬಸ್‌ಪೇಟೆ ಹೆದ್ದಾರಿಯಲ್ಲಿ ಕಾರಿನ ಇಂಜಿನ್‌ನಲ್ಲಿ ಬೆಂಕಿಕಾಣಿಸಿಕೊಂಡಿದೆ. ಸಂಪೂರ್ಣ ಕಾರಿಗೆ ಆವರಿಸಿಕೊಂಡಿದೆ. ಅದೃಷ್ಟವಶಾತ್ ಕಾರಿನಲ್ಲಿದ್ದವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಬೆಂಕಿ ಕಾಣಿಸಿಕೊಳ್ಳುತ್ತಿದ್ದಂತೆ, ಮಾಲೀಕ ಕಾರಿನಿಂದ ಕೆಳಗೆ ಇಳಿದು ಕಾರಿನಲ್ಲಿದ್ದವರನ್ನು ಕೆಳಗೆ ಇಳಿಸಿದ್ದರಿಂದ ಪ್ರಾಣಾಪಾಯ ತಪ್ಪಿಸಿಕೊಂಡಿದ್ದಾರೆ.

ತೃತೀಯಲಿಂಗಿ ಮೇಲೆ ಹಲ್ಲೆ

ಮೈಸೂರು: ವೈಯಕ್ತಿಕ ಖರ್ಚಿಗೆ ಹಣ ನೀಡಲು ನಿರಾಕರಿಸಿದ ಕಾರಣಕ್ಕೆ ತೃತೀಯಲಿಂಗಿಯ ಮೇಲೆ ಯುವಕರ ತಂಡವೊಂದು ತಲ್ವಾರ್ ಮತ್ತು ಚಾಕುವಿನಿಂದ ಭೀಕರವಾಗಿ ಹಲ್ಲೆ ನಡೆಸಿರುವ ಆಘಾತಕಾರಿ ಘಟನೆ ಮೈಸೂರಿನ ಸಾತಗಳ್ಳಿ ಸಮೀಪದ ಅಮೃತ ಬಡಾವಣೆಯಲ್ಲಿ ನಡೆದಿದೆ. ಅಮೃತ ಬಡಾವಣೆ ನಿವಾಸಿಯಾದ ಆನಮ್ ಎಂಬ ತೃತೀಯಲಿಂಗಿಯ ಬಳಿ ಕೆಲವು ಯುವಕರು ತಮ್ಮ ವೈಯಕ್ತಿಕ ಖರ್ಚಿಗೆ ಹಣ ನೀಡುವಂತೆ ಒತ್ತಾಯಿಸಿದ್ದಾರೆ. ಆನಮ್ ಹಣ ನೀಡಲು ನಿರಾಕರಿಸಿದಾಗ ಯುವಕರು ಗಲಾಟೆ ಆರಂಭಿಸಿದ್ದಾರೆ. ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತಿರುವುದನ್ನು ಕಂಡು ಆನಮ್ ತನ್ನ ಸ್ನೇಹಿತೆ ಪಾರಿ ಎಂಬಾಕೆಗೆ ದೂರವಾಣಿ ಕರೆ ಮಾಡಿ, ಸ್ಥಳಕ್ಕೆ ಬರಲು ತಿಳಿಸಿದ್ದಾಳೆ. ಗೌಸಿಯಾನಗರದ ನಿವಾಸಿಯಾದ ಪಾರಿ ಸ್ಥಳಕ್ಕೆ ಬರುತ್ತಿದ್ದಂತೆಯೇ, ಆಕ್ರೋಶಗೊಂಡಿದ್ದ ಯುವಕರು ತಲ್ವಾರ್ ಮತ್ತು ಚಾಕುವಿನಿಂದ ಹಲ್ಲೆ ನಡೆಸಿದ್ದಾರೆ. ಈ ವೇಳೆ ಪಾರಿ ಅವರ ಮುಖಕ್ಕೆ ಚಾಕುವಿನಿಂದ ಇರಿದು ತೀವ್ರವಾಗಿ ಗಾಯಗೊಳಿಸಲಾಗಿದೆ. ರಕ್ಷಣೆ ಬಂದ ಪಾರಿಗೂ ಗಂಭೀರವಾಗಿ ಗಾಯವಾಗಿದ್ದು ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ಇಬ್ಬರೂ ತೃತೀಯಲಿಂಗಿಯರು ಅಪಾಯದಿಂದ ಪಾರಾಗಿದ್ದಾರೆ ಎಂದು ತಿಳಿದುಬಂದಿದೆ.

ಅಹಿಂಸಾ ತತ್ವ ಮರು ಸ್ಥಾಪನೆ ಅತಿ ಅವಶ್ಯ

ಪುಟ ೧➡ ಪ್ರಾಚೀನ ಮೌಲ್ಯಯುತ ಹಸ್ತಪ್ರತಿಗಳನ್ನು ಸಂರಕ್ಷಿಸಲು ವಿಫಲವಾಗಿರುವ ಹಿಂದಿನ ಸರಕಾರಗಳ ಲೋಪಗಳನ್ನು ನಾವು ಸರಿಪಡಿಸುತ್ತಿದ್ದೇವೆ ಎಂದು ಹೇಳಿದರು.

ಭಾರತದಲ್ಲಿ ಮಾತ್ರ ಕಾರ್ಯಸಾಧ್ಯ: ವೇದಗಳು, ಪುರಾಣಗಳು, ಆಯುರ್ವೇದ, ಯೋಗ ಮತ್ತಿತರ ಸೈದ್ಧಾಂತಿಕ ವಿಚಾರಧಾರೆಸಹಿತ ಪರಂಪರೆ, ಸಂಪ್ರದಾಯಗಳನ್ನು ಒಗ್ಗೂಡಿಸಿರುವ ಮ್ಯೂಸಿಯಂ, ಭಾರತದ ವೈವಿಧ್ಯತೆ ಮತ್ತು ಏಕತೆಗಳ ಅತ್ಯುಚ್ಚ ಬಲವನ್ನು ಪ್ರತಿಫಲಿಸಿದೆ. ಸಾಮ್ರಾಟ್ ಸಂಪ್ರತಿ ಸಿದ್ಧಾಂತ ಮತ್ತು ಆಡಳಿತ ನಡುವಣ ಸಂಬಂಧವನ್ನು ಪ್ರತಿನಿಧಿಸಿದ್ದಾರೆ. ಸಾಮ್ರಾಟ್ ಸಂಪ್ರತಿ ಚಾರಿತ್ರಿಕ ದೊರೆಯ ಹೆಸರಷ್ಟೇ ಅಲ್ಲ, ಭಾರತದ ಸಿದ್ಧಾಂತವನ್ನು ಅದರ ಅನುಷ್ಠಾನದೊಂದಿಗೆ ಜೋಡಿಸುವ ಸೇತುವಾಗಿದ್ದಾರೆಂದು ಪ್ರಧಾನಿ ಮೋದಿ ಬಣ್ಣಿಸಿದರು.

ವಿದೇಶಿ ದಾಳಿಕೋರರಿಂದ ಜ್ಞಾನ ಭಂಡಾರ ನಾಶ: ಸಂಪ್ರತಿ ಮಹಾರಾಜರ ದಂತಕಥೆಯನ್ನು ಈ ಮ್ಯೂಸಿಯಂ ಸಂರಕ್ಷಿಸುವುದು ಮಾತ್ರವಲ್ಲ, ಹೆಜ್ಜೆ ಹೆಜ್ಜೆಗೂ ಭಾರತದ ಅಸ್ಮಿತೆಯನ್ನು ಎತ್ತಿಹಿಡಿಯಲಿದೆ. ಮ್ಯೂಸಿಯಂನ ಏಳು ಗ್ಯಾಲರಿಗಳು ಭಾರತದ ವೈವಿಧ್ಯತೆ ಮತ್ತು ಸಾಂಸ್ಕೃತಿಕ ಸಂಪನ್ನತೆಯನ್ನು ಎತ್ತಿಹಿಡಿಯಲಿವೆ ಎಂದು ಸಾರಿದ ಪ್ರಧಾನಿ, ತಕ್ಷಶಿಲೆ ಮತ್ತು ನಳಂದಾದಂತಹ ನಮ್ಮ ಅದೆಷ್ಟೋ ಪ್ರಾಚೀನ ಜ್ಞಾನ ಭಂಡಾರ ಕೇಂದ್ರಗಳನ್ನು ಗತಕಾಲದಲ್ಲಿ ವಿದೇಶಿ ದಾಳಿಕೋರರು ನಾಶಪಡಿಸಿದ ಪರಿಣಾಮ, ಭಾರತಕ್ಕೆ ಅಪಾರ ಅಮೂಲ್ಯ ಜ್ಞಾನ ಸಂಪತ್ತು ನಷ್ಟವಾಗಿದೆ. ದಾಳಿಕೋರರು ಅಮೂಲ್ಯ ಹಸ್ತಪ್ರತಿಗಳನ್ನು ಸುಟ್ಟುಹಾಕಿದ್ದರಿಂದ ಮಾನವೀಯತೆಯ ಯಥೇಚ್ಛ ಪರಂಪರೆ ಕೈತಪ್ಪಿಹೋಗಿದೆ ಎಂದು ಬೇಗುದಿ ವ್ಯಕ್ತಪಡಿಸಿದರು.

ರಾಷ್ಟ್ರೀಯ ಪ್ರಾಧಾನ್ಯತೆ ನೀಡದ ಕಾಂಗ್ರೆಸ್ ಸರಕಾರ: ನಂತರದ ವರ್ಷಗಳಲ್ಲಿ , ಅಳಿದುಳಿದ ಹಸ್ತಪ್ರತಿಗಳನ್ನು ಜನರು ಒಂದು ತಲೆಮಾರಿನಿಂದ ಇನ್ನೊಂದಕ್ಕೆ ತಲುಪಿಸುವ ಮುಖೇನ ಇವುಗಳನ್ನು ಸಂರಕ್ಷಿಸಿದರು. ಸ್ವಾತಂತ್ರ್ಯಾನಂತರದಲ್ಲಿ ಹಿಂದಿನ ಸರಕಾರಗಳು ಜ್ಞಾನಭಂಡಾರಯುಕ್ತ ಪ್ರಾಚೀನ ಹಸ್ತಪ್ರತಿಗಳ ಸಂರಕ್ಷಿಸಲು ಮುಂದಾಗಲಿಲ್ಲ. ಸ್ವಾತಂತ್ರ್ಯಾನಂತರದಲ್ಲಿ ಇವಕ್ಕೆ ರಾಷ್ಟ್ರೀಯ ಪ್ರಾಧಾನ್ಯತೆ ಕೊಡಬೇಕಿತ್ತು. ದುರದೃಷ್ಟವಶಾತ್ ವಸಾಹತುಶಾಹಿ ಚಿಂತನೆಯಿಂದಾಗಿ ಈ ಮಹತ್ವದ ವಿಚಾರಕ್ಕೆ ಪ್ರಾಧಾನ್ಯತೆ ಸಿಗಲೇ ಇಲ್ಲ ಎಂದು ಪ್ರಧಾನಿ 2014ರ ಮುನ್ನ ದೇಶವಾಳಿದ್ದ ಕಾಂಗ್ರೆಸ್ ನೇತೃತ್ವದ ಸರಕಾರಗಳನ್ನು ತರಾಟೆಗೆತ್ತಿಕೊಂಡರು.

ಸೆಮಿಕಂಡಕ್ಟರ್ ಜೋಡಣಾ ಸೌಲಭ್ಯ ಉದ್ಘಾಟನೆ: ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳವಾರ ಸನಂದ್‌ನಲ್ಲಿ ಕೇನ್ಸ್ ಸೆಮಿಕಾನ್‌ನ ಹೊರಗುತ್ತಿಗೆ ಸೆಮಿಕಂಡಕ್ಟರ್ ಜೋಡಣೆ ಮತ್ತು ಪರೀಕ್ಷಾ ಸೌಲಭ್ಯವನ್ನು ಉದ್ಘಾಟಿಸಿದರು. ಜಾಗತಿಕ ಮಾರುಕಟ್ಟೆಯಲ್ಲಿ ವಿಶ್ವಾಸಾರ್ಹ ಸೆಮಿಕಂಡಕ್ಟರ್ ಪೂರೈಕೆದಾರನಾಗಿ ಭಾರತವು ತನ್ನ ಪಾತ್ರವನ್ನು ಬಲಪಡಿಸುತ್ತಿದೆ ಎಂದು ಹೇಳಿದರು. ಈ ಸೌಲಭ್ಯದ ಉದ್ಘಾಟನೆಯು ಸ್ವಾವಲಂಬನೆ ಕಡೆಗೆ ಭಾರತದ ಪ್ರಯತ್ನವನ್ನು ಬಲಪಡಿಸುತ್ತದೆ.

ಇದು ದೃಢವಾದ ಅರೆವಾಹಕ ಪರಿಸರ ವ್ಯವಸ್ಥೆಯನ್ನು ನಿರ್ಮಿಸುವಲ್ಲಿ ಒಂದು ಹೆಗ್ಗುರುತು ಹೆಜ್ಜೆಯಾಗಿದೆ ಎಂದು ಮೋದಿ ಹೇಳಿದರು. ಪ್ಯಾಕ್ಸ್ ಸಿಲಿಕಾ ಯೋಜನೆಗೆ ಸೇರುವ ಭಾರತದ ನಿರ್ಧಾರವು ನಿರ್ಣಾಯಕ ಖನಿಜಗಳ ಪೂರೈಕೆಯನ್ನು ಬಲಪಡಿಸುವ ಗುರಿಯನ್ನು ಹೊಂದಿದೆ ಎಂದು ಮೋದಿ ಹೇಳಿದರು.



ಕನ್ನಡದ ಸಾಹಿತಿ ಅಮರೇಶ ನುಗಡೋಣಿ ಅವರ ದಡ ಸೇರಿಸು ತಂದೆ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸಂದಿದ್ದು, ಮಂಗಳವಾರ ಹೊಸದಿಲ್ಲಿಯ ಕಮಾನಿ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸ್ವೀಕರಿಸಿದರು.

ಜನರಿಂದ ಕಾಂಗ್ರೆಸ್ ಸರ್ಕಾರಕ್ಕೆ ತಕ್ಕ ಪಾಠ: ಯಡಿಯೂರಪ್ಪ

ದಾವಣಗೆರೆ: ರಾಜ್ಯದಲ್ಲಿನ ಕಾಂಗ್ರೆಸ್ ಸರ್ಕಾರದ ಭ್ರಷ್ಟಾಚಾರ ಮತ್ತು ಆಡಳಿತ ವೈಫಲ್ಯಗಳಿಂದ ಬೇಸತ್ತಿರುವ ಜನರು ಉಪಚುನಾವಣೆಗಳಲ್ಲಿ ತಕ್ಕ ಪಾಠ ಕಲಿಸಲಿದ್ದಾರೆ ಎಂದು ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ವಿಶ್ವಾಸ ವ್ಯಕ್ತಪಡಿಸಿದರು.



ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಾಂಗ್ರೆಸ್ ಸರ್ಕಾರಕ್ಕೆ ರಾಜ್ಯದ ಅಭಿವೃದ್ಧಿ ಬಗ್ಗೆ ಗಮನವಿಲ್ಲ. ಲೂಟಿ ಹೊಡೆಯುವುದೇ ಸರ್ಕಾರದ ಸಾಧನೆ ಆಗಿದೆ. ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಅಭಿವೃದ್ಧಿಗೆ ಮೀಸಲಿಟ್ಟಿದ್ದ ಸಾವಿರಾರು ಕೋಟಿ ರೂಪಾಯಿ ಅನುದಾನವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸಲಾಗಿದೆ. ಇದರಿಂದ ದಲಿತ ಸಮುದಾಯಕ್ಕೆ ಅನ್ಯಾಯವಾಗಿದೆ. ಬಿಜೆಪಿ ಜಾರಿಗೆ ತಂದಿದ್ದ ಕಿಸಾನ್ ಸಮ್ಮಾನ್ ಯೋಜನೆಯನ್ನು ಸ್ಥಗಿತಗೊಳಿಸುವ ಮೂಲಕ ರೈತರಿಗೂ ದ್ರೋಹ ಎಸಗಿದೆ ಎಂದು ದೂರಿದರು. ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಭಾರಿ ಹಗರಣ ನಡೆದಿದ್ದು, ಹಣವನ್ನು ಬೇರೆ ರಾಜ್ಯದ ಚುನಾವಣೆಗೆ ಬಳಸಲಾಗಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸಚಿವರೊಬ್ಬರು ರಾಜೀನಾಮೆ ಕೂಡ ನೀಡಿದ್ದಾರೆ. ಇದೆಲ್ಲದರ ಹಿನ್ನೆಲೆಯಲ್ಲಿ ದಾವಣಗೆರೆ ಹಾಗೂ ಬಾಗಲಕೋಟೆ ಎರಡೂ ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಜಯ ಸಾಧಿಸಲಿದ್ದಾರೆ ಎಂದರು.

ದಲಿತ ಸಮುದಾಯಕ್ಕೆ ಕಾಂಗ್ರೆಸ್ ಸರ್ಕಾರ ಅನ್ಯಾಯ: 2000 ರೂಪಾಯಿ ಗೃಹಲಕ್ಷ್ಮೀ ಹಣ ಹಾಕಿ, ಸಿಕ್ಕ ಸಿಕ್ಕ ವಸ್ತುಗಳ ದರ ಏರಿಕೆ ಮಾಡಲಾಗಿದೆ. 39 ಸಾವಿರ ಕೋಟಿ ಎಸ್‌ಸಿಪಿ ಟಿಎಸ್‌ಪಿ ಹಣ ಗ್ಯಾರಂಟಿ ಯೋಜನೆಗೆ ಅಕ್ರಮವಾಗಿ ವರ್ಗಾವಣೆ ಅಂತ ಬಿಎಸ್‌ವೈ ಆರೋಪಿಸಿದ್ರು. ದಲಿತ ಸಮುದಾಯಕ್ಕೆ ಕಾಂಗ್ರೆಸ್ ಸರ್ಕಾರ ದೊಡ್ಡ ಅನ್ಯಾಯ ಮಾಡಿದೆ. ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣ ತೆಲಂಗಾಣ ಚುನಾವಣೆಗೆ ಬಳಕೆ ಮಾಡಿದೆ ಅಂತ ಇದೇ ಸಂದರ್ಭದಲ್ಲಿ ಬಿಎಸ್‌ವೈ ಆರೋಪಿಸಿದರು.

ಚನ್ನಕೇಶವಸ್ವಾಮಿ ರಥೋತ್ಸವ




ಬೇಲೂರು ಶ್ರೀ ಚನ್ನಕೇಶವ ಸ್ವಾಮಿಯವರ ಬ್ರಹ್ಮ ರಥೋತ್ಸವವು ಮಂಗಳವಾರ ಸಹಸ್ರಾರು ಭಕ್ತಾದಿಗಳ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು.

ಲೋಕಾಯುಕ್ತ ನ್ಯಾಯಾಲಯ ಮಹತ್ವದ ತೀರ್ಪು

ಮಾಜಿ ಎಂಡಿ ವಿ. ಮುನಿಯಪ್ಪ ದೋಷಿ: ಮೂರು ವರ್ಷ ಶಿಕ್ಷೆ

ಬೆಂಗಳೂರು: ಆದಾಯಕ್ಕೂ ಮೀರಿದ ಆಸ್ತಿಗಳಿಕೆ ಪ್ರಕರಣದಲ್ಲಿ ಕರ್ನಾಟಕ ತಾಂತ್ರಿಕ ಶಿಕ್ಷಣ ಪರಿಷತ್‌ನ ನಿವೃತ್ತ ವ್ಯವಸ್ಥಾಪಕ ನಿರ್ದೇಶಕ ವಿ. ಮುನಿಯಪ್ಪ ಅವರು ದೋಷಿ ಎಂದು ಕರ್ನಾಟಕ ಲೋಕಾಯುಕ್ತ ನ್ಯಾಯಾಲಯವು ಮಹತ್ವದ ತೀರ್ಪು ನೀಡಿದೆ.



ಸುಮಾರು 12 ವರ್ಷಗಳ ಸುದೀರ್ಘ ಕಾನೂನು ಹೋರಾಟದ ನಂತರ ಈ ಶಿಕ್ಷೆ ಪ್ರಕಟವಾಗಿದ್ದು, ಭ್ರಷ್ಟಾಚಾರದ ವಿರುದ್ಧದ ಹೋರಾಟದಲ್ಲಿ ಇದೊಂದು ಪ್ರಮುಖ ಮೈಲಿಗಲ್ಲಾಗಿದೆ. ಸಧ್ಯ ಬೆಂಗಳೂರಿನ ಬಸವ ಭವನದ ವ್ಯವಸ್ಥಾಪಕ ನಿರ್ದೇಶಕರಾಗಿದ್ದಾರೆ. ವಿ. ಮುನಿಯಪ್ಪ ವಿರುದ್ಧ 2014ರಲ್ಲಿ ಭ್ರಷ್ಟಾಚಾರ ಮತ್ತು ಅಕ್ರಮ ಆಸ್ತಿ ಗಳಿಕೆಯ ಆರೋಪದ ಮೇಲೆ ಪ್ರಕರಣ ದಾಖಲಾಗಿತ್ತು.

ಲೋಕಾಯುಕ್ತ ಪೊಲೀಸರು ನಡೆಸಿದ ತನಿಖೆಯಲ್ಲಿ, ಮುನಿಯಪ್ಪ ಅವರು ತಮ್ಮ ಅಧಿಕೃತ ಆದಾಯದ ಮೂಲಗಳಿಗಿಂತ ಕೋಟ್ಯಾಂತರ ರೂ. ಮೌಲ್ಯದ ಅಕ್ರಮ ಆಸ್ತಿಯನ್ನು ಸಂಪಾದಿಸಿರುವುದು ಸಾಕ್ಷ್ಯಾಧಾರಗಳ ಸಮೇತ ಸಾಬೀತಾಗಿತ್ತು. ಪ್ರಕರಣದ ಸಮಗ್ರ ವಿಚಾರಣೆ ನಡೆಸಿದ ನ್ಯಾಯಾಲಯವು ಆರೋಪಿಗೆ 3 ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆ ಹಾಗೂ 4.5 ಕೋಟಿ ರೂ.ಗಳ ಬೃಹತ್ ದಂಡವನ್ನು ವಿಧಿಸಿದೆ. ಒಂದು ವೇಳೆ ಈ ದಂಡದ ಮೊತ್ತವನ್ನು ಪಾವತಿಸಲು ವಿಫಲವಾದರೆ, ಆರೋಪಿಯು ಹೆಚ್ಚುವರಿಯಾಗಿ ಆರು ತಿಂಗಳ ಕಾಲ ಜೈಲು ಶಿಕ್ಷೆ ಅನುಭವಿಸಬೇಕೆಂದು ನ್ಯಾಯಾಧೀಶರು ತೀರ್ಪಿನಲ್ಲಿ ಸ್ಪಷ್ಟಪಡಿಸಿದ್ದಾರೆ. 2014ರಲ್ಲಿ ಆರಂಭವಾದ ಈ ಕಾನೂನು ಪ್ರಕ್ರಿಯೆಯು 2026ರಲ್ಲಿ ಅಂತಿಮವಾಗಿ ಶಿಕ್ಷೆಯ ಮುದ್ರೆಯೊಂದಿಗೆ ಅಂತ್ಯಗೊಂಡಿದೆ.

ಕಿರುಸುದ್ದಿ

ಪತ್ರಕರ್ತೆ ನವ್ಯಜ್ಯೋತಿಗೆ ಕೆಯುಡಬ್ಲ್ಯೂಜೆ ಪ್ರಶಸ್ತಿ

ಬೆಂಗಳೂರು: ಕರ್ನಾಟಕ ಕಾರ್ಯ ನಿರತ ಪತ್ರಕರ್ತರ ಸಂಘ (ಕೆಯುಡಬ್ಲ್ಯೂಜೆ) 2024ನೇ ಸಾಲಿನ ವಾರ್ಷಿಕ ಪ್ರಶಸ್ತಿಗಳನ್ನು ಪ್ರಕಟಿಸಿದ್ದು, ಹೊಸದಿಗಂತ ಪತ್ರಿಕೆಯ ವಿಶೇಷ ಪ್ರತಿನಿಧಿ ನೆಲ್ಲಿಜೆ ನವ್ಯಜ್ಯೋತಿ ಅವರು, ಪತ್ರಕರ್ತ ದಿ. ಗುರುಲಿಂಗಸ್ವಾಮಿ ಹೊಳಿಮಠ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಬೀದರ್‌ನಲ್ಲಿ ಏ.11 ಮತ್ತು 12 ರಂದು ನಡೆಯಲಿರುವ 40ನೇ ರಾಜ್ಯ ಪತ್ರಕರ್ತರ ಸಮ್ಮೇಳನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಮತ್ತು ಪ್ರಧಾನ ಕಾರ್ಯದರ್ಶಿ ಜೆ.ಸಿ ಲೋಕೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಜನರ ಮೇಲೆ ಸಾಲದ ಹೊರೆ ಏರಿಸಿದ ಸರ್ಕಾರ

ದಾವಣಗೆರೆ: ರಾಜ್ಯದಲ್ಲಿರುವುದು ಕಾಂಗ್ರೆಸ್ಸಿನ ಫೋನ್ ಪೇ ಲಂಚದ ಸರ್ಕಾರ. ರಾಜ್ಯದ ಜನರ ಮೇಲೆ ಸಾಲದ ಹೊರೆ ಏರಿಸುವ ಮೂಲಕ ಸಿಎಂ ಸಿದ್ದರಾಮಯ್ಯನವರು ಸಾಲದರಾಮಯ್ಯ ಆಗಿದ್ದಾರೆ ಎಂದು ವಿಪಕ್ಷ ನಾಯಕ ಆರ್.ಅಶೋಕ್ ಟೀಕಿಸಿದರು. ಮಂಗಳವಾರ ನಗರದ ಬಿಜೆಪಿ ಕಚೇರಿಯಲ್ಲಿ ಮಂಗಳವಾರ ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆ ಹಿನ್ನೆಲೆಯಲ್ಲಿ ಪಕ್ಷದ ಪ್ರಣಾಳಿಕೆ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರವು ಅಭಿವೃದ್ಧಿಯನ್ನು ಮರೆತು ಕೇವಲ ಲಂಚ ಪಡೆಯುವುದರಲ್ಲಿ ಮಗ್ನವಾಗಿದೆ. ಲಂಚದ ಹಣವನ್ನು ಫೋನ್ ಪೇ ಮೂಲಕವೇ ಹಾಕಿಸಿಕೊಳ್ಳುತ್ತಿದೆ. ಸಿದ್ದರಾಮ್ಯಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರವು ಅಧಿಕಾರಕ್ಕೆ ಬಂದ ಈ ಮೂರು ವರ್ಷಗಳ ಅವಧಿಯಲ್ಲಿ ವಿಪರೀತ ಸಾಲ ಮಾಡುವ ಮೂಲಕ ಆರ್ಥಿಕ ಶಿಸ್ತನ್ನು ಉಲ್ಲಂಘಿಸಿದೆ. ಪ್ರತಿಯೊಬ್ಬ ನಾಗರಿಕರ ಮೇಲೆ 1.12 ಲಕ್ಷ ರೂ. ಸಾಲ ಹೊರಿಸಿದೆ ಎಂದರು. ಹಿಂದಿ ಹೇರಿಕೆ ಬಗ್ಗೆ ಮಾತನಾಡುವ ಕಾಂಗ್ರೆಸ್ ನಾಯಕರು ಇತಿಹಾಸ ನೆನಪಿಸಿಕೊಳ್ಳಬೇಕು. ದೇಶದಲ್ಲಿ ತ್ರಿಭಾಷಾ ಸೂತ್ರ ತಂದವರು ಮಹಾತ್ಮ ಗಾಂಧೀಜಿ, ನೆಹರು ಮತ್ತು ಇಂದಿರಾ ಗಾಂಧಿ. ದೇಶದ ಎಲ್ಲಾ ಜಿಲ್ಲೆ ಮತ್ತು ನಗರಗಳಿಗೆ ಹಿಂದಿಯನ್ನು ತಲುಪಿಸಿದವರು ಕಾಂಗ್ರೆಸ್ಸಿಗರೇ ಹೊರತು ಬಿಜೆಪಿಯಲ್ಲ ಎಂದು ಅವರು ವಾಗ್ದಾಳಿ ನಡೆಸಿದರು.

ಸಾರ್ವತ್ರಿಕ ಚುನಾವಣೆಗೆ ದಿಕ್ಸೂಚಿ: ಸುನೀಲ್ ಕುಮಾರ್

ದಾವಣಗೆರೆ: ಬಾಗಲಕೋಟೆ ಹಾಗೂ ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆಗಳು ರಾಜ್ಯ ರಾಜಕೀಯದಲ್ಲಿ ಮಹತ್ವದ ತಿರುವು ತರಲಿದ್ದು, ಈ ಎರಡೂ ಕ್ಷೇತ್ರಗಳಲ್ಲಿ ಬಿಜೆಪಿ ಗೆಲುವು ಮುಂಬರುವ ಸಾರ್ವತ್ರಿಕ ಚುನಾವಣೆಗೆ ದಿಕ್ಸೂಚಿಯಾಗಲಿದೆ ಎಂದು ಶಾಸಕ ವಿ.ಸುನೀಲ್ ಕುಮಾರ್ ಹೇಳಿದರು.



ನಗರದಲ್ಲಿ ಮಂಗಳವಾರ ನಡೆದ ಪಕ್ಷದ ಪ್ರಮುಖರು ಮತ್ತು ಪದಾಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ಉಪಚುನಾವಣೆಗಳು ಕೇವಲ ಕ್ಷೇತ್ರ ಮಟ್ಟಕ್ಕೆ ಸೀಮಿತವಾಗಿಲ್ಲ, ರಾಜ್ಯದ ರಾಜಕೀಯ ಭವಿಷ್ಯವನ್ನು ನಿರ್ಧರಿಸುವಂತಿವೆ. ಉಪಚುನಾವಣೆಯ ಕಾವು ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು, ಕಾರ್ಯಕರ್ತರು ನಿರ್ಮಿಸಿರುವ ಉತ್ಸಾಹಭರಿತ ವಾತಾವರಣವು ಬಿಜೆಪಿ ಗೆಲುವಿನ ಸೂಚಕವಾಗಿದೆ. ರಾಜ್ಯದ ಎಲ್ಲೆಡೆಯಿಂದ ಕಾರ್ಯಕರ್ತರು ಈ ಎರಡೂ ಕ್ಷೇತ್ರಗಳಲ್ಲಿ ಬಿಜೆಪಿ ಗೆಲ್ಲಬೇಕು ಎಂಬ ದೃಢ ಸಂಕಲ್ಪದೊಂದಿಗೆ ಕೆಲಸ ಮಾಡುತ್ತಿದ್ದಾರೆ ಎಂದರು.

ಪ್ರಚಾರದಲ್ಲಿ ಒಳಮೀಸಲಾತಿ ವಿಚಾರ | ಸಿಎಂ ಸಿದ್ದರಾಮಯ್ಯ ಹೇಳಿಕೆ

ಯಾರಿಗೂ ಅನ್ಯಾಯ ಮಾಡಲ್ಲ

ಬಾಗಲಕೋಟೆ: ಒಳ ಮೀಸಲಾತಿ ವಿಚಾರದಲ್ಲಿ ಬಂಜಾರ ಸಮುದಾಯವಾಗಲಿ, ಎಡಗೈ ಮತ್ತು ಬಲಗೈ ಸಮುದಾಯ ಸೇರಿದಂತೆ ಸಣ್ಣ ಸಮುದಾಯಕ್ಕೂ ಕೂಡ ಯಾವುದೇ ಅನ್ಯಾಯ ಮಾಡುವುದಿಲ್ಲ. ಕಾಂಗ್ರೆಸ್ ಸಾಮಾಜಿಕ ನ್ಯಾಯದಲ್ಲಿ ನಂಬಿಕೆ ಇಟ್ಟ ಪಕ್ಷವಾಗಿದೆ. ಯಾರೂ ಕೂಡ ಒಳಮೀಸಲಾತಿ ವಿಚಾರದಲ್ಲಿ ಆತಂಕ ಪಡುವ ಅಗತ್ಯವಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.



ಬಾಗಲಕೋಟೆ ಮತಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ ಪರ ಪ್ರಚಾರ ನಡೆಸಿ, ನೀಲಾನಗರದಲ್ಲಿ ಬಹಿರಂಗ ಪ್ರಚಾರ ಸಭೆಯನ್ನು ಉದ್ದೇಶಿಸಿ ಅವರು ಮಾತನಾಡಿದರು. ಬಂಜಾರ ಸಮುದಾಯವನ್ನು ಎಸ್ಸಿ ವರ್ಗಕ್ಕೆ ಸೇರಿಸಿದ್ದು ಕಾಂಗ್ರೆಸ್. ಹೀಗಾಗಿ ಒಳಮೀಸಲಾತಿ ವಿಚಾರದಲ್ಲಿಯೂ ಕೂಡ ಅನ್ಯಾಯವಾಗದ ರೀತಿ ಸರ್ಕಾರ ನಡೆದುಕೊಳ್ಳುತ್ತದೆ ಎಂದು ಭರವಸೆ ನೀಡಿದರು.

ನಮ್ಮದು ಪಕ್ಷಾತೀತವಾದ ಅಭಿವೃದ್ಧಿಪರ ಸರ್ಕಾರವಾಗಿದೆ. ಬಿಜೆಪಿಯವರು ಗ್ಯಾರಂಟಿ ಯೋಜನೆಯನ್ನು ವಿರೋಧಿಸಿದ್ದಾರೆ. ಬಡವರು, ಮಹಿಳೆಯರು ಬಗ್ಗೆ ಬಿಜೆಪಿಯವರಿಗೆ ಕಾಳಜಿ ಇಲ್ಲ ಎಂದು ಹೇಳಿದರು. ದೇಶಕ್ಕೆ ಸ್ವಾತಂತ್ರ್ಯ ತಂದು ಕೊಡುವಲ್ಲಿ ಮಹಾತ್ಮ ಗಾಂಧೀಜಿಯವರ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷ ಪ್ರಮುಖ ಪಾತ್ರ ವಹಿಸಿದೆ. ಸ್ವಾತಂತ್ರ್ಯ ತಂದುಕೊಟ್ಟಿದ್ದೇ ಕಾಂಗ್ರೆಸ್ ಪಕ್ಷ. ಬ್ರಿಟಿಷರ ಜತೆಗೆ ಬಿಜೆಪಿಯವರು ಸೇರಿಕೊಂಡಿದ್ದರು. ಬಿಜೆಪಿಯವರಿಗೆ ಬಡವರ, ಮಹಿಳೆಯರ ಕಷ್ಟ ಗೊತ್ತಿಲ್ಲ. ಅದಕ್ಕೇ ಅವರು ಅಧಿಕಾರದಲ್ಲಿದ್ದಾಗ ಅಭಿವೃದ್ಧಿ ಕಾರ್ಯ ಮಾಡಲಿಲ್ಲ. ದಲಿತರಿಗೆ ಮೀಸಲಾತಿ ತಂದವರು ನಾವು. ಬಿಜೆಪಿ ತರಲಿಲ್ಲ. ದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟಿದ್ದು ಕಾಂಗ್ರೆಸ್ ಪಕ್ಷ. ಬ್ರಿಟಿಷರ ಜೊತೆ ಸೇರಿದ್ದ ಬಿಜೆಪಿಯವರು ದೇಶದ ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟದಲ್ಲಿ ಭಾಗಿಯಾಗಲೇ ಇಲ್ಲ. 1925ರಲ್ಲೇ ಆರ್‌ಎಸ್‌ಎಸ್ ಸ್ಥಾಪನೆ ಆಗಿದ್ದರೂ ಬ್ರಿಟೀಷರ ವಿರುದ್ಧ ಆರ್‌ಎಸ್‌ಎಸ್ ಧ್ವನಿ ಎತ್ತಲಿಲ್ಲ. ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಲಿಲ್ಲ, ಇದು ಕಾಂಗ್ರೆಸ್‌ನ ಹೋರಾಟದ ಪರಂಪರೆ ಮತ್ತು ಕಾಂಗ್ರೆಸ್ ಪಕ್ಷದ ಇತಿಹಾಸ ಎಂದರು.

ಜನರಿಗೆ ಸ್ಪಂದಿಸದೆ, ಈಗ ನಮ್ಮ ಗ್ಯಾರಂಟಿಗಳ ಬಗ್ಗೆ ಅಪಪ್ರಚಾರ ಮಾಡುತ್ತಿರುವ ಬಿಜೆಪಿಯವರಿಗೆ ಮತ ಕೇಳುವ ಯಾವ ನೈತಿಕತೆ ಇದೆ ಎಂದು ಪ್ರಶ್ನಿಸಿದ ಅವರು, ಎಚ್.ವೈ.ಮೇಟಿ ಅವರ ಆತ್ಮಕ್ಕೆ ಶಾಂತಿ ಸಿಗಬೇಕಾದರೆ ಉಮೇಶ ಮೇಟಿ ಅವರನ್ನು ಗೆಲ್ಲಿಸಲೇಬೇಕು ಎಂದು ಕರೆ ನೀಡಿದರು. ಸಚಿವ ಶಿವಾನಂದ ಪಾಟೀಲ, ಆರ್.ಬಿ.ತಿಮ್ಮಾಪುರ, ಶಾಸಕ ವಿಜಯಾನಂದ ಕಾಶಪ್ಪನವರ, ಬಿ.ಬಿ.ಚಿಮ್ಮನಕಟ್ಟಿ, ಜಿಲ್ಲಾಧ್ಯಕ್ಷ ಎಸ್.ಜಿ.ನಂಜಯ್ಯನಮಠ, ಸಂಯುಕ್ತ ಪಾಟೀಲ, ಮಾಜಿ ಸಚಿವ ಎಸ್.ಆರ್.ಪಾಟೀಲ, ಅಜಯಕುಮಾರ ಸರನಾಯಕ ಇದ್ದರು.

ಬಿಜೆಪಿಯವರಿಗೆ ಸೋಲಿನ ಭೀತಿ: ಸಿಎಂ

ಬಾಗಲಕೋಟೆ: ಬಿಜೆಪಿಯವರು ಸೋಲಿನ ಭೀತಿಯಿಂದ ನಮ್ಮ ವಿರುದ್ಧ ಹೇಳಿಕೆಗಳನ್ನು ನೀಡುತ್ತಿದ್ದಾರೆ. ನಿಧನ ಹೊಂದಿದ ಶಾಸಕರ ಕುಟುಂಬದವರಿಗೆ ಟಿಕೆಟ್ ನೀಡುವುದು ಕಾಂಗ್ರೆಸ್ ಪಕ್ಷದ ಪ್ರತೀತಿಯಾಗಿದ್ದು, ದಾವಣಗೆರೆ ಹಾಗೂ ಬಾಗಲಕೋಟೆಯಲ್ಲಿ ನಿಧನ ಹೊಂದಿದ ಶಾಸಕರ ಕುಟುಂಬದವರಿಗೆ ಟಿಕೆಟ್ ನೀಡಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು. ಸಿಎಂ ಸ್ಥಾನದ ಬಗ್ಗೆ ಬಿಜೆಪಿಯ ಛಲವಾದಿ ನಾರಾಯಣಸ್ವಾಮಿಯವರು ನೀಡಿರುವ ಹೇಳಿಕೆ ಬಗ್ಗೆ ಪ್ರತಿಕ್ರಿಯೆ ನೀಡಿ, ಪಕ್ಷದ ಹೈಕಮಾಂಡ್‌ನ ನಿರ್ಧಾರಗಳಿಗೆ ಬದ್ಧನಾಗಿರುತ್ತೇನೆ. ಬಿಜೆಪಿಯವರ ಹೇಳಿಕೆಗೆ ಪ್ರತಿಕ್ರಿಯೆ ನೀಡುವುದಿಲ್ಲ ಎಂದರು. ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್‌ನವರೇ ಆಗಿದ್ದ ಪೈಲ್ವಾನ್ ಸಾದಿಕ್ ಅವರ ಮನವೊಲಿಸಿ ಕಣದಿಂದ ಹಿಂದೆ ಸರಿಯುವಂತೆ ಮಾಡಲಾಗಿದೆ. ಸಚಿವ ಜಮೀರ್ ಅಹ್ಮದ್ ಅವರೂ ಚುನಾವಣಾ ಪ್ರಚಾರದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದರು.

ಜನರ ಮೇಲೆ ಬೆಲೆ ಏರಿಕೆ ಯುದ್ಧ: ಡಿಕೆಶಿ

ಬೆಂಗಳೂರು: ಸಾಮಾನ್ಯ ಜನರ ಮೇಲೆ ಕೇಂದ್ರ ಸರ್ಕಾರ ಬೆಲೆ ಏರಿಕೆ ಯುದ್ಧ ಮಾಡುತ್ತಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಟೀಕಿಸಿದ್ದಾರೆ.



ಕೆಪಿಸಿಸಿ ಕಚೇರಿಯಲ್ಲಿ ಮಂಗಳವಾರ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು, ಯುದ್ಧಗಳ ನೆಪ, ಕೇಂದ್ರದ ತಪ್ಪು ನಿರ್ಧಾರ, ನೀತಿಗಳಿಂದಾಗಿ ಇಂದು ದೇಶದ ಜನ ಬೆಲೆ ಏರಿಕೆಯಿಂದ ನರಳುತ್ತಿದ್ದಾರೆ ಎಂದರು. ಪಂಚರಾಜ್ಯ ಚುನಾವಣೆ ನಡೆಯುತ್ತಿದೆ. ಜನರು ಪರದಾಡುತ್ತಿದ್ದು, ಹೋಟೇಲ್‌ಗಳು ಬಂದ್ ಆಗುತ್ತಿವೆ. ಜನ ವಿದ್ಯುತ್ ಒಲೆ ಬಳಸುವ ಅನಿವಾರ್ಯತೆ ಎದುರಾಗಿದೆ. ಕಳೆದ ಹದಿನೈದು ದಿನಗಳಿಂದ ರಾಜ್ಯದಲ್ಲಿ ವಿದ್ಯುತ್ ಬಳಕೆ ಪ್ರಮಾಣ ಶೇ.10ರಷ್ಟು ಏರಿಕೆಯಾಗಿದೆ. ಕೇಂದ್ರ ಸರ್ಕಾರ ಜನರಿಗೆ ಸೌದೆ ಭಾಗ್ಯ ನೀಡಿದೆ ಎಂದು ಲೇವಡಿ ಮಾಡಿದರು.

ಕೇಂದ್ರ ಬಿಜೆಪಿ ಸರ್ಕಾರ ಜನರಿಗೆ ಉಜ್ವಲ ಯೋಜನೆ ಬದಲಾಗಿ ಸೌದೆ ಒಲೆ ಯೋಜನೆ ನೀಡಿದೆ. ಅಚ್ಛೇದಿನ ಏನಾಯ್ತು? ಈಗ ಇರುವುದನ್ನು ಕಚ್ಚಾ ದಿನ ಎಂದು ಹೇಳಬೇಕಾ? ಎಂದು ಬಿಜೆಪಿ ನಾಯಕರನ್ನು ಕೇಳಬಯಸುತ್ತೇನೆ ಎಂದು ವಾಗ್ದಾಳಿ ನಡೆಸಿದರು. ಅಡುಗೆ ಅನಿಲ ಸಿಲಿಂಡರ್ ಬೆಲೆ ಏರಿಕೆ ಮಾತ್ರವಲ್ಲ, ಟೋಲ್ ಶುಲ್ಕ, ರೈಲ್ವೆ ಟಿಕೆಟ್ ದರ ಎಲ್ಲವೂ ಹೆಚ್ಚಾಗಿದೆ. ಕೆಲವು ಅನಿವಾರ್ಯ ಪರಿಸ್ಥಿತಿಯಲ್ಲಿ ರಾಜ್ಯ ಸರ್ಕಾರ ಬೆಲೆ ಏರಿಕೆ ತೀರ್ಮಾನ ಮಾಡಿದಾಗ ಯಾವ ರೀತಿ ಟೀಕೆ ಟಿಪ್ಪಣಿ ಬಂದಿವೆ ಎಂದು ಎಲ್ಲರಿಗೂ ಗೊತ್ತಿದೆ ಎಂದರು.

> ಇಂದಿನಿಂದ ಕೇಂದ್ರ ಬಿಜೆಪಿ ಸರ್ಕಾರ ಕನ್ನಡಿಗರು ಹಾಗೂ ದೇಶದ ಜನರ ಮೇಲೆ ಬೆಲೆ ಏರಿಕೆ ದಾಳಿ ಮಾಡಲಿದೆ. ಬೆಲೆ ಏರಿಕೆಯು ಜನರ ಪರಿಶ್ರಮದ ಹಣವನ್ನು ವಂಚಿಸಿ, ಲೂಟಿ ಮಾಡಿ, ದೋಚುವ ಸಾಧನವಾಗಿದೆ.
>
> ■ ರಣದೀಪ್ ಸಿಂಗ್ ಸುರ್ಜೆವಾಲ, ಎಐಸಿಸಿ ಪ್ರಧಾನ ಕಾರ್ಯದರ್ಶಿ

ಜನತೆಗೆ ನೆರವಾಗಲಿ

ನಾವು ಗ್ಯಾರಂಟಿ ನೀಡಿದ ಕಾರಣಕ್ಕೆ ಜನ ಸ್ವಲ್ಪ ಉಸಿರಾಡುತ್ತಿದ್ದಾರೆ. ಇದೇ ರೀತಿ ಕೇಂದ್ರ ಸರ್ಕಾರ ಪರ್ಯಾಯ ವ್ಯವಸ್ಥೆ ಮಾಡಬೇಕು. ಜನಸಾಮಾನ್ಯರ ಬವಣೆಯ ಜೊತೆ ಕೇಂದ್ರ ನಿಲ್ಲುತ್ತಿಲ್ಲ. ಬೆಲೆ ಏರಿಕೆಯಿಂದ ತತ್ತರಿಸುತ್ತಿರುವ ಜನರಿಗೆ ಕೇಂದ್ರ ಸರ್ಕಾರ ನೆರವಾಗಬೇಕು ಎಂದು ಆಗ್ರಹಿಸುತ್ತೇವೆ ಎಂದರು.

ಆಂಧ್ರ ಪ್ರದೇಶದ ಹಣಕಾಸು ಸಚಿವ ಪಾಯವುಲ ಕೇಶವ ವಿಶ್ವಾಸ

ಟಿಬಿ ಡ್ಯಾಂನಲ್ಲಿ ನೂತನ ಕ್ರಸ್ಟ್‌ಗೇಟ್

ವಿಜಯನಗರ: ತುಂಗಭದ್ರಾ ಜಲಾಶಯದ ಎಲ್ಲ 32 ಕ್ರಸ್ಟ್ ಗೇಟ್‌ಗಳ ಅಳವಡಿಕೆ ಕಾರ್ಯ ಮೇ ಅಂತ್ಯದೊಳಗೆ ಮುಕ್ತಾಯವಾಗಿದ್ದು, ಮುಂದಿನ 50 ವರ್ಷಗಳ ವರೆಗೆ ಅಭಾದಿತ ಎಂದು ಆಂಧ್ರ ಪ್ರದೇಶದ ಹಣಕಾಸು ಸಚಿವ ಪಾಯವುಲ ಕೇಶವ ವಿಶ್ವಾಸ ವ್ಯಕ್ತಪಡಿಸಿದರು.



ಹೊಸಪೇಟೆ ಸಮೀಪದ ತುಂಗಭದ್ರಾ ಅಣೆಕಟ್ಟೆಗೆ ಭೇಟಿ ನೀಡಿದ ಅವರು, ನೂತನ ಕ್ರಸ್ಟ್ ಗೇಟ್‌ಗಳ ಅಳವಡಿಕೆ ಕಾರ್ಯವನ್ನು ಪರಿಶೀಲಿಸಿದರು. ಇದೇ ವೇಳೆ ಜಲಾಶಯದಲ್ಲಿ ನಡೆರುವ ಕ್ರಸ್ಟ್ ಗೇಟ್‌ಗಳ ಅವಳಡಿಕೆ ಹಾಗೂ ದುರಸ್ತಿ ಕಾರ್ಯಗಳ ಬಗ್ಗೆ ತುಂಗಭದ್ರಾ ಬೋರ್ಡ್‌ನ ತಾಂತ್ರಿಕ ತಜ್ಞರು ಸಚಿವರಿಗೆ ಮಾಹಿತಿ ಒದಗಿಸಿದರು.

ಬಳಿಕ ಸುದ್ದಿಗಾರೊಂದಿಗೆ ಮಾತನಾಡಿದ ಸಚಿವ ಪಾಯವುಲ ಕೇಶವ ಅವರು, ತುಂಗಭದ್ರಾ ಜಲಾಶಯ ನಿರ್ಮಾಣಗೊಂಡು ಹಲವು ದಶಕಗಳು ಕಳೆದಿವೆ. 19ನೇ ಕ್ರಸ್ಟ್ ಗೇಟ್ ಕಳಚಿ ಬಿದ್ದ ಬಳಿಕ ಜಲಾಶಯ ಸುರಕ್ಷತಾ ಪ್ರಾಧಿಕಾರದ ತಜ್ಞರ ಸಲಹೆ ಮೇರೆಗೆ ಎಲ್ಲ ಗೇಟ್‌ಗಳನ್ನು ಹೊಸದಾಗಿ ಅಳವಡಿಸಲಾಗುತ್ತಿದೆ. ಮೇ ತಿಂಗಳ ಒಳಗಾಗಿ ಎಲ್ಲ ಕ್ರಸ್ಟ್ ಗೇಟ್‌ಗಳು ಅಳವಡಿಕೆಯಾಗಲಿದೆ. ಅಷ್ಟರೊಳಗೆ ಮುಂಗಾರು ಮಳೆ ಚುರುಕುಗೊಳ್ಳುವ ಬಗ್ಗೆ ಹವಾಮಾನ ಇಲಾಖೆಯೂ ಮುನ್ಸೂಚನೆ ನೀಡಿದ್ದರಿಂದ ಈ ಬಾರಿ ಮುಂಗಾರು ಹಂಗಾಮು ರೈತರಿಗೆ ವರವಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಟಿಬಿ ಡ್ಯಾಂ ಮೂರು ರಾಜ್ಯಗಳಿಗೆ ಸಂಬಂಧಿಸಿದ್ದರಿಂದ ಎಲ್ಲ ರಾಜ್ಯಗಳು ತಮ್ಮ ಪಾಲಿನ ಅನುದಾನವನ್ನು ಈಗಾಗಲೇ ಒದಗಿಸಿದೆ. ಮುಂದಿನ ದಿನಗಳಲ್ಲಿ ಅಗತ್ಯವಾದರೆ, ಮತ್ತಷ್ಟು ಅನುದಾನ ನೀಡಲು ಆಂಧ್ರಪ್ರದೇಶ ಸರ್ಕಾರ ಸಿದ್ಧವಾಗಿದೆ. ಅನುದಾನ ವಿನಿಯೋಗ ಹಾಗೂ ತಾಂತ್ರಿಕ ವಿಚಾರಗಳನ್ನು ಟಿಬಿ ಬೋರ್ಡ್ ನಿರ್ಧರಿಸಲಿದೆ. ಇದರಲ್ಲಿ ಯಾವುದೇ ಸರ್ಕಾರದ ಹಸ್ತಕ್ಷೇಪವಿಲ್ಲ. ಈಗ ನಡೆದಿರುವ ನೂತನ ಕ್ರಸ್ಟ್ ಗೇಟ್‌ಗಳ ಅವಳಡಿಕೆ ಹಾಗೂ ಇತರೆ ದುರಸ್ತಿ ಕಾರ್ಯಗಳಿಂದಾಗಿ ಜಲಾಶಯಥ ಆಯಸ್ಸು 50 ವರ್ಷಗಳಷ್ಟು ಹೆಚ್ಚಲಿದೆ ಎಂದು ಅಭಿಪ್ರಾಯಪಟ್ಟರು. ಆಂಧ್ರಪ್ರದೇಶ ಸರ್ಕಾರದ ಮುಖ್ಯ ಸಚೇತಕ ಕಲವಾ ಶ್ರೀನಿವಾಸಲು, ತುಂಗಭದ್ರಾ ಮಂಡಳಿಯ ಕಾರ್ಯದರ್ಶಿ ಓ.ಆರ್.ಕೆರೆಡ್ಡಿ, ಅಧೀಕ್ಷಕ ಅಭಿಯಂತರ ನಾರಾಯಣ ನಾಯಕ್, ಶಾಖಾಧಿಕಾರಿ ಕಿರಣ್ ಇದ್ದರು.

ವಿಪಕ್ಷ ನಾಯಕರ ಹೇಳಿಕೆ ವಿರುದ್ಧ ಮುಖ್ಯಮಂತ್ರಿ ಸಿದ್ದರಾಮಯ್ಯ ವಾಗ್ದಾಳಿ

ಆಯವ್ಯಯ ಪತ್ರವೇ ಸರ್ಕಾರದ ಶ್ವೇತ ಪತ್ರ

ಬೆಂಗಳೂರು: ರಾಜ್ಯ ಸರ್ಕಾರದ ಆರ್ಥಿಕ ಸ್ಥಿತಿ ಬಗ್ಗೆ ಶ್ವೇತಪತ್ರ ಹೊರಡಿಸಬೇಕು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಒತ್ತಾಯಿಸಿರುವುದು ಆರ್ಥಿಕ ಕ್ಷೇತ್ರದ ಬಗೆಗಿನ ಅವರ ಅಜ್ಞಾನ, ಆಡಳಿತದ ಅನುಭವದ ಕೊರತೆ ಮತ್ತು ರಾಜಕೀಯ ಹತಾಶೆಯನ್ನು ತೋರಿಸುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದ್ದಾರೆ.

ಈ ಕುರಿತು ಮಾಧ್ಯಮ ಹೇಳಿಕೆ ನೀಡಿರುವ ಅವರು, ಕಳೆದ ತಿಂಗಳಷ್ಟೇ ಈ ಆರ್ಥಿಕ ವರ್ಷದ ಆಯವ್ಯಯ ಪತ್ರವನ್ನು ನಾನು ಮಂಡಿಸಿದ್ದೇನೆ, ಅದು ಅಂಕಿ ಅಂಶಗಳ ಕಾಗದದ ಕಂತೆ ಅಲ್ಲ, ರಾಜ್ಯದ 7 ಕೋಟಿ ಕನ್ನಡಿಗರಿಗೆ ಒಪ್ಪಿಸಿರುವ ಪ್ರಾಮಾಣಿಕ ಲೆಕ್ಕ ಪತ್ರ. ಆ ಆಯವ್ಯಯವನ್ನು ವಿಧಾನಮಂಡಲದ ಉಭಯ ಸದನಗಳು ಒಪ್ಪಿಕೊಂಡು ಅಂಗೀಕರಿಸಿವೆ. ಇದೇ ನಮ್ಮ ಶ್ವೇತಪತ್ರ ಎಂದು ಸ್ಪಷ್ಟಪಡಿಸಿದ್ದಾರೆ. ಆಯವ್ಯಯದ ಬಗ್ಗೆ ವಿಧಾನಮಂಡಲದ ಉಭಯ ಸದನಗಳಲ್ಲಿ ಕೂಲಂಕಷವಾಗಿ ಚರ್ಚೆ ನಡೆದಿದೆ. ಇದರ ಬಗ್ಗೆ ಇನ್ನೂ ನಿಮಗೆ ಅನುಮಾನಗಳಿದ್ದರೆ ವಿವರಣೆ ಕೊಡಲು ನಾನು ಸಿದ್ಧನಿದ್ದೇನೆ. ಚುನಾವಣೆಯ ಅಖಾಡದಲ್ಲಿಯೇ ನಿಮ್ಮ ಜೊತೆ ಬಹಿರಂಗ ಚರ್ಚೆಗೂ ನಾನು ಸಿದ್ಧನಿದ್ದೇನೆ. ದಯವಿಟ್ಟು ಕೇವಲ ರಾಜಕೀಯ ಮಾತನಾಡಬೇಕೆಂಬ ಬಾಯಿ ಚಪಲಕ್ಕಾಗಿ ಆಯವ್ಯಯ ಪತ್ರದ ಪಾವಿತ್ರ್ಯವನ್ನು ಹಾಳು ಮಾಡಲು ಹೋಗಬೇಡಿ ಎಂದು ಕುಟುಕಿದ್ದಾರೆ.

ರಾಜ್ಯ ದಿವಾಳಿ ಸ್ಥಿತಿಯಲ್ಲಿದೆ ಎಂಬ ಆರೋಪದ ಹಿಂದೆ ನಮ್ಮ ಸರ್ಕಾರವನ್ನು ರಾಜಕೀಯವಾಗಿ ಎದುರಿಸಲಾಗದ ಬಿಜೆಪಿ ನಾಯಕರ ಅಸಹಾಯಕತೆ, ಹತಾಶೆ ಮತ್ತು ಅಸೂಯೆ ಇದೆ. ಯಾವ ಇಲಾಖೆಯೂ ನೌಕರರಿಗೆ ಸಂಬಳ ನೀಡಲಾಗದ ದಿವಾಳಿ ಸ್ಥಿತಿಯಲ್ಲಿಲ್ಲ. ನಮ್ಮ ಸರ್ಕಾರ ಆರ್ಥಿಕವಾಗಿ ಮಾತ್ರವಲ್ಲ ರಾಜಕೀಯವಾಗಿಯೂ ಸುಭದ್ರವಾಗಿದೆ. ರಾಜ್ಯದ ಜನತೆ ನೆಮ್ಮದಿಯಿಂದ ಇದ್ದಾರೆ ಎಂದಿದ್ದಾರೆ. 2025-26 ರಲ್ಲಿ ದೇಶದ ಜಿಡಿಪಿಯ ಬೆಳವಣಿಗೆ ಶೇ.7.4 ರಷ್ಟಿದ್ದರೆ, ರಾಜ್ಯದ ಜಿಎಸ್‌ಡಿಪಿ ಶೇ.8.1 ರಷ್ಟು ಬೆಳವಣಿಗೆ ದಾಖಲಿಸಿದೆ. ಕರ್ನಾಟಕದ ಜಿಎಸ್‌ಡಿಪಿ ದೇಶದ ಜಿಡಿಪಿ ಬೆಳವಣಿಗೆಗಿಂತ ಹೆಚ್ಚಿರುವುದು ನಮ್ಮ ಸರ್ಕಾರದ ಆರ್ಥಿಕ ಸುಭದ್ರತೆಗೆ ಸಾಕ್ಷಿಯಾಗಿದೆ. ಈ ವರ್ಷ ನಮ್ಮ ಜಿಎಸ್‌ಡಿಪಿ ರೂ.33,05,500 ಕೋಟಿಯಷ್ಟಿದೆ ಎಂದು ವಿವರಿಸಿದ್ದಾರೆ.

ಸರ್ಕಾರದಿಂದ ವಿತ್ತೀಯ ಶಿಸ್ತು

ನಾನು ಮಂಡಿಸಿರುವ 17 ಬಜೆಟ್‌ಗಳಲ್ಲಿಯೂ ವಿತ್ತೀಯ ಶಿಸ್ತನ್ನು ಕಾಪಾಡಿಕೊಂಡು ಬಂದಿದ್ದೇನೆ. ಆರ್ಥಿಕ ಹೊಣೆಗಾರಿಕೆ ಅಧಿನಿಯಮಕ್ಕೆ ಅನುಗುಣವಾಗಿ ನಮ್ಮ ಒಟ್ಟು ಹೊಣೆಗಾರಿಕೆಗಳು ಜಿಎಸ್‌ಡಿಪಿಯ ಶೇ.25 ರೊಳಗೆ ಇರಬೇಕು, ನಮ್ಮದು ಶೇ.24.94 ರಷ್ಟಿದೆ. ಕೇಂದ್ರ ಸರ್ಕಾರದ ಹೊಣೆಗಾರಿಕೆಗಳು ಜಿಡಿಪಿಯ ಶೇ.40 ರೊಳಗೆ ಇರಬೇಕಾಗುತ್ತದೆ. ಅದು ಶೇ.55.6 ರಷ್ಟಿದೆ. ದಿವಾಳಿಯಾಗಿರುವುದು ಯಾವ ಸರ್ಕಾರ ಎಂದು ಪ್ರಶ್ನಿಸಿದ್ದು, 16ನೇ ಹಣಕಾಸು ಆಯೋಗದ ಮಾರ್ಗಸೂಚಿ ಅನುಸಾರ ವಿತ್ತೀಯ ಕೊರತೆ ರಾಜ್ಯಗಳಲ್ಲಿ ಜಿಎಸ್‌ಡಿಪಿಯ ಶೇ.3 ರೊಳಗೆ ಹಾಗೂ ಕೇಂದ್ರ ಸರ್ಕಾರ ಜಿಡಿಪಿಯ ಶೇ.4.2 ರೊಳಗೆ ಇರಬೇಕು. ನಮ್ಮ ವಿತ್ತೀಯ ಕೊರತೆಯು ಜಿಎಸ್‌ಡಿಪಿಯ ಶೇ.3 ರ ಒಳಗೆ ಇದೆ. ಆದರೆ ಕೇಂದ್ರದ ವಿತ್ತೀಯ ಕೊರತೆ ಜಿಡಿಪಿಯ ಶೇ.4.3 ರಷ್ಟಿದೆ ಎಂದು ವಿವರಿಸಿದ್ದಾರೆ.

ವಿಶ್ವ ಆರೋಗ್ಯ ಸಂಸ್ಥೆ ವರ್ಗೀಕರಣ ರದ್ದುಗೊಳಿಸಲು ಸಂಸದ ಬಿ.ವೈ.ರಾಘವೇಂದ್ರ ಆಗ್ರಹ

ಅಡಿಕೆಗೆ ಕ್ಯಾನ್ಸರ್‌ಕಾರಕ ಹಣೆಪಟ್ಟಿ ಸರಿಯಲ್ಲ

ಹೊಸದಿಲ್ಲಿ: ವಿಶ್ವ ಆರೋಗ್ಯ ಸಂಸ್ಥೆ ಅಡಿಕೆಗೆ ಅಂಟಿಸಿರುವ ಕ್ಯಾನ್ಸರ್ ಕಾರಕ ಹಣೆಪಟ್ಟಿ ವೈಜ್ಞಾನಿಕವಾಗಿ ಸರಿಯಲ್ಲ, ಈ ಕುರಿತು ಭಾರತ ಸರ್ಕಾರ ಮಧ್ಯಪ್ರವೇಶಿಸಿ ಅಂತಾರಾಷ್ಟ್ರೀಯ ವೇದಿಕೆಯಲ್ಲಿ ಅಡಿಕೆ ಬೆಳೆಗಾರರ ಪರ ಪ್ರಬಲವಾಗಿ ವಾದ ಮಂಡಿಸಬೇಕು ಎಂದು ಸಂಸದ ಬಿ.ವೈ.ರಾಘವೇಂದ್ರ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಈ ಕುರಿತು ಹೊಸದಿಲ್ಲಿಯಲ್ಲಿ ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿರುವ ಬಿ.ವೈ.ರಾಘವೇಂದ್ರ, ಅಡಿಕೆ ಬೆಳೆಗಾರರ ಹಿತ ರಕ್ಷಣೆಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ್ದಾರೆ.ದೇಶದ ಒಟ್ಟು ಅಡಿಕೆ ಉತ್ಪಾದನೆಯ ಸುಮಾರು ಶೇ.65ರಷ್ಟನ್ನು ಒದಗಿಸುವ ಮಲೆನಾಡಿನ ಅಡಿಕೆ ಬೆಳೆ ಗಾರರು ತೀವ್ರ ಆತಂಕ ಮತ್ತು ಸಂಕಷ್ಟದಲ್ಲಿದ್ದಾರೆ. ಸುಮಾರು 1 ಲಕ್ಷ ಕೋಟಿ ರೂ. ಆರ್ಥಿಕತೆ ಹೊಂದಿರುವ ಮತ್ತು 11 ರಾಜ್ಯಗಳ 2 ಕೋಟಿಗೂ ಅಧಿಕ ಜನರ ಜೀವನಾಧಾರ ವಾಗಿರುವ ಅಡಿಕೆ ಬೆಳೆಯ ರಕ್ಷಣೆ ಇಂದು ಆದ್ಯತೆಯ ವಿಷಯವಾಗಬೇಕಿದೆ ಎಂದು ಪ್ರತಿಪಾದಿಸಿದ್ದಾರೆ.



ವಿಶ್ವ ಆರೋಗ್ಯ ಸಂಸ್ಥೆಯ ಅಂಗಸಂಸ್ಥೆ IARC, ಅಡಿಕೆಯನ್ನು Group&I Carcinogen ಎಂದು ವರ್ಗೀಕರಿಸಿರುವುದು ವೈಜ್ಞಾನಿಕವಾಗಿ ದೋಷಪೂರ್ಣ, ಪಕ್ಷಪಾತತನದಿಂದ ಕೂಡಿದೆ. ಭಾರತದ ಐಸಿಎಆರ್ ಸಿಪಿಸಿಆರ್‌ಐ(ಇಂಡಿಯನ್ ಕೌನ್ಸಿಲ್ ಆಫ್ ಅಗ್ರಿಕಲ್ಚರಲ್ ರೀಸರ್ಚ್-ಸೆಂಟ್ರಲ್ ಪ್ಲಾಂಟೇಶನ್ ಕ್ರಾಪ್ಸ್ ರೀಸರ್ಚ್ ಇನ್ಸಿಟ್ಯೂಟ್) ನಡೆಸಿ ರುವ ಸಂಶೋಧನೆಗಳ ಪ್ರಕಾರ, ಐಸಿಎಆರ್ ಉಲ್ಲೇಖಿಸಿರುವ ಬಹಳಷ್ಟು ಅಧ್ಯಯನಗಳು, ತಂಬಾಕು ಮಿಶ್ರಿತ ಉತ್ಪನ್ನಗಳನ್ನು ಶುದ್ಧ ಅಡಿಕೆಯೊಂದಿಗೆ ತಾಳೆ ಮಾಡಿ ತಪ್ಪು ತೀರ್ಮಾನಕ್ಕೆ ಬಂದಿವೆ.

ಅಡಿಕೆಯ ಮುಖ್ಯ ಘಟಕ ಅರೆಕೋಲಿನ್ Group &2B ಯಲ್ಲಿದ್ದರೂ ಅಡಿಕೆಯನ್ನೇ Group&I ಎಂದು ವರ್ಗೀಕರಿಸಿರುವ ಆಂತರಿಕ ವಿರೋಧವೂ ಇದೆ. ಜನವರಿ 2026ರಲ್ಲಿ ಡಬ್ಲ್ಯುಹೆಚ್‌ಒ ವೆಬಿನಾರ್ ನಿರ್ಬಂಧಾತ್ಮಕ ನೀತಿಗಳ ಸಂಕೇತ ನೀಡಿರುವ ಹಿನ್ನೆಲೆಯಲ್ಲಿ ಭಾರತ ಕೂಡಲೇ ಮಧ್ಯ ಪ್ರವೇಶಿಸಿ, ಅಡಿಕೆ ಬೆಳೆಗಾರರ ಹಿತ ಕಾಯಬೇಕು ಎಂದರು.

ಮೇ 2025ರಲ್ಲಿ ಅಮೇರಿಕಾ ವಿಷಕಾರಿ ಕ್ಷಾರ ವಲಸೆ ಎಂಬ ಕಾರಣ ನೀಡಿ ಅಡಿಕೆ ಹಾಳೆ ತಟ್ಟೆಗಳ ಮೇಲೆ ನಿಷೇಧ ಹೇರಿರುವುದು ನಮ್ಮ ಗ್ರಾಮೀಣ ಕೈಗಾರಿಕೆಗಳಿಗೆ ಗಂಭೀರ ಪೆಟ್ಟು ಕೊಟ್ಟಿದೆ. ಮೇಕ್ ಇನ್ ಇಂಡಿಯಾ ಯೋಜನೆಯಡಿ ಪರಿಸರ ಸ್ನೇಹಿ ಆಶಯಗಳಿಗೆ ತದ್ವಿರುದ್ಧವಾಗಿರುವ ಈ ನಿಷೇಧವನ್ನು ವೈಜ್ಞಾನಿಕವಾಗಿ ಮತ್ತು ರಾಜತಾಂತ್ರಿಕತೆ ಮೂಲಕ ಪ್ರಶ್ನಿಸಬೇಕೆಂದು ರಾಘವೇಂದ್ರ ಕೋರಿದ್ದಾರೆ.

ಕೇಂದ್ರ ಸಚಿವರ ಭರವಸೆ

ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರನ್ನು ಖುದ್ದು ಭೇಟಿ ಮಾಡಿ ಸಂಸದ ಬಿ.ವೈ. ರಾಘವೇಂದ್ರ ಮನವಿ ಸಲ್ಲಿಸಿದರು. ಸಚಿವರು ಈ ವಿಷಯದಲ್ಲಿ ಸಕಾರಾತ್ಮಕ ಪ್ರತಿಕ್ರಿಯೆ ನೀಡಿದ್ದಾರೆ. ಸಿಪಿಸಿಆರ್‌ಐ ನಿರ್ದೇಶಕರ ಅಧ್ಯಕ್ಷತೆಯಲ್ಲಿ ದೇಶದ 11 ಪ್ರಮುಖ ರಾಷ್ಟ್ರೀಯ ಸಂಶೋಧನಾ ಸಂಸ್ಥೆಗಳು ಈಗಾಗಲೇ ಅಡಿಕೆ ಕುರಿತು ಸಂಶೋಧನೆ ನಡೆಸುತ್ತಿವೆ. ಶೀಘ್ರದಲ್ಲೇ ಒಂದು ಸಮಗ್ರ ವರದಿ ಸಿದ್ಧವಾಗಲಿದೆ. ಈ ವರದಿಯನ್ನು ಸಿಪಿಸಿಆರ್‌ಐ ಐಸಿಎಂಆರ್‌ಗೆ ಸಲ್ಲಿಸಲಿದ್ದು, ಅಂತಿಮ ವರದಿ ಕೇಂದ್ರ ಸರ್ಕಾರಕ್ಕೆ ಲಭಿಸಿದ ತಕ್ಷಣ, ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುವುದು. ಅಡಿಕೆ ಬೆಳೆಗಾರರ ಹಿತ ರಕ್ಷಣೆಗೆ ಮೋದಿ ಸರ್ಕಾರ ಬದ್ಧವಾಗಿದೆ ಎಂದು ಭರವಸೆ ನೀಡಿದ್ದಾರೆ.

ಕಾಂಗ್ರೆಸ್‌ಗೆ ಸೋಲಿನ ಭೀತಿ: ಛಲವಾದಿ

ಬಾಗಲಕೋಟೆ: ರಾಜ್ಯದ ಎರಡು ಉಪ ಚುನಾವಣೆಯಲ್ಲಿ ಬಿಜೆಪಿ ಗೆಲ್ಲುವುದು ನಿಶ್ಚಿತವಾಗಿದೆ. ಇದರಿಂದ ಗಾಬರಿ ಬಿದ್ದಿರುವ ಕಾಂಗ್ರೆಸ್ ಸರ್ಕಾರ ಮತದಾರರಿಗೆ ಗ್ಯಾರಂಟಿ ನಿಲ್ಲಿಸುತ್ತೇವೆ ಎಂದು ಭಯದ ವಾತಾವರಣ ಸೃಷ್ಟಿ ಮಾಡಿ ಧಮ್ಕಿ ಹಾಕುತ್ತಿದ್ದಾರೆ. ಕಾಂಗ್ರೆಸ್ ಸೋತರೆ ಗ್ಯಾರಂಟಿ ಯೋಜನೆಗಳನ್ನು ನಿಲ್ಲಿಸುತ್ತಾರಾ? ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಪ್ರಶ್ನಿಸಿದರು.



ನಗರದ ಬಿಜೆಪಿ ಜಿಲ್ಲಾ ಕಚೇರಿಯಲ್ಲಿ ಮಂಗಳವಾರ ಸುದ್ದಿಗೋಷ್ಠಿ ಯಲ್ಲಿ ಮಾತನಾಡಿ, ನೈತಿಕತೆಯಿಂದ ಉಪ ಚುನಾವಣೆ ಎದುರಿಸುತ್ತಿಲ್ಲ. ಸೋಲಿನ ಭೀತಿ ಕಾಂಗ್ರೆಸ್‌ನಲ್ಲಿ ಮನೆ ಮಾಡಿದೆ. ಹೀಗಾಗಿ ಸಿಎಂ ಸಿದ್ದರಾಮಯ್ಯ ಐದು ದಿನ ಬಾಗಲಕೋಟೆ ಪ್ರಚಾರಕ್ಕೆ ಠಿಕಾಣಿ ಹೂಡಿದ್ದಾರೆ. ಸಿಎಂ ಸ್ಥಾನ ಉಳಿಸಿಕೊಳ್ಳಲು ಹೆಣಗಾಡುತ್ತಿದ್ದಾರೆ ಎಂದು ಆರೋಪಿಸಿದರು.

ಅಧಿಕಾರಕ್ಕೆ ಬಂದ ಮೇಲೆ ಕಾಂಗ್ರೆಸ್ ಸರ್ಕಾರ ಐದು ಗ್ಯಾರಂಟಿಗಳನ್ನು ಜಾರಿಗೆ ತಂದಿದೆ. ಆ ಬಳಿಕ ಪ್ರಣಾಳಿಕೆಯಲ್ಲಿ ನೀಡಿದ್ದ ಯಾವುದೇ ಭರವಸೆ ಈಡೇರಿಸಿಲ್ಲ. ಬೋಗಸ್ ಹೇಳಿದ್ದಾರೆ. ಅನೇಕ ನಿಗಮಗಳಿಗೆ ಅನುದಾನ ನೀಡಿಲ್ಲ. ಸದನದಲ್ಲಿ ಕೇಳಿದರೇ ಶಾಸಕರು ಬಳಸಿಲ್ಲ ಎಂದು ಸುಳ್ಳು ಹೇಳುತ್ತಿದ್ದಾರೆ ಎಂದರು.

ಧಮ್ಕಿ ಹಾಕಿ ಮತ ಪಡೆಯಲು ಯತ್ನ

ಕಾಂಗ್ರೆಸ್‌ನವರು ಧಮ್ಕಿ ಹಾಕಿ ಮತ ಪಡೆಯಲು ಹೊರಟಿದ್ದಾರೆ. ಬಾಗಲಕೋಟೆಯ ಜನ ಅದಕ್ಕೆ ಹೆದರುವುದಿಲ್ಲ. ಇಪ್ಪತ್ತು ವರ್ಷಗಳ ಹಿಂದಿನ ಬಾಗಲಕೋಟೆಗೂ ಇಂದಿನ ಬಾಗಲಕೋಟೆಗೂ ಇರುವ ಅಭಿವೃದ್ಧಿ ಬದಲಾವಣೆಯ ಕಾರಣಿಕರ್ತರನ್ನು ಹುಡುಕಿದರೆ ಸಿಗುವುದು ಚರಂತಿಮಠರು ಮಾತ್ರ. ರಾಜಧಾನಿ ಬೆಂಗಳೂರಿನಲ್ಲಿಯೂ ಈ ಮಾದರಿಯ ಸುಸಜ್ಜಿತ ರಸ್ತೆಗಳಿಲ್ಲ. ರಾಜ್ಯದ ಯಾವ ಜಿಲ್ಲೆಯೂ ಬಾಗಲಕೋಟೆಯಷ್ಟು ವಿಶಾಲವಾಗಿ ಬೆಳೆದಿಲ್ಲ. ಇದೆಲ್ಲವನ್ನು ನೋಡಿದ ಜನ ಯಾರು ಗೆಲ್ಲಬೇಕೆಂದು ತೀರ್ಮಾನ ಮಾಡುತ್ತಾರೆ ಎಂದರು.

ಕಿರುಸುದ್ದಿ

ಅರಣ್ಯ ಸಿಬ್ಬಂದಿ ಮೇಲೆ ಆನೆ ದಾಳಿ: ಬೈಕ್‌ಗಳು ಜಖಂ

ಸಕಲೇಶಪುರ: ಅರಣ್ಯ ಇಲಾಖೆಯಲ್ಲಿ ಆನೆಗಳ ಚಲನವಲನದ ಬಗ್ಗೆ ಗಮನಹರಿಸುವ ಇಟಿಎಫ್ ಸಿಬ್ಬಂದಿ ಮೇಲೆ ತಾಲೂಕಿನ ಯಸಳೂರುವಿನ ಮತ್ತೂರು ಬಳಿ ಆನೆ ದಾಳಿ ಮಾಡಿದೆ. ಮಂಗಳವಾರ ಬೆಳಗ್ಗೆ ಆನೆಗಳ ಚಲನವಲನ ನೋಡಲು ಬಂದಾಗ ಏಕಾಏಕಿ ದಾಳಿ ಮಾಡಿದೆ. ಅರಣ್ಯ ಸಿಬ್ಬಂದಿ ಪ್ರಸನ್ನ, ಯುವರಾಜ್ ಎಂಬ ಮೇ ದಾಳಿ ಮಾಡಿವೆ. ಈ ವೇಳೆ ಬೈಕ್‌ಗಳು ಜಖಂಗೊಂಡಿವೆ. ಸಿಬ್ಬಂದಿಗೆ ಯಾವುದೇ ರೀತಿಯ ಪ್ರಾಣಪಾಯವಿಲ್ಲ ಉಂಟಾಗಿಲ್ಲ. ಪ್ರತಿದಿನ ವ್ಯವಸಾಯ ಮಾಡಲು ಹೋಗುವ ರೈತರು, ಶಾಲೆಗೆ ಹೋಗುವ ಮಕ್ಕಳು ಸ್ಥಿತಿ ಕೇಳುವವರು ಯಾರು ಎಂಬಂತಾಗಿದೆ. ಶಾಸ್ವತ ಪರಿಹಾರ ನೀಡಬೇಕೆಂದು ಅರಣ್ಯ ಮಂತ್ರಿಗಳಿವೆ ಗ್ರಾಮಸ್ಥರು ಆಗ್ರಹ ಮಾಡಿದ್ದಾರೆ.



ಆನೇಕಲ್ ರೈಲ್ವೆ ನಿಲ್ದಾಣದಲ್ಲಿ ಅಪರೂಪದ ಕಾಡುಪಾಪ

ಆನೇಕಲ್: ಇಲ್ಲಿನ ರೈಲ್ವೆ ನಿಲ್ದಾಣದ ಆವರಣದಲ್ಲಿ ಪತ್ತೆಯಾದ ಅಪರೂಪದ ಕಾಡುಪಾಪ ಪ್ರಾಣಿಯನ್ನು ಪತ್ರಕರ್ತ ಮಹೇಶ್ ಹಾಗೂ ಸ್ನೇಹಿತರು ರಕ್ಷಿಸಿ, ಅರಣ್ಯ ಇಲಾಖೆ ಮೂಲಕ ಸುರಕ್ಷಿತವಾಗಿ ಬನ್ನೇರುಘಟ್ಟದ ರಕ್ಷಣಾ ಕೇಂದ್ರಕ್ಕೆ ರವಾನಿಸಿದ ಘಟನೆ ನಡೆದಿದೆ.ರೈಲ್ವೆ ನಿಲ್ದಾಣದಲ್ಲಿ ಅಸಹಾಯಕ ಸ್ಥಿತಿಯಲ್ಲಿದ್ದ ಕಾಡುಪಾಪವನ್ನು ಗಮನಿಸಿದ ಪತ್ರಕರ್ತ ಮಹೇಶ್ ಹಾಗೂ ಅವರ ಸ್ನೇಹಿತರು, ತಕ್ಷಣವೇ ಅದನ್ನು ಜಾಗರೂಕತೆಯಿಂದ ಹಿಡಿದು ರಕ್ಷಿಸಿದ್ದಾರೆ. ನಂತರ ಈ ಬಗ್ಗೆ ಆನೇಕಲ್ ಪಟ್ಟಣದ ವಲಯ ಅರಣ್ಯ ಅಧಿಕಾರಿಗಳ ಕಚೇರಿಗೆ ಮಾಹಿತಿ ನೀಡಿ, ಪ್ರಾಣಿಯನ್ನು ಅಧಿಕಾರಿಗಳಿಗೆ ಹಸ್ತಾಂತರಿಸಿದರು. ಅರಣ್ಯ ಇಲಾಖೆ ಅಧಿಕಾರಿಗಳು ಕಾಡು ಪಾಪದ ಆರೋಗ್ಯ ತಪಾಸಣೆ ನಡೆಸಿ, ಹೆಚ್ಚಿನ ನಿಗಾ ಮತ್ತು ಸಂರಕ್ಷಣೆಗಾಗಿ ಅದನ್ನು ಬನ್ನೇರುಘಟ್ಟದ ರಕ್ಷಣಾ ಕೇಂದ್ರಕ್ಕೆ ಕಳುಹಿಸಿ ಕೊಟ್ಟಿದ್ದಾರೆ,



ವೃದ್ಧೆಯ ಶವ ತಬ್ಬಿ ಮಂಗನ ಶೋಕ

ರಾಮನಗರ : ನಿತ್ಯವೂ ಆಹಾರ ನೀಡುತ್ತಿದ್ದ ವೃದ್ಧೆ ಹೃದಯಾಘಾತದಿಂದ ಸಾವನ್ನಪ್ಪಿದ ವೃದ್ಧೆಯ ಪಾರ್ಥಿವ ಶರೀರವನ್ನು ಮಂಗವೊಂದು ತಬ್ಬಿಕೊಂಡು ಮರುಗಿದ ಪ್ರಸಂಗ ರಾಮನಗರದಲ್ಲಿ ನಡೆದಿದೆ.

ಚನ್ನಪಟ್ಟಣ ತಾಲೂಕು ಬಿ.ವಿ.ಹಳ್ಳಿ ವಾಸಿ ಪಾರ್ವತಮ್ಮ (85) ಅನಾರೋಗ್ಯದ ಕಾರಣ ಮೃತಪಟ್ಟಿದ್ದರು. ಇವರ ಪಾರ್ಥಿವ ಶರೀರವನ್ನು ರ ರಾಯರದೊಡ್ಡಿಯಲ್ಲಿರುವ ಮಗಳ ಮನೆಗೆ ಕೊಂಡೊಯ್ದು ಇರಿಸಿದಾಗ ಮಂಗ ಕಣ್ಣೀರಿಟ್ಟು ರೋಧಿಸಿದೆ.ಪಾರ್ವತಮ್ಮ ಮಗ ಮತ್ತು ಮಗಳೊಂದಿಗೆ ರಾಯರದೊಡ್ಡಿಯಲ್ಲಿ ವಾಸವಾಗಿದ್ದರು. ಮಗಳ ಮನೆಗೆ ಹೋದಾಗಲೆಲ್ಲ ಮಂಗಗಳಿಗೆ ಆಹಾರ ಕೊಡುವುದನ್ನು ರೂಢಿಸಿಕೊಂಡಿದ್ದರು.ಅನಾರೋಗ್ಯದಿಂದ ಬಳಲುತ್ತಿದ್ದ ಪಾರ್ವತಮ್ಮ ಬಿ.ವಿ.ಹಳ್ಳಿಯಲ್ಲಿ ಸೋಮವಾರ ರಾತ್ರಿ ಕೊನೆಯುಸಿರೆಳೆದರು. ವೃದ್ಧೆ ಮತ್ತು ಮಂಗನ ಬಾಂಧವ್ಯ ನೋಡಿ ಜನರು ಆಶ್ಚರ್ಯ ವ್ಯಕ್ತಪಡಿಸಿದರು.



ಅಡುಗೆ ತಯಾರಿಕೆಯಲ್ಲಿ ವ್ಯತ್ಯಯ | ಗ್ರಾಹಕರ ಹಿತಕ್ಕಾಗಿ ಸೌದೆಯಿಂದಲೇ ಊಟ ತಯಾರಿ

ಇಂದಿರಾ ಕ್ಯಾಂಟೀನಿಗೂ ಗ್ಯಾಸ್ ಬಿಸಿ

ದೇವನಹಳ್ಳಿ: ವಾಣಿಜ್ಯ ಸಿಲಿಂಡರ್ ಕೊರತೆಯಿಂದಾಗಿ ಹೊಟೇಲ್ ಮಾಲೀಕರು ಸಂಕಷ್ಟಕ್ಕೆ ಸಿಲುಕಿರುವುದು ಒಂದೆಡೆ ಯಾದರೆ, ಸಿಲಿಂಡರ್ ಅಭಾವದ ಬಿಸಿ ಗೊತ್ತಾಗಿರಲಿಲ್ಲ, ಇದೀಗ ಇಂದಿರಾ ಕ್ಯಾಂಟೀನ್‌ಗೂ ತಟ್ಟಿದೆ.




ತಾಲೂಕಿನ ವಿಜಯಪುರ ಪಟ್ಟಣದ ಇಂದಿರಾ ಕ್ಯಾಂಟೀನ್‌ಗೆ ವಾಣಿಜ್ಯ ಸಿಲಿಂಡರ್ ಪೂರೈಕೆಯಾಗದ ಕಾರಣ, ಇಲ್ಲಿನ ಅಡುಗೆ ಸಿಬ್ಬಂದಿಯವರು, ಒಂದು ಲೋಡು ಸೌದೆಗೆ ಆರು ಸಾವಿರ ಕೊಟ್ಟು, ಖರೀದಿಸಿದ್ದಾರೆ.

ಇಲ್ಲಿ, ಇಂದಿರಾ ಕ್ಯಾಂಟಿನ್ ಆರಂಭವಾದಾಗಿನಿಂದ, ಕಟ್ಟಡ ನಿರ್ಮಾಣದ ಕಾರ್ಮಿಕರು, ಗೂಡು ಹೊರುವ ಹಮಾಲಿ ಕಾರ್ಮಿಕರು, ಸೇರಿದಂತೆ ಪ್ರತಿನಿತ್ಯ ಸಾವಿರಾರು ಮಂದಿ ಕೂಲಿ ಕಾರ್ಮಿಕರು ಬಂದು, ಇಲ್ಲಿ ಊಟ ಮಾಡಿಕೊಂಡು ಹೋಗುತ್ತಾರೆ. ಬೆಳಗ್ಗೆ 7.30 ಕ್ಕೆ ತಿಂಡಿ ಸಿದ್ಧವಾಗಿರಬೇಕು. ಮಧ್ಯಾಹ್ನ 12.30ಕ್ಕೆ ಊಟ ತಯಾರಾಗಬೇಕು. ಸಂಜೆ 7 ಗಂಟೆಗೆ ಊಟ ಸಿದ್ಧಪಡಿಸಬೇಕು. ಕಳೆದ ಒಂದು ವಾರದಿಂದ ಸಿಲಿಂಡರುಗಳು ಪೂರೈಕೆಯಾಗಿಲ್ಲದ ಕಾರಣ. ಸೌದೆಯಲ್ಲೆ ಅಡುಗೆ ತಯಾರಿಸುತ್ತಿದ್ದಾರೆ.

ಸುಡುವ ಬಿಸಿಲಿನಲ್ಲೆ ನಿಂತು, ಹೊಗೆಯಲ್ಲಿ ಅಡುಗೆ ತಯಾರು ಮಾಡುತ್ತಿರುವ ಸಿಬ್ಬಂದಿಗೆ ತುಂಬಾ ಕಷ್ಟವಾಗುತ್ತಿದೆ. ಅಡುಗೆ ತಯಾರಿಸುವ ಜಾಗದಲ್ಲಿ ಮೇಲ್ಛಾವಣಿ ಇಲ್ಲದ ಕಾರಣ, ಸುಡುವ ಬಿಸಿಲಿನಲ್ಲಿ, ಹೊಗೆಯಲ್ಲಿ ಅಡುಗೆ ತಯಾರಿಸುವಾಗ, ಕಣ್ಣುಗಳು, ಉರಿ ಬರುತ್ತಿವೆ. ವಿಧಿಯಿಲ್ಲದೆ ತಯಾರಿಸುತ್ತಿದ್ದಾರೆ.

ಗ್ರಾಹಕರು ಬಂದು, ಇಡ್ಲಿ, ಚಪಾತಿ, ಕೇಳ್ತಾರೆ. ಸಿಲಿಂಡರ್ ಇಲ್ಲದ ಕಾರಣ, ಒಲೆಯಲ್ಲಿ ತಯಾರಿಸಲು ಸಾಧ್ಯವಾಗದ ಕಾರಣ, ಹೊರಗಿನಿಂದ ರೆಡಿಮೇಡ್ ಚಪಾತಿ ತರಿಸಿಕೊಡುತ್ತಿದ್ದೇವೆ. ಕ್ಯಾಂಟೀನ್ ನಲ್ಲಿ ಚಪಾತಿ ಸುಡುವ ಮಿಷನ್ ಕೆಲಸ ಮಾಡುತ್ತಿಲ್ಲ. ನಮಗೆ ಸಾಧ್ಯವಾದಷ್ಟು ಬೇಗ ನಮಗೆ ಸಿಲಿಂಡರ್ ಪೂರೈಕೆ ಮಾಡಿ ಎಂದು ಇಲ್ಲಿನ ಸಿಬ್ಬಂದಿ ಮನವಿ ಮಾಡಿಕೊಂಡಿದ್ದಾರೆ.



ಸೌದೆಗೆ ಬೇಡಿಕೆ

ಒಣಗಿರುವ ಸೌದೆ ಸಿಗುತ್ತಿಲ್ಲ. ಮಂಡಿಗಳಲ್ಲಿ ಹಸಿ ಸೌದೆ ಮಾರಾಟ ಮಾಡ್ತಾರೆ. ಹಸಿಸೌದೆ ತೂಕವೂ ಜಾಸ್ತಿ ಬರುತ್ತೆ, ಬೇಗನೇ ಉರಿಯುವುದಿಲ್ಲ, ಆದ್ದರಿಂದ ಅಡುಗೆ ತಯಾರಿಸುವುದು ಸ್ವಲ್ಪ ತಡವಾಗುತ್ತಿದೆ ಎನ್ನುತ್ತಾರೆ.



ಶಾಲಾ ಮಕ್ಕಳಿಗೂ ತೊಂದರೆ



ಇಂದಿರಾ ಕ್ಯಾಂಟಿನ್ ಸುತ್ತ ಶಾಲೆಗಳಿವೆ. ನೂರಾರು ಮಕ್ಕಳು ಶಾಲೆಗೆ ಬರುತ್ತಿದ್ದಾರೆ. ಸೌದೆ ಒಲೆಯಲ್ಲಿ ಅಡುಗೆ ತಯಾರಿಸುವಾಗ, ಇದರಿಂದ ಹೊರ ಬರುತ್ತಿರುವ ಹೊಗೆಯಿಂದ, ಶಾಲೆಯಲ್ಲಿನ ಮಕ್ಕಳಿಗೂ ತೊಂದರೆಯಾಗುತ್ತಿದೆ.

> ಗ್ರಾಹಕರಿಗೆ ಸರಿಯಾದ ಸಮಯಕ್ಕೆ ಆಹಾರ ತಯಾರಿಸುವುದು ಕಷ್ಟವಾಗುತ್ತಿದೆ. ನಾವು, 4200 ರೂಪಾಯಿಗೆ ಒಂದು ಸಿಲಿಂಡರ್ ಖರೀದಿಸಿಕೊಂಡು ಬಂದು ಅಡುಗೆ ತಯಾರಿಸುತ್ತಿದ್ದೇವು. ಈಗ ಸಿಲಿಂಡರ್ ಸಿಗುತ್ತಿಲ್ಲ. ನಮಗೂ ಊಟವಿಲ್ಲದೆ, ಹೊರಗೆ ಹೋಗಿ ಹೊಟೇಲ್ ನಲ್ಲಿ ಊಟ ಮಾಡಿದ್ದೇವೆ.
>
> ■ ಚನ್ನಬಸವ, ಅಡುಗೆ ತಯಾರಕ , ಇಂದಿರಾ ಕ್ಯಾಂಟೀನ್

ತಡವಾದರೆ ಗ್ರಾಹಕರ ಆಕ್ರೋಶ

ತಿಂಡಿ, ಊಟವನ್ನು ನಿಗದಿತ ಸಮಯಕ್ಕೆತಯಾರಿಸಿ ಕೊಡಬೇಕು, ಇಲ್ಲವಾದರೆ, ಗ್ರಾಹಕರು ನಮ್ಮ ಮೇಲೆ ಆಕ್ರೋಶ ವ್ಯಕ್ತಪಡಿಸುತ್ತಾರೆ. ತಿಂಡಿ ಕೊಡುವುದು ತಡವಾದರೆ, 4 ಗಂಟೆಗೆ ಎದ್ದು ತಯಾರಿಸಬೇಕು ಅಂತಾರೆ. ನಾವೂ ಮನುಷ್ಯರಲ್ಲವೇ, ಮೂರು ಜನ ಇದ್ದೇವೆ. ಸೌದೆಯಲ್ಲಿ ಮಾಡುವುದರಿಂದ ಸ್ವಲ್ಪ ತಡವಾಗುತ್ತದೆ. ಆದರೂ ನಾವು ರಾತ್ರಿ 10 ಗಂಟೆಯವರೆಗೂ ಊಟ ಕೊಡುತ್ತಿದ್ದೇವೆ. ಜನರು ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

ಮೇಲುಕೋಟೆಯಲ್ಲಿ ಬ್ರಹ್ಮೋತ್ಸವ

ಹರಿಜನರಿಂದ ಪಲ್ಲಕ್ಕಿ ಉತ್ಸವ

ಮೇಲುಕೋಟೆ:ಚಲುವನಾರಾಯಣಸ್ವಾಮಿ ವೈರಮುಡಿ ಬ್ರಹ್ಮೋತ್ಸವದ ಪ್ರಯುಕ್ತ ಮಹಾ ರಥೋತ್ಸವ ಮಂಗಳವಾರ ಆರಂಭವಾಗಿ ಬುಧವಾರ ಬೆಳಗ್ಗೆ 8ಗಂಟೆಯವರೆಗೆ ದೇವಾಲಯದಲ್ಲಿ ಯಾತ್ರಾ ದಾನ ನೆರವೇರಲಿದೆ.

ನಂತರ ರಥಮಂಟಪಕ್ಕೆ ಚಲುವನಾರಾಯಣನ ಉತ್ಸವ ನೆರವೇರಲಿದೆ. ರಥಾರೋಹಣದ ನಂತರ ಮಹಾರಥ ನಾಲ್ಕೂ ಬೀದಿಗಳಲ್ಲಿ ಸಂಚರಿಸಲಿದೆ. ರಥಾರೂಢನಾದ ಚಲುವನಾರಾಯಣಸ್ವಾಮಿಯ ದರ್ಶನದಿಂದಲೇ ಎಲ್ಲಾ ಸಂಕಷ್ಟಗಳು ಪರಿಹಾರ ವಾಗುತ್ತದೆ ಎಂಬ ಪ್ರತೀತಿ. ಚಲುವನಾರಾಯಣ ಸ್ವಾಮಿ ಮನೆ ದೇವರ ಒಕ್ಕಲಿನವರು ತೆರೊಪ್ಪತ್ತು ಮಾಡಿ ರಥೋತ್ಸವದಲ್ಲಿ ಭಾಗಿಯಾಗುವರು.

ಸಮಾರು ಒಂದು ಲಕ್ಷಕ್ಕೂ ಹೆಚ್ಚು ಭಕ್ತರು ಭಾಗಿಯಾಗುವ ನಿರೀಕ್ಷೆಯಿದೆ. ರಾತ್ರಿ ಹರಿಜನರ ಸೇವೆ ಯಾದ ಪುಷ್ಪಾಲಂಕೃತ ಬಂಗಾರದ ಪಲ್ಲಕ್ಕಿ ಉತ್ಸವ ವೈಭವದಿಂದ ನಡೆಯಲಿದೆ.

ವೈರಮುಡಿ ಬ್ರಹ್ಮೋತ್ಸವದ 6ನೇ ತಿರುನಾಳ್ ಅಂಗವಾಗಿ ಸೋಮವಾರ ಗಜೇಂದ್ರಮೋಕ್ಷ ಉತ್ಸವ ನಡೆಯಿತು. ಮಹಾವಿಷ್ಣು ರಾಕ್ಷಸ ಸ್ವರೂಪಿಯಾದ ಮೊಸಳೆಯಿಂದ ಗಜೇಂದ್ರನ್ನು ರಕ್ಷಿಸಿದ ಪ್ರತೀಕವಾಗಿ ನಡೆಯುವ ಗಜೇಂದ್ರ ಮೋಕ್ಷ ರಾತ್ರಿ ನೆರವೇರಿತು ಆನೆ ಮತ್ತು ಕುದುರೆ ವಾಹನೋತ್ಸವಗಳು ನಡೆದವು.

ಕರ್ನಾಟಕ ಮಾತ್ರವಲ್ಲದೆ ಭಾರತದ ದೇವಾಲಯಗಳಲ್ಲೇ ಅತ್ಯಾಕರ್ಷಕ ತೆಪ್ಪೋತ್ಸವ ನಡೆಯುವ ಕ್ಷೇತ್ರ ಮೇಲುಕೋಟೆ ಎಂಬ ಖ್ಯಾತಿಗೆ ಪಾತ್ರವಾಗಿದ್ದು ಬುಧವಾರ ರಾತ್ರಿ ವಜ್ರಖಚಿತ ರಾಜಮುಡಿ ಅಲಂಕಾರದೊಂದಿಗೆ ತೆಪ್ಪೋತ್ಸವ ನಡೆಯಲಿದೆ.



ಯೋಗನರಸಿಂಹಸ್ವಾಮಿ ಬೆಟ್ಟದತಪ್ಪಲು, ಸಾಲುಮಂಟಪದೊಂದಿಗೆ ಇರುವ ವಿಶಾಲವಾದ ಕಲ್ಯಾಣಿ ಯಲ್ಲಿ ನಡೆಯುವ ತೆಪ್ಪೋತ್ಸವ ತಿರುಮಲೆ, ಶ್ರೀರಂಗಂ ಕಂಚಿಗಿಂತ ನಯನ ಮನೋಹರವಾಗಿ ನಡೆಯಲಿರುವುದು ರಾಮಾನುಜಾಚಾರ್ಯರ ಕರ್ಮಭೂಮಿಯ ವಿಶೇಷವಾಗಿದ್ದು ತೆಪ್ಪೋತ್ಸವ ಕಣ್ತುಂಬಿಕೊಳ್ಳಲು ಭಕ್ತರು ಕಾತರರಾಗಿದ್ದಾರೆ.

ಗಮನ ಸೆಳೆದ ವಿದ್ವಾನ್ ಆನಂದರ ನಾದಸ್ವರ:ಚಲುವನಾರಾಯಣಸ್ವಾಮಿ ಮಹಾ ರಥೋತ್ಸವದಲ್ಲಿ ನಾದೋಪಾಸನ ಸೇವೆಯಲ್ಲಿ ಪಾಲ್ಗೊಂಡು ನಾದಸ್ವರ ನುಡಿಸುತ್ತಿದ್ದ ವಿದ್ವಾನ್ ಆನಂದ್ ತಂಡವರಿಗೆ ಮೇಲುಕೋಟೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಉತ್ಸಾಹ ತುಂಬಿದರು.

ಕಲಾವಿದರೊಂದಿಗೆ ಫೋಟೋದಲ್ಲಿ ಭಾಗಿಯಾದ ಶಾಸಕರು ಸ್ಥಾನೀಕಂ ನಾಗರಾಜ ಅಯ್ಯಂಗಾರ್ ಸಾಂಸ್ಕೃತಿಕ ವೇದಿಕೆಯಲ್ಲಿ ನಡೆಯುತ್ತಿರುವ ನಾದೋಪಾಸನ ಸೇವೆಯಲ್ಲಿ ಸ್ವಾಮಿಗೆ ಸಂಗೀತ ಸೇವೆ ಹೀಗೆ ಮುಂದುವರೆಯಲಿ ಎಂದರು ಹಾರೈಸಿದರು.

ಕೃಷ್ಣದೇವರಾಯರ ಕಾಲದ ಶಿಲಾಶಾಸನ ಪತ್ತೆ



ವೈ.ಎನ್.ಹೊಸಕೋಟೆ:ಹೋಬಳಿಯದೊಡ್ಡೇನ ಹಳ್ಳಿ ಗ್ರಾಮದಲ್ಲಿ ಕೃಷ್ಣದೇವರಾಯರ ಕಾಲಕ್ಕೆ ಸಂಬಂದಿಸಿ ಎರಡು ಶಿಲಾ ಶಾಸನಗಳನ್ನು ಸಂಶೋದಕ ಹೊ.ಮ.ನಾಗರಾಜು ಸೋಮವಾರದಂದು ಪತ್ತೆ ಹಚ್ಚಿದ್ದಾರೆ.

ಗ್ರಾಮದ ಹೊರವಲಯದಲ್ಲಿರುವ ತಿರುಮಲ ದೇವರ ಗಡ್ಡೆ ಎಂಬ ದಿಬ್ಬದ ಬಳಿ ಬಹುತೇಕ ಭೂಮಿಯಲ್ಲಿ ಹೂತುಹೋಗಿದ್ದ ಎರಡು ಕಲ್ಲುಗಳನ್ನು ಪರೀಕ್ಷಿಸಲಾಗಿ ಅವು ಶಾಸನ ಗಳೆಂದು ಗುರುತಿಸಲಾಗಿದೆ.



ಜಮೀನಿನ ಮಾಲೀಕ ಗುರಿಕಾರ ಆರ್. ಎಲ್. ನರಸಿಂಹಯ್ಯ ಮತ್ತು ನಿವೃತ್ತ ಸಾರಿಗೆ ಇಲಾಖೆ ಅಧಿಕಾರಿ ಬಿ.ತಿಪ್ಪೇ ಸ್ವಾಮಿಯವರ ಸಹಕಾರದಿಂದಶಾಸನಕಲ್ಲುಮೇಲೆತ್ತಿಸಂರಕ್ಷಿಸಲಾಗಿದೆ. ಮತ್ತೋರ್ವ ಸಂಶೋದಕ ರಾದ ಗುರುವೇಪಲ್ಲಿ ನರಸಿಂಹುಲುರವರ ಸಹಕಾರದೊಂದಿಗೆ ಶಾಸನವನ್ನು ಓದುವ ಪ್ರಯತ್ನ ಮಾಡಲಾಗಿದೆ.

ಶಾಸನವು ಎರಡು ಕಲ್ಲುಗಳ ಮೇಲೆ ಒಂದೊಂದು ಬದಿಯಲ್ಲಿ ಬರೆಯಲಾಗಿದ್ದು, ಕನ್ನಡ ಲಿಪಿ ಮತ್ತು ಕನ್ನಡ ಭಾಷೆಯ ಶಾಸನವಾಗಿದೆ. 1ನೇ ಕಲ್ಲಿನಲ್ಲಿ 26 ಸಾಲುಗಳು ಮತ್ತೊಂದು ಕಲ್ಲಿನಲ್ಲಿ 21 ಸಾಲುಗಳು ಸೇರಿ ಒಟ್ಟು47 ಸಾಲು ಬರಹವಿದೆ. ಮೊದಲ ಗ್ರಾನೈಟ್ ಬಂಡೆಯು 4 ಅಡಿ ಎತ್ತರ ಮತ್ತು 2.25 ಅಡಿ ಅಗಲವನ್ನು ಹೊಂದಿದೆ. ಮೇಲ್ಭಾಗ ತ್ರಿಕೋನಾಕಾರವಾಗಿದೆ. ಎರಡನೆಯದು 3.5 ಅಡಿ ಅಗಲವಿದ್ದು, ಮೇಲೆ ಮತ್ತು ಕೆಳಗೆ ತ್ರಿಕೋನಾಕಾರ ವಾಗಿದೆ. ಎರಡು ಕಲ್ಲುಗಳ ಮೇಲ್ಭಾಗದಲ್ಲಿ ಸೂರ್ಯ ಚಂದ್ರ ಮತ್ತು ನಾಮಗಳನ್ನು ಬಿಡಿಸಲಾಗಿದೆ. ಶಾಸನದ ಕಾಲವನ್ನು ಶಾಲಿವಾಹನ ಶಕ 1437 ನೇ ಯುವ ನಾಮ ಸಂವತ್ಸರದ ಬಾದ್ರಪದ ಶು 11 ರ ಶುಕ್ರವಾರ ಎಂದು ತಿಳಿಸುತ್ತಾ ಪಾಠಾಂಶ ಮುಂದುವರೆದು, ಅಂತ್ಯದಲ್ಲಿ ಶಾಸನ ಕೆಡಿಸಿದವರಿಗೆ ವಾರಣಾಸಿಯಲ್ಲಿ ಗೋಹತ್ಯೆ ಮತ್ತುಮಾತಾಪಿತೃಹತ್ಯೆಯಪಾಪಕ್ಕೆಗುರಿಯಾಗುವರು ಎಂಬ ವಿಷಯದಿಂದ ಕೊನೆಗೊಳ್ಳುತ್ತದೆ ಎಂದು ಸಂಶೋಧಕ ಹೊ.ಮ.ನಾಗರಾಜು ತಿಳಿಸಿದ್ದಾರೆ.

ಶಾಸನದ ಬಗ್ಗೆ ಮಾಹಿತಿ ನೀಡಿದ ಗುರುವೇಪಲ್ಲಿ ನರಸಿಂಹುಲು ಇದೊಂದು ವೈಷ್ಣವ ಸಂಪ್ರದಾಯದ ಶಾಸನವಾಗಿದಶ್ರೀಕೃಷ್ಣದೇವರಾಯರು ವಿಜಯನಗರವನ್ನು ಆಳುತ್ತಿದ್ದ ಆ ಸಂದರ್ಭದಲ್ಲಿ ನಿಡುಗಲ್ಲಿನಲ್ಲಿ ಜಕ್ಕರಾಯಆಳ್ವಿಕೆಮಾಡುತ್ತಿದ್ದರು. ಅವರಕಾಲಕ್ಕೆಶಾಸನ ಸಂಬಂದಿಸಿದ್ದು, ಇದೊಂದು ದಾನ ಶಾಸನವಾಗಿದೆ. ಶಾಸನದ ಕೆಲವು ಅಕ್ಷರಗಳು ತೃಟಿತವಾಗಿರುವುದರಿಂದ ಶಾಸನದ ಸಂಪೂರ್ಣ ಮಾಹಿತಿಯನ್ನು ಸಂಗ್ರಹಿಸುವ ಕಾರ್ಯ ಮುಂದುವರೆದಿದೆ ಎಂದಿದ್ದಾರೆ.

ಇಲ್ಲಿರುವತಿರುಮಲದೇವರಗಡ್ಡೆಎಂದುಕರೆಯುವ ದಿಬ್ಬವು ಈ ಹಿಂದೆ ಇದ್ದ ದೇವಾಲಯದ ಅವಶೇಷವಾಗಿದೆ. ಪೂರ್ವಾಭಿಮುಖವಾಗಿರುವ ಈ ದೇವಾಲಯದ ಅವಶೇಷಗಳಾಗಿ ಕಲ್ಲುಕಂಬ, ಬಾಗಿಲು ವಾಡಗಳು, ಬೋದಿಗೆಗಳು, ಮೂಲ ದೇವರ ಪಾಣಿಪೀಠ, ದೇವಾಲಯದ ತಳಪಾಯ, ಚಿಕ್ಕ ವೀರಮಾಸ್ತಿಗಲ್ಲುಇತ್ಯಾದಿಗಳನ್ನುಗುರ್ತಿಸಲಾಗಿದೆ.ಇವುಗಿಡಗಂಟೆ ಮತ್ತುಮಣ್ಣಿನಿಂದಆವೃತವಾಗಿದಿಬ್ಬವಾಗಿಪರಿವರ್ತನೆ ಹೊಂದಿದೆ. ಈ ದೇವಾಲಯದ ಮುಂಭಾಗದಲ್ಲಿ ಅರವಟ್ಟಿಗೆ ಕಲ್ಲುಗಳ ಅವಶೇಷಗಳು ಇರುವುದನ್ನು ಮುಖಂಡರಾದ ಬಿ.ಶಿವಪ್ಪ, ವಾಟರಮೆನ್ ನಾಗರಾಜು ತೋರಿಸಿ ಮಾಹಿತಿ ನೀಡಿದ್ದಾರೆ. ರಾಜೇಶ, ಶ್ರೀನಿವಾಸ ಇತರರು ಇದ್ದರು.

ಏ.11ರಿಂದ ಜೆಡಿಎಸ್ ಸಮಾವೇಶ



ದಾಸರಹಳ್ಳಿ : ಜೆಡಿಎಸ್‌ನಿಂದ ಏ.11ರಂದು ಆಯೋಜನೆ ಮಾಡಿರುವ ಸಮಾವೇಶದಲ್ಲಿ ಕಾರ್ಯಕರ್ತರ ಶಕ್ತಿ ಪ್ರದರ್ಶನ ಮಾಡೋಣ ಎಂದು ರಾಜ್ಯ ಜೆಡಿಎಸ್ ಉಪಾಧ್ಯಕ್ಷ ಅಂದಾನಪ್ಪ ಹೇಳಿದರು.ದಾಸರಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮಂಜುನಾಥ್ ನಗರ ಹಾಗೂ ಬಾಗಲಗುಂಟೆ ಜೆಡಿಎಸ್ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿ, ಬರಲಿರುವ ಜಿಬಿಎ ಚುನಾವಣೆಯು ಎನ್‌ಡಿಎ ಮಿತ್ರ ಪಕ್ಷದ ಮೂಲಕ ನಾವು ಸ್ಪರ್ಧೆ ಮಾಡಬೇಕಾಗುತ್ತೆ. ಅದಕ್ಕಾಗಿ ವಾರ್ಡಿನ ಎಲ್ಲಾ ಮುಖಂಡರು ಹಾಗೂ ಕಾರ್ಯಕರ್ತರು ಒಟ್ಟಾಗಿ ಪಕ್ಷ ಬಲಪಡಿಸಬೇಕೆಂದು ಕರೆ ನೀಡಿದರು. ಬಾಗಲಗುಂಟೆ ವಾರ್ಡ್ ಅಧ್ಯಕ್ಷ ಭರತ್ ಗುಂಡಪ್ಪ ಮಾತನಾಡಿ, ಪಕ್ಷ ಯಾರಿಗಾದರೂ ಅಭ್ಯರ್ಥಿ ಮಾಡಲಿ. ಈ ಬಗ್ಗೆ ಈಗಲೇ ಗೊಂದಲ ಬೇಡ. ನಮ್ಮ ಒಗ್ಗಟ್ಟಿನಲ್ಲಿ ಬಲವಿದೆಂದರು.

ಜೆಡಿಎಸ್ ಬಗ್ಗೆ ಉತ್ತಮ ವಾತಾವರಣಯಿದೆ. ಕೇಂದ್ರ ಸಚಿವ ಹಾಗೂ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಬೆಂಗಳೂರಿಗೆ ಕೊಟ್ಟಿರುವ ಅನುದಾನ ಹಾಗೂ ವಿಶೇಷವಾಗಿ ನಗರಕ್ಕೆ ಮುಖ್ಯ ಮಂತ್ರಿ ಆಗಿದ್ದಾಗ ಅಭಿವೃದ್ಧಿ ಕೆಲಸ ಮಾಡಿರುವುದನ್ನು ಜನರಿಗೆ ಮನವರಿಕೆ ಮಾಡೋಣ ಎಂದು ಹೇಳಿದರು.ಜನತಾ ದಳ ಬೆಂಗಳೂರು ನಗರ ಜಿಲ್ಲಾ ಅಧ್ಯಕ್ಷ ರಮೇಶ್ ಗೌಡ, ಕ್ಷೇತ್ರದ ಅಧ್ಯಕ್ಷ ಎಂ ಮುನಿಸ್ವಾಮಿ, ಕಾರ್ಯಾಧ್ಯಕ್ಷ ಮುನೇಗೌಡ, ಮುಖಂಡರಾದ ಮಲ್ಲೇಶ್ ಗೌಡ, ಗುರುಪ್ರಸಾದ್, ಚಂದ್ರಣ್ಣ, ಚಂದನ್, ನಟರಾಜ್, ರೇಣುಕೇಶ್ ಇತರರಿದ್ದರು.



1967ರಿಂದ 2026ರವರೆಗಿನ ಆರು ದಶಕಗಳ ಸಮಗ್ರ ಅವಲೋಕನ

ನಕ್ಸಲ್ ಮುಕ್ತ ಭಾರತ

ಭಾರತದ ಆಂತರಿಕ ಭದ್ರತೆಗೆ ಆರು ದಶಕಗಳ ಕಾಲ ಅತಿ ದೊಡ್ಡ ಸವಾಲಾಗಿದ್ದ ನಕ್ಸಲ್ವಾದವು 2026ರ ಮಾರ್ಚ್ 31ರಂದು ಅಧಿಕೃತವಾಗಿ ಅಂತ್ಯ ಕಂಡಿದೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಮಾ.30ರಂದು ಲೋಕಸಭೆಯಲ್ಲಿ ಭಾರತವು ಸಂಪೂರ್ಣವಾಗಿ ನಕ್ಸಲ್ ಮುಕ್ತವಾಗಿದೆ ಎಂದು ಅಧಿಕೃತವಾಗಿ ಘೋಷಿಸಿದರು. ಮಾವೋವಾದಿ ಸಂಘಟನೆಯ ಕೇಂದ್ರ ಸಮಿತಿ, ಪೊಲಿಟ್ಬ್ಯೂರೊ ಮತ್ತು ರಾಜ್ಯ ಸಮಿತಿಗಳ ಸಂಪೂರ್ಣ ರಚನೆಯನ್ನು ನಾಶಪಡಿಸಲಾಗಿದೆ ಎಂದು ಅವರು ಸಂಸತ್ತಿನಲ್ಲಿ ತಿಳಿಸಿದರು.

ನಕ್ಸಲ್‌ಬಾರಿ ದಂಗೆ (1967)

ನಕ್ಸಲ್‌ವಾದದ ಮೂಲವನ್ನು 1967ರ ಮೇ 25ರಂದು ಪಶ್ಚಿಮ ಬಂಗಾಳದ ದಾರ್ಜಿಲಿಂಗ್ ಜಿಲ್ಲೆಯ ನಕ್ಸಲ್ಬಾರಿ, ಖೋರಿಬಾರಿ ಮತ್ತು ಫಾನ್ಸಿಡೇವಾ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದ ರೈತ ದಂಗೆಗೆ ಗುರುತಿಸಬಹುದು. ಚಾರು ಮಜುಮ್ದಾರ್, ಕನು ಸನ್ಯಾಲ್ ಮತ್ತು ಜಂಗಲ್ ಸಂಥಾಲ್ ನೇತೃತ್ವದಲ್ಲಿ ಸಿಪಿಐ(ಎಂ) ಪಕ್ಷದ ಒಳಗಿನ ಬಂಡಾಯ ಗುಂಪು ಈ ದಂಗೆಯನ್ನು ನಡೆಸಿತು. 1967ರ ಮಾರ್ಚ್ 3ರಂದು ಸುಮಾರು 150 ರೈತರು ಬಿಲ್ಲು-ಈಟಿಗಳೊಂದಿಗೆ ಭೂಮಾಲೀಕರ ಅಕ್ಕಿ ಮತ್ತು ಭೂಮಿಯನ್ನು ವಶಪಡಿಸಿಕೊಂಡರು. ಜೂನ್ ತಿಂಗಳ ಹೊತ್ತಿಗೆ ರೈತ ಸಮಿತಿಗಳು ನಕ್ಸಲ್ಬಾರಿ ಪ್ರದೇಶದ ಮೇಲೆ ಹಿಡಿತ ಸಾಧಿಸಿದವು. ಮೇ 25ರಂದು ಪೊಲೀಸರು ನಡೆಸಿದ ಗೋಲಿಬಾರ್‌ನಲ್ಲಿ ಒಂಬತ್ತು ಮಹಿಳೆಯರು ಮತ್ತು ಒಂದು ಮಗು ಸಾವನ್ನಪ್ಪಿದರು. ಜುಲೈ 19ರಂದು ಸರ್ಕಾರ ಅರೆಸೈನಿಕ ಪಡೆಗಳನ್ನು ಕಳಿಸಿ ದಂಗೆಯನ್ನು ಹತ್ತಿಕ್ಕಿತು.

ಸಿಪಿಐ(ಮಾವೋವಾದಿ) ರಚನೆ

2004ರ ಸೆ.21ರಂದು ಪೀಪಲ್ಸ್ ವಾರ್ ಗ್ರೂಪ್ (ಪಿಡಬ್ಲ್ಯೂಜಿ) ಮತ್ತು ಮಾವೋವಾದಿ ಕಮ್ಯೂನಿಸ್ಟ್ ಸೆಂಟರ್ ಆಫ್ ಇಂಡಿಯಾ (ಎಂಸಿಸಿಐ) ವಿಲೀನಗೊಂಡು ಸಿಪಿಐ(ಮಾವೋವಾದಿ) ಎಂಬ ಏಕೀಕೃತ ಸಂಘಟನೆ ರಚನೆಯಾಯಿತು. ಈ ವಿಲೀನವು ನಕ್ಸಲ್ ಹಿಂಸಾಚಾರವನ್ನು ತೀವ್ರಗೊಳಿಸಿತು. ಅವರ ಸಶಸ್ತ್ರ ವಿಭಾಗ ಪೀಪಲ್ಸ್ ಲಿಬರೇಶನ್ ಗೆರಿಲ್ಲಾ ಆರ್ಮಿ (ಪಿಎಲ್‌ಜಿಎ) ಕಾನೂನುಬಾಹಿರ ಚಟುವಟಿಕೆ (ತಡೆ) ಕಾಯ್ದೆಯ (ಯುಎಪಿಎ) ಅಡಿಯಲ್ಲಿ ಉಗ್ರಗಾಮಿ ಸಂಘಟನೆಯೆಂದು ಘೋಷಿಸಲ್ಪಟ್ಟಿತು. ಸಿಪಿಐ(ಮಾವೋವಾದಿ) ಭಾರತೀಯ ರಾಜ್ಯವನ್ನು ಸಾಮ್ರಾಜ್ಯಶಾಹಿಗಳು, ದಲ್ಲಾಳಿ ಬೂರ್ಜ್ವಾಗಳು ಮತ್ತು ಊಳಿಗಮಾನ್ಯ ಅಧಿಪತಿಗಳ ಸಹಯೋಗದಿಂದ ನಡೆಸಲಾಗುತ್ತಿದೆ ಎಂದು ಪ್ರತಿಪಾದಿಸುತ್ತಿತ್ತು. ದೀರ್ಘಕಾಲೀನ ಸಶಸ್ತ್ರ ಹೋರಾಟದ ಮೂಲಕ ಅಧಿಕಾರವನ್ನು ವಶಪಡಿಸಿಕೊಳ್ಳುವುದು ಅವರ ಗುರಿಯಾಗಿತ್ತು. ಪಕ್ಷದ ಅತ್ಯುನ್ನತ ನಿರ್ಧಾರ ತೆಗೆದುಕೊಳ್ಳುವ ಸಂಸ್ಥೆ ಪೊಲಿಟ್‌ಬ್ಯೂರೋ ಆಗಿದ್ದು, ಅದರಲ್ಲಿ 13-14 ಸದಸ್ಯರಿದ್ದರು. ಪ್ರಾದೇಶಿಕ ಬ್ಯೂರೊಗಳು, ರಾಜ್ಯ ಸಮಿತಿಗಳು, ವಲಯ ಸಮಿತಿಗಳು, ಜಿಲ್ಲಾ ಸಮಿತಿಗಳು ಮತ್ತು ದಳಗಳು (ಸಶಸ್ತ್ರ ತಂಡಗಳು) ಎಂಬ ಶ್ರೇಣೀಕೃತ ರಚನೆ ಇತ್ತು. ಈ ಸಂಘಟನಾ ರಚನೆಯನ್ನು ಸಂಪೂರ್ಣವಾಗಿ ನಾಶಪಡಿಸಲಾಗಿದೆ ಎಂದು ಸರ್ಕಾರ ಹೇಳಿದೆ.

ಪ್ರಮುಖ ನಕ್ಸಲ್ ದಾಳಿಗಳು

ನಕ್ಸಲೀಯರು ನಡೆಸಿದ ಪ್ರಮುಖ ರಕ್ತಪಾತದ ಘಟನೆಗಳು ಈ ಕೆಳಗಿನಂತಿವೆ:

ವರ್ಷ	ಘಟನೆ	ಸಾವಿನ ಸಂಖ್ಯೆ
2010	ದಂತೆವಾಡ ದಾಳಿ (ಛತ್ತೀಸ್‌ಗಢ)	76 ಸಿಆರ್‌ಪಿಎಫ್ ಸಿಬ್ಬಂದಿ ಹತ್ಯೆ
2013	ಜೀರಮ್ ಘಾಟಿ ದಾಳಿ	ಕಾಂಗ್ರೆಸ್ ನಾಯಕ ಮಹೇಂದ್ರ ಕರ್ಮ ಸೇರಿ 29 ಹತ್ಯೆ
2017	ಬುರ್ಕಪಾಲ್ ದಾಳಿ (ಸುಕ್ಮಾ)	25 ಸಿಆರ್‌ಪಿಎಫ್ ಸಿಬ್ಬಂದಿ ಹತ್ಯೆ
2021	ಸುಕ್ಮಾ ದಾಳಿ	22 ಭದ್ರತಾ ಸಿಬ್ಬಂದಿ ಹತ್ಯೆ

ಸೌತ್ ಏಷ್ಯಾ ಟೆರರಿಸಮ್ ಪೋರ್ಟಲ್ ಪ್ರಕಾರ, 2000ರಿಂದ 2025ರ ನಡುವೆ ನಕ್ಸಲ್ ಹಿಂಸಾಚಾರದಲ್ಲಿ 4,134 ನಾಗರಿಕರು, 2,722 ಭದ್ರತಾ ಪಡೆ ಸಿಬ್ಬಂದಿ ಮತ್ತು 4,994 ನಕ್ಸಲೀಯರು ಸೇರಿ ಒಟ್ಟು 12,102 ಜನ ಮೃತಪಟ್ಟಿದ್ದಾರೆ.

ಪ್ರಮುಖ ಕಾರ್ಯಾಚರಣೆಗಳು

2025-26ರ ಅವಧಿಯಲ್ಲಿ ಅನೇಕ ಮಹತ್ವದ ಕಾರ್ಯಾಚರಣೆಗಳು ನಡೆದವು. 2025ರ ಜನವರಿಯಲ್ಲಿ ಒಡಿಶಾ-ಛತ್ತೀಸ್‌ಗಡ ಗಡಿಯಲ್ಲಿ ಕೇಂದ್ರ ಸಮಿತಿ ನಾಯಕ ರಾಮಚಂದ್ರ ರೆಡ್ಡಿ (ಚಳಪತಿ) ಹತನಾದ. ಈ 62 ವರ್ಷದ ನಾಯಕ 1 ಕೋಟಿ ರೂ. ಬಹುಮಾನ ಹೊಂದಿದ್ದ ಮತ್ತು 2018ರ ಮಾರಣಹೋಮ ದಾಳಿಗಳ ಸೂತ್ರಧಾರಿಯಾಗಿದ್ದ. ಸೆಪ್ಟೆಂಬರ್‌ನಲ್ಲಿ ಕೋಸಾ ಎಂಬ ಕೇಂದ್ರ ಸಮಿತಿ ಸದಸ್ಯ ಛತ್ತೀಸ್‌ಗಢದಲ್ಲಿ ಹತನಾದ. ಡಿಸೆಂಬರ್‌ನಲ್ಲಿ ಒಡಿಶಾದ ಕಂಧಮಾಲ ಅರಣ್ಯದಲ್ಲಿ 1.1 ಕೋಟಿ ರೂ. ಬಹುಮಾನದ ಗಣೇಶ್ ಉಐಕೆ ಹತನಾದ. 2026ರ ಜನವರಿಯಲ್ಲಿ ಝಾರ್ಖಂಡ್‌ನಲ್ಲಿ ಅನಲ್ ದಾ ಎಂಬ ಕೇಂದ್ರ ಸಮಿತಿ ಸದಸ್ಯ ಹತನಾದ. ವಿಶೇಷ ಕಾರ್ಯಾಚರಣೆಗಳಲ್ಲಿ ಕೆಲವು ಗಮನಾರ್ಹ ಸಂಗತಿಗಳು ಬೆಳಕಿಗೆ ಬಂದವು. ಬಸ್ತರ್ ಐಜಿಪಿ ಸುಂದರ್‌ರಾಜ್ ಅವರ ಪ್ರಕಾರ ಮಾವೋವಾದಿ ಸಂಘಟನೆಯು ಎಲ್‌ಟಿಟಿಇ (ಲಿಬರೇಶನ್ ಟೈಗರ್ಸ್ ಆಫ್ ತಮಿಳ್ ಈಳಂ) ಸೇರಿದಂತೆ ಇತರ ಉಗ್ರಗಾಮಿ ಸಂಘಟನೆಗಳಿಂದ ತರಬೇತಿ ಮತ್ತು ತಾಂತ್ರಿಕ ನೆರವು ಪಡೆದಿತ್ತು. ಪ್ರಧಾನ ಕಾರ್ಯದರ್ಶಿ ಬಸವರಾಜು ಹಿಂಸಾತ್ಮಕ ಕಾರ್ಯಾಚರಣೆಗಳನ್ನು ಯೋಜಿಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದ. ಗುಂಪು ವಿದೇಶಿ ಉಗ್ರಗಾಮಿ ಸಂಘಟನೆಗಳಿಂದ ತರಬೇತಿ ಪಡೆದಿತ್ತು ಎಂಬ ಬಹಿರಂಗ ಮಾಹಿತಿಯು ನಕ್ಸಲ್ ಸಮಸ್ಯೆಯ ಅಂತಾರಾಷ್ಟ್ರೀಯ ಆಯಾಮವನ್ನು ಬಿಚ್ಚಿಟ್ಟಿತು. 2025ರ ಮಾರ್ಚ್‌ನಲ್ಲಿ ಮಾತ್ರ ಎರಡು ಬೃಹತ್ ಕಾರ್ಯಾಚರಣೆಗಳಲ್ಲಿ ಛತ್ತೀಸ್‌ಗಢದ ಸುಕ್ಮಾ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ಕನಿಷ್ಠ 46 ನಕ್ಸಲೀಯರನ್ನು ಹೊಡೆದುರುಳಿಸಲಾಯಿತು. ಮೊದಲ ಕಾರ್ಯಾಚರಣೆಯಲ್ಲಿ ಮಾರ್ಚ್ 20ರಂದು ಬಿಜಾಪುರದಲ್ಲಿ 30 ಮಾವೋವಾದಿಗಳನ್ನು ಹೊಡೆದುರುಳಿಸಲಾಯಿತು. ಕೆಲವು ದಿನಗಳ ನಂತರ ಸುಕ್ಮಾದಲ್ಲಿ ಇನ್ನೂ 16 ಜನರನ್ನು ಗುಂಡಿಕ್ಕಿ ಕೊಲ್ಲಲಾಯಿತು. ಇವು ಯಾದೃಚ್ಛಿಕ ಹತ್ಯೆಗಳಾಗಿರಲಿಲ್ಲ - ನಕ್ಸಲೀಯರ ಕಾರ್ಯತಂತ್ರ ಸಭೆಗಳ ಸಮಯದಲ್ಲಿ ಯೋಜಿತ ಕಾರ್ಯಾಚರಣೆಗಳಾಗಿದ್ದವು. 2025ರ ಫೆಬ್ರವರಿಯಲ್ಲಿ ಒಂದೇ ದಿನ ಬಿಜಾಪುರದಲ್ಲಿ 31 ನಕ್ಸಲೀಯರನ್ನು ಹೊಡೆದುರುಳಿಸಿ ವಾತಾವರಣ ಸೃಷ್ಟಿಸಲಾಗಿತ್ತು.

ವರ್ಷವಾರು ಅಂಕಿಅಂಶಗಳು

ವರ್ಷ	ಎನ್‌ಕೌಂಟರ್‌ನಲ್ಲಿ ಹತರು	ಶರಣಾಗತಿ	ಬಂಧಿತರು
2019-2023	1,149 (ಒಟ್ಟು)	5,880	7,409
2024	290	928	1,090
2025	317+	2,337	800+
2026 (ಮಾರ್ಚ್ ವರೆಗೆ)	100+	630+	-

ಸಮಗ್ರ ಅಂಕಿಅಂಶಗಳು

2026ರ ಮಾರ್ಚ್ 30ರಂದು ಗೃಹ ಸಚಿವ ಅಮಿತ್ ಶಾ ಅವರು ಲೋಕಸಭೆಯಲ್ಲಿ ನೀಡಿದ ಅಧಿಕೃತ ಅಂಕಿಅಂಶಗಳ ಪ್ರಕಾರ:

ಎನ್ಕೌಂಟರ್‌ನಲ್ಲಿ ಹತರಾದ ನಕ್ಸಲೀಯರು - **706**

ಬಂಧಿತರು / ಜೈಲುವಾಸ - **2,218**

ಶರಣಾಗತಿ ಹೊಂದಿದ ನಕ್ಸಲೀಯರು- **4,839**

ಒಟ್ಟು ನಿಷ್ಕ್ರಿಯಗೊಳಿಸಲಾದ ನಕ್ಸಲೀಯರು-**7,763**

ಹತರಾದ ಪ್ರಮುಖ ನಕ್ಸಲ್ ನಾಯಕರು

2014ರಿಂದ 2026ರ ನಡುವೆ ನಕ್ಸಲ್ ಸಂಘಟನೆಯ ಅಗ್ರ ನಾಯಕತ್ವವನ್ನು ಸಂಪೂರ್ಣವಾಗಿ ನಾಶಪಡಿಸಲಾಯಿತು. ಅಮಿತ್ ಶಾ ಅವರ ಪ್ರಕಾರ, ಅಗ್ರ ನಾಯಕತ್ವದಲ್ಲಿ 12 ಜನ ಹತರಾಗಿದ್ದಾರೆ ಮತ್ತು ಕೇವಲ ಒಬ್ಬ ಮಾತ್ರ ತಲೆಮರೆಸಿಕೊಂಡಿದ್ದಾನೆ.

ನಾಯಕ ಹುದ್ದೆ ಮತ್ತು ಹತ್ಯೆ/ಶರಣಾಗತಿ ವಿವರ

- ನಂಬಳ ಕೇಶವ ರಾವ್ (ಬಸವರಾಜು) ಪ್ರಧಾನ ಕಾರ್ಯದರ್ಶಿ: ಮೇ 2025 - ಛತ್ತೀಸ್‌ಗಢದಲ್ಲಿ ಹತ
- ಮದ್ವಿ ಹಿಡ್ಮಾ: ಕೇಂದ್ರ ಮಿಲಿಟರಿ ಕಮಿಷನ್ ಮುಖ್ಯಸ್ಥ ನವೆಂಬರ್ 2025 - ಆಂಧ್ರಪ್ರದೇಶದಲ್ಲಿ ಹತ
- ರಾಮಚಂದ್ರ ರೆಡ್ಡಿ (ಚಳಪತಿ) ಕೇಂದ್ರ ಸಮಿತಿ ಸದಸ್ಯ ಜನವರಿ 2025 - ಒಡಿಶಾ ಗಡಿಯಲ್ಲಿ ಹತ
- ಗಣೇಶ್ ಉಐಕೆ:ಕೇಂದ್ರ ಸಮಿತಿ ಸದಸ್ಯ: ಡಿಸೆಂಬರ್ 2025 - ಒಡಿಶಾದಲ್ಲಿ ಹತ
- ಮಿಲಿಂದ ತೆಲ್ತುಂಬ್ಡೆಕೇಂದ್ರ ಸಮಿತಿ ಸದಸ್ಯ: ಗಡಚಿರೋಲಿ (ಮಹಾರಾಷ್ಟ್ರ) ಎನ್ಕೌಂಟರ್
- ವಿಕ್ರಮ ಗೌಡ: ಕರ್ನಾಟಕದ ಮೋಸ್ಟ್ ವಾಂಟೆಡ್ ನವೆಂಬರ್ 2024 - ಉಡುಪಿ ಬಳಿ ಹತ
- ಮಲ್ಲೋಜುಲ ವೇಣುಗೋಪಾಲ ರಾವ್ (ಭೂಪತಿ) ಪೊಲಿಟ್‌ಬ್ಯೂರೊ ಸದಸ್ಯ: ಅಕ್ಟೋಬರ್ 2025 - ಮಹಾರಾಷ್ಟ್ರದಲ್ಲಿ ಶರಣಾಗತಿ
- ಥಿಪ್ಪಿರಿ ತಿರುಪತಿ (ದೇವಜಿ)ಪ್ರಧಾನ ಕಾರ್ಯದರ್ಶಿ: ಫೆಬ್ರವರಿ 2026 - ತೆಲಂಗಾಣದಲ್ಲಿ ಶರಣಾಗತಿ
- ಮಲ್ಲರಾಜಿ ರೆಡ್ಡಿ: ಕೇಂದ್ರ ಸಮಿತಿ ಸದಸ್ಯ ಫೆಬ್ರವರಿ 2026 - ತೆಲಂಗಾಣದಲ್ಲಿ ಶರಣಾಗತಿ



ಮೋದಿ ಸರ್ಕಾರದ ಶೂನ್ಯ ಸಹಿಷ್ಣುತೆ ನೀತಿ

2014ರಲ್ಲಿ ಅಧಿಕಾರಕ್ಕೆ ಬಂದ ನರೇಂದ್ರ ಮೋದಿ ಸರ್ಕಾರವು ನಕ್ಸಲ್ವಾದದ ವಿರುದ್ಧ ಬಹು-ಆಯಾಮಿ ಕಾರ್ಯತಂತ್ರವನ್ನು ರೂಪಿಸಿತು. 2015ರಲ್ಲಿ ಜಾರಿಗೊಳಿಸಲಾದ ರಾಷ್ಟ್ರೀಯ ನೀತಿ ಮತ್ತು ಕಾರ್ಯಯೋಜನೆಯು ಮೂರು ಪ್ರಮುಖ ಅಂಶಗಳನ್ನು ಒಳಗೊಂಡಿತ್ತು: ಭದ್ರತೆ, ಅಭಿವೃದ್ಧಿ ಮತ್ತು ಪುನರ್ವಸತಿ. ಹಿಂದಿನ ಸರ್ಕಾರಗಳ ಹರಡಿದ ವಿಧಾನವನ್ನು ಬದಲಿಸಿ, ಸಮಗ್ರ ಮತ್ತು ಸಮನ್ವಯಿತ ವಿಧಾನವನ್ನು ಅಳವಡಿಸಲಾಯಿತು. ಗೃಹ ಸಚಿವ ಅಮಿತ್ ಶಾ ಅವರು 2024ರ ಆಗಸ್ಟ್‌ನಲ್ಲಿ ಎಡಪಂಥೀಯ ಉಗ್ರವಾದ ಪರಿಸ್ಥಿತಿಯನ್ನು ಪರಿಶೀಲಿಸಿ, 2026ರ ಮಾರ್ಚ್ 31ರ ಒಳಗೆ ಮಾವೋವಾದವನ್ನು ದೇಶದಿಂದ ನಿರ್ಮೂಲನೆ ಮಾಡಲಾಗುವುದು ಎಂದು ಘೋಷಿಸಿದರು. ಈ ಗಡುವು ಭದ್ರತಾ ಪಡೆಗಳನ್ನು ಕಾರ್ಯಾಚರಣೆಗಳನ್ನು ತೀವ್ರಗೊಳಿಸಲು ಪ್ರೇರೇಪಿಸಿತು ಮತ್ತು ಕೇಂದ್ರ ಹಾಗೂ ರಾಜ್ಯ ಪಡೆಗಳ ನಡುವಿನ ಸಮನ್ವಯವನ್ನು ಬಲಪಡಿಸಿತು.

ಟ್ರೇಸ್-ಟಾರ್ಗೆಟ್-ನ್ಯೂಟ್ರಲೈಸ್ ಕಾರ್ಯತಂತ್ರ

ಭದ್ರತಾ ಕಾರ್ಯಾಚರಣೆಗಳನ್ನು ಟ್ರೇಸ್ (ಪತ್ತೆ), ಟಾರ್ಗೆಟ್ (ಗುರಿ) ಮತ್ತು ನ್ಯೂಟ್ರಲೈಸ್ (ನಿಷ್ಕ್ರಿಯಗೊಳಿಸು) ಎಂಬ ಕಾರ್ಯವಿಧಾನದ ಮೂಲಕ ನಡೆಸಲಾಯಿತು. ಸಿಆರ್‌ಪಿಎಫ್ ಮತ್ತು ಅದರ ಸಂಚಿಕೆ ಕೋಬ್ರಾ, (ಕಮಾಂಡೋ ಬೆಟಾಲಿಯನ್ ಫಾರ್ ರೆಸೊಲ್ಯೂಟ್ ಆಕ್ಷನ್) ಘಟಕಗಳು, ಡಿಸ್ಟ್ರಿಕ್ಟ್ ರಿಸರ್ವ್ ಗಾರ್ಡ್ಸ್ (ಡಿಆರ್‌ಜಿ), ಬಸ್ತರ್ ಫೈಟರ್ಸ್ ಮತ್ತು ಸ್ಪೆಷಲ್ ಟಾಸ್ಕ್ ಫೋರ್ಸ್ (ಎಸ್ಟಿಎಫ್) ಸೇರಿದಂತೆ ಸುಮಾರು ಒಂದು ಲಕ್ಷ ಅರೆಸೈನಿಕ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು. ಸ್ಥಳೀಯ ಭೂಪ್ರದೇಶ ಮತ್ತು ಭಾಷೆಯ ಮೇಲೆ ಹಿಡಿತ ಹೊಂದಿರುವ ಡಿಸ್ಟ್ರಿಕ್ಟ್ ರಿಸರ್ವ್ ಗಾರ್ಡ್ಸ್, ಅದರಲ್ಲೂ ಶರಣಾಗತಿ ಹೊಂದಿದ ಮಾಜಿ ನಕ್ಸಲೀಯರನ್ನು ಒಳಗೊಂಡ ಈ ಘಟಕಗಳು ಕಾರ್ಯಾಚರಣೆಯಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಕೆಲಸ ಮಾಡಿದವು.

ಆಪರೇಷನ್ ಕಾಗರ್

2024ರ ಜನವರಿಯಲ್ಲಿ ಆರಂಭವಾದ ಆಪರೇಷನ್ ಕಾಗರ್ ನಕ್ಸಲ್ ಹೋರಾಟದ ಅಂತಿಮ ಹಂತವನ್ನು ಗುರುತಿಸಿತು. ಈ ಕಾರ್ಯಾಚರಣೆಗೆ ನಾಲ್ಕು ಪ್ರಮುಖ ಕಾರ್ಯತಂತ್ರ ಗುರಿಗಳಿದ್ದವು: ಬಸ್ತರ್‌ನಾದ್ಯಂತ ಸಿಆರ್‌ಪಿಎಫ್ ನೆಲೆಗಳ ಸ್ಥಾಪನೆ, ಡ್ರೋನ್ ಮತ್ತು ಉಪಗ್ರಹ ಗುಪ್ತಚರ ಸಂಗ್ರಹ, 612ಕ್ಕೂ ಹೆಚ್ಚು ಪೊಲೀಸ್ ಠಾಣೆಗಳ ಸ್ಥಾಪನೆ, ಮತ್ತು ಶರಣಾಗತಿ ನೀತಿಯ ಜಾರಿ.

ಆಪರೇಷನ್ ಬ್ಲ್ಯಾಕ್ ಫಾರೆಸ್ಟ್ (ಕರ್ರೆಗುಟ್ಟಲು ಬೆಟ್ಟ ಕಾರ್ಯಾಚರಣೆ): 2025ರ ಏಪ್ರಿಲ್ 21ರಿಂದ ಮೇ 11ರವರೆಗೆ 21 ದಿನಗಳ ಕಾಲ ನಡೆದ ಆಪರೇಷನ್ ಬ್ಲ್ಯಾಕ್ ಫಾರೆಸ್ಟ್ ಭಾರತದ ಅತಿ ದೊಡ್ಡ ನಕ್ಸಲ್ ವಿರೋಧಿ ಕಾರ್ಯಾಚರಣೆಯಾಗಿತ್ತು. ಛತ್ತೀಸ್‌ಗಡ-ತೆಲಂಗಾಣ ಗಡಿಯಲ್ಲಿರುವ ಕರ್ರೆಗುಟ್ಟಲು ಬೆಟ್ಟ ಪ್ರದೇಶದಲ್ಲಿ ನಡೆದ ಈ ಕಾರ್ಯಾಚರಣೆಯಲ್ಲಿ 31 ನಕ್ಸಲೀಯರನ್ನು ಹೊಡೆದುರುಳಿಸಲಾಯಿತು. ಈ ಪ್ರದೇಶವು ಪಿಎಲ್ಜಿಎ ಬೆಟಾಲಿಯನ್ 1, ಡಿಕೆಎಸ್ಜೆಡ್ಸಿ ಮತ್ತು ಟಿಎಸ್ಸಿ ಮುಂತಾದ ಪ್ರಮುಖ ನಕ್ಸಲ್ ಸಂಘಟನೆಗಳ ಏಕೀಕೃತ ಕೇಂದ್ರ ಕಚೇರಿಯಾಗಿತ್ತು. ಈ ಕಾರ್ಯಾಚರಣೆಯಲ್ಲಿ ಸಿಪಿಐ(ಮಾವೋವಾದಿ) ಪ್ರಧಾನ ಕಾರ್ಯದರ್ಶಿ ನಂಬಳ ಕೇಶವ ರಾವ್ (ಬಸವರಾಜು) ಸೇರಿದಂತೆ 27 ನಕ್ಸಲೀಯರನ್ನು ಮೇ 21ರಂದು ಹೊಡೆದುರುಳಿಸಲಾಯಿತು. ಭದ್ರತಾ ಪಡೆಗಳಲ್ಲಿ ಯಾವುದೇ ಸಾವು ಸಂಭವಿಸಲಿಲ್ಲ ಎಂಬುದು ವಿಶೇಷ.

ಭದ್ರತಾ ಮೂಲಸೌಕರ್ಯ ವಿಸ್ತರಣೆ

ಸರ್ಕಾರವು ನಕ್ಸಲ್ ಪೀಡಿತ ಪ್ರದೇಶಗಳಲ್ಲಿ ಅಪಾರ ಭದ್ರತಾ ಮೂಲಸೌಕರ್ಯವನ್ನು ನಿರ್ಮಿಸಿದೆ. ನಕ್ಸಲ್ ಪೀಡಿತ ಪ್ರದೇಶಗಳ ಪೊಲೀಸ್ ಠಾಣೆಗಳ ಸಂಖ್ಯೆ 2014ರ 66ರಿಂದ 586ಕ್ಕೆ ಏರಿದೆ. 361 ಹೊಸ ಭದ್ರತಾ ಶಿಬಿರಗಳನ್ನು ಸ್ಥಾಪಿಸಲಾಗಿದೆ ಮತ್ತು 68 ರಾತ್ರಿ-ಲ್ಯಾಂಡ್ ಮಾಡಬಹುದಾದ ಹೆಲಿಪ್ಯಾಡ್‌ಗಳನ್ನು ನಿರ್ಮಿಸಲಾಗಿದೆ. ಡ್ರೋನ್ ಕಣ್ಗಾವಲು, ಉಪಗ್ರಹ ಚಿತ್ರಣ, ಕೃತಕ ಬುದ್ಧಿಮತ್ತೆ ಆಧಾರಿತ ವಿಶ್ಲೇಷಣೆ ಮತ್ತು ಮೊಬೈಲ್ ಡೇಟಾ ವಿಶ್ಲೇಷಣೆ ಮುಂತಾದ ಅತ್ಯಾಧುನಿಕ ತಂತ್ರಜ್ಞಾನಗಳನ್ನು ಬಳಸಲಾಗಿದೆ.

ಅಂಶ	2014	2026
ನಕ್ಸಲ್ ಪೀಡಿತ ಜಿಲ್ಲೆಗಳು	126	7-8
ಅತಿ ಹೆಚ್ಚು ಪ್ರಭಾವಿತ ಜಿಲ್ಲೆಗಳು	35	3
ಪೊಲೀಸ್ ಠಾಣೆಗಳು	66	586
ನಕ್ಸಲ್ ಘಟನೆ ದಾಖಲಿಸಿದ ಪೊಲೀಸ್ ಠಾಣೆಗಳು	330 (76 ಜಿಲ್ಲೆ)	52 (22 ಜಿಲ್ಲೆ)
ಭದ್ರತಾ ಸಿಬ್ಬಂದಿ ಮರಣ (ವಾರ್ಷಿಕ)	88	19
ನಾಗರಿಕ ಮರಣ ಇಳಿಕೆ	-	70% ಕಡಿಮೆ
ಹಿಂಸಾಚಾರ ಘಟನೆಗಳು (ವಾರ್ಷಿಕ)	1,080	234

2014 ಮತ್ತು 2026 - ಹೋಲಿಕೆ

2014ಕ್ಕಿಂತ ಮೊದಲು ನಕ್ಸಲ್ ಸಮಸ್ಯೆಯನ್ನು ನಿರ್ವಹಿಸುವಲ್ಲಿ ಕೇಂದ್ರ- ರಾಜ್ಯ ಸರ್ಕಾರಗಳು ಅನೇಕ ಸವಾಲುಗಳನ್ನು ಎದುರಿಸಿದ್ದವು. ನಕ್ಸಲ್‌ವಾದವನ್ನು ರಾಜ್ಯಗಳ ಸಮಸ್ಯೆ ಎಂದು ಪರಿಗಣಿಸಲಾಗುತ್ತಿತ್ತು. ರಾಷ್ಟ್ರೀಯ ನೀತಿ ಇರಲಿಲ್ಲ. ಕೇಂದ್ರ ಮತ್ತು ರಾಜ್ಯ ಪಡೆಗಳ ನಡುವೆ ಸಮನ್ವಯ ಕೊರತೆ ಇತ್ತು. ಗುಪ್ತಚರ ಮಾಹಿತಿ ಹಂಚಿಕೆ ಸಮರ್ಪಕವಾಗಿರಲಿಲ್ಲ. ಸೇನಾ ಕಾರ್ಯಾಚರಣೆ ಮತ್ತು ಅಭಿವೃದ್ಧಿ ಕೆಲಸಗಳ ನಡುವೆ ಸಮತೋಲನ ಇರಲಿಲ್ಲ. 2004ರಿಂದ 2014ರ ನಡುವೆ 19,135 ನಕ್ಸಲ್ ಸಂಬಂಧಿತ ಹಿಂಸಾಚಾರ ಘಟನೆಗಳು ನಡೆದಿದ್ದರೆ, 2015ರ ಜೂನ್‌ನಿಂದ 2025ರ ಮೇ ವರೆಗೆ ಈ ಸಂಖ್ಯೆ 56% ಕಡಿಮೆಯಾಗಿ 7,134ಕ್ಕೆ ಇಳಿದಿದೆ. 2010ರಲ್ಲಿ 1,936 ಘಟನೆಗಳು ನಡೆದಿದ್ದರೆ, 2024ರಲ್ಲಿ ಕೇವಲ 374 ಮತ್ತು 2025ರಲ್ಲಿ ಸುಮಾರು 234 ಘಟನೆಗಳು ನಡೆದಿವೆ. 2010ರಲ್ಲಿ 465 ಪೊಲೀಸ್ ಠಾಣೆಗಳಲ್ಲಿ ನಕ್ಸಲ್ ಹಿಂಸಾಚಾರ ವರದಿಯಾಗಿದ್ದರೆ, 2025ರಲ್ಲಿ ಕೇವಲ 119 ಠಾಣೆಗಳಲ್ಲಿ ಮಾತ್ರ ವರದಿಯಾಗಿದೆ. ನಾಗರಿಕ ಮತ್ತು ಭದ್ರತಾ ಪಡೆ ಸಾವುಗಳೂ ಗಮನಾರ್ಹವಾಗಿ ಕಡಿಮೆಯಾಗಿವೆ. 2010ರಲ್ಲಿ 1,005 ಜನ ಹತರಾಗಿದ್ದರೆ, 2024ರಲ್ಲಿ ಸುಮಾರು 150 ಮತ್ತು 2025ರಲ್ಲಿ ಸುಮಾರು 95-100 ಜನ ಮಾತ್ರ ಹತರಾಗಿದ್ದಾರೆ. ಇದು 85-91 % ಕಡಿಮೆ. ಭದ್ರತಾ ಸಿಬ್ಬಂದಿ ಸಾವಿನ ಸಂಖ್ಯೆ 73% ಕಡಿಮೆಯಾಗಿದೆ ಮತ್ತು ನಾಗರಿಕ ಸಾವಿನ ಸಂಖ್ಯೆ 70% ಕಡಿಮೆಯಾಗಿದೆ.

ಹಿಡ್ಮಾ ಹತ್ಯೆ

2025ರ ನವೆಂಬರ್ 18ರಂದು ಮದ್ವಿ ಹಿಡ್ಮಾ ಎಂಬ ಸಿಪಿಐ(ಮಾವೋವಾದಿ) ಕೇಂದ್ರ ಸಮಿತಿ ಸದಸ್ಯ, ಕೇಂದ್ರ ಮಿಲಿಟರಿ ಕಮಿಷನ್ ಮುಖ್ಯಸ್ಥ ಮತ್ತು ಪಿಎಲ್‌ಜಿಎ ಬೆಟಾಲಿಯನ್ 1ರ ಕಮಾಂಡರ್ ಆಗಿದ್ದ ಹಿಡ್ಮಾ ಆಂಧ್ರಪ್ರದೇಶದ ಅಲ್ಲೂರಿ ಸೀತಾರಾಮರಾಜು ಜಿಲ್ಲೆಯ ಮಾರೆಡುಮಿಲ್ಲಿ ಅರಣ್ಯ ಪ್ರದೇಶದಲ್ಲಿ ಗ್ರೇಹೌಂಡ್ಸ್ ಪಡೆಯ ಎನ್ಕೌಂಟರ್‌ನಲ್ಲಿ ಹತನಾದ. ಅವನ ಪತ್ನಿ ಮದಕಂ ರಾಜೆ ಮತ್ತು ನಾಲ್ಕು ಅಂಗರಕ್ಷಕರಾದ ಲಕ್ಮಲ್, ಕಮ್ಲು, ಮಲ್ಲ ಮತ್ತು ದೇವೆ ಸಹ ಹತರಾದರು. ಹಿಡ್ಮಾ ಮಾವೋವಾದಿ ಕೇಂದ್ರ ಸಮಿತಿಯ ಏಕೈಕ ಬುಡಕಟ್ಟು ಸದಸ್ಯನಾಗಿದ್ದ. ಅವನು ಕನಿಷ್ಠ 26 ಪ್ರಮುಖ ದಾಳಿಗಳಿಗೆ ನೇರ ಹೊಣೆಗಾರನಾಗಿದ್ದ ಮತ್ತು 172 ಭದ್ರತಾ ಸಿಬ್ಬಂದಿಯ ಹತ್ಯೆಗೆ ಕಾರಣನಾಗಿದ್ದ. ಅವನ ತಲೆಗೆ 50 ಲಕ್ಷ ರೂ. ಬಹುಮಾನ ಇತ್ತು. 2010ರ ದಂತೆವಾಡ ದಾಳಿ, 2013ರ ಜೀರಮ್ ಘಾಟಿ ದಾಳಿ, 2017ರ ಬುರ್ಕಪಾಲ್ ದಾಳಿ ಮತ್ತು 2021ರ ತೆಕುಲಗುಡೇಮ್ ದಾಳಿಗಳ ಹಿಂದಿನ ಪ್ರಮುಖ ಸೂತ್ರಧಾರನಾಗಿದ್ದ.



ನಗರ ನಕ್ಸಲೀಯರು

ನಗರ ನಕ್ಸಲೀಯರು ಎಂಬ ಪರಿಕಲ್ಪನೆ ಇತ್ತೀಚಿನ ವರ್ಷಗಳಲ್ಲಿ ಪ್ರಮುಖ ಚರ್ಚಾ ವಿಷಯವಾಗಿತ್ತು. ಅಮಿತ್ ಶಾ ಅವರ ಪ್ರಕಾರ, ನಗರ ನಕ್ಸಲೀಯರು ಸಶಸ್ತ್ರ ಮಾವೋವಾದಿಗಳೊಂದಿಗೆ ಮಾತುಕತೆ ನಡೆಸಬೇಕೆಂದು ಒತ್ತಾಯಿಸಿದರು, ಆದರೆ ನಕ್ಸಲ್ ಹಿಂಸಾಚಾರದ ಸಾಮಾನ್ಯ ನಾಗರಿಕ ಬಲಿಪಶುಗಳ ಬಗ್ಗೆ ಕಾಳಜಿ ತೋರಲಿಲ್ಲ. ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) 40 ಕೋಟಿ ರೂ. ಮೌಲ್ಯದ ಆಸ್ತಿ ಮುಟ್ಟುಗೋಲು ಹಾಕಿದರೆ, ಜಾರಿ ನಿರ್ದೇಶನಾಲಯ 12 ಕೋಟಿ ರೂ. ಮುಟ್ಟುಗೋಲು ಹಾಕಿ ನಕ್ಸಲ್‌ವಾದಕ್ಕೆ ಹಣಕಾಸು ಒದಗಿಸುತ್ತಿದ್ದ ಜಾಲಗಳನ್ನು ಛಿದ್ರಗೊಳಿಸಿದೆ.

ಕೇಂದ್ರ ಸರ್ಕಾರದ ಶರಣಾಗತಿ-ಸಹ-ಪುನರ್ವಸತಿ ಯೋಜನೆ

ಸೌಲಭ್ಯ	ವಿವರ
ಹಣಕಾಸು ನೆರವು (ಉನ್ನತ ಶ್ರೇಣಿ)	5 ಲಕ್ಷ ರೂ.
ಹಣಕಾಸು ನೆರವು (ಮಧ್ಯಮ/ಕೆಳ ಶ್ರೇಣಿ)	2.5 ಲಕ್ಷ ರೂ.
ಮಾಸಿಕ ವೇತನ (ವೃತ್ತಿ ತರಬೇತಿ ಅವಧಿ)	10,000 ರೂ. (36 ತಿಂಗಳು)
ವಸತಿ	ಸೂಕ್ತ ಮನೆ ನಿವೇಶನ ಹಂಚಿಕೆ
ಶಿಕ್ಷಣ	ಮಕ್ಕಳ ಶಿಕ್ಷಣಕ್ಕೆ ಉಚಿತ ಸೌಲಭ್ಯ
ಉದ್ಯೋಗ	ವೃತ್ತಿ ತರಬೇತಿ ಮತ್ತು ಕೆಲವು ಪ್ರಕರಣಗಳಲ್ಲಿ ಸರ್ಕಾರಿ ಉದ್ಯೋಗ
ಶಸ್ತ್ರ ಒಪ್ಪಿಸಿದ್ದಕ್ಕೆ ಪ್ರೋತ್ಸಾಹ	ಶಸ್ತ್ರ ಪ್ರಕಾರ ಹೆಚ್ಚುವರಿ ಬಹುಮಾನ
ಕಾನೂನು ನೆರವು	ಉಚಿತ ಕಾನೂನು ಸೇವೆ

ಕೇಂದ್ರ ಗೃಹ ಸಚಿವಾಲಯವು 2022ರ ಆಗಸ್ಟ್‌ನಲ್ಲಿ ಪರಿಷ್ಕರಿಸಿದ ಶರಣಾಗತಿ ಮತ್ತು ಪುನರ್ವಸತಿ ಮಾರ್ಗಸೂಚಿಗಳನ್ನು ಅಧಿಸೂಚಿಸಿತು. ಈ ಯೋಜನೆಯಡಿ ಶರಣಾಗತಿ ಹೊಂದಿದ ನಕ್ಸಲೀಯರಿಗೆ ಈ ಕೆಳಗಿನ ಸೌಲಭ್ಯಗಳನ್ನು ನೀಡಲಾಗುತ್ತದೆ



ಕೆಂಪು ಕಾರಿಡಾರ್‌ನ ಪರಿವರ್ತನೆ

ನಕ್ಸಲ್ ಪೀಡಿತ ಪ್ರದೇಶಗಳ ಅಭಿವೃದ್ಧಿಯು ಸರ್ಕಾರದ ಕಾರ್ಯತಂತ್ರದ ಎರಡನೇ ಪ್ರಮುಖ ಸ್ತಂಭವಾಗಿತ್ತು. 2014ರಿಂದ 2025ರ ನಡುವೆ 12,000 ಕಿ.ಮೀ.ಗೂ ಹೆಚ್ಚು ರಸ್ತೆಗಳನ್ನು ನಕ್ಸಲ್ ಪೀಡಿತ ಪ್ರದೇಶಗಳಲ್ಲಿ ನಿರ್ಮಿಸಲಾಗಿದೆ. ಗಡಿ ರಸ್ತೆ ಸಂಸ್ಥೆ ಐದು ಪ್ರಮುಖ ರಸ್ತೆಗಳು ಮತ್ತು ಆರು ಸೇತುವೆಗಳನ್ನು ನಿರ್ಮಿಸಿದೆ.

ಈ ಅಭಿವೃದ್ಧಿ ಕಾರ್ಯಕ್ರಮಗಳು ನಕ್ಸಲ್‌ವಾದದ ಸಾಮಾಜಿಕ-ಆರ್ಥಿಕ ಬೇರುಗಳನ್ನು ಕತ್ತರಿಸಿವೆ. ಹಿಂದೆ ಬಂದೂಕು ಹಿಡಿಯುತ್ತಿದ್ದ ಯುವಕರು ಈಗ ಶಿಕ್ಷಣ ಮತ್ತು ಉದ್ಯೋಗದ ಸಾಧನಗಳನ್ನು ಹಿಡಿದಿದ್ದಾರೆ ಎಂದು ಗೃಹ ಸಚಿವರು ಹೇಳಿದ್ದಾರೆ.

ಅಭಿವೃದ್ಧಿ ಅಂಶ	ಅಂಕಿಅಂಶ
ರಸ್ತೆ ನಿರ್ಮಾಣ	12,000+ ಕಿ.ಮೀ.
ಮೊಬೈಲ್ ಟವರ್‌ಗಳು	9,000 (2,343 - 4ಜಿಗೆ ಉನ್ನತೀಕರಣ)
ಹೊಸ ಬ್ಯಾಂಕ್ ಶಾಖೆಗಳು	1,000 +
ಎಟಿಎಂಗಳು	937
ಬ್ಯಾಂಕಿಂಗ್ ಪ್ರತಿನಿಧಿಗಳು	38,000
ಅಂಚೆ ಕಚೇರಿಗಳು	9,000
ಐಟಿಐಗಳು	48
ಕೌಶಲ್ಯ ಅಭಿವೃದ್ಧಿ ಕೇಂದ್ರಗಳು	61 (?465 ಕೋಟಿ)
ಪಿಎಂ ಆವಾಸ್ ಯೋಜನೆ (ಮನೆಗಳು)	2,54,045
ಆಧಾರ್ ನೋಂದಣಿ	24..85 ಲಕ್ಷ
ಆಯುಷ್ಮಾನ್ ಕಾರ್ಡ್‌ಗಳು	21.44 ಲಕ್ಷ
ರೈಲ್ವೆ ಸಂಪರ್ಕ (ದಲ್ಲಿರಾಜ್ಹರಾ-ರಾವ್ಘಾಟ್)	65 ಕಿ.ಮೀ.

ಸಂಪಾದಕೀಯ

ಇಂಥ ಆಸೆ ಪ್ರಜಾಪ್ರಭುತ್ವ ವಿರೋಧಿ

ಐಪಿಎಲ್ ಆರಂಭವಾಗಿದೆ. ರಾಜ್ಯ ವಿಧಾನಸಭಾ ಅಧಿವೇಶನ ಮುಗಿದಿದೆ. ಇವೆರಡರ ತುಲನೆಯಿಂದ ಯಾವ ವಿಷಯವನ್ನು ಹೇಳಲಾರಂಭಿಸಬಹುದು ಎಂಬುದು ಕೂಡ ಈಗ ರಾಜ್ಯಕ್ಕೆ ತಿಳಿದಿದೆ! ಕೆಲವು ಶಾಸಕರು ತಮಗೆ ಐಪಿಎಲ್ ಟಿಕೇಟುಗಳನ್ನು ಉಚಿತವಾಗಿ ನೀಡಬೇಕೆಂದು ಇಟ್ಟ ಬೇಡಿಕೆಯನ್ನು ಸರ್ಕಾರ ಈಡೇರಿಸಿದೆ. ಒರ್ವ ಶಾಸಕರಂತೂ ಸರದಿ ಸಾಲಿನಲ್ಲಿ ನಿಂತು ಟಿಕೇಟ್ ಖರೀದಿಸಲು ನಾವೇನು ಸಾಮಾನ್ಯರೇ ಎಂಬ ಪ್ರಶ್ನೆಯನ್ನೇ ಹಾಕಿದ್ದರು. ಅದನ್ನು ಸಂಬಂಧಪಟ್ಟವರು ಪುರಸ್ಕರಿಸಿ ಇದೀಗ ಅಧಿಕಾರದಲ್ಲಿರುವ ರಾಜಕಾರಣಿಗಳೆಲ್ಲರೂ ಸಾಮಾನ್ಯರಲ್ಲ ಎಂದು ಷರಾ ಬರೆದಿದೆ. ಕಳೆದ ಕೆಲ ದಿನಗಳಿಂದ ರಾಜ್ಯದಲ್ಲಿ ಮಾತ್ರವಲ್ಲ, ಇಡೀ ದೇಶದಲ್ಲಿ ಇದು ಚರ್ಚೆಯಾಗುತ್ತಿರುವ ಸಂಗತಿ.

ಹಲವು ಆಯಾಮಗಳ ಮೂಲಕ ಈ ಪ್ರಕರಣವನ್ನು ಅವಲೋಕಿಸಬೇಕಾಗಿದೆ. ಏಕೆಂದರೆ ಐಪಿಎಲ್ ಎಂದರೆ ಇಂದು ಕೇವಲ ಕ್ರಿಕೇಟ್ ಆಗಿ ಉಳಿದಿಲ್ಲ. ಶ್ರೀಮಂತಿಕೆ ಮತ್ತು ಮನರಂಜನೆಗಳನ್ನು ಬಿಟ್ಟರೆ ಅದರಲ್ಲಿ ಉಳಿದಿದ್ದೇನೂ ಇಲ್ಲ. ಕ್ರೀಡೆಯೊಂದರಲ್ಲಿ ಇನ್ನು ಇರಬೇಕಾದುದು ತಾನೇ ಏನು ಪ್ರಶ್ನೆ ಇಲ್ಲಿ ಹುಟ್ಟಬಹುದು.



ಕ್ರೀಡೆಯನ್ನು ಮನರಂಜನಾ ಕ್ಷೇತ್ರವಾಗಿ ಪರಿವರ್ತಿಸಿದ ಮೇಲೆ ಅಲ್ಲಿ ಕ್ರೀಡಾ ಮೌಲ್ಯಗಳು ಉಳಿದಿರುತ್ತವೆಯೇ ಎಂಬ ಉತ್ತರ ಅನೇಕರಿಗೆ ಹಿಡಿಸದಿರಬಹುದು. ಕ್ರೀಡೆಯಲ್ಲೂ ಮೌಲ್ಯಗಳೇ ಎಂದು ಕೂಡ ಪ್ರಶ್ನಿಸಬಹುದು. ಅದಕ್ಕೂ ಉತ್ತರ ರಾಜ್ಯ ವಿಧಾನಮಂಡಲದಲ್ಲಿ ಚರ್ಚೆಯಾದ ಟಿಕೇಟ್ ಪ್ರಕರಣ ಮತ್ತು ಶಾಸಕರಿಗೆ ಮಂಜೂರಾಗುವ ಉಚಿತ ಟಿಕೇಟ್! ಈ ಪ್ರಕರಣವನ್ನು ನೋಡಬೇಕಾದ ಮತ್ತೊಂದು ಕೋನವೆಂದರೆ ಇಂಥ ಕ್ರೀಡಾಕೂಟಕ್ಕೆ ಉಚಿತ ಟಿಕೇಟುಗಳನ್ನು ಕೇಳುವುದೆಷ್ಟು ಸರಿ ಎನ್ನುವುದು. ಐಪಿಎಲ್ ಎಂದರೆ ಶಾಸಕರೆಲ್ಲರೂ ಕಡ್ಡಾಯವಾಗಿ ನೋಡಬೇಕಾದುದಲ್ಲ. ಆದರೆ ಶಾಸಕರು ಕೂಡ ಮನುಷ್ಯರೆ. ಸಮಾಜಕ್ಕೆ ಐಪಿಎಲ್‌ನ ಹುಚ್ಚು ಇರುವಂತೆ ಶಾಸಕರಿಗೆ ಇರಬಾರದು ಎಂದೇನಿಲ್ಲ. ಆದರೆ ಶಾಸಕರಾದ ಒಂದೇ ಕಾರಣಕ್ಕೆ ಟಿಕೇಟ್ ಅಥವಾ ಪಾಸ್ ಅನ್ನು ಕ್ರಿಕೇಟ್ ಸಂಸ್ಥೆಗಳು ಉಚಿತವಾಗಿ ನೀಡಬೇಕೇ ಎನ್ನುವುದು ಎನ್ನುವುದು ಪ್ರಶ್ನೆ. ಶಾಸಕರೇ ಆಸೆಪಟ್ಟ ಮೇಲೆ ಕೊಡಬಾರದೇ ಎನ್ನುವುದು ಸಂಸ್ಥೆಗಳ ಉತ್ತರವಾಗಬಹುದು. ಅಂತಿಮವಾಗಿ ಅದು ಮುಟ್ಟುವುದು ಶಾಸಕರ ಮನಸ್ಥಿತಿಯೆಡೆಗೆ. ಒಂದೆಡೆ ಸಂವಿಧಾನದ ಸಮಾನತೆಯ ಹಕ್ಕುಗಳನ್ನು ಪುಂಖಾನುಪುಂಖವಾಗಿ ಉದುರಿಸುತ್ತಾ ರಾಜಕಾರಣಕ್ಕೆ ಬರುವ ಮಂದಿಯ ಗುಣಮಟ್ಟ ಈ ಹಂತಕ್ಕೆ ಇಳಿಯಿತೇ ಎನ್ನುವಲ್ಲಿಯವರೆಗೆ ಪ್ರಕರಣವನ್ನು ವ್ಯಾಖ್ಯಾನಿಸಬಹುದು. ಅದರಲ್ಲೂ ಸರದಿ ಸಾಲಿನಲ್ಲಿ ನಿಲ್ಲಲು ನಾವೇನು ಜನಸಾಮಾನ್ಯರೇ ಎನ್ನುವ ಹೇಳಿಕೆ ನೇರವಾಗಿ ಪ್ರಜಾಪ್ರಭುತ್ವ ವಿರೋಧಿ. ಪ್ರಜೆಗಳೇ ಪ್ರಭುಗಳು ಎನ್ನುವುದು ಪ್ರಜಾಪ್ರಭುತ್ವದ ಆಶಯ. ಆದರೆ ಇಂದಿನ ರಾಜಕಾರಣದಲ್ಲಿ ಶಾಸಕರೇ ತಾವು ಜನಸಾಮಾನ್ಯರಿಗಿಂತ ಭಿನ್ನ ಎಂದು ಸದನದಲ್ಲೇ ಹೇಳಿಕೊಳ್ಳುತ್ತಾರೆಂದರೆ ಅವರ ಮಾನಸಿಕತೆ ಹೇಗಿರಬಹುದು? ರಾಜಕಾರಣದ ಮೌಲ್ಯಗಳು ಎಷ್ಟು ಉಳಿದಿರಬಹುದು? ಆಶ್ಚರ್ಯವೆಂದರೆ ಇಂಥ ಮಾನಸಿಕತೆ ಎಲ್ಲಾ ರಾಜಕೀಯ ಪಕ್ಷಗಳಲ್ಲೂ ವ್ಯಾಪಿಸಿರುವುದು. ರಾಜಕಾರಣಕ್ಕೆ ಬರುವಾಗಲೇ ಸಂವೇದನೆಯನ್ನು, ಬುದ್ದಿಮಟ್ಟವನ್ನು ಗಂಟುಕಟ್ಟಿ ಇಟ್ಟುಬರಬೇಕು ಎಂಬ ಮಾತಿಗೆ ಇಂಥ ಪ್ರಕರಣಗಳು ಬಲನೀಡುತ್ತವೆ. ಏನೇ ಆದರೂ ಇಂಥ ಮನಸ್ಥಿತಿಯನ್ನು ಎಲ್ಲಾ ಪಕ್ಷಗಳು ಶಿಸ್ತಿನ ಕ್ರಮದ ಮೂಲಕ ಹತ್ತಿಕ್ಕಬೇಕಾಗಿದೆ.

ಸಿಲಿಂಡರ್ ನಿರ್ಭರದಿಂದ ಆತ್ಮನಿರ್ಭರವಾಗುವತ್ತ



ಖಾರಾ ಬಾತ್
• ವಿನಾಯಕ ಭಟ್ಟ ಮೂರೂರು
vakradanta@gmail.com

ಮೊದಲು ಸರ್ಕಾರದ ಯೋಜನೆಯೂ ಇತ್ತು. ಅದರ ಜತೆಗೆ ಗ್ರಾಮೀಣ ಪ್ರದೇಶದ ಜನರೂ ಬೇರೆ ಉರುವಲುಗಿಂತ ಗ್ಯಾಸ್ ಉತ್ತಮ ಎಂದು ಗೋಬರ್ ಗ್ಯಾಸ್ ತಯಾರಿಸಿಕೊಳ್ಳುವ ಗ್ಯಾಸ್ ಪ್ಲ್ಯಾಂಟ್‌ಗಳನ್ನು ಮನೆಗಳಲ್ಲೇ ಹೊಂದಿದ್ದರು. ಆಗ ಯಾರೂ ಈಗಿನ ರೀತಿ ಗ್ಯಾಸ್ ಸಿಲಿಂಡರ್ ಮೇಲೆ ಅವಲಂಬಿತರಾಗಿರಲಿಲ್ಲ. ಕಟ್ಟಿಗೆ ಒಲೆ ಇತ್ತು. ಅದರ ನಂತರ ಕಟ್ಟಿಗೆ ಆಧಾರಿತ, ಆದರೆ ಸುಧಾರಿತ ಅಸ್ತ್ರ ಒಲೆ ಬಂತು. ಅದರಿಂದ ಹೊಗೆಯ ಸಮಸ್ಯೆಯೂ ಅಷ್ಟು ಇಲ್ಲವಾಗಿತ್ತು. ಇನ್ನೂ ಕೆಲವು ಹೊಸ ಮಾದರಿಯ ಒಲೆಗಳು ಬರುತ್ತಿದ್ದವು.

ಆದರೆ ನಮ್ಮದೇ ಸರ್ಕಾರಗಳು ಜನರು ಗ್ಯಾಸ್ ಸಿಲಿಂಡರ್ ಮೇಲೆ ಅವಲಂಬಿತವಾಗುವಂತೆ ಮಾಡಿದವು. ಪರಿಸರಕ್ಕೆ ಹಾನಿ, ಇನ್ನೊಂದು ಮತ್ತೊಂದು ಕಾರಣಕ್ಕೆ ಕಟ್ಟಿಗೆ ಬೇಡ, ಹೊಗೆ ಆರೋಗ್ಯಕ್ಕೆ ಹಾನಿಕರ ಎಂದೆಲ್ಲ ಹೇಳಿ ಸರ್ಕಾರಗಳೇ ನಮ್ಮ ಪಾರಂಪರಿಕ ಇಂಧನ ಪದ್ಧತಿ ಬಿಡುವಂತೆ ಮಾಡಿದವು. ಕಟ್ಟಿಗೆ ಒಲೆ ಬಳಸುವುದು ಅಂದರೆ ಹಿಂದುಳಿದಿರುವುದರ ಸಂಕೇತ, ಗ್ಯಾಸ್ ಬಳಸಿದರೆ ಅದು ಆಧುನಿಕತೆಯ, ಅಭಿವೃದ್ಧಿಯ ಸಂಕೇತ ಎಂದು ಬಿಂಬಿಸಿದವು.

ಮನೆಗೆ ಮೊದಲು ಒಂದು ಸಿಲಿಂಡರ್ ಇತ್ತು. ಗ್ರಾಮಾಂತರ ಪ್ರದೇಶಗಳಲ್ಲಿ ಗ್ಯಾಸ್ ಸಿಲಿಂಡರ್ ಸಿಗುವುದೇ ಕಷ್ಟವಿತ್ತು. ಸಿಕ್ಕರೂ ದರ ಜಾಸ್ತಿ, ಅದನ್ನು ಪೇಟೆಯಿಂದ ತರುವುದು ಕಷ್ಟ ಅಥವಾ ತಂದವನಿಗೂ ಹೆಚ್ಚುವರಿ ಹಣ ನೀಡಬೇಕು ಎಂಬೆಲ್ಲ ಸಮಸ್ಯೆ ಇತ್ತು. ಒಂದು ಸಿಲಿಂಡರ್ ಇದ್ದಾಗ ಮತ್ತು ಸಿಗುವುದು ಕಷ್ಟ ಇದ್ದಾಗ ಜನ ಗೋಬರ್ ಗ್ಯಾಸ್ ಮತ್ತು ಇತರ ಇಂಧನ ಮೂಲಗಳನ್ನು ಸಂಪೂರ್ಣ ಬಿಟ್ಟಿರಲಿಲ್ಲ. ಯಾಕೆಂದರೆ ಸಿಲಿಂಡರ್ ಖಾಲಿಯಾದರೆ, ಬದಲಿ ವ್ಯವಸ್ಥೆ ಇರಲೇಬೇಕಿತ್ತು. ಬಹುಶಃ ಅಟಲ್ ಬಿಹಾರಿ ವಾಜಪೇಯಿ ಅವರು ಪ್ರಧಾನಿಯಾಗಿದ್ದಾಗ ಇರಬೇಕು, ಮನೆಗೆ ಎರಡು ಗ್ಯಾಸ್ ಸಿಲಿಂಡರ್ ಕೊಟ್ಟರು. ಸಿಲಿಂಡರ್ ಪೂರೈಕೆ ಕೂಡ ಭಾರೀ ಪ್ರಮಾಣದಲ್ಲಿ ಹೆಚ್ಚಿತು. ಯಾರಿಗೆ ಯಾವಾಗ ಕೇಳಿದರೂ ಸಿಲಿಂಡರ್ ಸಿಗುತ್ತಿತ್ತು. ನೀವು ಖಾಲಿಯಾದ ಸಿಲಿಂಡರ್ ಕೊಟ್ಟು, ತುಂಬಿದ ಸಿಲಿಂಡರ್ ತರುವಷ್ಟು ಸುಲಭವಾಗಿ ಸಿಲಿಂಡರ್ ಸಿಗಲಾರಂಭಿಸಿತು.



ಆಗ ಜನರಿಗೆ ಬೆಳಗ್ಗೆದ್ದು ಸೆಗಣಿ ಕರಡಿ, ಆಮೇಲೆ ಅದರ ಸ್ಲರಿ ತೆಗೆದು ತೋಟಕ್ಕೊ, ಇನ್ನೆಲ್ಲೋ ಹಾಕುವ ಕೆಲಸಕ್ಕಿಂತ ಸೀದಾ ಅಂಗಡಿಯಿಂದ ಸಿಲಿಂಡರ್ ತರುವುದೇ ಸುಲಭ ಅನ್ನಿಸಲಾರಂಭಿಸಿತು. ಸರ್ಕಾರ ಸಿಲಿಂಡರ್‌ಗೆ ಸಬ್ಸಿಡಿಯನ್ನೂ ನೀಡುತ್ತಿತ್ತು. ಅಷ್ಟು ಸುಲಭವಾಗಿ ಸಿಕ್ಕರೆ ಯಾರಿಗೆ ಬೇಡ. ಜನರೆಲ್ಲ ಸಿಲಿಂಡರ್ ಮೊರೆ ಹೋದರು.

ಹಾಗೆ ನೋಡಿದರೆ ಆಗ ಗ್ರಾಮೀಣ ಭಾರತ ನಿಜವಾಗಿ ಆತ್ಮನಿರ್ಭರವಾಗಿತ್ತು. ಹಾಗಿದ್ದವರನ್ನು ಸಿಲಿಂಡರ್ ಅವಲಂಬಿಯಾಗಿ ಮಾಡಿದ್ದೇ ನಮ್ಮ ವ್ಯವಸ್ಥೆ. ಈಗ ಬಹುತೇಕ ಜನ ಸಿಲಿಂಡರ್ ದಾಸರಾಗಿಯಾಗಿದೆ. ಬಹುಶಃ ಇದ್ದವರು ಕೂಡ ಗೋಬರ್ ಗ್ಯಾಸ್ ಬಳಸುವುದು ಬಿಟ್ಟು ದಶಮಾನಗಳೇ ಕಳೆದಿವೆ. ಹಾಗಾಗಿ ಗೋಬರ್ ಗ್ಯಾಸ್ ಪ್ಲ್ಯಾಂಟ್ ಹಾಳಾಗಿದೆ. ಒಲೆ ಅಳಿಸಿಹಾಕಿಯಾಗಿದೆ. ಈಗಿನ ತಲೆಮಾರಿನವರಿಗೆ ಸೀಮೆಎಣ್ಣೆ ಇಲ್ಲದೆ ಬೆಂಕಿ ಹಚ್ಚಲೇ ಬರವುದಿಲ್ಲ, ಒಲೆ ಊದಿ ಬೆಂಕಿ ಹೊತ್ತಿಸಬೇಕೆಂದರೆ ಅತ್ಯಂತ ಕಷ್ಟದ ಕೆಲಸ ಅದಕ್ಕಿಂತ ಸ್ವಿಗ್ಗಿ- ಜೊಮೆಟೊನೆ ಸುಲಭ ಅನ್ನಿಸಿಬಿಡುತ್ತದೆ.

ಈಗ ಅಮೆರಿಕ-ಇರಾನ್ ಯುದ್ಧದಿಂದಾಗಿ ದಿಢೀರನೆ ಸಿಲಿಂಡರ್ ಗ್ಯಾಸ್ ಸಮಸ್ಯೆ ಆರಂಭವಾಗಿದೆ. ನಾವೆಷ್ಟೇ ಆತ್ಮನಿರ್ಭರ ಅಂದರೂ, ನಾವೆಷ್ಟು ಅವಲಂಬಿತರಾಗಿದ್ದೇವೆ ಎಂಬುದರ ಅರಿವಾಗಿದೆ. ಈಗ ಸಿಲಿಂಡರ್ ಗ್ಯಾಸ್ ಇಲ್ಲವೆಂದರೆ ನಮಗೆ ಜೀವನವೇ ನಡೆಯುವುದು ಕಷ್ಟವೇನೊ ಎಂಬ ರೀತಿಯಲ್ಲಿ ನಾವು ಆತಂಕಪಡುತ್ತಿದ್ದೇವೆ. ನಾವು ಬೇಕಾಬಿಟ್ಟಿಯಾಗಿ ಗ್ಯಾಸ್ ಬಳಸುವುದನ್ನು ರೂಢಿಸಿಕೊಂಡು, ಮನೆಯಲ್ಲಿ ಸದಾ ಇನ್ನೊಂದು ತುಂಬಿದ ಸಿಲಿಂಡರ್ ಇಟ್ಟುಕೊಂಡು ರೂಢಿಯಾಗಿರುವುದರಿಂದ ಒಂದು ಸಿಲಿಂಡರ್ ಖಾಲಿಯಾಗಿ ನಾಲ್ಕು ದಿನಕ್ಕೆ ನಮಗೆ ಆತಂಕ ಕಾಡಲಾರಂಭಿಸುತ್ತದೆ.

ಈಗ ಯುದ್ಧದಿಂದ ಕಷ್ಟವಾಗುತ್ತಿದ್ದರೂ, ಇದು ನಮಗೆ ಹೊಸ ಆತ್ಮನಿರ್ಭರದ ದಾರಿ ತೋರಿಸಲು ಕಾರಣವಾಗಬಹುದೇ ಎಂಬ ಯೋಚನೆ ಬರುತ್ತಿದೆ. ಕೊರೋನಾ ಕಾಲದಲ್ಲಿ ನಾವು ಸಾಕಷ್ಟು ಹೊಸ ಸಂಗತಿಗಳನ್ನು ರೂಢಿಸಿಕೊಂಡಿದ್ದೇವೆ. ಏನೇನೊ ಹೊಸ ಮಾರ್ಗ ಕಂಡುಕೊಂಡಿದ್ದೇವೆ. ಈಗ ಅಡುಗೆ ಅನಿಲಕ್ಕಾಗಿ ಹೊಸ ಹೊಸ ಆವಿಷ್ಕಾರಗಳನ್ನು ಬಳಸಿಕೊಳ್ಳುವ ಮೂಲಕ ನಾವು ಆತ್ಮನಿರ್ಭರ ಮನೆಯಾಗುವತ್ತ ಗಮನಹರಿಸಲು ಸಕಾಲವೇನೊ.

ಹತ್ತಿಪ್ಪತ್ತು-ಮೂವತ್ತು ವರ್ಷ ಹಿಂದಿನ ತಂತ್ರಜ್ಞಾನಕ್ಕೆ ಹೋಲಿಸಿದರೆ ಈಗ ತುಂಬಾ ಬದಲಾವಣೆಗಳಾಗಿವೆ. ಆಗ ಗೋಬರ್ ಗ್ಯಾಸ್ ಪ್ಲ್ಯಾಂಟ್ ಮಾಡಬೇಕೆಂದರೆ ತುಂಬಾ ಜಾಗ ಬೇಕಿತ್ತು. ಕೆಲಸವೂ ಅಷ್ಟೇ ಇತ್ತು. ಆದರೆ ಈಗ ಬದಲಾದ ತಂತ್ರಜ್ಞಾನದ ಸಹಾಯದಿಂದ ಸಣ್ಣ ಸಣ್ಣ ಗ್ಯಾಸ್ ಪ್ಲ್ಯಾಂಟ್‌ಗಳನ್ನು ಮಾಡಲು ಸಾಧ್ಯವಿದೆ. ಗೋಬರ್ ಗ್ಯಾಸ್ ಅಷ್ಟೇ ಅಲ್ಲ, ಬಯೋ ಗ್ಯಾಸ್ ಪ್ಲ್ಯಾಂಟ್‌ಗಳನ್ನು ನಾವೇ ನಮ್ಮ ಮನೆಗಳಲ್ಲಿ ನಿರ್ಮಿಸಿಕೊಳ್ಳಲು ಸಾಧ್ಯವಿದೆ. ನಗರ ಪ್ರದೇಶದಲ್ಲಿ ದಿನವೂ ಸಾವಿರಾರು ಟನ್ ಕಸ ಸೃಷ್ಟಿಯಾಗುತ್ತದೆ. ನಾವೇ ನಮ್ಮ ಮನೆಗಳಲ್ಲಿ ದಿನವೂ ಒಣಕಸ ಮತ್ತು ಹಸಿ ಕಸ ಬೇರ್ಪಡಿಸಿ, ಸ್ಥಳೀಯ ಸಂಸ್ಥೆಯ ಕಸ ಸಂಗ್ರಾಹಕರಿಗೆ ನೀಡುತ್ತೇವೆ. ಅಷ್ಟೆಲ್ಲ ಕಸವನ್ನು ಇಟ್ಟುಕೊಂಡು ಸ್ಥಳೀಯ ಸಂಸ್ಥೆಗಳೇ ಬಯೋ ಗ್ಯಾಸ್ ಪ್ಲ್ಯಾಂಟ್ ತಯಾರಿಸಿ, ಅದನ್ನು ಅಗತ್ಯ ಇರುವ ಹೊಟೇಲ್‌ಗಳಿಗೆ ಅಥವಾ ಸಮೀಪದ ಮನೆಗಳಿಗೆ ಪೈಪ್ ಮೂಲಕ ಪೂರೈಕೆ ಮಾಡಬಹುದೇನೊ, ಅದು ದೊಡ್ಡ ಯೋಜನೆಗಳಾದವು. ಈಗ ಕನಿಷ್ಠ 20,000 ರೂಪಾಯಿಯಿಂದ ಒಂದು ಲಕ್ಷದ ಒಳಗೆ ಮನೆ, ತೋಟದ ಮನೆಗಳಿಗೆ ಅಗತ್ಯವಿರುವಷ್ಟು ಗಾತ್ರದ ಸಿದ್ಧವಿರುವ ಬಯೋ ಗ್ಯಾಸ್ ಪ್ಲ್ಯಾಂಟ್‌ಗಳು ಲಭ್ಯವಿದೆ. ಅಮೆಜಾನ್‌ನಂತಹ ತಾಣಗಳಲ್ಲೂ ಸಿಗುತ್ತಿವೆ. ಇವುಗಳನ್ನು ಬಳಸಿ ನಮ್ಮ ನಮ್ಮ ಮನೆಯ ಹಸಿ ಕಸ ಜತೆಗೆ ಇದಕ್ಕೆ ಬಳಕೆಯಾಗಬಲ್ಲ ಒಣಕಸವನ್ನು ಬಳಸಿ, ನಾವೇ ನಮ್ಮ ಮನೆಗೆ ಬೇಕಾಗುವಷ್ಟು ಬಯೋ ಗ್ಯಾಸ್ ತಯಾರಿಸಿಕೊಳ್ಳಲು ಸಾಧ್ಯವಿದೆ. ಅದಕ್ಕೆ ಗುಂಡಿ ತೋಡಿ ಮುಚ್ಚಬೇಕಾದ ಅಗತ್ಯ ಕೂಡ ಈಗ ಇಲ್ಲ, ಕಸದಬುಟ್ಟಿ ಇಟ್ಟಂತೆ ಇಟ್ಟು ಬಯೋ ಗ್ಯಾಸ್ ತಯಾರಿಸಿಕೊಳ್ಳುವ ಟ್ಯಾಂಕ್‌ಗಳು ಕೂಡ ಬಂದಿವೆ.

> ರಾಜ್ಯದಲ್ಲಿ ಅಥವಾ ದೇಶದಲ್ಲಿ ಯಾರಿಗೆಲ್ಲ ಸಾಧ್ಯವಿದೆಯೊ ಅವರೆಲ್ಲ ಈ ರೀತಿಯ ಬಯೋ ಗ್ಯಾಸ್ ಪ್ಲ್ಯಾಂಟ್‌ಗಳನ್ನು ಅಳವಡಿಸಿಕೊಂಡರೆ, ನಾವೆಲ್ಲ ಗ್ಯಾಸ್ ಸಿಲಿಂಡರ್ ಬಳಕೆಯನ್ನು ಕನಿಷ್ಠ ಅರ್ಧದಷ್ಟು ಕಡಿಮೆ ಮಾಡಲು ಸಾಧ್ಯವಿದೆ.

ಯಾವ್ಯಾವುದನ್ನೋ ಉಚಿತವಾಗಿ ಕೊಡುವ ಸರ್ಕಾರ, ಗ್ಯಾಸ್ ಸಿಲಿಂಡರಿಗೆ ಸಬ್ಸಿಡಿ ಕೊಡುವ ಸರ್ಕಾರ, ಈ ರೀತಿಯ ಸಣ್ಣ ಸಣ್ಣ ಮನೆ ಬಳಕೆಯ ಬಯೋ ಗ್ಯಾಸ್ ಪ್ಲ್ಯಾಂಟ್‌ಗಳನ್ನು ಹಾಕಿಕೊಳ್ಳಲು ಜನರಿಗೆ ಪ್ರೋತ್ಸಾಹ ನೀಡಬಹುದು. ಈಗ ಗ್ಯಾಸ್ ಸಿಗುತ್ತಿಲ್ಲ ಎಂದು ಕೇಂದ್ರ ಸರ್ಕಾರದ ಮೇಲೆ ಆರೋಪ ಮಾಡುತ್ತ, ಅದರಲ್ಲಿ ಹೇಗೆ ಲಾಭ ಮಾಡಿಕೊಳ್ಳಬಹುದು ಎಂದು ಪ್ರಯತ್ನಿಸುವ ಬದಲು, ನಮ್ಮ ರಾಜ್ಯದಲ್ಲಿ ಇನ್ನು ಮುಂದೆ ಯಾವುದೇ ಕಾರಣಕ್ಕೂ ಗ್ಯಾಸ್ ಕೊರತೆ ಆಗದ ಹಾಗೆ ನಾವೇನು ಮಾಡಬಹುದು ಎಂದು ಯಾಕೆ ಯೋಚಿಸಬಾರದು?

ವಿಶೇಷವಾಗಿ ನಗರದಿಂದ ಹೊರಗೆ ಇರುವ ಹೊಟೇಲ್‌ಗಳಲ್ಲಿ ಯಾರಿಗೆಲ್ಲ ಸಾಧ್ಯವಿದೆಯೊ ಅವರೆಲ್ಲ ಬಯೋ ಗ್ಯಾಸ್ ಪ್ಲ್ಯಾಂಟ್ ಹಾಕಿಕೊಳ್ಳಬಹುದು. ಹೊಟೇಲ್‌ಗಳಲ್ಲಂತೂ ಹಸಿ ಕಸ, ಆಹಾರ ತ್ಯಾಜ್ಯ ವಿಪರೀತವಾಗಿರುತ್ತದೆ. ಅದನ್ನು ವಿಲೇವಾರಿ ಮಾಡುವ ವ್ಯವಸ್ಥೆಗೆ ದುಡ್ಡು ಕೊಡುವ ಬದಲು, ಅದೇ ಹಣದಲ್ಲಿ ಬಯೋಗ್ಯಾಸ್ ಪ್ಲ್ಯಾಂಟ್ ನಿರ್ಮಿಸಿಕೊಂಡು, ಆ ಮೂಲಕ ಗ್ಯಾಸ್ ಖರ್ಚನ್ನು ಉಳಿಸಲು ಸಾಧ್ಯವಿದೆ. ಅಂತಹ ಕೆಲಸಕ್ಕೆ ಸರ್ಕಾರವೂ ಪ್ರೋತ್ಸಾಹ ನೀಡಿದರೆ, ಆಗ ಸಹಜವಾಗಿ ಉದ್ಯಮಿಗಳು ಅದನ್ನು ಬೇಗ ಅಳವಡಿಸಿಕೊಳ್ಳುತ್ತಾರೆ.

ರಾಜ್ಯದಲ್ಲಿ ಅಥವಾ ದೇಶದಲ್ಲಿ ಯಾರಿಗೆಲ್ಲ ಸಾಧ್ಯವಿದೆಯೊ ಅವರೆಲ್ಲ ಈ ರೀತಿಯ ಬಯೋ ಗ್ಯಾಸ್ ಪ್ಲ್ಯಾಂಟ್‌ಗಳನ್ನು ಅಳವಡಿಸಿಕೊಂಡರೆ, ನಾವೆಲ್ಲ ಗ್ಯಾಸ್ ಸಿಲಿಂಡರ್ ಬಳಕೆಯನ್ನು ಕನಿಷ್ಠ ಅರ್ಧದಷ್ಟು ಕಡಿಮೆ ಮಾಡಲು ಸಾಧ್ಯವಿದೆ. ಸಂಪೂರ್ಣ ಬಯೋ ಗ್ಯಾಸ್‌ನಿಂದಲೇ ನಮ್ಮ ಜೀವನ ನಡೆಯದೇ ಇರಬಹುದು. ಆದರೆ ಸಿಲಿಂಡರ್ ಮೇಲಿನ ಅವಲಂಬನೆಯನ್ನು ಅರ್ಧದಷ್ಟು ಕಡಿಮೆ ಮಾಡಲು ಖಂಡಿತ ಸಾಧ್ಯವಿದೆ. ದೇಶಾದ್ಯಂತ ಅರ್ಧದಷ್ಟು ಸಿಲಿಂಡರ್ ಬಳಕೆ ಕಡಿಮೆಯಾದರೆ ನಾವು-ನಮ್ಮ ದೇಶ ಅದೆಷ್ಟು ಆತ್ಮನಿರ್ಭರವಾಗಬಹುದು ನೀವೇ ಯೋಚಿಸಿ.

ಭಾಷೆ-ಅಂಕಗಳ ತೂಗುಯ್ಯಾಲೆ

▸ ಡಾ. ಮೈತ್ರಿ ಭಟ್, ವಿಟ್ಲ



ಒಂದು ದೇಶ ಅಥವಾ ರಾಜ್ಯದ ಅಭಿವೃದ್ಧಿಯ ಸೂಚಕವಾಗಿ ರಸ್ತೆ, ಆರೋಗ್ಯ, ನೀರಾವರಿ, ಮೂಲಸೌಕರ್ಯ ಸೇರಿದಂತೆ ವಿವಿಧ ಅಂಶಗಳಿದ್ದರೂ ಭವಿಷ್ಯವನ್ನು ನಿರ್ಧರಿಸುವುದು ಶಿಕ್ಷಣ ಕ್ಷೇತ್ರವೇ ಆಗಿದೆ. ಈ ಶಿಕ್ಷಣದ ತಳಹದಿ ಭಾಷೆಯೇ ಆಗಿದೆ. ಮಾತೃಭಾಷೆಯಲ್ಲಿ ಶಿಕ್ಷಣ ನೀಡುವುದು ವಿದ್ಯಾರ್ಥಿಗಳಿಗೆ ಕಲಿಕೆಗೆ ಸಹಕಾರಿ ಎಂದೂ ಹೇಳಲಾಗಿದೆ. ಮಾತ್ರವಲ್ಲ, ಯಾವ ಸರಕಾರವು ಶಿಕ್ಷಣಕ್ಕೆ ಒತ್ತು ನೀಡುವುದೋ ಆಗ ಆ ಪ್ರದೇಶದ ಭವಿಷ್ಯ ಉಜ್ವಲವಾಗಿರುತ್ತದೆ ಎಂದೇ ಭಾವಿಸಲಾಗಿದೆ. ಹೀಗಿರುವಾಗ ಶಿಕ್ಷಣ ಕ್ಷೇತ್ರದಲ್ಲಿ ತೆಗೆದುಕೊಳ್ಳುವ ನಿರ್ಧಾರಗಳು ಭವಿಷ್ಯ ನಿರ್ಧಾರಕಗಳು ಆಗಿರುವುದನ್ನು ಮನಗಂಡು ಯಾರೇ ಆಗಲಿ, ಯಾವ ಸರಕಾರವೇ ಆಗಲಿ ಯಾವುದೇ ಬದಲಾವಣೆ ಮಾಡುವ ಮೊದಲು ವಿವಿಧ ಮಗ್ಗುಲುಗಳಲ್ಲಿ, ಹತ್ತಾರು ಆಯಾಮದಲ್ಲಿ ಆಲೋಚಿಸದೇ ಮುಂದುವರಿಯುವುದು ಸರಿಯಲ್ಲ. ಆದರೆ ಅದೇಕೋ ನಮ್ಮ ಕರ್ನಾಟಕದಲ್ಲಿ ಶಿಕ್ಷಣ ಇಲಾಖೆಯು ತರಾತುರಿಯಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಆರಂಭವಾದ ಮೇಲೆ ಎಂಬಂತೆ ತೆಗೆದುಕೊಂಡ ತೀರ್ಮಾನವೊಂದು ವಿದ್ಯಾರ್ಥಿಗಳನ್ನಷ್ಟೇ ಅಲ್ಲದೇ ಇಡೀ ರಾಜ್ಯವನ್ನೇ ಗೊಂದಲಕ್ಕೀಡು ಮಾಡಿದೆ. ಇಲ್ಲಿ ಅಧ್ಯಾಪಕರ ಆತಂಕ ಒಂದು ಬಗೆಯದಾದರೆ, ವಿದ್ಯಾರ್ಥಿಗಳ ಆತಂಕ ಮತ್ತೊಂದು ಬಗೆಯದು.

ಈಗಾಗಲೇ ಶಿಕ್ಷಣ ಇಲಾಖೆಯು ಮಕ್ಕಳನ್ನು ಒಂದನೇ ತರಗತಿಗೆ ಸೇರಿಸಲು ಮಗುವಿಗೆ ಕಡ್ಡಾಯವಾಗಿ ಆರು ವರ್ಷವಾಗಿರಬೇಕು ಎನ್ನುವ ನಿಯಮದ ಬದಲು 60 ದಿನಗಳ ವಿನಾಯಿತಿಯನ್ನು ಪ್ರಸಕ್ತ ಶೈಕ್ಷಣಿಕ ವರ್ಷಕ್ಕೆ ಸೀಮಿತಗೊಳಿಸಿ ತೀರ್ಮಾನಿಸಿದ್ದು, ಮುಂದಿನ ಶೈಕ್ಷಣಿಕ ವರ್ಷದ ವೇಳೆಗೆ ಅದಕ್ಕೆ ಪರಿಹಾರ ಕಂಡುಕೊಳ್ಳುವುದಾಗಿ ಹೇಳಿಕೆ ನೀಡಿದ ಕುರಿತ ಪರ-ವಿರೋಧದ ಚರ್ಚೆ ಮುಗಿಯುವ ಮೊದಲೇ, ತರಾತುರಿಯಲ್ಲಿ ಎಂಬಂತೆ ತುರ್ತು ಸುದ್ದಿಗೋಷ್ಠಿ ಕರೆದ ಶಿಕ್ಷಣ ಸಚಿವರು ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶದಲ್ಲಿ ತೃತೀಯ ಭಾಷೆಗೆ ಅಂಕವನ್ನು ನೀಡುವ ಬದಲು ಗ್ರೇಡಿಂಗ್ ನೀಡಲಾಗುವುದು ಎಂದು ಹೇಳಿದರು. ವಿದ್ಯಾರ್ಥಿಗಳ ಮೇಲಿನ ಒತ್ತಡದ ಹೊರೆಯನ್ನು ತಗ್ಗಿಸುವ ಹಾಗೂ ಕರ್ನಾಟಕದಲ್ಲಿ ಹಿಂದಿ ಹೇರಿಕೆಯನ್ನು ತಡೆಯುವ ಉದ್ದೇಶದಿಂದ ಎಂಬಂತೆ ಅವರು ನೀಡಿದ ಈ ಹೇಳಿಕೆ ವಿದ್ಯಾರ್ಥಿಗಳಿಗೂ ಅಧ್ಯಾಪಕರಿಗೂ ಚಡಪಡಿಕೆ ಉಂಟುಮಾಡಿದೆ.

ನಮ್ಮ ಸರಕಾರ ಮತ್ತು ಶಿಕ್ಷಣ ಇಲಾಖೆ ಅದೇಕೆ ಇಂತಹ ಆತುರದ ನಿರ್ಧಾರ ತೆಗೆದುಕೊಳ್ಳಲು ಮುಂದಾಗುವುದೋ ಅರ್ಥವಾಗದ್ದು. ವಿದ್ಯಾರ್ಥಿಗಳ ಭವಿಷ್ಯ, ಶಿಕ್ಷಣ ಎರಡೂ ಮುಖ್ಯ. ಅದನ್ನೇ ಅಡಕತ್ತರಿಯಲ್ಲಿ ಇಟ್ಟಂತೆ ಮಾಡುವುದು ತರವಲ್ಲ. ಅಷ್ಟಕ್ಕೂ ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿ ಏನಾದರೂ ನಿರ್ಧಾರ ತೆಗೆದುಕೊಳ್ಳಲೇಬೇಕು ಎಂದಿದ್ದರೆ ಆ ನಿರ್ಧಾರಗಳನ್ನು ಆಯಾ ಶೈಕ್ಷಣಿಕ ವರ್ಷದ ಆರಂಭದಲ್ಲಿಯೇ ತೆಗೆದುಕೊಳ್ಳುವುದು ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ಸೂಕ್ತವಾದುದು.

ಭಾಷೆ ಎಂಬುದು ನಮ್ಮ ಅಸ್ತಿತ್ವದ ಮೂಲ. ಭಾಷೆ ಕೇವಲ ಪದಗಳ ಸಮೂಹವಲ್ಲ; ಅದು ಆತ್ಮಗೌರವದ ಸಂಕೇತ. ಭಾಷಾ ವೈವಿಧ್ಯತೆಯೇ ಜಗತ್ತಿನ ಸೌಂದರ್ಯ. ಒಂದು ಹೂವಿನ ತೋಟವನ್ನು ಹೇಗೆ ನಾನಾ ಬಣ್ಣದ ಹೂವುಗಳು ಸುಂದರಗೊಳಿಸುತ್ತವೆಯೋ ಹಾಗೆಯೇ ನಾನಾ ಭಾಷೆಗಳು ಜಗತ್ತನ್ನು ಸುಂದರಗೊಳಿಸುತ್ತವೆ. ನಾವು ಎಷ್ಟೇ ಭಾಷೆ ಕಲಿತರೂ ಮೂಲ ಯೋಚನೆಗಳೆಲ್ಲ ರೂಪುಗೊಳ್ಳುವುದು, ಭಾವನೆಗಳು ಹುಟ್ಟಿ ಅವು ಮಾತಿನ ಅನುಭೂತಿಗೆ ನಿಲುಕುವುದೆಲ್ಲ ಮಾತೃಭಾಷೆಯಲ್ಲಿಯೇ. ಕಲಿಯುವಿಕೆ ಮತ್ತು ಕಲಿಸುವಿಕೆಯ ಮೂಲಕ ಭಾಷೆಯು ಸಂಸ್ಕೃತಿಯಾಗಿ ಪಸರಿಸುತ್ತದೆ. ಮನೆಯಲ್ಲಿ ಪೋಷಕರ ಮೂಲಕ ತಮ್ಮ ಭಾವನೆಗಳನ್ನು, ಬಯಕೆಗಳನ್ನು ಮೂಲ ಅವಶ್ಯಕತೆಯ ಹಂಚಿಕೆಯ ಕಾರಣಕ್ಕಾಗಿ ಮಕ್ಕಳು ಭಾಷೆಯನ್ನು ಕಲಿತರೆ, ಶಾಲೆಯಲ್ಲಿ ಅದು ಔಪಚಾರಿಕ ಶಿಕ್ಷಣದ ರೂಪದಲ್ಲಿ ತೆರೆದುಕೊಳ್ಳುತ್ತದೆ.

ಹೀಗಿರುವಾಗ ಸರಕಾರದ ನಿರ್ಧಾರದ ಜೊತೆಗೆ ಕನ್ನಡಪರ ಸಂಘಟನೆಗಳೂ ಕೂಡಾ 'ಹಿಂದಿ ಹೇರಿಕೆ ಸಲ್ಲದು' ಎನ್ನುತ್ತಿದ್ದಾರೆ. ಜೊತೆಗೆ ಇದು ವಿದ್ಯಾರ್ಥಿಗಳ ಮೇಲಿನ ಹೆಚ್ಚುವರಿ ಹೊರೆಯನ್ನು ತಗ್ಗಿಸಲಿದೆ ಎನ್ನುತ್ತಿದ್ದಾರೆ. ಒಂದೆಡೆ ಸರಕಾರದ ನಿಲುವಿನ ಬಗೆಗೆ ಚರ್ಚೆಗಳಾಗುತ್ತಿದ್ದರೆ ಮತ್ತೊಂದೆಡೆ ಈ ನಿರ್ಧಾರ ತೆಗೆದುಕೊಂಡ ಸಮಯದ ಬಗೆಗೂ ಮಾತುಗಳು ಕೇಳಿ ಬರುತ್ತಿವೆ. ಶೈಕ್ಷಣಿಕ ವರ್ಷದ ಆರಂಭದಲ್ಲಿ ಅಥವಾ ಪರೀಕ್ಷಾ ವೇಳಾಪಟ್ಟಿ ಘೋಷಣೆಗೂ ಮುನ್ನ ನಿರ್ಧಾರ ತೆಗೆದುಕೊಳ್ಳದೆ ಈ ತುರ್ತಿನ ನಿರ್ಧಾರ ಏಕೆ ಎಂಬುದು ನಿಜಕ್ಕೂ ಎಲ್ಲರನ್ನೂ ಕಾಡುತ್ತಿರುವ ಪ್ರಶ್ನೆ.

ಆಸಕ್ತಿ ಇದ್ದವರಿಗೆ ಭಾಷೆ ಕಲಿಯುವುದು ಕಷ್ಟವೇನಲ್ಲ. ಅವರು ಹೇಗಾದರೂ ಕಲಿಯುತ್ತಾರೆ. ಅದಕ್ಕೆ ಶಾಲಾ ಶಿಕ್ಷಣದ ಚೌಕಟ್ಟು ಬೇಕಿಲ್ಲ. ಏನೇ ಆದರೂ ಸರಕಾರ ಇನ್ನು ಹದಿನೈದು ದಿನ ಕಾದಿದ್ದರೆ ಪರೀಕ್ಷೆ ಮುಗಿದು ಹೋಗುತ್ತಿತ್ತು. ಈ ಸಲದ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು ಹೇಗಿದ್ದರೂ ಈಗಾಗಲೇ ಪರೀಕ್ಷಾ ತಯಾರಿ ನಡೆಸಿ ಆಗಿತ್ತು. ಆದುದರಿಂದ ಈ ಶೈಕ್ಷಣಿಕ ವರ್ಷದ ಬಳಿಕ ತೀರ್ಮಾನ ತೆಗೆದುಕೊಂಡರೂ ಸಾಕಿತ್ತು.

> ಭಾಷಾ ವೈವಿಧ್ಯತೆಯೇ ಜಗತ್ತಿನ ಸೌಂದರ್ಯ. ಭಾಷಾ ಕಲಿಕೆಯ ಮನೋಭಾವವನ್ನು ಬೆಳೆಸುವುದೇ ಭಾಷೆಯ ಉಳಿವಿಗೆ ಭದ್ರ ಬುನಾದಿ.

ಇದರ ನಡುವೆ ಸರಕಾರ ಹಾಗೂ ಕನ್ನಡಪರ ಹೋರಾಟಗಾರರು ಯೋಚಿಸದೇ ಬಿಟ್ಟಿರುವ ಆಯಾಮವೊಂದಿದೆ. ಕರ್ನಾಟಕದಲ್ಲಿ ಸಾವಿರಾರು ವಿದ್ಯಾರ್ಥಿಗಳು ತೃತೀಯ ಭಾಷೆಯಾಗಿ ಕನ್ನಡವನ್ನೂ ಕಲಿಯುತ್ತಿದ್ದಾರೆ! ಹಾಗಾಗಿ ಈ ನಿರ್ಧಾರವು ಇದು ಕನ್ನಡದ ಬೆಳವಣಿಗೆಗೂ ಕೊಡಲಿ ಏಟು ಕೊಟ್ಟಂತೆ ಅಲ್ಲವೇ?

ಆರೋಗ್ಯ ಹಾಗೂ ಶಿಕ್ಷಣವು ದೇಶದ ಆಧಾರ ಸ್ತಂಭಗಳಿದ್ದಂತೆ. ಈ ಕ್ಷೇತ್ರಗಳಿಗೆ ಸಂಬಂಧಿಸಿದ ತೀರ್ಮಾನಗಳನ್ನು ತೆಗೆದುಕೊಳ್ಳುವಾಗ ಎಷ್ಟು ಎಚ್ಚರ ತೆಗೆದುಕೊಂಡರೂ ಸಾಲದು. ಹೀಗಿರುವಾಗ ಸಂಪುಟ ಸಭೆಯಲ್ಲಿ ಚರ್ಚಿಸಿ, ತಜ್ಞರ ಅಭಿಪ್ರಾಯ ಪಡೆದು, ಸರಿಯಾಗಿ ವಿಮರ್ಶೆ-ವಿಶ್ಲೇಷಣೆ ನಡೆಸಿ, ಅಧ್ಯಯನಗಳ ಆಧಾರದಲ್ಲಿ ತೆಗೆದುಕೊಳ್ಳಬೇಕಾಗಿದ್ದ ತೀರ್ಮಾನ ಹೀಗೆ ಗೊಂದಲದ ಗೂಡಂತೆ ಹೊರಬರಬೇಕಿತ್ತೇ?

ಈಗಾಗಲೇ ಬಿಜೆಪಿ ಸರಕಾರ ಜಾರಿಗೊಳಿಸಿದ ರಾಷ್ಟ್ರೀಯ ಶಿಕ್ಷಣ ನೀತಿ ಬೇಡ ಎಂದು ರಾಜ್ಯ ಶಿಕ್ಷಣ ನೀತಿ ಅನುಸರಿಸಲಾಗುತ್ತಿದೆ. ಒಂದನೇ ತರಗತಿಗೆ ಸೇರ್ಪಡೆಗೆ 6 ವರ್ಷಗಳಾಗಿರಬೇಕು ಎಂಬ ನೀತಿಯಲ್ಲಿ ಈ ವರ್ಷ ಮತ್ತೆ ಸಡಿಲಿಕೆ ಮಾಡಲಾಗಿದೆ. ಎತ್ತ ಸಾಗುತ್ತಿದೆ ನಮ್ಮ ಮಕ್ಕಳ, ವಿದ್ಯಾರ್ಥಿಗಳ ಭವಿಷ್ಯ? ಅಧಿಕಾರಕ್ಕೆ ಬಂದ ಪಕ್ಷಕ್ಕೆ ಸ್ವಪ್ರತಿಷ್ಠೆ ಮುಖ್ಯವೇ ಅಥವಾ ದೇಶದ ಯುವ ಸಂಪತ್ತಿನ ಭವಿಷ್ಯ ಮುಖ್ಯವೇ?

ಒಟ್ಟಿನಲ್ಲಿ ಸರಕಾರ ಅಂಕಗಳಿಗೆ ಸಂಬಂಧಿಸಿ ನಿರ್ಧಾರ ತೆಗೆದುಕೊಂಡರೂ ಭಾಷೆಯ ಕುರಿತಾಗಿ ನಾವೂ ಯೋಚಿಸಬೇಕಿದೆ. ಭಾಷೆ ಯಾವುದೇ ಇರಲಿ, ಅದರ ಪ್ರಭಾವಶಾಲಿ ಚಲನೆ ಸಾಧ್ಯವಾಗುವುದು ಮಾಧ್ಯಮಗಳು ಹಾಗೂ ಶಿಕ್ಷಣದಲ್ಲಿ. ಹೀಗಿರುವಾಗ ಈ ಹೊಸ ಆತುರದ ನಿರ್ಧಾರ ಭಾಷೆಯ ಬಗೆಗೆ ಹೊಸ ಗೊಂದಲವೊಂದನ್ನು ಹುಟ್ಟುಹಾಕಿದೆ. ಈ ವಿಚಾರವನ್ನು ಪರಿಹರಿಸುವ ಸಂದರ್ಭದಲ್ಲಿ ನಮ್ಮನ್ನು ನಾವು ವಿಮರ್ಶೆಗೊಳಪಡಿಸಬೇಕಾಗಿದೆ. ನಮಗೆ ಮಾದರಿಯಾಗಬೇಕಾಗಿರುವುದು ಯಾರು ಎಂಬುದನ್ನು ಯೋಚಿಸಬೇಕಾಗಿದೆ.

ಮಕ್ಕಳಲ್ಲಿ ಕನ್ನಡ ಭಾಷಾ ಅಭಿಮಾನ, ಪ್ರೀತಿ ಬೆಳೆಸುವಲ್ಲಿ ನಾವು ಸೋತಿದ್ದೇವೆ. ಹಾಗಿದ್ದರೆ ಈಗ ನಾವು ಮಾಡಬೇಕಾಗಿರುವುದಾದರೂ ಏನು? ಮೊದಲಿಗೆ ನಮ್ಮ ಮಕ್ಕಳಿಗೆ ನಾವು ಕನ್ನಡವನ್ನು ಕಲಿಸೋಣ. ಮಕ್ಕಳಲ್ಲಿ, ಹೆತ್ತವರಲ್ಲಿ ನಮ್ಮ ಭಾಷೆ, ಸಂಸ್ಕೃತಿಯ ಬಗ್ಗೆ ಅಭಿಮಾನ, ಒಲವು, ಗೌರವವನ್ನು ಮೂಡಿಸೋಣ. ಆ ಮೂಲಕ ಯಾರೇ ಆಗಲಿ ಕನ್ನಡವನ್ನು ಮನದುಂಬಿ ಕಲಿಯುವಂತೆ ಮಾಡೋಣ. ಅವರವರನ್ನು ಅವರವರದೇ ಭಾಷೆಯಲ್ಲಿ ಮಾತನಾಡಿಸುವ ನಮ್ಮ ಉದಾರತೆಯನ್ನು ಇನ್ನಾದರೂ ತೊರೆಯೋಣ. ಆ ಮೂಲಕ ಕನ್ನಡ ಭಾಷೆ ಬೆಳೆಸೋಣ. ನಮ್ಮ ನಾಡು-ನುಡಿಯ ಬಗೆಗಿನ ಗೌರವವನ್ನು ವ್ಯಕ್ತಪಡಿಸುವುದು ಹೇಗೆ ಎಂಬುದನ್ನು ಅರಿಯೋಣ. ಏಕೆಂದರೆ ಬೇರೆಯವರು ನಮ್ಮ ನಾಡು-ನುಡಿಯ ಬಗ್ಗೆ ಗೌರವವನ್ನು ಸೂಚಿಸುತ್ತಿಲ್ಲ ಎಂದಾದಲ್ಲಿ ಅದರ ಹಿಂದಿನ ಕಾರಣೀಭೂತರೂ ನಾವೇ ಆಗಿದ್ದೇವೆ. ಹಾಗೆಂದು ಕಡ್ಡಾಯಗೊಳಿಸುವ ಮೂಲಕ ಕಲಿಸುತ್ತೇವೆ ಅಂದುಕೊಂಡರೆ ಅದು ನಮ್ಮ ಮೂರ್ಖತನವಾದೀತು. ಅಲ್ಲಿ ಭಾಷೆಯ ಬಗೆಗೆ ಯಾವುದೇ ರೀತಿಯ ಅಭಿಮಾನವಾಗಲೀ ಪ್ರೀತಿಯಾಗಲೀ ಇರಲಾರದು.

ಭಾಷಾ ಕಲಿಕೆಯ ಮನೋಭಾವವನ್ನು ಬೆಳೆಸುವುದೇ ಭಾಷೆಯ ಉಳಿವಿಗೆ ಭದ್ರ ಬುನಾದಿ. ಬಲವಂತದ ಹೇರಿಕೆ ಎಂದಿದ್ದರೂ ಅಪಾಯಕಾರಿಯೇ. ಒಂದು ಪ್ರದೇಶದಲ್ಲಿ ವಿವಿಧ ಭಾಷೆಗಳನ್ನಾಡುವ ಜನರು ಜೊತೆಗಿದ್ದಾಗ ಸೌಹಾರ್ದಯುತ ಜೀವನವನ್ನು ನಡೆಸಲು ಸ್ಥಳೀಯ ಭಾಷೆಯನ್ನು ಕಲಿಯುವುದು ಅನುಕೂಲಕರ. ಆದರೆ ಕಲಿಯಬೇಕೇ ಬೇಡವೇ ಅನ್ನುವುದು ವೈಯಕ್ತಿಕ ವಿಚಾರ.

ನಾವಿಂದು ಯೋಚಿಸಬೇಕಾಗಿರುವುದು ಕೇವಲ ಸರಕಾರದ ನೀತಿ ನಿರ್ಧಾರಗಳ ಬಗೆಗೆ ಮಾತ್ರವಲ್ಲ, ನಮ್ಮ ಭಾಷೆಯ ಬಗೆಗೂ ಆಗಿದೆ. ವ್ಯಕ್ತಿ ಬಹುಭಾಷೆ ಕಲಿಯುವುದು ಭವಿಷ್ಯಕ್ಕೆ ಪೂರಕ. ಅಂತಾರಾಷ್ಟ್ರೀಯ ಭಾಷೆ ಎಂದು ಇಂಗ್ಲಿಷ್ ಅನ್ನು ಪುರಸ್ಕರಿಸುವ ನಮಗೆ ಉಳಿದ ಭಾಷೆಗಳು ಮಾತ್ರ ಕಿರಿಕಿರಿ ಉಂಟು ಮಾಡುತ್ತಿರುವುದು ಅಭಾಸಕರ. 'ಇಂಗ್ಲಿಷ್ ಬಲ್ಲವ ಮಾತ್ರ ಜಾಣ' ಎಂಬ ಭಾವ ಮನದೊಳಗಿದೆ. ಕಾರಣ- ನಮ್ಮ ನಾಡು-ನುಡಿಯ ಹಿರಿಮೆಯನ್ನು ತೋರಿಸುವ ಪ್ರಜ್ಞೆ, ಕೌಶಲ್ಯ, ಕ್ಷಮತೆಯ ಕೊರತೆಯು ನಮ್ಮಲ್ಲಿದೆ. ಅಂದರೆ ಸೃಜನಶೀಲ ನಿರ್ವಹಣೆಯ ಕೊರತೆ ನಮ್ಮದು. ಅದನ್ನು ಕೊನೆಗಾಣಿಸಿ ನಮ್ಮ ಸಂಸ್ಕೃತಿಯ ವಿಶಿಷ್ಟತೆಯನ್ನು ಮನಗಾಣಿಸಬೇಕಿದೆ; ಸಾಹಿತ್ಯದ ಬಗ್ಗೆ ಪ್ರೇರೇಪಿಸಿ, ಅಭಿಮಾನ ಬೆಳೆಸಬೇಕಿದೆ. ನಮ್ಮ ಸಂಸ್ಕೃತಿಯನ್ನು ನಾವೇ ಸರಿಯಾಗಿ ಬಿಂಬಿಸದೆ ಇತರರು ಆದರಿಸುತ್ತಿಲ್ಲ, ಗೌರವಿಸುತ್ತಿಲ್ಲ ಎಂದು ಅತ್ತರೇನು ಫಲವಿಲ್ಲ, ಆದುದರಿಂದ ಪ್ರತಿಭಟನೆ, ಕಡ್ಡಾಯಗೊಳಿಸುವಿಕೆಗಳ ಬದಲಾಗಿ ನಮ್ಮ ಸಂಸ್ಕೃತಿ, ಭಾಷೆಯನ್ನು ಉತ್ತಮವಾಗಿ ಬಿಂಬಿಸುವ ಸಕಾರಾತ್ಮಕ ಕಾರ್ಯಗಳಲ್ಲಿ ನಮ್ಮನ್ನು ನಾವು ತೊಡಗಿಸಿಕೊಳ್ಳುವ ಮೂಲಕ ಭಾಷೆಯನ್ನು ಉಳಿಸಿ ಬೆಳೆಸಬೇಕಾಗಿದೆ.

ಭಜನ, ಯುವಜನ ಮತ್ತು ಸಮಾಜ ಪ್ರಬೋಧನ

> ಕಾಲ ಬದಲಾದರೂ ಭಜನೆಯ ಮಹತ್ವ ಕಡಿಮೆಯಾಗಿಲ್ಲ. ಬದಲಿಗೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ.



ಪದಸಂಚಲನ
• ಡಾ. ವಿಶ್ವನಾಥ ಸುಂಕಸಾಳ
sunkasalvishwa@gmail.com

ಶ್ರವಣಂ ಕೀರ್ತನಂ ವಿಷ್ಣೋಃ ಸ್ಮರಣಂ ಪಾದಸೇವನಮ್ ।
ಅರ್ಚನಂ ವಂದನಂ ದಾಸ್ಯಂ ಸಖ್ಯಮಾತ್ಮನಿವೇದನಮ್॥

ಎಂಬ ಭಾಗವತದ ಉಕ್ತಿಯಂತೆ ಒಂಬತ್ತು ವಿಧದ ಭಕ್ತಿಗಳಲ್ಲಿ ಕೀರ್ತನೆಯೂ ಕೂಡ ಒಂದು. ಕೀರ್ತನವೆಂದರೆ ನಾಮಸ್ಮರಣೆ ಅಥವಾ ಭಗವಂತನ ಮಾಹಾತ್ಮ್ಯದ ವರ್ಣನೆ. ಇದು ಭಜನ, ಕೀರ್ತನ, ನಾಮಸ್ಮರಣೆ, ಜಪ, ಸ್ತೋತ್ರ ಮೊದಲಾದ ಆಯಾಮಗಳಲ್ಲಿ ಪ್ರಕಟವಾಗುತ್ತದೆ. ಭಜನವು ಅತ್ಯಂತ ಪ್ರಾಚೀನಕಾಲದಿಂದಲೂ ಭಗವದ್ಭಕ್ತಿಯ ಅಭಿವ್ಯಕ್ತಿಯ ಸಾಧನವಾಗಿದೆ. ಭಜನದ ಮೂಲಕ ಮನಸ್ಸು ಪರಮಾತ್ಮನಲ್ಲಿ ನೆಲೆಯಾಗಲು ಸಹಾಯಕವಾಗಿದೆ. ಭಜ ಸೇವಾಯಾಂ ಎಂಬ ಧಾತುವಿನಿಂದ ನಿಷ್ಪನ್ನಗೊಂಡ ಭಜನವೆಂಬ ಶಬ್ದವು ಸೇವೆಯೆಂಬ ಅರ್ಥವನ್ನು ಹೊಂದಿದೆ. ಪರಮಾತ್ಮನ ಮಾನಸವಾದ ಸೇವೆಯ ರೂಪದಲ್ಲಿ ಭಜನೆಯು ನಮ್ಮ ಮತ್ತು ಪರಮಾತ್ಮನ ನಡುವಿನ ಸೇತುವೆಯೇ ಆಗಿದೆ. ಭಜನೆಗೆ ಪ್ರಾಚೀನ ಕಾಲದ ಇತಿಹಾಸವಿದೆ. ಉಪನಿಷತ್ತಿನಲ್ಲಿಯೇ ನಾಮಸ್ಮರಣೆಯ ಬಗ್ಗೆ ಉಲ್ಲೇಖವಿದೆ. ಕಲಿಸಂತರಣೋಪನಿಷತ್ ಮೊದಲಾದವುಗಳಲ್ಲಿ ನಾಮಜಪದ ಬಗೆಗೆ ಉಲ್ಲೇಖಗಳಿವೆ. ನಾಮಸ್ಮರಣೆಯನ್ನು ಗಾಯನದ ಮೂಲಕ ಮಾಡಿದಾಗ ಅದು ಭಜನೆ ಎನಿಸಿಕೊಳ್ಳುತ್ತದೆ. ಇದು ಭಗವದ್ಭಕ್ತಿಯ ಅಭಿವ್ಯಕ್ತಿಗೆ ಅತ್ಯುತ್ತಮವಾದ ಸಾಧನವಾಗಿದೆ.

ಭಜನೆಯಲ್ಲಿ ಭಗವಂತನ ರೂಪದ, ಆತನ ಐಶ್ವರ್ಯದ ಮತ್ತು ಚರಿತೆಯ ವರ್ಣನೆಯನ್ನು ಮತ್ತು ಸ್ತುತಿಯನ್ನು ಮಾಡಲಾಗುತ್ತದೆ. ಆ ಮೂಲಕ ದೀರ್ಘಕಾಲ ಮನಸ್ಸು ಒಂದೇ ವಿಷಯದಲ್ಲಿ ನಿಲ್ಲುವಂತೆ ಮಾಡುತ್ತದೆ. ರಾಮಾಯಣದಲ್ಲಿ ಲವಕುಶರು ಶ್ರೀರಾಮನ ಚರಿತ್ರೆಯನ್ನು ಹಾಡುತ್ತಾ ಆಯೋಧ್ಯೆಗೆ ಬರುವ ಪ್ರಸಂಗವಿದೆ. ಈ ರೀತಿಯಲ್ಲಿ ಭಗವಂತನ ವಿಭೂತಿಯನ್ನು ಸ್ಮರಿಸಿಕೊಳ್ಳುತ್ತಾ, ತನ್ನ ಚಿತ್ತವನ್ನು ಶುದ್ಧಗೊಳಿಸಿಕೊಳ್ಳುವುದಕ್ಕೆ ಇದೊಂದು ಸಮರ್ಥವಾದ ಮಾಧ್ಯಮವಾಗಿದೆ. ಒಂದೇ ನಾಮವನ್ನು ಅಥವಾ ವಾಕ್ಯವನ್ನು ಮತ್ತೆ ಮತ್ತೆ ಉಚ್ಚರಿಸುವುದರಿಂದ ಸಮಾನವಿಷಯಕವಾದ ಮನೋವೃತ್ತಿಯುಂಟಾಗುತ್ತದೆ. ಇದು ಮನಸ್ಸಿನಲ್ಲಿ ಉಂಟಾಗುವ ಉಳಿದೆಲ್ಲ ಆಲೋಚನಾತ್ಮಕವಾದ ವೃತ್ತಿಗಳನ್ನು ನಿರೋಧಿಸುವ ಮೂಲಕ ಧ್ಯಾನಸ್ಥಿತಿಗೆ ಕೊಂಡೊಯ್ಯುತ್ತದೆ. ಹಾಗಾಗಿ ಸಾಮಾನ್ಯರಿಂದ ಸಾಧಕರವರೆಗೆ ಮನಸ್ಸಿನ ನಿಗ್ರಹದ ಜೊತೆಗೆ ಅದರ ಏಕಾಗ್ರತೆಯನ್ನು ಸಾಧಿಸಲು ಪ್ರಭವಕಾರಿಯಾದ ಸಾಧನವಾಗಿದೆ. ಭಜನೆಯು ಮನಸ್ಸಿನಲ್ಲಿ ಸಕಾರಾತ್ಮಕವಾದ ತರಂಗವನ್ನು ಉಂಟುಮಾಡುವ ಮೂಲಕ ಶಾಂತಿಯನ್ನೂ, ಹೊಸ ಉತ್ಸಾಹವನ್ನೂ, ಪ್ರೇರಣೆಯನ್ನೂ ಒದಗಿಸುತ್ತದೆ.

ನಾವು ಸಣ್ಣ ವಯಸ್ಸಿನಲ್ಲಿದ್ದಾಗ ಅವಿಭಕ್ತಕುಟುಂಬದ ಎಲ್ಲ ಹಿರಿಯರು ಕಿರಿಯರೊಂದಿಗೆ ಸಾಯಂಕಾಲದಲ್ಲಿ ದೇವರ ಎದುರು ಕೂತು ಭಜನೆಯನ್ನು ಮಾಡುವ ಸಂಪ್ರದಾಯವಿತ್ತು. ಆಗ ದೂರದರ್ಶನವಾಗಲೀ, ಮೊಬೈಲ್ ಆಗಲೀ ಇಲ್ಲದ ಕಾರಣ ಎಲ್ಲರೂ ಭಜನೆಯನ್ನು ಮಾಡುತ್ತಾ ಭಗವದ್ಭಕ್ತಿಯಲ್ಲಿ ಮುಳುಗುತ್ತಿದ್ದರು. ಈ ಮೂಲಕ ಕುಟುಂಬದ ಎಲ್ಲ ಸದಸ್ಯರೂ ತಮ್ಮ ಹಗಲಿನ ಶ್ರಮವನ್ನೆಲ್ಲ ಮರೆಯುತ್ತಿದ್ದರು. ಜೊತೆಗೆ ಕುಟುಂಬದ ಎಲ್ಲ ಸದಸ್ಯರ ಜೊತೆಗೆ ಸೌಮನಸ್ಯವನ್ನು ಕಾಪಾಡಿಕೊಳ್ಳುವಲ್ಲಿ ಭಜನೆಯು ನೆರವಾಗುತ್ತಿತ್ತು. ಗಣೇಶ ಚತುರ್ಥಿ ಮೊದಲಾದ ಹಬ್ಬಗಳ ಸಂದರ್ಭದಲ್ಲಿಯಂತೂ ಊರವರೆಲ್ಲ ಸೇರಿ ಸಾಮೂಹಿಕ ಭಜನೆಯನ್ನು ಮಾಡುತ್ತಿದ್ದರು. ಆ ಮೂಲಕ ಭಜನೆಯು ಊರಿನ ಎಲ್ಲರನ್ನೂ ಒಂದುಗೂಡಿಸುತ್ತಿತ್ತು. ಇಲ್ಲಿ ಎಲ್ಲರೂ ಒಂದೇ ಎಂಬ ಏಕತೆಯ ಭಾವವನ್ನು ಅದು ಉಂಟುಮಾಡುತ್ತಿತ್ತು. ಎಲ್ಲೆಡೆಯೂ ಭಜನಾಮಂಡಳಿಗಳು ಇರುತ್ತಿದ್ದವು. ಹೀಗೆ ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ನಮ್ಮ ಪರಂಪರೆಯನ್ನು, ಸಂಸ್ಕೃತಿಯನ್ನು ತಲುಪಿಸುವ ಮಾಧ್ಯಮವಾಗಿಯೂ, ಕುಟುಂಬದ ಸದಸ್ಯರ ಜೊತೆಗೆ ಇಡೀ ಊರಿನ ಸದಸ್ಯರನ್ನೆಲ್ಲರನ್ನೂ ಒಂದಾಗಿಸುವ ಮತ್ತು ಏಕತೆಯನ್ನು, ಸೌಹಾರ್ದವನ್ನು ಬೆಳೆಸುವ ಮಾಧ್ಯಮವೂ ಆಗಿತ್ತು.

ಇಂದಿನ ವೇಗದ ಜೀವನದಲ್ಲಿ ನಾವೆಲ್ಲ ತಂತ್ರಜ್ಞಾನ ಮತ್ತು ಮಾಹಿತಿಯ ಪ್ರವಾಹದ ನಡುವೆ ಸಿಕ್ಕಿಹಾಕಿಕೊಂಡಿದ್ದೇವೆ. ಸಾಮಾಜಿಕ ಜಾಲತಾಣಗಳು, ನಿರಂತರ ಸ್ಪರ್ಧೆ, ಜೀವನದ ಒತ್ತಡಗಳು-ಇವುಗಳ ಪರಿಣಾಮವಾಗಿ ಮನಸ್ಸಿನ ಶಾಂತಿ ಕುಂದುತ್ತಿದೆ. ಇಂದಿನ ಯುವಸಮುದಾಯ ಅತಿ ಹೆಚ್ಚು ಶಾಂತಿಯನ್ನು ಅರಸುತ್ತಿದೆ. ಚಿಕ್ಕ ವಯಸ್ಸಿನಲ್ಲಿಯೇ ಯುವಕರು ಅನೇಕ ವಿಧದ ಮಾನಸಿಕ ಒತ್ತಡಗಳಿಗೆ ಸಿಲುಕುತ್ತಿದ್ದಾರೆ. ಯಾವುದು ಸರಿ, ಯಾವುದು ತಪ್ಪು ಎಂಬುದನ್ನು ನಿರ್ಧರಿಸುವಲ್ಲಿ ಹೆಚ್ಚು ಎಡವುತ್ತಿದ್ದಾರೆ. ಅದಕ್ಕೆ ಕಾರಣ ಲೋಕದ ಆಕರ್ಷಣೆಯೇ ಆಗಿದೆ. ಉದ್ಯೋಗವನ್ನು ಹಿಡಿದು ಹಣದ ಸಂಪಾದನೆಯನ್ನು ಮಾಡಿ, ಅದನ್ನು ನಾನಾವಿಧದಲ್ಲಿ ವ್ಯಯಿಸುವುದೇ ಆನಂದದ ಮೂಲ



ಎಂಬ ಭ್ರಾಂತಿಗೆ ಎಲ್ಲರೂ ಒಳಗಾಗಿದ್ದಾರೆ. ಹಾಗಾಗಿ ಹೆಚ್ಚುಹೆಚ್ಚು ಸಂಪಾದಿಸುವುದೇ ಮುಖ್ಯ ಎಂಬಂತಾಗಿದೆ. ಈ ನಡುವೆ ಅಗಾಧವಾದ ಒತ್ತಡ ಹಾಗೂ ಮಾನಸಿಕ ಅಶಾಂತಿಗೆ ಎಲ್ಲರೂ ಈಡಾಗುತ್ತಿದ್ದಾರೆ. ಎರಡು ನಿಮಿಷ ಕೂತು ಸುಧಾರಿಸಿಕೊಳ್ಳುವಷ್ಟು ಕೂಡ ಯಾರಿಗೂ ವ್ಯವಧಾನವಿಲ್ಲ. ತಾಳ್ಮೆಯನ್ನು ಅಷ್ಟರಮಟ್ಟಿಗೆ ಕೆಡಿಸಿಕೊಂಡಿದ್ದೇವೆ. ಇಂಥ ಕಾಲಘಟ್ಟದಲ್ಲಿ ಭಜನೆಯ ಮಹತ್ವ ಇನ್ನಷ್ಟು ಹೆಚ್ಚುತ್ತಿದೆ. ನಿಧಾನವಾಗಿ ಭಜನೆಗಳು ಮತ್ತೆ ಪ್ರಸ್ತುತತೆಯನ್ನು ಪಡೆದುಕೊಳ್ಳುತ್ತಿವೆ. ಈ ಮೂಲಕ ಭಾರತೀಯ ಜೀವನ ಪದ್ಧತಿಯು ಎಲ್ಲ ಕಾಲಕ್ಕೂ ಸೂಕ್ತವಾದುದು ಎಂಬುದು ಸಮಾಜ ಅರಿವಿಗೆ ಮತ್ತೊಮ್ಮೆ ಬರುತ್ತಿದೆ. ನಮ್ಮ ಹಿರಿಯರ ಜೀವನ ಪದ್ಧತಿಯನ್ನು ಅನುಸರಿಸುವುದೇ ಎಲ್ಲ ಆಧುನಿಕ ಸಮಸ್ಯೆಗಳಿಗೂ ಪರಿಹಾರವೆಂಬ ಎಚ್ಚರ ಮೂಡುತ್ತಿರುವುದು ಒಳ್ಳೆಯ ಬೆಳವಣಿಗೆಯೇ ಹೌದು.

ಕಾಲ ಬದಲಾದರೂ ಭಜನೆಯ ಮಹತ್ವ ಕಡಿಮೆಯಾಗಿಲ್ಲ. ಬದಲಿಗೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಯಾವ ಸಾಮಾಜಿಕ ಜಾಲತಾಣಗಳು ಅತ್ಯಧಿಕ ಮಾನಸಿಕ ವಿಕ್ಷೇಪವನ್ನು ಉಂಟುಮಾಡಲು ಕಾರಣವಾಗಿವೆಯೋ, ಅವುಗಳೇ ಮತ್ತೊಮ್ಮೆ ಹೊಸ ಹೊಸ ರೂಪದಲ್ಲಿ ಭಜನೆಗಳನ್ನು ಯುವಸಮುದಾಯಕ್ಕೆ ತಲುಪಿಸುತ್ತಾ, ಭಜನೆಯತ್ತ ಆಕರ್ಷಿಸುವ ಮಾಧ್ಯಮವೂ ಆಗಿವೆ. ಇವತ್ತು ಉಳಿದೆಲ್ಲ ಸಂಗೀತದ ಕಾರ್ಯಕ್ರಮಗಳಂತೆ, ಆಧುನಿಕ ಪರಿಕರಗಳೊಂದಿಗೆ ನಡೆಸಲಾಗುವ ಭಜನೆ, ಕೀರ್ತನೆಗಳ ಕಾರ್ಯಕ್ರಮಗಳೂ ಜನಪ್ರಿಯವಾಗುತ್ತಿವೆ. ಈ ಕಾರಣಕ್ಕಾಗಿ ಜೆನ್-ಝೀ ಇನ್ನಿಲ್ಲದಷ್ಟು ಭಜನೆಗಳತ್ತ ಆಕರ್ಷಿತರಾಗುತ್ತಿದ್ದಾರೆ. ಯೂಟ್ಯೂಬ್, ಇನ್ಸ್ಟಾಗಳಲ್ಲಿ ಭಜನೆಗಳನ್ನು ಆಧರಿಸಿದ ಕಲಾವಿದರಿಗೆ ಹೆಚ್ಚೆಚ್ಚು ದೃಶ್ಯಾಂಕಗಳು ದೊರೆಯುತ್ತಿವೆ. ಸಂಗೀತದ ಮೂಲಕ ಇದನ್ನು ಮೊದಲು ಆರಂಭಿಸಿದವರು ಕುಲದೀಪ ಪೈ ಅಂಥವರು. ಅವರು ತಮ್ಮ ಯೂಟ್ಯೂಬ್ ಚಾನೆಲ್ ಮೂಲಕ ಬಾಲಪ್ರತಿಭೆಗಳ ಸಂಗೀತವನ್ನು ಪ್ರಸ್ತುತಪಡಿಸುತ್ತಾ ಸೂರ್ಯಗಾಯತ್ರಿಯಂಥ ಅನೇಕ ಪ್ರತಿಭೆಗಳನ್ನು ಲೋಕಕ್ಕೆ ಪರಿಚಯಿಸಿದರು. ಈಗ ಸೂರ್ಯಗಾಯತ್ರಿ, ರಾಹುಲ ವೆಳ್ಳಾಲ ಮೊದಲಾದವರು ದೇವರ ನಾಮವನ್ನು ಸಂಗೀತದ ಮೂಲಕ ಪ್ರಸ್ತುತಪಡಿಸುತ್ತಾ ಲಕ್ಷಾಂತರ ಜನರನ್ನು ಸೆಳೆಯುತ್ತಿದ್ದಾರೆ. ಮೈಥಿಲಿ ಠಾಕೂರ್, ರಾಧಿಕಾ ದಾಸ್ ಮೊದಲಾದವರು ಭಜನೆಗಳಿಗೆ ಹೊಸ ಶ್ರೋತೃವರ್ಗವನ್ನು ಸೃಷ್ಟಿಸಿದ್ದಾರೆ. ಭಜನೆಗಳಿಗೆ ಹೊಸ ಆಯಾಮವನ್ನೂ ಒದಗಿಸಿದ್ದಾರೆ.

ಇಂದು ಭಜನೆಯೆಂಬುದು ಹೊಸ ರೂಪದೊಂದಿಗೆ ಮತ್ತೆ ಪ್ರಸಿದ್ಧವಾಗುತ್ತಿದೆ. ಶಂಕರರು ನಿರ್ಮಿಸಿದ ಸ್ತೋತ್ರಗಳಿಂದ ಹಿಡಿದು, ದಾಸರ ಪದ, ಮರಾಠಿ ಅಭಂಗಗಳವರೆಗೆ ಎಲ್ಲ ಪ್ರಾಚೀನ ಕೃತಿಗಳು ಹೊಸ ರೂಪದೊಂದಿಗೆ ಮತ್ತೆ ಎಲ್ಲರ ಬಾಯಲ್ಲಿ ನಲಿಯುತ್ತಿವೆ. ಶಂಕರಾಚಾರ್ಯರು ಸಾವಿರಾರು ವರ್ಷಗಳ ಹಿಂದೆಯೇ ಸ್ತೋತ್ರಸಾಹಿತ್ಯದ ಮೂಲಕ ಕೇವಲ ಭಗವದ್ಭಕ್ತಿಯ ಜಾಗರಣೆಯನ್ನು ಮೂಡಿಸಿದ್ದಷ್ಟೇ ಅಲ್ಲ, ಉಪನಿಷತ್ತುಗಳ, ಶಾಸ್ತ್ರಗಳ ಸಾರವನ್ನು ನಿತ್ಯವೂ ಸಾಮಾನ್ಯನ ಬಾಯಲ್ಲಿ ನಲಿಯುವಂತೆ ಮಾಡಲು ಕಾರಣರಾಗಿದ್ದರು. ಇವತ್ತು ಮತ್ತೆ ಅಂಥ ಕೃತಿಗಳು ಸಮಾಜದಲ್ಲಿ ಅನುರಣನಗೊಳ್ಳುತ್ತಿವೆ. ಸ್ತೋತ್ರ, ಭಜನೆಗಳು ಮತ್ತೆ ಮುನ್ನೆಲೆಗೆ ಬರುತ್ತಿರುವ ಈ ಹೊತ್ತಿನಲ್ಲಿ ಇದಕ್ಕೆ ಇನ್ನಷ್ಟು ವೇಗವನ್ನು ಕೊಡುವ ಉದ್ದೇಶದಿಂದ ರಾಷ್ಟ್ರೀಯ ಸ್ವಯಂಸೇವಕ ಸಂಘವು ಕೂಡ ಪಂಚ ಪರಿವರ್ತನೆಗಳಲ್ಲಿ ಭಜನೆಯನ್ನೂ ಸೇರಿಸಿಕೊಂಡಿದೆ. ಯಾಕೆಂದರೆ ಭಜನೆಯು ವ್ಯಕ್ತಿತ್ವದ ನಿರ್ಮಾಣದಲ್ಲಿಯೂ ಕೂಡ ಮಹತ್ವದ ಪಾತ್ರವನ್ನು ವಹಿಸುತ್ತದೆ. ಜೊತೆಗೆ ಸಾಮಾಜಿಕ ಸಮರಸತೆಗೆ ಸೇತುವೂ ಆಗಿದೆ.

ಮಠಗಳು ಭಜನೆ ಮತ್ತು ಕೀರ್ತನೆಗಳ ವ್ಯಾಪಕ ಪ್ರಚಾರವನ್ನು ಮಾಡುತ್ತಿವೆ. ಏಕಸ್ವರದಲ್ಲಿ ಲಕ್ಷಕಂಠದ ಸ್ತೋತ್ರಪಾರಾಯಣದ ಸಮರ್ಪಣೆಯಂಥ ಕಾರ್ಯಕ್ರಮಗಳು ಮಹಾನಗರಗಳಲ್ಲಿ ಯಶಸ್ವಿಯಾಗಿ ನಡೆಯುತ್ತಿವೆ. ಇತ್ತೀಚೆಗೆ ಭಜನೆಗೆ ಪರಿಸರ ಸಂರಕ್ಷಣೆಯ ಹೊಸ ಮುಖವೊಂದನ್ನು ಸ್ವರ್ಣವಲ್ಲಿಯ ಶ್ರೀ ಶ್ರೀ ಮದ್ಗಂಗಾಧರೇಂದ್ರ ಸ್ವಾಮಿಗಳು ಕೊಟ್ಟಿದ್ದಾರೆ. ಉತ್ತರ ಕನ್ನಡದ ನದಿಗಳ ತಿರುವು ಯೋಜನೆಯ ವಿರುದ್ಧದ ಜನರ ಧ್ವನಿಯಾಗಿರುವ ಸ್ವರ್ಣವಲ್ಲೀ ಸ್ವಾಮಿಗಳು ಶಿರಸಿ, ಬೆಂಗಳೂರು ಮುಂತಾದ ಕಡೆಗಳಲ್ಲಿ ಸಮಾವೇಶಗಳನ್ನು ನಡೆಸಿದ್ದಷ್ಟೇ ಅಲ್ಲ, ಈ ಬಗ್ಗೆ ವ್ಯಾಪಕವಾದ ಜನಜಾಗರಣದ ದೃಷ್ಟಿಯಿಂದ ಮತ್ತು ಪರಿಸರ ಸಂರಕ್ಷಣೆಯ ಅಭಿಯಾನಕ್ಕೆ ಆಧ್ಯಾತ್ಮಿಕ ಹಿನ್ನೆಲೆಯನ್ನೂ ಜೋಡಿಸುವ ಉದ್ದೇಶದಿಂದ ತಮ್ಮೆಲ್ಲ ಶಿಷ್ಯವಲಯಕ್ಕೆ ನಿರಂತರವಾಗಿ ಭಜನೆಗಳನ್ನು ಮಾಡುವ ಅಭಿಯಾನಕ್ಕೆ ಕರೆ ಕೊಟ್ಟಿದ್ದಾರೆ. ಆಯಾ ಊರಿನ ಎಲ್ಲರೂ ಒಂದು ದೇವಾಲಯದಲ್ಲಿ ಸೇರಿ ನಿತ್ಯವೂ ಒಂದು ಘಂಟೆಯ ಕಾಲ ಭಜನೆಯನ್ನು ಮಾಡಬೇಕೆಂಬ ಶ್ರೀಗಳ ಅಪ್ಪಣೆಯಂತೆ ಉತ್ತರಕನ್ನಡದ ಎಲ್ಲ ಊರುಗಳಲ್ಲಿಯೂ ಯಶಸ್ವಿಯಾಗಿ ಭಜನೆಯನ್ನು ನಡೆಸಲಾಗುತ್ತಿದೆ.

ಹೀಗೆ ಭಜನೆಯು ವ್ಯಕ್ತಿತ್ವನಿರ್ಮಾಣದ, ಆಧ್ಯಾತ್ಮಿಕ ಸಾಧನೆಯ, ಸಾಮಾಜಿಕ ಸಮರಸತೆಯ, ಪರಂಪರೆಯ ಸಂರಕ್ಷಣೆಯ ಅನೇಕ ಮಜಲುಗಳಲ್ಲಿ ಒಂದು ಪ್ರಖರ ಮಾಧ್ಯಮವಾಗಿದ್ದು ಮತ್ತೊಮ್ಮೆ ಸಮಾಜದಲ್ಲಿ ಮುನ್ನೆಲೆಗೆ ಬರುತ್ತಿರುವುದು ಅತ್ಯಂತ ಸಂತಸದ ವಿಷಯ. ನಮ್ಮ ಮನೆಗಳಲ್ಲೂ ಭಜನೆಯು ನಿರಂತರ ನಡೆಯುವಂತೆ ಪ್ರಯತ್ನಿಸಿದಲ್ಲಿ ಸುಖ, ಶಾಂತಿ, ಸಮೃದ್ಧಿಗಳು ಉಂಟಾಗುವುದರಲ್ಲಿ ಸಂದೇಹವಿಲ್ಲ.

ಕಿರುಸುದ್ದಿ

ದೊಡ್ಡತುಮಕೂರು ಡೇರಿಗೆ ಅವಿರೋಧ ಆಯ್ಕೆ

ದೊಡ್ಡಬಳ್ಳಾಪುರ: ದೊಡ್ಡ ತುಮಕೂರು ಹಾಲು ಉತ್ಪಾದಕರ ಸಹಕಾರ ಸಂಘ ಕ್ಕೆ ನೂತನ ಅಧ್ಯಕ್ಷ ರಾಗಿ ಮುನಿರಾಜು ಉಪಾಧ್ಯಕ್ಷರಾಗಿ ಪದ್ಮಮ್ಮ ಅವಿರೋಧ ವಾಗಿ ಆಯ್ಕೆ ಯಾದರು. ನೂತನ ಅಧ್ಯಕ್ಷರನ್ನು ಹಾಲು ಉತ್ಪಾದಕ ಸಂಘದ ನಿರ್ದೇಶಕರಾದ ರಮೇಶ್, ಅಂಜಮೂರ್ತಿ, ಸೋಮಶೇಖರ್, ಸುರೇಶ್, ನಂದಮ್ಮ, ನಂಜೇಗೌಡ, ರಾಜಣ್ಣ , ಗಿಡ್ಡೆಗೌಡ, ವೆಂಕಟಸ್ವಾಮಿ, ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷರಾದ ಟಿ.ಜಿ . ಮಂಜುನಾಥ್, ಲಕ್ಷ್ಮೀದೇವಿ ಚನ್ನೇಗೌಡ, ಮಾಜಿ ಉಪಾಧ್ಯಕ್ಷ ಮಂಜುನಾಥ್ ಅಭಿನಂದಿಸಿದರು

ಇಂದಿನಿಂದ ಸ್ವಯಂಗಣತಿ: ನಾಗರಿಕರು ಸ್ಪಂದಿಸಲು ಮನವಿ

ದೇವನಹಳ್ಳಿ: ಜನಗಣತಿ-2027 ರ ಅಂಗವಾಗಿ ಸಾರ್ವಜನಿಕರು ಸುರಕ್ಷಿತ ವೆಬ್ ಪೋರ್ಟಲ್ ಮೂಲಕ ಸ್ವಯಂ- ಗಣತಿಯಲ್ಲಿ ಪಾಲ್ಗೊಳ್ಳಲು ಅವಕಾಶ ಕಲ್ಪಿಸಲಾಗಿದ್ದು ಜಿಲ್ಲೆಯ ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಂಡು ಜನಗಣತಿಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು ಎಂದು ಜಿಲ್ಲಾsಕಾರಿ ಡಾ. ಕೆ.ಎನ್ ಅನುರಾಧಾ ಳಿಸಿದ್ದಾರೆ. ಜಿಲ್ಲೆಯಲ್ಲಿ ಮನೆ ಪಟ್ಟಿ ಮತ್ತು ಮನೆಗಣತಿ ಕಾರ್ಯವು ಏಪ್ರಿಲ್ 16ರಿಂದ ಆರಂಭವಾಗಲಿದ್ದು, ಇದಕ್ಕೂ ಮುನ್ನ 15 ದಿನಗಳ ಮುಂಚಿತವಾಗಿ ಅಂದರೆ ದಿನಾಂಕ: 01.04.2026 ರಿಂದ 15.04.2026ವರೆಗೆ ಸ್ವಯಂ ಗಣತಿ ಕಾರ್ಯ ನಡೆಯಲಿದೆ. ಮಾಹಿತಿ ಭರ್ತಿಯ ವೇಳೆ, ಕುಟುಂಬಗಳು ತಮ್ಮ ಸ್ಥಳದ ವಿವರಗಳನ್ನು (ರಾಜ್ಯ, ಜಿಲ್ಲೆ, ತಾಲ್ಲೂಕು, ಗ್ರಾಮ, ಪಟ್ಟಣ, ನಗರ ಇತ್ಯಾದಿ) ಕಡ್ಡಾಯವಾಗಿ ನಮೂದಿಸಬೇಕು. 'ಳವನ್ನು ನಿಖರವಾಗಿ ಗುರುತಿಸಲು ಪಿನ್ ಕೋಡ್ ಮತ್ತು ಡಿಜಿಟಲ್ ಮ್ಯಾಪ್ ಮೂಲಕ ಮನೆಯ ಸ್ಥಳವನ್ನು ಗುರುತಿಸುವ ವ್ಯವಸ್ಥೆಯೂ ಇರುತ್ತದೆ. ಕುಟುಂಬವು ತಮ್ಮ ಮಾಹಿತಿಯನ್ನು ಯಶಸ್ವಿಯಾಗಿ ಸಲ್ಲಿಸಿದ ನಂತರ, ಅವರಿಗೆ ಒಂದು ವಿಶಿಷ್ಟ ಸ್ವಯಂ-ಗಣತಿ ಐಡಿ ನೀಡಲಾಗುತ್ತದೆ. ಈ ಐಡಿಯನ್ನು ಖಿಒಖ ಮತ್ತು ಇಮೇಲ್ ಮೂಲಕ ಕಳುಹಿಸಲಾಗುತ್ತದೆ. ಅದನ್ನು ಮನೆಗೆ ಭೇಟಿ ನೀಡುವ ಗಣತಿದಾರರಿಗೆ (ಈ ಐಡಿಯನ್ನು ಸಾರ್ವಜನಿಕರು ಹಂಚಿಕೊಳ್ಳಬಹುದು. ಜನಗಣತಿ-2027 ಕ್ಕೆ ಸಂಬಂsಸಿ ಸಾರ್ವಜನಿಕರು ವೈಯಕ್ತಿಕ ಮಾಹಿತಿಯ ಗೌಪ್ಯತೆಯನ್ನು ಸಂಪೂರ್ಣವಾಗಿ ಕಾಯ್ದುಕೊಳ್ಳಲಾಗುತ್ತದೆ ಎಂದು ಜಿಲ್ಲಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಟಿಪ್ಪರ್ ಇಂಜಿನ್‌ನಲ್ಲಿ ಬೆಂಕಿ

ಆನೇಕಲ್: ಚಲಿಸುತ್ತಿದ್ದ ಟಿಪ್ಪರ್ ಲಾರಿಯ ಇಂಜಿನ್ ನಲ್ಲಿ ಬೆಂಕಿ ಹೊತ್ತಿಕೊಂಡು ಇಡೀ ಲಾರಿಗೆ ಆವರಿಸಿ ಕೆಲ ಹೊತ್ತು ರಸ್ತೆಯಲ್ಲಿ ಓಡಾಡುತ್ತಿದ್ದ ಸಾರ್ವಜನಿಕರು ಆತಂಕಕ್ಕೆ ಒಳಗಾದ ಘಟನೆ ತಾಲೂಕಿನ ಸೂರ್ಯ ಸಿಟಿ ಪೊಲೀಸ್ ಠಾಣೆ ವ್ಯಾಪ್ತಿಯ ಮರಸೂರು ಬಳಿ ನಡೆದಿದೆ. ಕೂಡಲೇ ಅಗ್ನಿಶಾಮಕ ದಳದ ಸಿಬ್ಬಂದಿಗೆ ಮಾಹಿತಿ ತಿಳಿದು ಅಗ್ನಿಶಾಮಕ ಸಿಬ್ಬಂದಿ ಬೆಂಕಿಯನ್ನು ನಂದಿಸಿದರು. ಚಾಲಕನ ಸಮಯ ಪ್ರಜ್ಞೆಯಿಂದ ಕೂಡಲೇ ಲಾರಿಯಿಂದ ಕೆಳಗೆ ಇಳಿದಿದ್ದರಿಂದ ಯಾವುದೇ ಪ್ರಾಣಪ್ರಾಯ ಸಂಭವಿಸಲಿಲ್ಲ,

3.50 ಕೋಟಿ ರೂ. ಉಳಿತಾಯ ಬಜೆಟ್

ಆನೇಕಲ್: ತಾಲೂಕಿನ ಹೆಬ್ಬಗೋಡಿ ನಗರಸಭೆ ಕಚೇರಿ ಆವರಣದಲ್ಲಿ 2026-27ನೇ ಸಾಲಿನ ಆಯ ವ್ಯಯವನ್ನು ಮಂಡಿಸಲಾಗಿದ್ದು 3 ಕೋಟಿ 50 ಲಕ್ಷ ರೂ.ಉಳಿತಾಯ ಬಜೆಟ್‌ನ್ನು ಹೆಬ್ಬಗೋಡಿ ನಗರಸಭೆಯ ಅಧ್ಯಕ್ಷೆಯಾದ ಸುಜಾತಾ ಹರೀಶ್ ಮಂಡಿಸಿದರು. ಹೆಬ್ಬಗೋಡಿ ನಗರಸಭೆಯ ಅಧ್ಯಕ್ಷರಾದ ಸುಜಾತಾ ಹರೀಶ್ ಅವರು ಮಾತನಾಡಿ, ಹೆಬ್ಬಗೋಡಿ ನಗರ ಸಭೆಯ ಸಮಗ್ರ ಅಭಿವೃದ್ಧಿ ಮತ್ತು ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ನಾಗರೀಕ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಬಜೆಟ್ ನಲ್ಲಿ ಹೆಚ್ಚಿನ ಅನುದಾನ ಮೀಸಲಿಟ್ಟಿದ್ದು ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಒತ್ತು ನೀಡಲಾಗಿದೆ ಎಂದು ತಿಳಿಸಿದರು. 2026. 27ನೇ ಸಾಲಿಗೆ ಒಟ್ಟು 108 ಕೋಟಿ 13 ಲಕ್ಷ ರೂ. ಆದಾಯ ನಿರೀಕ್ಷಿಸಲಾಗಿದೆ. ಅದರಲ್ಲಿ ಒಟ್ಟು ವೆಚ್ಚ 104 ಕೋಟಿ 63 ಲಕ್ಷ ರೂಪಾಯಿಗಳು ಎಂದು ಅಂದಾಜಿಸಲಾಗಿದ್ದು ಅಂತಿಮ ಶಿಲ್ಕು 3 ಕೋಟಿ 50 ಲಕ್ಷ ರೂಪಾಯಿಗಳು ಎಂದು ನಿರೀಕ್ಷಿಸಲಾಗಿದೆ ಎಂದರು. ಸ್ಥಾಯಿ ಸಮಿತಿ ಅಧ್ಯಕ್ಷೆ ಜಯರಾಮು ಮಾತನಾಡಿ , 2026-27ನೇ ಸಾಲಿನ ಬಜೆಟ್ ನಲ್ಲಿ ಮೂಲ ಸೌಕರ್ಯ ಒದಗಿಸಲು ಹೆಚ್ಚು ಒತ್ತು ನೀಡಲಾಗಿದೆ. ಬಹಳ ಮುಖ್ಯವಾಗಿ ಒಳಚರಂಡಿ ವ್ಯವಸ್ಥೆ, ಕುಡಿಯುವ ನೀರು, ರಸ್ತೆ, ಸಾರ್ವಜನಿಕ ರಕ್ಷಣೆ ದೃಷ್ಟಿಯಿಂದ ಸಿಸಿ ಕ್ಯಾಮರಾಗಳು ಅಳವಡಿಕೆ, ಪಾರ್ಕ್ ಹಾಗೂ ಸ್ಮಶಾನ ಅಭಿವೃದ್ಧಿ ಪಡಿಸುವುದು ಸೇರಿದಂತೆ ಅನೇಕ ಅಭಿವೃದ್ಧಿ ಕಾಮಗಾರಿಗಳನ್ನು ಮಾಡುವುದಕ್ಕೆ ಬಜೆಟ್ ನಲ್ಲಿ ಹಣ ಇಡಲಾಗಿದೆ ಎಂದು ತಿಳಿಸಿದರು. ಹೆಬ್ಬಗೋಡಿ ನಗರಸಭೆ ಪೌರಾಯುಕ್ತ ಬಿ.ಎಲ್.ರಾಜೇಂದ್ರ ಮಾತನಾಡಿದರು. ಬಜೆಟ್ ಸಭೆಯಲ್ಲಿ ಉಪಾಧ್ಯಕ್ಷ ಸುಜತಾ ಕೆ.ಪಿ.ರಾಜು, ಸ್ಥಾಯಿ ಸಮಿತಿ ಅಧ್ಯಕ್ಷ ಜಯರಾಮ್, ಸದಸ್ಯರಾದ ಮಂಜುನಾಥ್ ರೆಡ್ಡಿ, ಶ್ರೀನಿವಾಸ್‌ರೆಡ್ಡಿ, ಮುನಿಯಲ್ಲಪ್ಪ, ನಾರಾಯಣಸ್ವಾಮಿ, ಡೈರಿಮಂಜುನಾಥ್, ಸಂತೋಷ್, ಜ್ಯೋತಿ ಕೃಷ್ಣ ಸೇರಿದಂತೆ ಸದಸ್ಯರಿದ್ದರು.

ಪ್ರಾಣ ಬಿಟ್ಟೇವು, ಭೂಮಿ ಬಿಡುವುದಿಲ್ಲ ; ರೈತರ ಶಪಥ | ದೊಡ್ಡಬಳ್ಳಾಪುರದಲ್ಲಿ ಬೃಹತ್ ಟ್ರ್ಯಾಕ್ಟರ್ ರ್‍ಯಾಲಿ

ಭೂಸ್ವಾಧೀನಕ್ಕೆ ರೈತರ ತೀವ್ರ ವಿರೋಧ

ದೊಡ್ಡಬಳ್ಳಾಪುರ: ರೈತರ ಕೃಷಿ ಭೂಮಿಯನ್ನು ವಶಪಡಿಸಿಕೊಳ್ಳಲು ಕೆಐಎಡಿಬಿ ಮುಂದಾಗಿರುವುದನ್ನು ವಿರೋಧಿಸಿ ಸಾವಿಸಾರು ಸಂಖ್ಯೆಯಲ್ಲಿ ಜಮಾಯಿಸಿದ ರೈತರು ತಮ್ಮ ಟ್ರ್ಯಾಕ್ಟರ್ ಸಹಿತ ಬೃಹತ್ ಮೆರವಣಿಗೆ ನಡೆಸುವ ಮೂಲಕ ಸರಕಾರದ ನಡೆಯನ್ನು ತೀವ್ರವಾಗಿ ಖಂಡಿಸಿದರು.

ಭೂ ಸ್ವಾಧೀನ ವಿರೋಧಿ ಹೋರಾಟ ಸಮಿತಿಯಿಂದ ಮಂಗಳವಾರ ತಾಲೂಕು ಕಚೇರಿಗೆ ಟ್ಯಾಕ್ಟರ್ ಬೃಹತ್ ಚಲೋದಲ್ಲಿ ವನ್ನು ನೂರಾರು ಟ್ಯಾಕ್ಟರ್ ಮೂಲಕ ಚಿಕ್ಕಬೆಳವಂಗಲದಿಂದ ತಾಲೂಕು ಕಚೇರಿಗೆ ಸಾವಿರಾರು ರೈತರು ಒಗ್ಗೂಡಿ ಪ್ರತಿಭಟನಾ ಮೆರವಣಿಗೆ ನಡೆಸಿದರು.

ದೊಡ್ಡಬಳ್ಳಾಪುರ ತಾಲೂಕಿನ ದೊಡ್ಡಬೆಳವಂಗಲ, ಚಿಕ್ಕಬೆಳವಂಗಲ, ರಾಂಪುರ. ನಾರನಹಳ್ಳಿ, ಸೊಣ್ಣೆನಹಳ್ಳಿ ಗ್ರಾಮಗಳ ವ್ಯಾಪ್ತಿಯ ಸುಮಾರು 2100 ಎಕರೆ ಭೂಮಿಯನ್ನು ಕೆಐಎಡಿಬಿ ಸ್ವಾಧೀನಪಡಿಸಿಕೊಳ್ಳಲು ಮುಂದಾಗಿದೆ ಎಂದು ಪ್ರತಿಭಟನಾಕಾರರರು ಸರಕಾರದ ವಿರುದ್ಧ ಘೋಷಣೆ ಕೂಗಿದರು. ರೈತರು ಕೃಷಿ ಮಾಡಿಕೊಂಡು ಜೀವನ ಸಾಗಿಸುವುದ ಭೂಮಿಯನ್ನು ಸರ್ಕಾರ ಫಲವತ್ತಾದ ಭೂಮಿ ಸ್ವಾಧೀನಕ್ಕೆ ಮುಂದಾಗಿದೆ. ನಮ್ಮ ಜಮೀನಿನನ್ನು ಯಾವುದೇ ಕಾರಣಕ್ಕೂ ಕೊಡುವುದಿಲ್ಲ, ನಾವು ನಮ್ಮಭೂಮಿಯಲ್ಲಿ ಅಡಕೆ, ತೆಂಗು, ಸೀಬೆ, ದ್ರಾಕ್ಷಿ, ರಾಗಿ ಸೇರಿದಂತೆ ಇತರೆ ಬೆಳೆಯನ್ನು ಬೆಳೆಯುತ್ತಿದ್ದೇವೆ. ಇಂತಹ ಭೂಮಿಯನ್ನು ನಮ್ಮಂದಿ ಕಸಿದುಕೊಳ್ಳಲು ಸರ್ಕಾರ ಮುಂದಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ರೈತ ದೇಶದ ಬೆನ್ನೆಲುಬು, ಎಲ್ಲಾ ಸರ್ಕಾರಗಳು ರೈತರಿಂದ ಭೂಮಿಯನ್ನು ಬಲವಂತವಾಗಿ



ಕಬಳಿಸಿ ರೈತರ ಬೆನ್ನು ಮುರಿಯುವ ಕೆಲಸ ಮಾಡುತ್ತಿವೆ. ನಮ್ಮ ಭೂಮಿ ನಮ್ಮ ಹಕ್ಕು, ನಮ್ಮ ಪರಿಸರ ಸಮತೋಲನವಾಗಿರಬೇಕು ಆಗ್ರಹಿಸಿದರು. ಸ್ಥಳಕ್ಕೆ ಜಿಲ್ಲಾಧಿಕಾರಿಗಳು ಸಚಿವರು ಬಂದು ಸಮಸ್ಯೆ ಇತ್ಯರ್ಥಪಡಿಸೋವರೆಗೂ ನಾವು ಕದಲುವುದಿಲ್ಲ ಎಂದು ಪಟ್ಟು ಹಿಡಿದರು. ರೈತ ದೇಶದ ಬೆನ್ನೆಲುಬು, ಎಲ್ಲಾ ಸರ್ಕಾರಗಳು ರೈತರಿಂದ ಭೂಮಿಯನ್ನು ಬಲವಂತವಾಗಿ ಕಬಳಿಸಿ ರೈತರ ಬೆನ್ನು ಮುರಿಯುವ ಕೆಲಸ ಮಾಡುತ್ತಿವೆ. ನಮ್ಮ ಭೂಮಿ ನಮ್ಮ ಹಕ್ಕು, ನಮ್ಮ ಪರಿಸರ ಸಮತೋಲನವಾಗಿರಬೇಕೆಂದು ಒತ್ತಾಯಿಸಿದರು.

ಈಗಾಗಲೇ ಶಾಸಕ ಧೀರಜ್ ಮುನಿರಾಜ್, ಮಾಜಿ ಶಾಸಕ ಟಿ.ವೆಂಕಟರಮಣಯ್ಯ, ಜೆಡಿಎಸ್ ಮುಖಂಡ ಬಿ.ಮುನೇಗೌಡ ಸೇರಿದಂತೆ ಚನ್ನರಾಯಪಟ್ಟಣ ರೈತ ಹೋರಾಟಗಾರರು, ವಿವಿಧ ಸಂಘಟನೆಗಳ ಪ್ರಮುಖರು ಹೋರಾಟಕ್ಕೆ ಬೆಂಬಲ ನೀಡಿದ್ದಾರೆ. ಸರ್ಕಾರವು ರೈತರಿಗೆ ಹಿಂಸೆ ನೀಡಿ ಬಲವಂತವಾಗಿ ಭೂಮಿ ಕಬಳಿಕೆ ಮಾಡಲು ಮುಂದಾಗಿದೆ. ಬೇರೆ ದೇಶಗಳ ಕಂಪನಿಗಳಿಗೋಸ್ಕರ ನಮ್ಮ ಫಲವತ್ತಾದ ಜಮೀನು ಕಬಳಿಕೆ ಮಾಡಲಾಗುತ್ತಿದೆ. ನಮ್ಮ ಊಟದ ತಟ್ಟೆಯನ್ನು ಸರ್ಕಾರ ಕಿತ್ತುಕೊಳ್ಳುತ್ತಿದೆ. ಎಲ್ಲೂ ಸಹ ಬಲವಂತವಾಗಿ ಭೂಮಿ ಕಸಿದುಕೊಳ್ಳಬಾರದು ಎಂಬುದು ರೈತರ ಒತ್ತಾಯವಾಗಿದೆ.

ಈ ಸಂದರ್ಭದಲ್ಲಿ ದೊಡ್ಡಬೆಳವಂಗಲ ಭೂಸ್ವಾಧೀನ ವಿರೋಧಿ ಹೋರಾಟ ಸಮಿತಿ ಮುಖಂಡರು ಗ್ರಾಮಸ್ಥರು ರೈತರು ಇದ್ದರು.

ತಾಲೂಕು ಕಚೇರಿಗೆ ಮುತ್ತಿಗೆ

ಕೆ ಐಎಡಿಬಿ ಅವರು ರೈತರ ಸಾವಿರಾರು ಎಕರೆ ಜಮೀನನ್ನು ವಶಪಡಿಸಿಕೊಳ್ಳಲು ಮುಂದಾಗಿರುವ ರೈತ ವಿರೋಧಿ ನೀತಿ ಖಂಡಿಸಿ ದೊಡ್ಡಬೆಳವಂಗಲ ಭೂ ಸ್ವಾಧೀನ ವಿರೋಧಿ ಹೋರಾಟ ಸಮಿತಿ ಮಂಗಳವಾರ ತಾಲೂಕು ಕಚೇರಿಗೆ ಟ್ರ್ಯಾಕ್ಟರ್ ಚಲೋವನ್ನು ಹಮ್ಮಿಕೊಳ್ಳಲಾಗಿದೆ. ಈ ಹಿನ್ನೆಲೆಯಲ್ಲಿ ನೂರಾರು ಟ್ರ್ಯಾಕ್ಟರ್ ಮೂಲಕ ಚಿಕ್ಕಬೆಳವಂಗಲದಿಂದ ತಾಲೂಕು ಕಚೇರಿಗೆ ಸಾವಿರಾರು ರೈತರು ಬಂದು ಪ್ರತಿಭಟನೆ ನಡೆಸಿದರು.

ಪಕ್ಷದ ಮುಖಂಡರ ಬೆಂಬಲ

ಈಗಾಗಲೇ ಶಾಸಕ ಧೀರಜ್ ಮುನಿರಾಜ್, ಮಾಜಿ ಶಾಸಕ ಟಿ.ವೆಂಕಟರಮಣಯ್ಯ, ಜೆಡಿಎಸ್ ಮುಖಂಡ ಬಿ.ಮುನೇಗೌಡ ಸೇರಿದಂತೆ ಚನ್ನರಾಯಪಟ್ಟಣ ರೈತ ಹೋರಾಟಗಾರರು, ವಿವಿಧ ಸಂಘಟನೆಗಳ ಪ್ರಮುಖರು ಹೋರಾಟಕ್ಕೆ ಬೆಂಬಲ ನೀಡಿದ್ದಾರೆ.

ವಿದೇಶಿ ಕಂಪನಿಗಳಿಗೆ ಭೂಮಿ

ಬೇರೆ ದೇಶಗಳ ಕಂಪನಿಗಳಿಗೋಸ್ಕರ ನಮ್ಮ ಫಲವತ್ತಾದ ಜಮೀನು ಕಬಳಿಕೆ ಮಾಡಲಾಗುತ್ತಿದೆ. ನಮ್ಮ ಊಟದ ತಟ್ಟೆಯನ್ನು ಸರ್ಕಾರ ಕಿತ್ತುಕೊಳ್ಳುತ್ತಿದೆ. ಎಲ್ಲೂ ಸಹ ಬಲವಂತವಾಗಿ ಭೂಮಿ ಕಸಿದುಕೊಳ್ಳಬಾರದು ಎಂಬುದು ರೈತರ ಒತ್ತಾಯವಾಗಿದೆ.

ಪ್ರಾಣಿಪಕ್ಷಿಗಳಿಗೆ ಕಟ್ಟೆಯಲ್ಲಿ ನೀರು

ತಾವರೆಕೆರೆ : ಕಾಡಿನಲ್ಲಿ ಬತ್ತಿಹೋದ ಕೆರೆ ಕಟ್ಟೆಗಳು ನೀರಿಲ್ಲದೆ ಬಳಲುತ್ತಿರುವ ಪ್ರಾಣಿಗಳಿಗೆ ನಾಡೆ ಆಸರೆ ನೀರು ಕುಡಿಯಲು ನಾಡಿಗೆ ಬಂದ ಪ್ರಾಣಿಗಳು ಎಂಬ ಶೀರ್ಷಿಕೆ ಯಲ್ಲಿ ಹೊಸದಿಗಂತ ದಿನ ಪತ್ರಿಕೆಯಲ್ಲಿ ವಿಶೇಷ ವರಧಿ ಪ್ರಕಟವಾಗಿತ್ತು.





ವರದಿ ಪ್ರಕಟಗೊಂಡ ಬಳಿಕ ಜಾಗೃತರಾದ ಹೊಸಕೋಟೆ ತಾಲೂಕಿನ ಅರಣ್ಯಾಧಿಕಾರಿ ಪುಷ್ಪಾ ಅವರು ಹಾಗೂ ಇಲಾಖೆ ಸಿಬ್ಬಂದಿಗ ಆದೇಶಿಸಿದರು. ಹೊಸಕೋಟೆ ವ್ಯಾಪ್ತಿಯಲ್ಲಿರುವ ಅರಣ್ಯದಲ್ಲಿ ನೀರಿನ ತೊಟ್ಟಿಯನ್ನು ನಿರ್ಮಾಣ ಮಾಡುವ ಮೂಲಕ ಟ್ಯಾಂಕರ್ ಮೂಲಕ ನೀರನ್ನು ತುಂಬಿಸಿದರು. ಈ ಮೂಲಕ ಬೇಸಿಗೆ ಬೇಗೆಯಿಂದ ಪ್ರಾಣಿ ಪಕ್ಷಿಗಳು ನೀರಿಗಾಗಿ ಜನವಸತಿ ಪ್ರದೇಶಗಳಿಗೆ ಬರುವುದನ್ನು ತಡೆಯಲು ಅನುಕೂಲವಾಗುತ್ತದೆಂದು ಪರಿಸರ ಪ್ರೇಮಿಗಳು ಅರಣ್ಯಾಧಿಕಾರಿಗಳಿಗೆ ಅಭಿನಂದನೆ ಸಲ್ಲಿಸಿದ್ದಾರೆ.

ದೌರ್ಜನ್ಯದ ಬಗ್ಗೆ ಜಾಗೃತಿ ಮೂಡಿಸಲಿ

ದೇವನಹಳ್ಳಿ: ಇತ್ತಿಚಿನ ದಿನಗಳಲ್ಲಿ ಶಾಲಾ ಕಾಲೇಜುಗಳಲ್ಲಿ ಮಕ್ಕಳ ಮೇಲಿನ ದೌರ್ಜನ್ಯ ಜೊತೆಗೆ ಪೋಕ್ಸೋ ಪ್ರಕರಣಗಳು ಹೆಚ್ಚಾಗುತ್ತಿರುವುದು ಆತಂಕಕಾರಿ ಎಂದು ಜಿಲ್ಲಾ ಸತ್ರ ನ್ಯಾಯಾಲಯದ ನಿವೃತ್ತ ನ್ಯಾಯಾs ೀಶರಾದ ಎಸ್ ಸೋಮಶೇಖರ್ ಅವರು ಹೇಳಿದರು.



ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಬೆಂಗಳೂರು ಗ್ರಾಮಾಂತರ ಇವರ ಸಂಯುಕ್ತಾಶ್ರಯದಲ್ಲಿ ಜಿಲ್ಲಾಡಳಿತತ ಭವನದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ರಾಷ್ಟ್ರೀಯ ಮಕ್ಕಳ ಹಕ್ಕು ಗಳ ರಕ್ಷಣ ಆಯೋಗದ ವತಿಯಿಂದ ಮಕ್ಕಳ ಹಕ್ಕುಗಳ ಕುರಿತು ಹಮ್ಮಿಕೊಳ್ಳಲಾಗಿದ್ದ ಒಂದು ದಿನದ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿ, ಪೋಕ್ಸೋ ಕಾಯ್ದೆ-2012 ರ ಪ್ರಕಾರ 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಪ್ರತಿಯೊಬ್ಬ ವ್ಯಕ್ತಿಯನ್ನು 'ಮಗು' ಎಂದು ಪರಿಗಣಿಸಲಾಗುತ್ತದೆಂದರು. ಮಕ್ಕಳಿಗೆ ದೈಹಿಕವಾಗಿ, ಮಾನಸಿಕವಾಗಿ ಹಿಂಸೆ ಕೊಡುವಂತಿಲ್ಲ, ಶಾಲೆಗಳಲ್ಲಿ ಮಕ್ಕಳ ಮೇಲೆ ಹಲ್ಲೆ, ನಿಂದನೆ, ಮಾನಸಿಕ ಹಿಂಸೆ ಇವೆಲ್ಲವೂ ಅಪರಾಧಗಳೇ. ಶಾಲಾ ಕಾಲೇಜು ಶಿಕ್ಷಕರು, ಆಡಳಿತಮಂಡಳಿ ಅಥವಾ ಇತರೆಸಿಬ್ಬಂದಿಮಕ್ಕಳಿಗೆ ಮಾನಸಿಕ, ದೈಹಿಕ ಕಿರುಕುಳ ನೀಡುವುದು, ಇತ್ತೀಚಿನ ದಿನಗಳಲ್ಲಿ ಲೈಂಗಿಕ ದೌರ್ಜನ್ಯಗಳು ಹೆಚ್ಚುತ್ತಿರುವುದು ಆತಂಕಕಾರಿ ಬೆಳವಣಿಗೆ. ಶಿಕ್ಷಣ ಸಂಸ್ಥೆಗಳಲ್ಲಿನ ಚಲನವಲನಗಳನ್ನು ಅ ಕಾರಿಗಳು ಪರಿಶೀಲನೆ ನಡೆಸಬೇಕು. ಕಾಲಕಾಲಕ್ಕೆ ಮಕ್ಕಳಿಗೆ ಅರಿವು ಮೂಡಿಸುವ ಕೆಲಸ ಆಗಬೇಕು. ಪೋಷಕರು ಕೂಡ ಮಕ್ಕಳ ಮೇಲೆ ಸದಾ ನಿಗಾ ಇರಲಿ ಎಂದರು. ಜಿಲ್ಲಾsಕಾರಿ ಡಾ. ಕೆ.ಎನ್ ಅನುರಾಧ ಅವರು ಮಾತನಾಡಿ ಜಿಲ್ಲೆಯಲ್ಲಿ ಪ್ರಸಕ್ತ ಸಾಲಿನಲ್ಲಿ ಪೋಕ್ಸೊ ಕಾಯ್ದೆಯಡಿ 78 ಪ್ರಕರಣ ದಾಖಲಾಗಿದೆ, 30 ಬಾಲ್ಯ ವಿವಾಹ ಪ್ರಕರಣಗಳ ಪೈಕಿ 8 ಬಾಲ್ಯ ವಿವಾಹ ನಡೆದಿದೆ. 22 ತಡೆಯಲಾಗಿದೆ, 8 ಪ್ರಕರಣಗಳ ಮೇಲೆ ಎಫ್ ಐಆರ್ ದಾಖಲು ಮಾಡಲಾಗಿದೆ ಎಂದು ಮಾಹಿತಿ ನೀಡಿದರು. ಮಕ್ಕಳ ಮೇಲಿನ ದೌರ್ಜನ್ಯ ಕಂಡು ಬಂದಲ್ಲಿ ದೂರವಾಣಿ ಸಂಖ್ಯೆ 112 ಅಥವಾ ಚೈಲ್ಡ್ ಲೈನ್ 1098 ಗೆ ಉಚಿತ ದೂರವಾಣಿ ಕರೆ ಮಾಡಿ ದೂರು ನೀಡಿ ಅಥವಾ ಜಿಲ್ಲಾ ಮಕ್ಕಳ ರಕ್ಷಣಾ ಘಟಕ 0034ಗೆ ಕರೆ ಮಾಡಿ ಮಕ್ಕಳ ರಕ್ಷಣೆಗೆ ಸಹಕಾರ ನೀಡಬಹುದಾಗಿದೆ. ಅಪರ ಜಿಲ್ಲಾಧಿಕಾರಿ ಸೈಯಿದಾಆಯಿಷಾ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಅಧ್ಯಕ್ಷೆ ಚಿತ್ರಕಲಾ, ಜಿಲ್ಲಾ ಮಕ್ಕಳ ರಕ್ಷಣಾsಕಾರಿ ಅನಿತಾ ಲಕ್ಷ್ಮಿ, ಸಾಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕಿ ಪ್ರೇಮ, ರೋಹಿತ್ ಸಿ.ಜಿ. ಎಸ್‌ಜೆಪಿಯು-ಸಿಐಡಿ ಬೆಂಗಳೂರು, ಶಿಕ್ಷಣ ಇಲಾಖೆ ಅsಕಾರಿ ಪದ್ಮಾವತಿ ಇದ್ದರು.

ಶಿವಗಂಗೆ ವೃತ್ತದಲ್ಲಿ ಕೆಂಪೇಗೌಡ ಪ್ರತಿಮೆ



ನೆಲಮಂಗಲ/ಸೋಂಪುರ: ಶಿವಗಂಗೆ ಅಭಿವೃದ್ಧಿಗೆ ಶಕ್ತಿಯಾದ ನಾಡಪ್ರಭು ಕೆಂಪೇಗೌಡರು ಹಾಗೂ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಗಳ ಕಂಚಿನ ಪ್ರತಿಮೆಯನ್ನು ಸೋಂಪುರದ ಶಿವಗಂಗೆ ವೃತ್ತದಲ್ಲಿ ಪ್ರತಿಷ್ಠಾಪನೆ ಮಾಡಲು ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆಂದು ರಾಜ್ಯ ಒಕ್ಕಲಿಗರ ಜಾಗೃತಿ ಸಂಘದ ಅಧ್ಯಕ್ಷ ಗಂಗರುದ್ರಯ್ಯ ತಿಳಿಸಿದರು.

ತಾಲೂಕಿನ ಸೋಂಪುರ ಹೋಬಳಿ ಶಿವಗಂಗೆ ವೃತ್ತದಲ್ಲಿ ಒಕ್ಕಲಿಗ ಸಮುದಾಯದ ಮುಖಂಡರು ನಾಡಪ್ರಭು ಕೆಂಪೇಗೌಡರು ಹಾಗೂ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿ, ಶಿವಗಂಗೆ ವೃತ್ತದ ಒಂದುಕಡೆ ನಾಡಪ್ರಭುಗಳ ಕಂಚಿನ ಪ್ರತಿಮೆ, ಮತ್ತೊಂದು ಕಡೆ ಬಾಲಗಂಗಾಧರ ನಾಥ ಸ್ವಾಮೀಜಿಗಳ ಪ್ರತಿಮೆ ನಿರ್ಮಾಣಕ್ಕೆ ಈಗಾಗಲೇ ಎಲ್ಲಾ ತಯಾರಿ ನಡೆಸಲಾಗಿದೆಂದರು.

ಪ್ರತಿಮೆಯೂ ಸಹ ಸಿದ್ದವಾಗಿದೆ. ಪ್ರತಿಮೆ ನಿರ್ಮಾಣಕ್ಕೆ ಪಿಲ್ಲರ್ ನಿರ್ಮಾಣ ಮಾಡಲಾಗಿದೆ. ಉದ್ಯಾನವನ ಕೆಲಸ ಪ್ರಗತಿಯಲ್ಲಿದೆ. ಈಗ ಕೆಲವರು ಆ ಸ್ಥಳದಲ್ಲಿ ಬೇರೆ ಪ್ರತಿಮೆ ನಿರ್ಮಾಣ ಮಾಡಬೇಕೆಂದು ಹೇಳುತ್ತಿರುವುದು ಸರಿಯಲ್ಲ, ಬಹಳಷ್ಟು ವರ್ಷದಿಂದ ಸ್ಥಳೀಯ ಸಂಸ್ಥೆಯ ಅನುಮತಿ ಪಡೆದು ಪ್ರತಿಮೆ ನಿರ್ಮಾಣಕ್ಕೆ ಮುಂದಾಗಿರುವುದು, ಈ ವಿಚಾರದಲ್ಲಿ ಸಮಾಜದ ಗೌರವಾನ್ವಿತ ಸ್ಥಾನದಲ್ಲಿರುವವರು ಸಾಮರಸ್ಯಕಾಪಾಡಬೇಕೇ ವಿನಾ ಸಂಘರ್ಷಕ್ಕೆ ದಾರಿ ಮಾಡಿಕೊಡಬಾರದೆಂದರು. ಸಿದ್ಧಗಂಗಾ ಮಠದ ನಡೆದಾಡುವದೇವರು ಶ್ರೀ ಶಿವಕುಮಾರಮಹಾಸ್ವಾಮೀಜಿಗಳ ಹುಟ್ಟು ಹಬ್ಬದ ಹಿನ್ನೆಲೆಯಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಅನ್ನಸಂತರ್ಪಣೆ ಮಾಡಿದರು.

ಸೋಂಪುರ ವಿಎಸ್‌ಎಸ್‌ಎನ್ ಅಧ್ಯಕ್ಷ ಮೋಹನ್ ಕುಮಾರ್ ಮಾತನಾಡಿ, ಎರಡು ಕಂಚಿನ ಪ್ರತಿಮೆ ನಿರ್ಮಾಣಕ್ಕೆಈಗಾಗಲೇ ನೂರಾರು ಸಮುದಾಯದ ಜನರು ಸಹಕಾರ ಮಾಡಲಾಗಿದ್ದು ಪ್ರತಿಮೆಕಾರ್ಯ ಪೂರ್ಣಗೊಂಡಿದೆ. ಕೆಲವೇ ದಿನದಲ್ಲಿ ಲೋಕಾರ್ಪಣೆ ಸಹ ಮಾಡಲಾಗುತ್ತದೆ ಎಂದು ತಿಳಿಸಿದರು.

ಸಂದರ್ಭದಲ್ಲಿ ಜೆಡಿಎಸ್ ಸೋಂಪುರಹೋಬಳಿ ಅಧ್ಯಕ್ಷ ಮೋಹನ್ ಕುಮಾರ್ ಎಂ.ಸಿ , ಬಿಡಿಸಿಸಿ ನಿರ್ದೇಶಕ ಪಟ್ಟಾಭಿರಾಮಯ್ಯ, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಬಿ.ಎಂ ಶ್ರೀನಿವಾಸ್ , ನಗರಸಭೆ ಸದಸ್ಯ ಪಾಪಣ್ಣಿ, ಯುವ ಮುಖಂಡರಾದ ಮಂಜುನಾಥ್, ವಿಷ್ಣು, ಸುರೇಂದ್ರ, ಶೇಖರ್, ಮಣಿ, ಗೋಪಿ, ವಿಜಯ್ ಹೊಸಪಾಳ್ಯ, ಚನ್ನಕೇಶವ್, ಹಿರಿಯ ಮುಖಂಡರಾದ ಮಂಜುನಾಥ್, ಎಮ್.ಸಿ. ಮೋಹನ್ ಕುಮಾರ್, ದೇವರಾಜ್ ಪೆಮ್ಮನಹಳ್ಳಿ, ಜಿ.ನಾಗರಾಜು, ಚನ್ನಪ್ಪ, ಹರೀಶ್, ಪೊನ್ನಣ್ಣ, ರಂಗಸ್ವಾಮಿ, ಉಮೇಶ್, ಹೊನ್ನೇನಹಳ್ಳಿ ವೆಂಕಟೇಶ್,ಶಶಿಧರ್, ಪುಟ್ಟರಾಮಯ್ಯ, ಗೋಪಿನಾಥ್, ಭಾರತಿಪುರ ಬಿ.ಪಿ.ಶ್ರೀನಿವಾಸ್, ಬೈರೇಶ್, ಗೋವಿಂದರಾಜ್,ಕೆಂಪಹನುಮಯ್ಯ, ರಾಘವೇಂದ್ರ, ಸಿದ್ದಪ್ಪ ಬಿ.ಎಲ್, ವೆಂಕಟಪ್ಪ, ರಾಜಣ್ಣ, ಸಿದ್ದರಾಜು, ಮಂಜುನಾಥ್, ಮನೋಹರ್, ಸಂತೋಷ್‌ಕುಮಾರ್, ಪ್ರಕಾಶ್ , ಸುರೇಶ್, ಹನುಮಂತರಾಜು, ಮೂರ್ತಿ ತಿಮ್ಮೇಗೌಡ, ಚಂದ್ರಣ್ಣ, ಹರ್ಷ, ಗೋಪಾಲ್, ಸತೀಶ್, ನಳಿನ ಸೇರಿದಂತೆ ಅನೇಕ ಮುಖಂಡರು ಭಾಗಿಯಾಗಿದ್ದರು.

ಅಪ್ಪಸಂದ್ರದಲ್ಲಿ ಶ್ರೀ ಭತ್ತೇಶ್ವರಸ್ವಾಮಿ ದೊಡ್ಡ ಜಾತ್ರೋತ್ಸವ

ಆಚರಣೆಗಳು ಶ್ರದ್ಧೆಯಿಂದ ನಡೆಯಲಿ

ತಾವರೆಕೆರೆ: ಭಕ್ತಿ ಭಾವನೆಯಿಂದ ದೇವರ ಆಚರಣೆಗಳು ನಡೆಯಬೇಕು ಎಂದು ಮಾಜಿ ಸಚಿವ ಎಂಟಿಬಿ ನಾಗರಾಜ್ ತಿಳಿಸಿದರು.

ಹೊಸಕೋಟೆ ತಾಲೂಕು ಅಪ್ಪಸಂದ್ರ ಗ್ರಾಮದಲ್ಲಿ ಕುರುಬ ಜನಾಂಗದ ಶ್ರೀ ಭತ್ತೇಶ್ವರಸ್ವಾಮಿ ದೊಡ್ಡ ಜಾತ್ರಾ ಮಹೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಜೀವನದಲ್ಲಿ ಒಳ್ಳೆಯ ಕೆಲಸಗಳನ್ನು ಮಾಡಬೇಕಾದರೆ ಪ್ರಯತ್ನ ಮಾಡಬೇಕು. ಜನರ ಭಕ್ತಿ ಭಾವನೆಗಳು ಬಹಳ ಶ್ರದ್ದೆ ಭಕ್ತಿಯಿಂದ ಕೂಡಿರಬೇಕು. ಪ್ರತಿ ನಿತ್ಯ ದೇವರ ಧ್ಯಾನವನ್ನು ನೆನೆಯುವಂತಹ ಕಾರ್ಯವಾಗಬೇಕು ಎಂದು ಹೇಳಿದರು.



ದೇವರು ಯಾವಾಗಲೂ ಬಯಸುವುದು ಪ್ರತಿಯೊಬ್ಬರು ಪರಸ್ಪರ ಪ್ರೀತಿ, ವಿಶ್ವಾಸ, ಗೌರವದಿಂದ ಎಲ್ಲರೂ ಒಂದೇ ತಾಯಿಯ ಮಕ್ಕಳಂತೆ ಬದುಕಬೇಕು. ದೇವರಿಗೆ ಎಲ್ಲ ಜಾತಿ, ಧರ್ಮದವರು ಒಂದೇ. ಸಮಾನತೆ ಯಿಂದ ಬದುಕುವವಾತಾವರಣವನ್ನು ಕಲ್ಪಿಸಿಕೊಳ್ಳಬೇಕು. ಪ್ರತಿಯೊಬ್ಬರ ನಡೆ, ನುಡಿ ಬದಲಾವಣೆ ಯಾಗಬೇಕು. ಅಂತರಾಳದಲ್ಲಿರುವ ಮನಸ್ಸಿನ ದೇವರು ಸರಿಯಾಗಿರಬೇಕು ಎಂದು ಹೇಳಿದರು. ಹಾಲುಮತ ಕುಲಗುರುಗಳಾದ ಶ್ರೀ ಗುರು ಸಿದ್ದಲಿಂಗಆರಾಧ್ಯರು ಮಾತನಾಡಿ, ಮನಸ್ಸಿನ ದೇವರು ಸ್ವಚ್ಛವಾಗಿರಬೇಕು. ಮನದಲ್ಲಿ ಬಹಳಷ್ಟು ಕಲ್ಮಶ ತುಂಬಿಕೊಂಡು ದೇವರು ಮುಂದೆ ಹೋಗಿ ಕೈ ಮುಗಿದರೇ ಏನು ಪ್ರಯೋಜನವಿಲ್ಲ. ನಮ್ಮ ಕುಲಸ್ಥರು ನೂರಾರು ವರ್ಷದಿಂದ ಇಲ್ಲಿ ದೇವರ ತಲೆ ಮೇಲೆ ಕಾಯಿ ಒಡೆಯುವ ಜಾತ್ರಾ ಮಹೋತ್ಸವವನ್ನು ನಡೆಸಿಕೊಂಡು ಬರುತ್ತಿದ್ದೇವೆ ಎಂದರು. ಕುರುಬರ ಸಮಾಜದ ಕುಲ ದ್ಯಾವರು ಮಾರ್ಚ್ 28,29, 30ರಂದು ಮೂರು ದಿನ ನಡೆಯುವ ಕಾರ್ಯಕ್ರಮದಲ್ಲಿ ಸುಮಾರು 12 ರಿಂದ 15 ಸಾವಿರ ಅsಕ ಜನ ಸೇರಿದ್ದು, ಕಾರ್ಯಕ್ರಮದಲ್ಲಿ ತಲೆ ಮೇಲೆ ತೆಂಗಿನಕಾಯಿ ಹೊಡೆಯುವುದು ವಿಶೇಷ, ಡೋಳು ಕುಣಿತ, ವೀರಗಾಸೆ, ಕಾಲಾಡಿ ಕುಣಿತ ಎಲ್ಲರ ಗಮನ ಸೆಳೆಯಿತು.

ಕಾರ್ಯಕ್ರಮದಲ್ಲಿ ಹೊಸದುರ್ಗ ಕನಕಗುರ ಪೀಠ ಶಾಖಾಮಠದ ಪರಮಪೂಜ್ಯ ಶ್ರೀ ಈಶ್ವರನಂದಪುರಿ ಸ್ವಾಮೀಜಿ, ಜಿ ಪಂ ಮಾಜಿ ಸದಸ್ಯ ಸಿ. ನಾಗರಾಜ್, ಶ್ರೀ ಬಸವೇಶ್ವರ ಸ್ವಾಮಿ ಸೇವಾ ಸಮಿತಿ ಅಧ್ಯಕ್ಷ ಎಸ್.ವಿ.ಮುನಿರಾಜು, ಕುಲಗೌಡರಾದ ಗೋವಿಂದರಾಜು, ಯೋಗಿ ಲಕ್ಷ್ಮಣಮೂರ್ತಿ, ಕರಿನಾಗಪ್ಪ, ಎಚ್. ಕೆ. ಮುನಿಯಪ್ಪ, ಎನ್.ರಮೇಶ್, ಕಂಬಿ ಯಜಮಾನರಾದ ಮುನಿರಾಜು ವೈ, ರಾಮಕೃಷ್ಣಪ್ಪ , ಮುಕುಂದ, ಶಿವರಾಜ್, ರಾಮಕೃಷ್ಣಪ್ಪ, ಶ್ರೀ ಬಸವೇಶ್ವರ ಸ್ವಾಮಿ ದೇವಾಲಯದ ಕಾರ್ಯಕಾರಿ ಸಮಿತಿ ಗೌರವರಾಧ್ಯಕ್ಷ ಪಟೇಲ್ ಬಾಬು, ಕಾರ್ಯಾಧ್ಯಕ್ಷ ಗೋವಿಂದರಾಜು, ಉಪಾಧ್ಯಕ್ಷ ಎಂ. ನಾರಾಯಣಸ್ವಾಮಿ, ವೆಂಕಟಪ್ಪ, ಕೃಷ್ಣಮೂರ್ತಿ, ಕಾರ್ಯದರ್ಶಿ ಸಿ.ಆರ್. ದೇವರಾಜ್, ಜಂಟಿ ಕಾರ್ಯದರ್ಶಿ ಮುನಿರಾಜು, ಖಜಾಂಚಿ ಎನ್ .ವೆಂಕಟೇಶ್, ರಾಜ್ಯ ನಿರ್ದೇಶಕ ಕೇಶವಮೂರ್ತಿ, ಮಾಜಿ ನಿರ್ದೇಶಕ ಕೆ.ನಾಗೇಶ್ ಇದ್ದರು.

ಬಾಬು ಜಗಜೀವನ ರಾಮ್, ಅಂಬೇಡ್ಕರ್ ಜಯಂತಿಗೆ ಪೂರ್ವಭಾವಿ ಸಭೆ

ದಲಿತ ಮುಖಂಡರಲ್ಲಿ ಮೂಡದ ಒಮ್ಮತ

ಹೊಸಕೋಟೆ: ಬಾಬು ಜಗಜೀವನ್ ರಾಮ್, ಅಂಬೇಡ್ಕರ್ ಜಯಂತಿಯನ್ನು ಒಂದೇ ದಿನ ಆಚರಣೆ ಮಾಡಬೇಕು ಎಂದು ಎಡಗೈ ಸಮುದಾಯದ ಮುಖಂಡರ ಒತ್ತಾಯಯಿಸಿದರೆ ಏ.5ರಂದು ಬಾಬು ಜಗಜೀವನ ರಾಮ್ ಜಯಂತಿ, ಏ.14 ರಂದು

ಅಂಬೇಡ್ಕರ್ ಜಯಂತಿ ಆಚರಣೆ ಮಾಡುವ ಮೂಲಕ ಇಬ್ಬರೂ ನಾಯಕರಿಗೆ ಪ್ರತ್ಯೇಕ ಗೌರವ ಸಲ್ಲಿಸಬೇಕು ಎಂದು ಬಲಗೈ ಸಮುದಾಯದ ಮುಖಂಡರು ಒತ್ತಾಯಿಸಿದರು.



ನಗರದ ತಾಲೂಕು ಕಚೇರಿಯಲ್ಲಿ ಬಾಬು ಜಗಜೀವನ ರಾಮ್ ಜಯಂತಿ ಆಚರಣೆ ಸಂಬಂಧ ತಹಶೀಲ್ದಾರ್ ಸೋಮಶೇಖರ್ ನೇತೃತ್ವದಲ್ಲಿ ಪೂರ್ವಸಿದ್ಧತಾ ಸಭೆಯಲ್ಲಿ ಮುಖಂಡರುಗಳು ಬಿರುಸಿನಿಂದ ಚರ್ಚಿಸಿದರು. ಈ ವೇಳೆಯಲ್ಲಿ ಮಾಜಿ ಪುರಸಭ ಸದಸ್ಯ ಎನ್ .ನಾಗರಾಜ್ ಮಾತನಾಡಿ, 1980ರಿಂದ ತಾಲೂಕಿನಲ್ಲಿ ಬಲಗೈ ಹಾಗೂ ಎಡಗೈ ಸಮುದಾಯ ಬಾಬು ಜಗಜೀವನ್ ರಾಮ್ , ಡಾ.ಅಂಬೇಡ್ಕರ್ ಜಯಂತಿಯನ್ನು ಒಟ್ಟಾಗಿ ನಗರದ ಉದ್ಯಾನವನದಲ್ಲಿ ಆಚರಿಸಿಕೊಂಡು ಬರಲಾಗಿದೆಂದರು. ಸಮುದಾಯದ ಮುಖಂಡ ಶಿವಕುಮಾರ್ ಮಾತನಾಡಿ, ನಮ್ಮನ್ನು ಎಷ್ಟೇ ದೂರ ಮಾಡಬೇಕೆಂಬ ಕೆಲಸ ಅವರು ಮಾಡಿದರೂ ನಮ್ಮ ಎರಡೂ ಸಮುದಾಯಗಳು ಅಷ್ಟೇ ಹತ್ತಿರ ಆಗುವುದರ ಮೂಲಕ ಇನ್ನಷ್ಟು ಬಲಿಷ್ಟವಾಗುತಿದ್ದೇವೆಂದರು.

ದಲಿತಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಚಿನ್ನಸ್ವಾಮಿ ಮಾತನಾಡಿ, ಏ. 5ರಂದು ಬಾಬು ಜಗಜೀವನ ರಾಮ್ ಜಯಂತಿ, ಅದೇ ರೀತಿ ಏ.14ರಂದು ಅಂಬೇಡ್ಕರ್ ಜಯಂತಿಯನ್ನು ಎಡಗೈ ಸಮುದಾಯದವರೂ ಸೇರಿ ಒಟ್ಟಿಗೆ ಆಚರಿಸೋಣ ಎಂದು ನಿರ್ಧರಿಸಲು ಆಗ್ರಹಿಸಿದರು. ಸಭೆಯಲ್ಲಿ ತಾಪಂ ಇಒ ಮುನಿಯಪ್ಪ, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಸಿದ್ದರಾಜ್, ನಗರಸಭೆ ಆರ್‌ಒ ತ್ಯಾಗರಾಜ್, ದಲಿತ ಮುಖಂಡರಾದ ಡಿ.ಎಂ. ಮುನಿರಾಜ್, ಕೆ.ಆರ್.ಬಿ. ಶಿವಾನಂದ, ನರಸಿಂಹಯ್ಯ, ಗುಟ್ಟಳ್ಳಿ ನಾಗರಾಜ್ ಸೇರಿ ಹಲವಾರು ಮುಖಂಡರಿದ್ದರು. ಒಮ್ಮತದ

ಏ.1ರಂದು ಬೆಳಗ್ಗೆ 11 ಗಂಟೆಗೆತಾಪಂ ಆವರಣದಲ್ಲಿ ಮತ್ತೊಂದು ಸಭೆ ಹಮ್ಮಿಕೊಳ್ಳಲಾಗುವುದು. ಎರಡು ಸಮುದಾಯದವರಿಗೆ 24 ಗಂಟೆಯಲ್ಲಿ ನೀಡಲಾಗುವುದು ನಾಳೆನ ಸಭೆಯಲ್ಲಿ ಎರಡು ಸಮುದಾಯದ ಮುಖಂಡರು ಒಮ್ಮತ ಸೂಚಿಸಿದರೆ ಅದೇ ರೀತಿ ಕಾರ್ಯಕ್ರಮ ಆಯೋಜನೆ ಮಾಡ ಲಾಗುವುದೆಂದು ತಹಶೀಲ್ದಾರ್ ಸೋಮಶೇಖರ್ ತಿಳಿಸಿದರು.

ನೆಲಮಂಗಲ ನಗರ ಸಭೆ: 127 ಕೋಟಿ ರೂ. ಬಜೆಟ್ ಮಂಡನೆ

129ಕೋಟಿ ರೂ. ಆದಾಯದ ನಿರೀಕ್ಷೆ

ನೆಲಮಂಗಲ: ನಗರಸಭೆ ಸರ್ವತೋಮುಖ ಅಭಿವೃದ್ಧಿಗೆ 127.47 ಕೋಟಿ ರೂ. ಆಯವ್ಯಯ ಬಜೆಟ್‌ನ್ನು ನಗರಸಭೆ ಅಧ್ಯಕ್ಷ ಎನ್.ಗಣೇಶ್ ಮಂಡನೆ ಮಾಡಿದ್ದು ಈ ಬಾರಿ 1.65 ಕೋಟಿ ರೂ. ಉಳಿತಾಯ ಬಜೆಟ್ ಮಂಡನೆಯಾಗಿದೆ.



ನಗರದ ಬಸವನಹಳ್ಳಿ ನಗರಸಭೆ ಕಚೇರಿಯ ಸಭಾಂಗಣದಲ್ಲಿ ನಡೆದ 2026-27ನೇ ಸಾಲಿನ ಬಜೆಟ್ ಸಾರ್ವಜನಿಕರಿಗೆ ಕುಡಿವ ನೀರು, ಬೀದಿದೀಪ ವ್ಯವಸ್ಥೆ, ನೈರ್ಮಲೀಕರಣ, ರಸ್ತೆ, ಚರಂಡಿ ಸೇರಿದಂತೆ ಇತರ ಅಭಿವೃದ್ಧಿಗೆ ಆದ್ಯತೆ ನೀಡಲಾಗಿದ್ದು 2026-27ನೇ ಸಾಲಿನ ನಿರೀಕ್ಷಿತ ಆದಾಯ 116.19ಕೋಟಿಯಾಗಿದೆ. ಪ್ರಾರಂಭಿಕ ಶುಲ್ಕ 12.93ಕೋಟಿ ರೂ. ಸೇರಿದಂತೆ ಬಜೆಟ್ ಗಾತ್ರ ರೂ. 129.12ಕೋಟಿಯಾಗಿದೆ. 2026-27ನೇ ಸಾಲಿನ ನಿರೀಕ್ಷಿತ ಖರ್ಚು 127.47ಕೋಟಿ ಅಂದಾಜಿಸಲಾಗಿದೆ. 1.65ಕೋಟಿ ರೂ. ಉಳಿತಾಯ ಬಜೆಟ್ ಮಂಡನೆ ಮಾಡಲಾಗಿದೆ. ಕೊಳವೆ ಬಾವಿ ಕೊರೆಯಲು 4ಕೋಟಿ, ನೀರು ವಿತರಣಾ ವ್ಯವಸ್ಥೆಗೆ 1.5ಕೋಟಿ ರೂ. ಯಂತ್ರೋಪಕರಣಗಳಿಗೆ 3.50ಕೋಟಿ ರೂ., ಶುದ್ಧ ನೀರಿನ ಯಂತ್ರೋ ಪಕರಣಗಳಿಗೆ 40 ಲಕ್ಷ ರೂ, ಒಳಚರಂಡಿ ಕಾಮ ಗಾರಿಗೆ 50ಲಕ್ಷ ರೂ. ವಾಹನಗಳ ಜಟ್ಟಿಂಗ್ ಮಿಷಿನ್‌ಗೆ 40ಲಕ್ಷ ರೂ. ಸೇರಿದಂತೆ ಒಟ್ಟಾರೆ 10.30 ಕೋಟಿ ರೂ. ಮೀಸಲಿರಿಸಲಾಗಿದೆ.

ಪಾರ್ಕ್ ಅಭಿವೃದ್ದಿಗೆ 18.65ಕೋಟಿ ರೂ. ಅನುದಾನ ಹಂಚಿಕೆ ಮಾಡಿದ್ದರೆ ನೈರ್ಮಲ್ಯ ಮತ್ತು ಘನತ್ಯಾಜ್ಯ ನಿರ್ವಹಣೆಗೆ 3.15 ಕೋಟಿ ರೂ. ಹಂಚಿಕೆ ಮಾಡಿದ್ದಾರೆ. ಬಂಡವಾಳ ಪಾವತಿ ಆಡಳಿತ ವೆಚ್ಚಕ್ಕೆ 11.20 ಕೋಟಿ ರೂ, ಆರೋಗ್ಯ ಮತ್ತು ಘನತ್ಯಾಜ್ಯ ನಿರ್ವಹಣೆಗೆ 5.41ಕೋಟಿ ರೂ, ನೀರು ಸರಬರಾಜಿಗೆ 4.12ಕೋಟಿ ರೂ. ಹಂಚಿಕೆ ಮಾಡಲಾಗಿದೆ. ಆಯ-ವ್ಯಯದ ಶೇ.100ರಷ್ಟು ನಿರೀಕ್ಷಿತ ಆದಾಯದಲ್ಲಿ ತೆರಿಗೆ ಆದಾಯದಿಂದ ಶೇ.18,ಬಂಡವಾಳ ರಶೀದಿಗಳಿಂದ ಶೇ.16, ಇತರೆ ಹೊಣೆಗಾರಿಕೆಗಳಿಂದ ಶೇ.9, ನಿರ್ದಿಷ್ಟ ಅನುದಾನದಿಂದ ಶೇ.19, ಕಲ್ಯಾಣ ನಿಧಿ ವರ್ಗಾವಣೆ ಶೇ.5, ಅನುದಾನ ಮತ್ತು ಕೊಡುಗೆಯಿಂದ ಶೇ15, ಬಳಕೆದಾರ ಶುಲ್ಕಗಳಿಂದ ಶೇ.16, ಪುರಸಭೆ ಆಸ್ತಿಯ ಬಾಡಿಗೆ ಆದಾಯ ಹಾಗೂ ಠೇವಣಿಯಿಂದ ತಲಾ ಶೇ.1ರಷ್ಟು ನಿರೀಕ್ಷೆಯನ್ನು ಮಾಡಿದ್ದಾರೆ.

ಈ ಸಂದರ್ಭದಲ್ಲಿ ನಗರಸಭೆ ಪೌರಾಯುಕ್ತ ಗಂಗಾಧರ್, ಮಾಜಿ ಅಧ್ಯಕ್ಷೆ ಸುಜಾತಮುನಿಯಪ್ಪ, ಸದಸ್ಯರಾದ ಸುನೀಲ್‌ಮೂಡ್, ಶಿವಕುಮಾರ್, ಅಂಜನಮೂರ್ತಿ(ಪಾಪಣ್ಣಿ), ಚೇತನ್, ಪುರುಷೋತ್ತಮ್, ಆಂಜಿನಪ್ಪ, ಸುಧಾಕೃಷ್ಣಪ್ಪ, ಪುಷ್ಪಲತಾ ಮಾರೇಗೌಡ, ರಾಜಮ್ಮಪಿಳ್ಳಪ್ಪ, ಲೋಲಾಕ್ಷಿ ಗಂಗಾಧರ್, ಹೆಚ್ಚುವರಿ ಸದಸ್ಯರಾದ ಆಂಜನಮೂರ್ತಿ, ಕೃಪಾನಂದ್, ರಾಮಮೂರ್ತಿ, ಮುನಿರಾಜು ಸೇರಿದಂತೆ ಮತ್ತಿತರರಿದ್ದರು.

ಜಲಸಂಧಿ ಬಹುತೇಕ ಮುಚ್ಚಿದ್ದರೂ ಯುದ್ಧ ನಿಲ್ಲಿಸಲು ಟ್ರಂಪ್ ಒಲವು

ಹಾರ್ಮುಜ್ ಮುಚ್ಚಿದ್ದರೂ ಯುದ್ಧ ನಿಲ್ಲಿಸ್ತಾರಾ ಟ್ರಂಪ್?

- ಇರಾನ್ ನೌಕಾಪಡೆ ದುರ್ಬಲಗೊಳಿಸುವುದೇ ಗುರಿ
- ಜಲಸಂಧಿ ಅಮೆರಿಕಕ್ಕಿಂತ ಇತರ ರಾಷ್ಟ್ರಗಳಿಗೆ ಬಹು ಮುಖ್ಯ : ಡೊನಾಲ್ಡ್ ಟ್ರಂಪ್



ವಾಷಿಂಗ್ಟನ್: ಹಾರ್ಮುಜ್ ಜಲಸಂಧಿಯನ್ನು ಬಹುತೇಕ ಮುಚ್ಚಿದ್ದರೂ ಸರಿ, ಇರಾನ್ ಯುದ್ಧವನ್ನು ನಿಲ್ಲಿಸಲು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸಿದ್ಧವಾಗಿದ್ದಾರೆಂದು ಅವರ ಆಪ್ತ ವಲಯಗಳು ತಿಳಿಸಿವೆಯೆಂದು ದಿ ವಾಲ್ ಸ್ಟ್ರೀಟ್ ಜರ್ನಲ್ ವರದಿ ಮಾಡಿದೆ.

ಸದ್ಯ ಇರಾನ್ ನಿಯಂತ್ರಣದಲ್ಲಿರುವ ಹಾರ್ಮುಜ್ ಜಲಸಂಧಿಯನ್ನು ವಶಪಡಿಸಿ ಸಂಪೂರ್ಣ ತೆರೆಯುವುದಕ್ಕಾಗಿ



ಕಾರ್ಯಾಚರಣೆ ಕೈಗೆತ್ತಿಕೊಂಡರೆ ಗುರಿಸಾಧಿಸಲುಇನ್ನೂನಾಲ್ಕರಿಂದ ಆರು ವಾರಗಳವರೆಗೆ ಯುದ್ಧ ನಡೆಸುವ ಅಗತ್ಯವಿರುವುದನ್ನು ಟ್ರಂಪ್ ಮತ್ತವರ ಆಪ್ತ ವಲಯ ಮನಗಂಡಿದೆ ಎಂದು ವರದಿಯಾಗಿದೆ.

ಇದರಿಂದಾಗಿ ಅಮೆರಿಕ ಸದ್ಯ ಹಾರ್ಮುಜ್ ವಶಪಡಿಸುವ ಕಾರ್ಯಾಚರಣೆ ಯೋಜನೆಯನ್ನು ಕೈಬಿಟ್ಟಿದೆ. ಹಾರ್ಮುಜ್ ವಶಪಡಿಸುವ ಬದಲಿಗೆ ಇರಾನ್ ಮೇಲಿನ ಸೇನಾ ಕಾರ್ಯಾಚರಣೆಯಲ್ಲಿ ಗುರಿ ಸಾಧಿಸುವುದರ ಬಗ್ಗೆ ಹೆಚ್ಚಿನ ಗಮನಹರಿಸುತ್ತಿದೆ. ಇರಾನ್ ನೌಕಾಪಡೆಯನ್ನು ದುರ್ಬಲಗೊಳಿಸುವುದು, ಇರಾನ್ ಕ್ಷಿಪಣಿ ಸಂಗ್ರಹಾಗಾರಗಳ ನಾಶ ಮತ್ತು ರಾಜತಾಂತ್ರಿಕ ಮಾತುಕತೆ ಮೂಲಕ ಒತ್ತಡ ಹಾಕುವುದರ ಮೇಲೆ ಅಮೆರಿಕ ಗಮನ ಹರಿಸಲಿದೆ ಎಂದು ವರದಿಯಾಗಿದೆ.

ಜಾಗತಿಕ ತೈಲ ಮತ್ತು ಅನಿಲ ಪೂರೈಕೆಯಲ್ಲಿ ಹಾರ್ಮುಜ್ ಜಲಸಂಧಿ ಎಷ್ಟೊಂದು ಪ್ರಮುಖ ಪಾತ್ರವಹಿಸುತ್ತದೆ ಎಂಬ ಸಂದೇಶವನ್ನು ಸಾಮಾನ್ಯ ಜನರಿಗೆ ಈಗಾಗಲೇ ಅಧ್ಯಕ್ಷ ಟ್ರಂಪ್ ರವಾನಿಸಿದ್ದಾರೆ. ಜಲಸಂಧಿಯನ್ನು ತೆರೆಯದಿದ್ದರೆ ಇರಾನ್ ಇಂಧನ ಮೂಲಸೌಕರ್ಯಗಳ ಮೇಲೆ ಬಾಂಬ್ ದಾಳಿ ನಡೆಸುವುದಾಗಿ ಬೆದರಿಕೆಯೊಡ್ಡುವ ಮೂಲಕ ಜಲಸಂಧಿಯಪ್ರಾಮುಖ್ಯತೆಕುರಿತುಅರಿವುಮೂಡಿಸಿದ್ದಾರೆ. ಇದಲ್ಲದೆ, ಜಲಸಂಧಿಯು ಅಮೆರಿಕಕ್ಕಿಂತ ಹೆಚ್ಚು ಇತರ ರಾಷ್ಟ್ರಗಳ ಸಾಗರೋತ್ತರ ವ್ಯವಹಾರಕ್ಕೆ ನಿರ್ಣಾಯಕ ಪಾತ್ರ ವಹಿಸುತ್ತಿದೆ ಎಂದೂ ಟ್ರಂಪ್ ಮನದಟ್ಟು ಮಾಡಿದ್ದಾರೆ.

ಹಾರ್ಮುಜ್ ಬಂದ್: ವ್ಯಾಪಾರ ಅನಿಶ್ಚಿತತೆ

ಜಾಗತಿಕ ತೈಲ ಪೂರೈಕೆಯ ಶೇ.20ರಷ್ಟು ಭಾಗ ಹಾರ್ಮುಜ್ ಜಲಸಂಧಿಯನ್ನು ದಾಟಿ ಹೋಗಬೇಕಾಗುತ್ತದೆ. ಹೀಗಾಗಿ ಇರಾನ್ ಮೇಲಿನ ಯುದ್ಧದಿಂದ ಜಲಸಂಧಿ ಮುಚ್ಚಿರುವುದರಿಂದ ಶೇ.20ರಷ್ಟು ತೈಲ ಪೂರೈಕೆ ವ್ಯತ್ಯಯ ಸೃಷ್ಟಿಸಿದೆ. ಇದಲ್ಲದೆ ವಿಶ್ವದ ದೊಡ್ಡ ದೊಡ್ಡ ತೈಲ ಮಾರುಕಟ್ಟೆಗಳ ಮೇಲೆ ಹಾರ್ಮುಜ್ ನೇರ ಪರಿಣಾಮವನ್ನು ಬೀರುತ್ತದೆ. ಈ ಹಿಂದೆ ಜಲಸಂಧಿಯನ್ನು ಯಾವುದೇ ಅಡೆತಡೆಗಳಿಲ್ಲದೆ ದಾಟುತ್ತಿದ್ದ ರಾಷ್ಟ್ರಗಳನ್ನೂ ಯುದ್ಧ ಪರಿಸ್ಥಿತಿ ಬಾಧಿಸಿದೆ. ಜಾಗತಿಕ ಮಟ್ಟದಲ್ಲಿ ತೈಲ ಅಥವಾ ಅನಿಲ ಪೂರೈಕೆಯಷ್ಟೇ ಅಲ್ಲದೆ, ರಸಗೊಬ್ಬರ, ಹೀಲಿಯಂ, ಸೆಮಿಕಂಡಕ್ಟರ್, ಗ್ಲಾಸ್ ಬಾಟಲ್ ಉತ್ಪಾದನೆ ಇತ್ಯಾದಿ ಉದ್ಯಮಗಳನ್ನೂ ಬಾಧಿಸಿದೆ. ಜಾಗತಿಕವಾಗಿ ಒಂದು ಬ್ಯಾರೆಲ್ ತೈಲ ಬೆಲೆಯು 100 ಡಾಲರ್ ಹೆಚ್ಚಾಗಿದೆ.

ಅಮೆರಿಕದ ಸಿಗೋನೆಲ್ಲಾ ವಾಯುನೆಲೆ ಬಳಸಲು ಅನುಮತಿಸದ ಇಟಲಿ!

ರೋಮ್: ಸಿಸಿಲಿಯಲ್ಲಿರುವ ಸಿಗೋನೆಲ್ಲಾ ಮಿಲಿಟರಿ ವಾಯುನೆಲೆಯನ್ನು ಸಾಮಾನ್ಯೇತರ ಕಾರ್ಯಾಚರಣೆಗಳಿಗಾಗಿ ಬಳಸಲು ಅಮೆರಿಕಕ್ಕೆ ಇಟಲಿ ಅನುಮತಿ ನಿರಾಕರಿಸಿದೆ. ಈ ಮೂಲಕ ಮತ್ತೊಮ್ಮೆ ಟ್ರಂಪ್‌ಗೆ ಭಾರೀ ಮುಖಭಂಗವಾಗಿದೆ. ಮಧ್ಯಪ್ರಾಚ್ಯದತ್ತ ತೆರಳುತ್ತಿದ್ದ ಅಮೆರಿಕದ ಬಾಂಬರ್ ವಿಮಾನಗಳ ಹಾರಾಟ ಯೋಜನೆಯನ್ನು ಗಮನಿಸಿದ ರಕ್ಷಣಾ ಸಚಿವ ಗೈಡೋ ಕ್ರೊಸೆಟ್ಟೊ ಈ ನಿರ್ಧಾರ ಕೈಗೊಂಡಿದ್ದಾರೆ. ವಿಮಾನಗಳು ಈಗಾಗಲೇ ಟೇಕ್-ಆಫ್ ಆದ ನಂತರವಷ್ಟೇ ಇಟಲಿ ಅಧಿಕಾರಿಗಳಿಗೆ ಈ ಮಿಷನ್ ಬಗ್ಗೆ ಮಾಹಿತಿ ಸಿಕ್ಕಿತ್ತು. ಪ್ರಾಥಮಿಕ ತಪಾಸಣೆಯ ನಂತರ, ಈ ಹಾರಾಟಗಳು ಕೇವಲ ಲಾಜಿಸ್ಟಿಕಲ್ ಉದ್ದೇಶದ್ದಲ್ಲ ಮತ್ತು ಅಸ್ತಿತ್ವದಲ್ಲಿರುವ ದ್ವಿಪಕ್ಷೀಯ ಒಪ್ಪಂದಗಳ ವ್ಯಾಪ್ತಿಗೆ ಬರುವುದಿಲ್ಲ ಎಂದು ಖಚಿತಪಡಿಸಿಕೊಳ್ಳಲಾಯಿತು. ಇಂತಹ ಕಾರ್ಯಾಚರಣೆಗಳಿಗೆ ಪೂರ್ವಭಾವಿ ರಾಜಕೀಯ ಮತ್ತು ಮಿಲಿಟರಿ ಸಮಾಲೋಚನೆಗಳ ಅಗತ್ಯವಿರುತ್ತದೆ. ಸಾಮಾನ್ಯ ಕಾರ್ಯಾಚರಣೆಗಳ ಹೊರತಾದ ಯಾವುದೇ ಚಟುವಟಿಕೆಗಳಿಗೆ ಸಂಸತ್ತಿನ ಅನುಮೋದನೆ ಅಗತ್ಯ ಎಂದು ಪ್ರಧಾನಿ ಜಾರ್ಜಿಯಾ ಮೆಲೋನಿ ಈ ಹಿಂದೆ ತಿಳಿಸಿದ್ದರು. ಸಿಗೋನೆಲ್ಲಾ ನೆಲೆಯು ಅಮೆರಿಕ ಸೇನೆಗೆ ಮೆಡಿಟರೇನಿಯನ್ ಪ್ರದೇಶದಲ್ಲಿ ಆಯಕಟ್ಟಿನ ಕೇಂದ್ರವಾಗಿದೆ. ಇರಾನ್ ವಿರುದ್ಧದ ಸಂಘರ್ಷಕ್ಕೆ ಸ್ಪೇನ್ ತನ್ನ ವಾಯುಪ್ರದೇಶವನ್ನು ಮುಚ್ಚಿದ ಬೆನ್ನಲ್ಲೇ ಇಟಲಿಯೂ ಈ ನಿರ್ಧಾರ ತೆಗೆದುಕೊಂಡಿದೆ.

ಇಂಧನ ಬೇಕಿದ್ದರೆ, ಜಲಸಂಧಿಗೆ ತೆರಳಿ!

ಇರಾನ್ ಯುದ್ಧದಲ್ಲಿ ಬೆಂಬಲಿಸದ ಮಿತ್ರರಾಷ್ಟ್ರಗಳಿಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ನಿಮಗೆ ಬೇಕಿರುವ ತೈಲ ನೀವೇ ಸಂಗ್ರಹಿಸಿಕೊಳ್ಳಿ ಎಂದು ಖಡಕ್ ಎಚ್ಚರಿಕೆ ನೀಡಿದ್ದಾರೆ. ಹಾರ್ಮುಜ್ ಜಲಸಂಧಿಯನ್ನು ವಶಪಡಿಸಲು ಯುದ್ಧ ನೌಕೆಗಳನ್ನು ಕಳುಹಿಸಲು ಅಮೆರಿಕ ಮನವಿಯನ್ನು ತಿರಸ್ಕರಿಸಿದ್ದ ಮಿತ್ರ ರಾಷ್ಟ್ರಗಳು ತಮಗೆ ತೈಲ ಬೇಕಾಗಿದ್ದರೆ ಅಮೆರಿಕದಿಂದ ಖರೀದಿಸಲಿ ಅಥವಾ ಹಾರ್ಮುಜ್‌ಗೆ ಹೋಗಿ ಅಲ್ಲಿಂದ ನೇರ ಸಂಗ್ರಹಿಸಿಕೊಳ್ಳಲಿ ಎಂದು ಟ್ರಂಪ್ ಕುಹಕವಾಡಿದ್ದಾರೆ. ಬ್ರಿಟನ್ ಸೇರಿದಂತೆ ಎಲ್ಲಾ ಮಿತ್ರರಾಷ್ಟ್ರಗಳು ಹಾರ್ಮುಜ್ ಮೂಲಕ ತೈಲ ಆಮದು ಮಾಡಿಕೊಳ್ಳುತ್ತವೆ. ಇಂತಹ ರಾಷ್ಟ್ರಗಳ ಮುಂದೆ ಎರಡು ಆಯ್ಕೆಗಳಿವೆ. ಅಮೆರಿಕದಿಂದ ತೈಲ ಖರೀದಿಸುವುದು ಅವರಿಗಿರುವ ಮೊದಲ ಆಯ್ಕೆ. ಸ್ವಲ್ಪ ತಡವಾದರೂ ಧೈರ್ಯ ಮಾಡಿಕೊಂಡು ಹಾರ್ಮುಜ್ ಜಲಸಂಧಿಗೆ ನೇರ ಹೋಗಿ ತೈಲ ಸಂಗ್ರಹಿಸುವುದು ಎರಡನೇ ಆಯ್ಕೆ ಎಂದು ಟ್ರಂಪ್ ಟ್ರುತ್ ಸೋಶಿಯಲ್‌ನಲ್ಲಿ ಬರೆದಿದ್ದಾರೆ. ನಿಮಗೋಸ್ಕರ ಹೋರಾಡಲು ಕಲಿಯಿರಿ: ನಿಮಗೋಸ್ಕರ ನೀವೇ ಹೋರಾಡಲು ಕಲಿತುಕೊಳ್ಳಿ. ನೀವು ಹೇಗೆ ನಮಗೆ ಸಹಾಯ ಮಾಡಿಲ್ಲವೋ ಹಾಗೆ ಮುಂದೆ ನಿಮಗೇನಾದರೂ ಸಮಸ್ಯೆಯಾದರೆ ಅಮೆರಿಕ ಸಹಾಯ ಮಾಡಲ್ಲ ಎಂದು ಅಧ್ಯಕ್ಷ ಟ್ರಂಪ್ ಯುರೋಪ್ ರಾಷ್ಟ್ರಗಳನ್ನು ಎಚ್ಚರಿಸಿದ್ದಾರೆ.

ಇಸ್ಫಾಹಾನ್ ಮೇಲೆ ಬೃಹತ್ ದಾಳಿ



ಸುಮಾರು 23 ಲಕ್ಷ ಜನಸಂಖ್ಯೆ ಹೊಂದಿರುವ ಮತ್ತು ಬದ್ರ್ ಸೇನಾ ವಿಮಾನ ನಿಲ್ದಾಣವಿರುವ ಇಸ್ಫಾಹಾನ್ ನಗರದ ಮದ್ದುಗುಂಡು ಸಂಗ್ರಹಣಾ ಕೇಂದ್ರದ ಮೇಲೆ ಅಮೆರಿಕ ಸೇನೆ 2,000 ಪೌಂಡ್ (ಸುಮಾರು 907 ಕೆಜಿ) ತೂಕದ ಬಂಕರ್ ಬಸ್ಟರ್ ಬಾಂಬ್‌ಗಳನ್ನು ಬಳಸಿ ದಾಳಿ ನಡೆಸಿದೆ. ಈ ದಾಳಿಯಿಂದಾಗಿ ಸರಣಿ ಸ್ಫೋಟಗಳು ಮತ್ತು ಬಲವಾದ ಆಘಾತಕಾರಿ ಅಲೆಗಳು ಸೃಷ್ಟಿಯಾಗಿವೆ. ಇರಾನ್ ತನ್ನ ಬಳಿಯಿರುವ ಸುಮಾರು 540 ಕೆಜಿ ಪುಷ್ಟೀಕರಿಸಿದ ಯುರೇನಿಯಂ ಅನ್ನು ಈ ನಗರದ ಭೂಗತ ಕೇಂದ್ರಕ್ಕೆ ಸ್ಥಳಾಂತರಿಸಿರಬಹುದು ಎಂಬ ವರದಿಗಳ ಬೆನ್ನಲ್ಲೇ ಈ ದಾಳಿ ನಡೆದಿದೆ.

ಮೂಲಸೌಕರ್ಯಗಳ ನಾಶದ ಬೆದರಿಕೆ: ಒಂದು ವೇಳೆ ಯುದ್ಧ ನಿಲ್ಲಿಸಲು ಶೀಘ್ರವೇ ಒಪ್ಪಂದಕ್ಕೆ ಬರದಿದ್ದರೆ ಮತ್ತು ಹಾರ್ಮುಜ್ ಜಲಸಂಧಿಯನ್ನು ಮುಕ್ತಗೊಳಿಸದಿದ್ದರೆ ಇರಾನ್‌ನ ಇಂಧನ ಸಂಪನ್ಮೂಲಗಳು, ಪರಮಾಣು ಕೇಂದ್ರಗಳು ಮತ್ತು ನೀರಿನ ಪ್ಲಾಂಟ್‌ಗಳನ್ನು ನಾಶಪಡಿಸುವುದಾಗಿ ಟ್ರಂಪ್ ಎಚ್ಚರಿಸಿದ ಒಂದು ದಿನದ ನಂತರ ಈ ಕಾರ್ಯಾಚರಣೆ ನಡೆದಿದೆ.

ಬಂಕರ್ ಬಸ್ಟರ್ ತಂತ್ರಜ್ಞಾನ: ಈ ದಾಳಿಯಲ್ಲಿ ಬಳಸಲಾದ ಬಿಎಲ್‌ಯು-109 ನಂತಹ ಬಾಂಬ್‌ಗಳು ಗಟ್ಟಿಯಾದ ಉಕ್ಕಿನ ಕವಚವನ್ನು ಹೊಂದಿದ್ದು, ಮಣ್ಣು ಮತ್ತು ಕಾಂಕ್ರೀಟ್ ಪದರಗಳನ್ನು ಕೊರೆದು ಒಳಗೆ ಹೋದ ನಂತರವೇ ಸ್ಫೋಟಗೊಳ್ಳುತ್ತವೆ. ಇವುಗಳಲ್ಲಿ ಕೆಲವು ಸ್ಮಾರ್ಟ್ ಫ್ಯೂಸ್‌ಗಳನ್ನು ಹೊಂದಿದ್ದು, ಕಟ್ಟಡದ ಎಷ್ಟು ಮಹಡಿಗಳನ್ನು ದಾಟಬೇಕು ಅಥವಾ ಶಬ್ದಗಳನ್ನು ಕೇಳಿಸಿಕೊಂಡ ನಂತರವೇ ಸ್ಫೋಟಗೊಳ್ಳಬೇಕೆಂಬುದನ್ನು ನಿರ್ಧರಿಸುವ ತಂತ್ರಜ್ಞಾನ ಹೊಂದಿವೆ.

ಪ್ರಾದೇಶಿಕ ಹಿನ್ನೆಲೆ: ಈ ಸಂಘರ್ಷ ಎರಡನೇ ತಿಂಗಳಿಗೆ ಕಾಲಿಟ್ಟಿದೆ. ಇರಾನ್ ಪರಮಾಣು ಅಸ್ತ್ರ ತಯಾರಿಕೆಗೆ ಹತ್ತಿರದಲ್ಲಿದೆ, ಎಂದು ಅಮೆರಿಕ ಮತ್ತು ಇಸ್ರೇಲ್ ಆರೋಪಿಸುತ್ತಿದ್ದರೂ, ವಿಶ್ವಸಂಸ್ಥೆಯ ಪರಮಾಣು ಕಾವಲು ಸಂಸ್ಥೆ ಈ ವಾದವನ್ನು ಬೆಂಬಲಿಸಿಲ್ಲ. ಕಳೆದ ವರ್ಷ ಕೂಡ 'ಆಪರೇಷನ್ ಮಿಡ್‌ನೈಟ್ ಹ್ಯಾಮರ್ ಅನ್ವಯದಲ್ಲಿ ಇಸ್ಫಾಹಾನ್ ನಗರವನ್ನು ಗುರಿಯಾಗಿಸಲಾಗಿತ್ತು.

ಟ್ರಂಪ್ ಷರತ್ತುಗಳಿಗೆ ಒಪ್ಪಿದರಷ್ಟೇ ಯುದ್ಧ ಅಂತ್ಯ



ವಾಷಿಂಗ್ಟನ್: ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಷರತ್ತುಗಳಿಗೆ ಒಪ್ಪಿದರಷ್ಟೇ ಯುದ್ಧ ಕೊನೆಗಾಣಲಿದೆ. ಮುಂದಿನ ಕೆಲವು ದಿನಗಳು ಮಧ್ಯಪ್ರಾಚ್ಯ ಯುದ್ಧದಲ್ಲಿ ಬಹಳ ನಿರ್ಣಾಯಕ ದಿನಗಳೆಂದು ಅಮೆರಿಕ ರಕ್ಷಣಾ ಕಾರ್ಯದರ್ಶಿ ಪೀಟ್ ಹೆಗ್ಸೆತ್ ಹಾಗೂ ರಕ್ಷಣಾ ಜಂಟಿ ಮುಖ್ಯಸ್ಥ ಜನರಲ್ ಡಾನ್ ಕೇನ್ ಮಂಗಳವಾರ ಘೋಷಿಸಿದ್ದಾರೆ. ಮಧ್ಯಪ್ರಾಚ್ಯ ಯುದ್ಧವು ಮುಂದಿನ ದಿನಗಳಲ್ಲಿ ಅನಿರೀಕ್ಷಿತ ತಿರುವುಗಳನ್ನು ಕಾಣಲಿದೆ ಎಂದು ಹೆಗ್ಸೆತ್ ಹೇಳಿದ್ದಾರೆ. ಇರಾನ್‌ಗೆ ಸೈನ್ಯವನ್ನು ಕಳುಹಿಸಲು ಅಮೆರಿಕ ಬಯಸುವುದಿಲ್ಲ, ಆದರೆ ಒಂದು ವೇಳೆ ನಾವು ಸೈನ್ಯ ಕಳುಹಿಸಿದರೆ ಯಾರಿಗೂ ಹೇಳಲಾರೆ ಎಂದು ಎಚ್ಚರಿಕೆ ನೀಡಿದ್ದಾರೆ. ಇರಾನ್‌ನಲ್ಲಿ ಅಮೆರಿಕ ತನ್ನ ಎಪಿಕ್ ಫ್ಯೂರಿ ಕಾರ್ಯಾಚರಣೆ ಮುಂದುವರಿಸಲು ಸಿದ್ಧವಾಗಿದೆ ಎಂದು ಹೆಗ್ಸೆತ್ ತಿಳಿಸಿದ್ದಾರೆ.

ಗೂಗಲ್, ಮೈಕ್ರೋಸಾಫ್ಟ್‌ಗೆ ಇರಾನ್‌ನಿಂದ ದಾಳಿ ಬೆದರಿಕೆ

Google Microsoft

- ಪಶ್ಚಿಮ ಏಷ್ಯಾ ಯುದ್ಧ ಉಲ್ಬಣ
- ಅಮೆರಿಕದ ಟೆಕ್ ದೈತ್ಯ ಸಂಸ್ಥೆಗಳ ಮೇಲೆ ದಾಳಿ ಎಚ್ಚರಿಕೆ

ಟೆಹ್ರಾನ್: ಪಶ್ಚಿಮ ಏಷ್ಯಾದಲ್ಲಿ ಯುದ್ಧದ ತೀವ್ರತೆ ಹೆಚ್ಚಾಗುತ್ತಿರುವ ಹಿನ್ನೆಲೆ, ಇರಾನ್ ಅಮೆರಿಕದ ಪ್ರಮುಖ ತಂತ್ರಜ್ಞಾನ ಕಂಪನಿಗಳಿಗೆ ನೇರ ಬೆದರಿಕೆ ಹಾಕಿದೆ. ಅಮೆರಿಕ ಮತ್ತು ಇಸ್ರೇಲ್ ನಡೆಸುತ್ತಿರುವ ಭಯೋತ್ಪಾದಕ ಕಾರ್ಯಾಚರಣೆಗಳಿಗೆ ಪ್ರತಿಯಾಗಿ, ಮೈಕ್ರೋಸಾಫ್ಟ್, ಆ್ಯಪಲ್, ಗೂಗಲ್, ಇಂಟೆಲ್, ಬೋಯಿಂಗ್ ಸೇರಿದಂತೆ ಹಲವು ಕಂಪನಿಗಳನ್ನು ಗುರಿಯಾಗಿಸಲಾಗುವುದು ಎಂದು ಇರಾನ್‌ನ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ ಎಚ್ಚರಿಸಿದೆ. ಅಮೆರಿಕದ ಐಸಿಟಿ ಮತ್ತು ಕೃತಕ ಬುದ್ಧಿಮತ್ತೆ(ಎಐ) ಕಂಪನಿಗಳು ಹತ್ಯೆ ಕಾರ್ಯಾಚರಣೆಗಳನ್ನು ರೂಪಿಸುವ ಮತ್ತು ಜಾರಿಗೆತರುವಲ್ಲಿಪ್ರಮುಖಪಾತ್ರವಹಿಸುತ್ತಿವೆ ಎಂದು ಆರೋಪಿಸಲಾಗಿದೆ. ಈ ಹಿನ್ನೆಲೆಯಲ್ಲಿ ಇರಾನ್‌ನಲ್ಲಿ ನಡೆಯುವ ಪ್ರತಿಯೊಂದು ದಾಳಿಗೂ ಪ್ರತಿಯಾಗಿ ಈ ಕಂಪನಿಗಳ ಮೂಲಸೌಕರ್ಯಗಳ ಮೇಲೆ ದಾಳಿ ನಡೆಸಲಾಗುವುದು ಎಂದು ಸ್ಪಷ್ಟಪಡಿಸಲಾಗಿದೆ.

ಈ ಬೆದರಿಕೆಯ ಭಾಗವಾಗಿ, ಕಂಪನಿಗಳ ಕಚೇರಿಗಳ ಸುತ್ತಮುತ್ತ ಒಂದು ಕಿಲೋಮೀಟರ್ ವ್ಯಾಪ್ತಿಯಲ್ಲಿರುವ ಉದ್ಯೋಗಿಗಳು ಮತ್ತು ನಿವಾಸಿಗಳಿಗೆ ಸ್ಥಳತ್ಯಾಗ ಮಾಡಲು ಸೂಚಿಸಲಾಗಿದೆ. ಏ. 1ರಂದು ಟೆಹರಾನ್ ಸಮಯ ರಾತ್ರಿ 8 ಗಂಟೆಯಿಂದ ಪ್ರತೀಕಾರ ಕಾರ್ಯಾಚರಣೆಗಳು ಆರಂಭವಾಗಲಿವೆ ಎಂದು ಅದು ಎಚ್ಚರಿಕೆ ನೀಡಿದೆ. ಇದಕ್ಕೂ ಮುನ್ನವೂ ಇರಾನ್ ಇದೇ ರೀತಿಯ ಎಚ್ಚರಿಕೆ ನೀಡಿದ್ದರೂ, ಯಾವುದೇ ನೈಜ ದಾಳಿ ನಡೆದಿರಲಿಲ್ಲ, ಆದರೆ ಈ ಬಾರಿ ಪರಿಸ್ಥಿತಿ ಹೆಚ್ಚು ಗಂಭೀರವಾಗಿದೆ ಎಂಬ ಆತಂಕ ವ್ಯಕ್ತವಾಗಿದೆ.

ಇದಕ್ಕೆ ಪ್ರತಿಕ್ರಿಯೆಯಾಗಿ ಅಮೆರಿಕವೂ ಕಠಿಣ ನಿಲುವು ತಾಳಿದೆ. ಮುಂದಿನ ದಿನಗಳಲ್ಲಿ ನಾವು ತೀವ್ರ ರೀತಿಯಲ್ಲಿ ದಾಳಿ ನಡೆಸಲಿದ್ದೇವೆ. ಕೆಲವು ದಿನಗಳು ನಿರ್ಣಾಯಕವಾಗಿವೆ ಎಂದು ಹೇಳಿದೆ.



ಕಿರುಸುದ್ದಿ

ಟೆನಿಸ್ ದಂತಕಥೆ ಲಿಯಾಂಡರ್ ಬಿಜೆಪಿಗೆ

ಕೋಲ್ಕತ್ತಾ: ಭಾರತೀಯ ಟೆನಿಸ್ ದಂತಕಥೆ ಲಿಯಾಂಡರ್ ಪೇಸ್ ಬಿಜೆಪಿಗೆ ಸೇರ್ಪಡೆಯಾಗಿದ್ದಾರೆ. ಪಶ್ಚಿಮ ಬಂಗಾಳ ಚುನಾವಣೆಗೂ ಮುನ್ನ ಈ ಬೆಳವಣಿಗೆ ನಡೆದಿದೆ. ಕೇಂದ್ರ ಸಚಿವ ಕಿರಣ್ ರಿಜಿಜು ಸೇರಿದಂತೆ ಪಕ್ಷದ ಹಿರಿಯ ನಾಯಕರ ಸಮ್ಮುಖದಲ್ಲಿ ಅವರು ಬಿಜೆಪಿ ಸೇರ್ಪಡೆಯಾಗಿದ್ದಾರೆ. ಟೆನಿಸ್ ತಾರೆ ಲಿಯಾಂಡರ್ ಪೇಸ್ ಇತ್ತೀಚೆಗೆ ಬಿಜೆಪಿ ರಾಷ್ಟ್ರಾಧ್ಯಕ್ಷ ನಿತಿನ್ ನವೀನ್ ಅವರನ್ನು ಭೇಟಿಯಾದ ಬಳಿಕ ಅವರು ಬಿಜೆಪಿಗೆ ಸೇರ್ಪಡೆಯಾಗುತ್ತಾರೆಂಬ ಊಹಾಪೋಹಗಳು ಸೃಷ್ಟಿಯಾಗಿತ್ತು.

ಕಾಲ್ತುಳಿತ: 9 ಭಕ್ತರ ಸಾವು

ಪಾಟ್ನಾ: ಭಕ್ತರ ಸಂದಣಿಯಿಂದ ಬಿಹಾರದ ನಳಂದ ಜಿಲ್ಲೆಯ ಶೀತಲ ದೇವಸ್ಥಾನದಲ್ಲಿ ಉಂಟಾದ ಕಾಲ್ತುಳಿತದಲ್ಲಿ ಕನಿಷ್ಠ 9 ಮಹಿಳಾ ಭಕ್ತರು ಮೃತಪಟ್ಟಿದ್ದು, ಅನೇಕರು ಗಾಯಗೊಂಡಿದ್ದಾರೆ.ಧಾರ್ಮಿಕ ಸಭೆ ವೇಳೆ ಈ ದುರಂತ ಸಂಭವಿಸಿದೆ. ಮಹಾವೀರ ಜಯಂತಿ ಹಿನ್ನೆಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ನೆರೆದಿದ್ದರು. ಇದರಿಂದಾಗಿ ಜನದಟ್ಟಣೆ ಉಂಟಾಗಿದ್ದು, ಬ್ಯಾರಿಕೇಡ್ ಮುರಿದ್ದು, ಒಬ್ಬರ ಮೇಲೆ ಒಬ್ಬರಂತೆ ಕೆಳಗೆ ಬಿದ್ದಿದ್ದಾರೆ.

ಭಾರತದತ್ತ ಮತ್ತೆ ಇರಾನ್ ಕಚ್ಚಾ ತೈಲ ಹೊತ್ತ ಟ್ಯಾಂಕರ್

ಹೊಸದಿಲ್ಲಿ: ಆರು ವರ್ಷಗಳ ಹಿಂದೆ ಸ್ಥಗಿತಗೊಂಡಿದ್ದ ಇರಾನ್ ಮೂಲದ ಕಚ್ಚಾ ತೈಲ ಖರೀದಿ ಮತ್ತೆ ಆರಂಭವಾಗುವ ಲಕ್ಷಣಗಳು ಕಾಣಿಸುತಿವೆ. ಅಮೆರಿಕದ ತಾತ್ಕಾಲಿಕ ನಿರ್ಬಂಧ ಸಡಿಲಿಕೆ ಬೆನ್ನಲ್ಲೇ ಸುಮಾರು 6 ಲಕ್ಷ ಬ್ಯಾರೆಲ್ ಇರಾನಿಯನ್ ಕಚ್ಚಾ ತೈಲವನ್ನು ಹೊತ್ತ ಟ್ಯಾಂಕರ್ ಒಂದು ಗುಜರಾತ್ ತೀರದ ವಡಿನಾರ್ ಬಂದರಿಗೆ ಮುಖ ಮಾಡಿದೆ ಎಂಬ ಮಾಹಿತಿ ಹಡಗು ಟ್ರ್ಯಾಕಿಂಗ್ ಡೇಟಾದಿಂದ ತಿಳಿದು ಬಂದಿದೆ.

- ಗುಜರಾತ್ ತೀರಕ್ಕೆ ಮೊದಲ ಕಾರ್ಗೋ ಆಗಮನ ಸಾಧ್ಯತೆ

ಅಮೆರಿಕ ಸರ್ಕಾರ 30 ದಿನಗಳ ಅವಧಿಗೆ ಸಮುದ್ರದಲ್ಲಿರುವ ಇರಾನ್ ತೈಲ ಖರೀದಿಗೆ ಸಡಿಲಿಕೆ ನೀಡಿದ್ದು, ಇದರ ಪರಿಣಾಮವಾಗಿ ಭಾರತ ಸೇರಿ ಕೆಲ ದೇಶಗಳು ಮತ್ತೆ ಈ ತೈಲವನ್ನು ಖರೀದಿಸಲು ಮುಂದಾಗಿವೆ. ಈ ಹಿನ್ನೆಲೆ ಪಿಂಗ್ ಶುನ್ ಎಂಬ ಆಫ್ರಮ್ಯಾಕ್ಸ್ ಟ್ಯಾಂಕರ್ ಮಾರ್ಚ್ ಆರಂಭದಲ್ಲಿ ಖರ್ಗ್ ದ್ವೀಪದಿಂದ ಹೊರಟು ಏಪ್ರಿಲ್ 4ರಂದು ವಡಿನಾರ್ ತಲುಪುವ ನಿರೀಕ್ಷೆಯಿದೆ.

ಕಾಮೊಡಿಟಿ ಮಾರುಕಟ್ಟೆ ವಿಶ್ಲೇಷಕ ಸಂಸ್ಥೆ ಕ್ಪ್ಲರ್‌ನ ಸಂಶೋಧನಾ ವಿಶ್ಲೇಷಕ ಸುಮಿತ್ ರಿತೋಲಿಯಾ ಪ್ರಕಾರ, 2019ರ ಮೇ ಬಳಿಕ ಭಾರತಕ್ಕೆ ಬರುತ್ತಿರುವ ಮೊದಲ ಇರಾನಿಯನ್ ತೈಲ ಸರಕು ಇದು.

ಪಾವತಿ ಸಮಸ್ಯೆ ಮುಂದುವರಿಕೆ: ಅಮೆರಿಕ ನೀಡಿರುವ ಸಡಿಲಿಕೆ ಕೇವಲ ತಾತ್ಕಾಲಿಕವಾಗಿದ್ದು, ಏಪ್ರಿಲ್ 19ರವರೆಗೆ ಮಾತ್ರ ಮಾನ್ಯವಾಗಿದೆ. ಜಾಗತಿಕ ಬ್ಯಾಂಕಿಂಗ್ ಸಂಪರ್ಕ ವ್ಯವಸ್ಥೆಯಾದ ಸ್ವಿಫ್ಟ್‌ನಿಂದ ಇರಾನ್ ಹೊರಗಿಡಲ್ಪಟ್ಟಿರುವುದರಿಂದ ಪಾವತಿ ಹೇಗೆ ನಡೆಯಲಿದೆ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ.

ಅಸ್ಸಾಂ ಬಿಜೆಪಿ ಪ್ರಣಾಳಿಕೆ: ಏನಾಸಂ ಜಾರಿ ಭರವಸೆ

ಗುವಾಹಟಿ: ಮುಂಬರುವ ಅಸ್ಸಾಂ ವಿಧಾನಸಭಾ ಚುನಾವಣೆಗಾಗಿ ಭಾರತೀಯ ಜನತಾ ಪಾರ್ಟಿ ಮಂಗಳವಾರ ತನ್ನ ಪ್ರಣಾಳಿಕೆ ಬಿಡುಗಡೆ ಮಾಡಿದ್ದು, ಅಧಿಕಾರಕ್ಕೆ ಬಂದ ಮೂರು ತಿಂಗಳೊಳಗೆ ಏಕರೂಪ ನಾಗರಿಕ ಸಂಹಿತೆ (ಏನಾಸಂ) ಜಾರಿಗೆ ತರುವುದಾಗಿ ಭರವಸೆ ನೀಡಿದೆ.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮತ್ತು ಮುಖ್ಯಮಂತ್ರಿ ಹಿಮಂತಬಿಸ್ವಶರ್ಮಾ, 31 ಭರವಸೆಗಳನ್ನೊಳಗೊಂಡ ಸಂಕಲ್ಪ ಪತ್ರವನ್ನು ಬಿಡುಗಡೆ ಮಾಡಿದರು. ಲವ್ ಜಿಹಾದ್ ಮತ್ತು 'ಲ್ಯಾಂಡ್ ಜಿಹಾದ್' ವಿರುದ್ಧ ಕಾನೂನು ತರುವುದಾಗಿ ಪಕ್ಷ ಪ್ರತಿಜ್ಞೆ ಮಾಡಿದೆ. ಬುಡಕಟ್ಟು ಸಮುದಾಯಗಳ ಅವರನ್ನು ಏನಾಸಂ ವ್ಯಾಪ್ತಿಯಿಂದ ಹೊರಗಿಡಲಾಗುವುದು, ಎಂದು ತಿಳಿಸಲಾಗಿದೆ.

ಅಕ್ರಮ ವಲಸಿಗರ ಪತ್ತೆಗೆ 'ವಲಸಿಗರ (ಅಸ್ಸಾಂನಿಂದ ಹೊರಹಾಕುವಿಕೆ) ಕಾಯ್ದೆ, 1950' ಅನ್ನು ಜಾರಿಗೆ ತರುವುದಾಗಿ ಪ್ರಣಾಳಿಕೆ ವಿವರಿಸಿದೆ. 'ಮಿಷನ್ ಬಸುಂಧರಾ' ಅನ್ವಯದಲ್ಲಿ ಅತಿಕ್ರಮಿತ ಭೂಮಿಯನ್ನು ಮುಕ್ತಗೊಳಿಸಿ ಅಧಿಕೃತ ನಾಗರಿಕರಿಗೆ ಹಕ್ಕುಗಳನ್ನು ನೀಡುವ, ಅತಿಕ್ರಮಣಕ್ಕೊಳಗಾದ ಧಾರ್ಮಿಕ ಸ್ಥಳಗಳನ್ನು ತೆರವುಗೊಳಿಸುವ ಭರವಸೆಯೂ ಒಳಗೊಂಡಿದೆ.

ಮೂಲಸೌಕರ್ಯಕ್ಕಾಗಿ 5 ಲಕ್ಷ ಕೋಟಿ ರೂ. ಮತ್ತು ಪ್ರವಾಹ ನಿಯಂತ್ರಣಕ್ಕಾಗಿ 18,000 ಕೋಟಿ ರೂ. ಹೂಡಿಕೆ ಮಾಡುವ ಪ್ರಸ್ತಾವನೆ ಇಡಲಾಗಿದೆ. 2 ಲಕ್ಷ ಸರ್ಕಾರಿ ಉದ್ಯೋಗಗಳು, ಅರುಣೋದೋಯ ಯೋಜನೆಯಡಿ ಮಾಸಿಕ ಧನಸಹಾಯವನ್ನು 3,000 ರೂ.ಗೆ ಏರಿಕೆ ಮತ್ತು ಚಹಾ ತೋಟದ ಕಾರ್ಮಿಕರ ದಿನಗೂಲಿಯನ್ನು 500 ರೂ.ಗೆ ಹೆಚ್ಚಿಸುವ ಭರವಸೆ ನೀಡಲಾಗಿದೆ.

ಇನ್‌ಫ್ಲುಯೆನ್ಸರ್ಸ್ ಮೇಲೆ ಕೇಂದ್ರದ ಹದ್ದಿನ ಕಣ್ಣು

ಹೊಸದಿಲ್ಲಿ: ಸಾರ್ವಜನಿಕ ಅಭಿಪ್ರಾಯ ಸಂಗ್ರಹಿಸುವುದಕ್ಕಾಗಿ ಹೊಸ ಐಟಿ (ಡಿಜಿಟಲ್) ನಿಯಮ 2026 ಕಾಯ್ದೆ ಕರಡು ಪ್ರತಿಯನ್ನು ಕೇಂದ್ರ ಸರ್ಕಾರ ಬಿಡುಗಡೆಗೊಳಿಸಿದೆ. ಇನ್‌ಫ್ಲುಯೆನ್ಸರ್‌ಗಳು ಮತ್ತು ವೈಯಕ್ತಿಕ ಬಳಕೆದಾರರು ಅಪ್ಲೋಡ್ ಮಾಡುವ ಡಿಜಿಟಲ್ ಕಂಟೆಂಟ್ ಮೇಲೆ ಹೆಚ್ಚಿನ ನಿಗಾ ಇರಿಸುವುದಕ್ಕಾಗಿ ಕೇಂದ್ರ ಸರ್ಕಾರ ಹೊಸ ಐಟಿ ಕಾಯ್ದೆಯನ್ನು ಪರಿಚಯಿಸಲು ಮುಂದಾಗಿದೆ.

- ಸರ್ಕಾರ ಅಥವಾ ಕೋರ್ಟ್ ಆದೇಶಿಸಿದರೆ 3 ಗಂಟೆಗಳಲ್ಲಿ ಪೋಸ್ಟ್ ಅಳಿಸಿಹಾಕಬೇಕು (ಈ ಹಿಂದೆ 36 ಗಂಟೆಗಳಲ್ಲಿ)
- ಡೀಪ್‌ಫೇಕ್ ನಗ್ನತೆ ಅಥವಾ ದ್ವೇಷಪೂರಿತ ನೀಲಿ ಚಿತ್ರಗಳ ಪೋಸ್ಟ್ ಅನ್ನು 2 ಗಂಟೆಗಳಲ್ಲಿ ಅಳಿಸಿಹಾಕಬೇಕು
- ಡೀಪ್‌ಫೇಕ್ ಪ್ರಕರಣದಲ್ಲಿ 3 ವರ್ಷ ಜೈಲು ಮತ್ತು ದಂಡ, ಕಂಟೆಂಟ್ ನಗ್ನತೆಯಿಂದ ಕೂಡಿದ್ದರೆ 5 ವರ್ಷ ಜೈಲು
- ಎಐ ಸುದ್ದಿ ವಿಡಿಯೋ, ವಾಯ್ಸ್ ಓವರ್ ಅಥವಾ ಚಿತ್ರಗಳನ್ನು ಪೋಸ್ಟ್ ಮಾಡುವ ಕ್ರಿಯೇಟರ್ಸ್ ಅದರಲ್ಲಿ ಎಐ-ಜನರೇಟೆಡ್ ವಾಟರ್‌ಮಾರ್ಕ್ ಬಳಸುವುದು ಕಡ್ಡಾಯ
- ವಯೋಮಾನ ಆಧಾರಿತ ಡಿಜಿಟಲ್ ಕಂಟೆಂಟ್ ಜಾರಿಗೆ ಬರಲಿದ್ದು, ಯು (ಯುನಿವರ್ಸಲ್), 7+, 13+, 16+ ಅಥವಾ ಎ(ಅಡಲ್ಟ್) ಲೇಬಲ್ ಬಳಕೆ ಸಾಧ್ಯತೆಯಿದೆ.
- ಕೋಮು ಗಲಭೆ ಅಥವಾ ಚುನಾವಣೆ ವೇಳೆ ಸರ್ಕಾರಿ ನಿರ್ದೇಶ ಉಲ್ಲಂಘಿಸುವುದು ಐಟಿ ನಿಯಮ ಉಲ್ಲಂಘನೆ ಎನಿಸಿಕೊಳ್ಳಲಿದೆ.

ಬಿಇಎಲ್ ಜತೆ ₹1,950 ಕೋಟಿ ಒಪ್ಪಂದಕ್ಕೆ ಸಹಿ

ಹೊಸದಿಲ್ಲಿ: ಅತಿ ಸೂಕ್ಷ್ಮಸಂವೇದಿ ಗಡಿ ವಲಯಗಳಲ್ಲಿ ದೇಶದ ವಾಯು ರಕ್ಷಣಾ ಸಾಮರ್ಥ್ಯಗಳ ಬಲವರ್ಧನೆಗಾಗಿ ಭಾರತ ಸರಕಾರ ಅತ್ಯಂತ ಮಹತ್ವದ ಹೆಜ್ಜೆಯಿರಿಸಿದೆ .ಇದರಂಗ ದುರ್ಗಮ ಪರ್ವತ ಪ್ರದೇಶಗಳಲ್ಲಿ ಸುಲಭವಾಗಿ ಸಾಗಣೆಯೂ ಸಾಧ್ಯವಿರುವ ಎರಡು ರಾಡಾರ್‌ಗಳ ಖರೀದಿ ಮತ್ತು ಇವುಗಳಿಗೆ ಸಂಬಂಧಿಸಿದ ಮೂಲಸೌಕರ್ಯಗಳ ಒದಗಣೆಗಾಗಿ ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (ಬಿಇಎಲ್) ಜತೆ 1950ಕೋಟಿ ರೂ.ಮೊತ್ತದ ಒಪ್ಪಂದಕ್ಕೆ ಸರಕಾರ ಸಹಿ ಹಾಕಿದೆ.

ಅತ್ಯೆತ್ತರದ ದುರ್ಗಮ ಪರ್ವತ ಪ್ರದೇಶಗಳಲ್ಲಿ ಸಾಂಪ್ರದಾಯಿಕ ರಾಡಾರ್‌ಗಳ ಲಭ್ಯತೆ ತೀರಾ ಸೀಮಿತವಿದೆ. ಇಂತಹ ಪ್ರದೇಶಗಳಲ್ಲಿ ವಿಮಾನ, ಹೆಲಿಕಾಪ್ಟರ್‌ಗಳು, ಡ್ರೋನ್‌ಗಳ ಮುಖೇನ ಎದುರಾಗುವ ಯಾವುದೇ ಬೆದರಿಕೆಗಳ ಪತ್ತೆ ಮಾಡಲು ಪ್ರಸ್ತಾವಿತ ಪರ್ವತ ರಾಡಾರ್‌ಗಳು ತುಂಬು ಪೂರಕವಾಗಲಿದೆ.

ಕೇರಳ ವಿಧಾನಸಭೆ: ಆರೋಗ್ಯ ಕಾರ್ಡ್, ಶಬರಿಮಲೆ ತನಿಖೆ ಸಿಬಿಐಗೆ ಸೇರಿ ಹಲವು ಭರವಸೆ

ಬಿಜೆಪಿ ಚುನಾವಣಾ ಪ್ರಣಾಳಿಕೆ ಬಿಡುಗಡೆ

ತಿರುವನಂತಪುರಂ: ಕೇರಳ ವಿಧಾನಸಭಾ ಚುನಾವಣೆಗಾಗಿ ಬಿಜೆಪಿ ತನ್ನ ಪ್ರಣಾಳಿಕೆಯನ್ನು ಮಂಗಳವಾರ ಬಿಡುಗಡೆಗೊಳಿಸಿದ್ದು, ಇದರಂತೆ, ಅನೇಕ ಅಭಿವೃದ್ಧಿ ಯೋಜನೆ, ಆರೋಗ್ಯ ಸಂಬಂಧಿ ಯೋಜನೆ ಮತ್ತು ಮೂಲ ಸೌಕರ್ಯ ಒದಗಿಸುವ ಬಗ್ಗೆ ಜನತೆಗೆ ಭರವಸೆ ನೀಡಿದೆ.

ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಅವರು ಇಲ್ಲಿನ ಇಡಪಳಂಜಿಯಲ್ಲಿನ ಆರ್‌ಡಿಆರ್ ಕನ್ವೆನ್ಷನ್ ಸೆಂಟರ್‌ನಲ್ಲಿ ನಡೆದ ಸಮಾರಂಭದಲ್ಲಿ ಬಿಜೆಪಿಯ ಕೇರಳ ಚುನಾವಣಾ ಪ್ರಣಾಳಿಕೆಯನ್ನು ಬಿಡುಗಡೆಗೊಳಿಸಿದರು.

ಕೇರಳದಲ್ಲಿ ಬಿಜೆಪಿ ಈ ಬಾರಿ ಬೃಹತ್ ಸಾಧನೆಯ ಗುರಿ ಹೊಂದಿ ಕೆಲಸ ಮಾಡುತ್ತಿದ್ದು, 2026ರ ವಿಧಾನಸಭಾ ಚುನಾವಣೆಯಲ್ಲಿ ಅತ್ಯಂತ ಪ್ರಬಲ ಶಕ್ತಿಯಾಗಿ ಮೂಡಿಬಂದಿರುವುದು ಸ್ಪಷ್ಟವಾಗಿ ಗೋಚರಿಸುತ್ತಿದೆ. ''ವಿಕಸಿತ ಕೇರಳಂ''ನ ಧ್ಯೇಯದೊಂದಿಗೆ ಕೇರಳದ ಆರ್ಥಿಕ ಬೆಳವಣಿಗೆ ಮತ್ತು ಕೇರಳದ ಅಸ್ಮಿತೆಗಳನ್ನು ರಕ್ಷಿಸುವ ನಿರ್ದಿಷ್ಟ ಭರವಸೆಗಳೊಂದಿಗೆ ಆಳುವ ಎಡರಂಗ ಮತ್ತು ಕಾಂಗ್ರೆಸ್ ನೇತೃತ್ವದ ಯುಡಿಎಫ್‌ಗೆ ಪರ್ಯಾಯ



ಪಕ್ಷವಾಗಿ ಬಿಜೆಪಿ ಮೂಡಿಬಂದಿದೆ.

ಶಬರಿಮಲೆ ತನಿಖೆ: ಕೇರಳದ ಹಿಂದುಗಳ ಪರಮಪವಿತ್ರ ಕ್ಷೇತ್ರವಾದ ಶಬರಿಮಲೆ ಶ್ರೀ ಅಯ್ಯಪ್ಪ ದೇವಾಲಯದಲ್ಲಿ ಭಕ್ತರ ಕಾಣಿಕೆ, ಚಿನ್ನದ ಹೊದಿಕೆ ಲೂಟಿಯಂತಹ ಹೀನ ಪ್ರಕರಣಗಳು ನಡೆದಿರುವುದು ಹಿಂದುಗಳಲ್ಲಿ ತೀವ್ರ ಆಘಾತ ತಂದಿರುವಂತೆಯೇ, ಶಬರಿಮಲೆಯಲ್ಲಿ ನಡೆದ ಚಿನ್ನ ಲೂಟಿ ಹಗರಣಗಳ ಕುರಿತಂತೆ ಕಾಲಮಿತಿಯ ಸಿಬಿಐ ತನಿಖೆ ನಡೆಸುವ ಮತ್ತು ದೇವಾಲಯಗಳ ಆಡಳಿತದಲ್ಲಿ ಭಕ್ತರ ಹೆಚ್ಚಿನ ಪಾಲ್ಗೊಳ್ಳುವಿಕೆ ಹಾಗೂ ಭ್ರಷ್ಟಾಚಾರಕ್ಕೆ ತಡೆಹಾಕುವ ಮೂಲಕ ದೇವಸ್ವಂ ಮಂಡಳಿಗಳನ್ನು ಪುನರಾಚಿಸುವ ಬಗೆಗೂ ಬಿಜೆಪಿ ಸ್ಪಷ್ಟ ಭರವಸೆ ನೀಡುವ ಮೂಲಕ ಅಯ್ಯಪ್ಪ ಭಕ್ತರ ಕಳವಳಕ್ಕೆ ಸ್ಪಂದನ ನೀಡಿದೆ.

ಬಡವರು ಮತ್ತು ಮಹಿಳೆಯರ ಅಭಿವೃದ್ಧಿಗೆ ಒತ್ತು ನೀಡಿರುವ ಪ್ರಣಾಳಿಕೆಯು ,ಬಡ-ದುರ್ಬಲ ವರ್ಗದ ಕುಟುಂಬಗಳಿಗಾಗಿ ಅಭಿವೃದ್ಧಿ ಯೋಜನೆಗಳು ಮತ್ತು ಬಡಕುಟುಂಬದ ಮುಖ್ಯಸ್ಥರಾಗಿರುವ ಮಹಿಳೆಯರು, ವಿಧವೆಯರು, 70ಕ್ಕಿಂತ ಮೇಲಿನ ಹಿರಿಯ ನಾಗರಿಕ ಮಹಿಳೆಯರಿಗೆ ತಿಂಗಳಿಗೆ 3000ರೂ.ಗಳ ಪಿಂಚಣಿ ಯೋಜನೆಯೊಂದನ್ನು ಪ್ರಕಟಿಸಿದೆ.

ಇನ್ನೊಂದು ಪ್ರಮುಖ ಭರವಸೆಯಂತೆ, ಬಡ ಮತ್ತು ಬಿಪಿಎಲ್ ಕುಟುಂಬಗಳ ಮಹಿಳೆಯರಿಗಾಗಿ ''ಭಕ್ಷ್ಯ ಆರೋಗ್ಯ ಸುರಕ್ಷಾ ಕಾರ್ಡ್''ಯೋಜನೆಯೊಂದನ್ನು ಘೋಷಿಸಿದೆ. ಇದರಂತೆ ತಿಂಗಳಿಗೆ 2,500ರೂ.ಗಳ ಮಾಸಿಕ ರಿಚಾರ್ಜ್ ಕಾರ್ಡ್ ಒದಗಿಸಲಾಗುತ್ತದೆ. ಈ ಕಾರ್ಡಿನ ಮೂಲಕ ಈ ಬಡ ಕುಟುಂಬಗಳು ತಮಗೆ ಅಗತ್ಯವಿರುವ ದಿನಸಿಗಳು ಮತ್ತು ಔಷಧಗಳನ್ನು ಖರೀದಿಸಬಹುದಾಗಿದೆ.

ಭಾರತದ ಮೋಸ್ಟ್ ವಾಂಟೆಡ್ ಉಗ್ರ | ಹಲವು ದಾಳಿಯ ಕಿಂಗ್‌ಪಿನ್

ಮಸೂದ್ ಅಜರ್ ಸಹೋದರ ಹತ್ಯೆ

ಹೊಸದಿಲ್ಲಿ: ಜೈಶ್-ಎ-ಮೊಹಮ್ಮದ್ ಮುಖ್ಯಸ್ಥ ಮೌಲಾನಾ ಮಸೂದ್ ಅಜರ್‌ನ ಹಿರಿಯ ಸಹೋದರ, ಭಾರತಕ್ಕೆ ಮೋಸ್ಟ್ ವಾಂಟೆಡ್ ಆಗಿದ್ದ ಉಗ್ರ ಮೊಹಮ್ಮದ್ ತಾಹಿರ್ ಅನ್ವರ್‌ನನ್ನೇ ಅನಾಮದೇಯರು ಹೊಡೆದುರುಳಿಸಿದ್ದಾರೆ.ಈತ ಭಾರತದಲ್ಲಿ ಹಲವು ಉಗ್ರ ದಾಳಿ ನಡೆಸುವಲ್ಲಿ ಪ್ರಮುಖ ಪಾತ್ರವಹಿಸಿದ್ದನು.

ಅನ್ವರ್ ಅಂತಾರಾಷ್ಟ್ರೀಯ ಭಯೋತ್ಪಾದಕ ಮಸೂದ್ ಅಜರ್‌ನ ಐವರು ಸಹೋದರರಲ್ಲಿ ಒಬ್ಬ. ನಿಷೇಧಿತ ಸಂಘಟನೆ ಜೈಶ್-ಎ-ಮೊಹಮ್ಮದ್‌ನ ಕಾರ್ಯಾಚರಣೆಗಳಲ್ಲಿ ಈತನೂ ಪ್ರಮುಖ ಪಾತ್ರ ವಹಿಸಿದ್ದ. ಅನ್ವರ್‌ನ ಅಂತ್ಯಕ್ರಿಯೆ ಪಾಕಿಸ್ತಾನದ ಬಹಾವಲ್ಪುರದ ಜಾಮಿಯಾ ಮಸೀದಿ ಉಸ್ಮಾನ್ ವಾಲಿಯಲ್ಲಿ ಸೋಮವಾರ ನಡೆದಿದೆ. ಪಾಕಿಸ್ತಾನದ ಅಧಿಕಾರಿಗಳಾಗಲಿ ಅಥವಾ ಜೈಶ್-ಎ-ಮೊಹಮ್ಮದ್ ಸಂಘಟನೆಯ ಅಧಿಕೃತ



ಮೂಲಗಳಾಗಲಿ ಆತನ ಸಾವಿಗೆ ದೀರ್ಘಕಾಲದ ಕಾಯಿಲೆ ಅಥವಾ ಹಠಾತ್ ವೈದ್ಯಕೀಯ ತುರ್ತು ಪರಿಸ್ಥಿತಿಯಂತಹ ಯಾವುದೇ ನಿರ್ದಿಷ್ಟ ಕಾರಣವನ್ನು ಉಲ್ಲೇಖಿಸಿಲ್ಲ. ಕೆಲವು ವರದಿಗಳು, ಆತ, ಇತ್ತೀಚೆಗೆ ಸ್ಥಾಪಿಸಲಾದ ಸಂಘಟನೆಯ ಮಹಿಳಾ ವಿಭಾಗ 'ಜಮಾತ್-ಉನ್-ಮೊಮಿನಾತ್' ಕೇಂದ್ರದಲ್ಲಿ ಅಥವಾ ಅದರ ಸಮೀಪ ಮೃತಪಟ್ಟಿರಬಹುದು ಎಂದಿವೆ.

ಕುಟುಂಬ ಸದಸ್ಯರ ಸಾವು: ಕಳೆದ ವರ್ಷ ಪಹಲ್ಗಾಮ್ ಭಯೋತ್ಪಾದಕ ದಾಳಿಗೆ ಪ್ರತಿಯಾಗಿ ಭಾರತ ನಡೆಸಿದ 'ಆಪರೇಷನ್ ಸಿಂದೂರ್‌ನ ವೈಮಾನಿಕ ದಾಳಿಯಲ್ಲಿ ತನ್ನ ಕುಟುಂಬದ 10 ಸದಸ್ಯರು ಮತ್ತು ನಾಲ್ವರು ಸಹಚರರು ಮೃತಪಟ್ಟಿದ್ದರು ಎಂದು ಮಸೂದ್ ಅಜರ್ ಹೇಳಿಕೊಂಡಿದ್ದ.

ಮಸೂದ್ ಅಜರ್ ಹಿನ್ನೆಲೆ: ಮಸೂದ್ ಅಜರ್ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಿಂದ ಪಟ್ಟಿ ಮಾಡಲ್ಪಟ್ಟ ಅಂತಾರಾಷ್ಟ್ರೀಯ ಭಯೋತ್ಪಾದಕ.

1994 ರಲ್ಲಿ ಭಾರತ ಈತನನ್ನು ಬಂಧಿಸಿತ್ತಾದರೂ, ಏರ್ ಇಂಡಿಯಾ ವಿಮಾನ ಐಸಿ 814 ರ ಅಪಹರಣದ ನಂತರ ಬಿಡುಗಡೆ ಮಾಡಲಾಗಿತ್ತು. ಈತ 2001 ರ ಸಂಸತ್ ಭವನದ ದಾಳಿ, 2008 ರ ಮುಂಬೈ ದಾಳಿ, 2016 ರ ಪಠಾಣ್‌ಕೋಟ್ ದಾಳಿ ಮತ್ತು 2019 ರ ಪುಲ್ವಾಮಾ ದಾಳಿ ಸೇರಿದಂತೆ ಹಲವು ಪಿತೂರಿಗಳಲ್ಲಿ ಭಾಗಿಯಾಗಿದ್ದಾನೆ.

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: 2,50,000(2,45,000) ಅಪರಂಜಿ ಚಿನ್ನ: 1,49,510(1,48,260) ಆಭರಣ ಚಿನ್ನ: 1,37,050(1,35,900) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ.(ಆವರಣದಲ್ಲಿ ಹಿಂದಿನ ದಿನದ ದರ)

ಷೇರು ಸೂಚ್ಯಂಕ ಬಿಎಸ್‌ಇ 71,947(1635↓) ಎನ್‌ಎಸ್‌ಇ 22,331 (488↓) $1 = ₹93.72

ಹಸಿರು ಸಿರಿ ಸಾಂಸ್ಕೃತಿಕ ಉತ್ಸವ | ಎಸ್.ದಿವಾಕರ್, ಜೀವನ್ಮುಖಿ ಸುರೇಶ್‌ಗೆ ಪ್ರಶಸ್ತಿ ಪ್ರದಾನ

ನಟರ ಜಾಹೀರಾತಿನಿಂದ ಸ್ವಾಸ್ಥ್ಯಕ್ಕೆ ಧಕ್ಕೆ



• **ಬೆಂಗಳೂರು:** ಚಿತ್ರನಟರು, ಸಾಧಕರು ಹಾಗೂ ಗಣ್ಯರು ಸಮಾಜದ ಸ್ವಾಸ್ಥ್ಯ ಹಾಳುಗೆಡುಹುವ ಜಾಹೀರಾತುಗಳಲ್ಲಿ ನಟಿಸುವ ಮುನ್ನ ಡಾ.ರಾಜಕುಮಾರ್ ಅವರ ಮಾದರಿಯನ್ನು ಅನುಸರಿಸಬೇಕು ಎಂದು ಹಿರಿಯ ಸಾಹಿತಿ ಪ್ರೊ. ಎಸ್.ಜಿ. ಸಿದ್ದರಾಮಯ್ಯ ಹೇಳಿದರು.

ಹಸಿರು ಭೂಮಿ ಸಾಂಸ್ಕೃತಿಕ ಟ್ರಸ್ಟ್ ಆಯೋಜಿಸಿದ್ದ ಹಸಿರು ಸಿರಿ ಸಾಂಸ್ಕೃತಿಕ ಉತ್ಸವಕ್ಕೆ ಚಾಲನೆ ನೀಡಿ ಮಾತನಾಡಿದ ಅವರು ಕ್ಯಾನ್ಸರ್ ಕಾರಕ ಉತ್ಪನ್ನಗಳ ಜಾಹೀರಾತು ಸೇರಿದಂತೆ, ಜನರಿಗೆ ತಪ್ಪು ಸಂದೇಶ ನೀಡುವ ಜಾಹಿರಾತುಗಳಲ್ಲಿ ಅಭಿನಯಿಸುವುದರಿಂದ ಯುವಜನರು ದಾರಿ ತಪ್ಪುತ್ತಿದ್ದಾರೆ. ಸ್ವಸ್ಥ ಸಮಾಜಕ್ಕೆ ಧಕ್ಕೆಯಾಗದ ಜಾಹೀರಾತಿಗಳಲ್ಲಿ ಅಭಿನಯಿಸುವ ಕಡೆಗೆ ಆಲೋಚಿಸಬೇಕು ಎಂದರು. ಹಸಿರು ಸಿರಿ ಪುರಸ್ಕಾರ ಪಡೆದಿರುವ ಅಖಿಲ ಕರ್ನಾಟಕ ಕುವೆಂಪು ಸಾಂಸ್ಕೃತಿಕ ವೇದಿಕೆಯ ಅಧ್ಯಕ್ಷ ಮತ್ತು ಸಾಹಿತ್ಯ ಪರಿಚಾರಕ ಜೀವನ್ಮುಖಿ ಸುರೇಶ್ ಅವರ ಸೇವೆಯನ್ನು ಉಲ್ಲೇಖಿಸಿ ಮಾತನಾಡಿದ ಅವರು, ಜೀವನ್ಮುಖಿ ಸುರೇಶ್ ಸದಾ ಸಮಾಜ ಮುಖಿಯಾದ ಕಾರ್ಯಗಳನ್ನು ಮಾಡುವ ಮೂಲಕ ಸಾಂಸ್ಕೃತಿಕ ಲೋಕವನ್ನು ವಿಸ್ತರಿಸುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ವರ್ತಮಾನದ ಸಂದರ್ಭದಲ್ಲಿ ಇವರ ಕಾರ್ಯ ಚಟುವಟಿಕೆಗಳು ಮಾದರಿಯಾಗಿವೆ. ಜೀವನ್ಮುಖಿ ಪ್ರತಿಕೆ ಸದಭಿರುಚಿ ಪ್ರಚೋದಿಸುತ್ತಿದ್ದಾರೆ. ದಲಿತ ಕವಿ ಸಿದ್ದಲಿಂಗಯ್ಯನವರ 'ಊರುಕೇರಿ' ಕೃತಿಯ ಅಧ್ಯಾಯಗಳನ್ನು ಪತ್ರಿಕೆಯ ಅಂಕಣ ದಲ್ಲಿ ಪುನರ್ ಪ್ರಕಟಿಸುವ ಮುಖೇನ ಜನ ಸಾಮಾನ್ಯರಿಗೂ ತಲುಪಿಸುತ್ತಿದ್ದಾರೆಂದು ಶ್ಲಾಘಿಸಿದರು. ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಡಾ.ನಿಶ್ಚಲಾನಂದ ಸ್ವಾಮೀಜಿ ಮಾತನಾಡಿ, ಪ್ರಾಮಾಣಿಕತೆ ಹಾಗೂ ಬದ್ದತೆಗೆ ಸಮಾಜದಲ್ಲಿ ಮನ್ನಣೆ ಸಿಗಬೇಕು. ಯುವಜನರು ತಮ್ಮ ಬದುಕು ಹಳಿ ತಪ್ಪದಂತೆ ಪ್ರಬಲವಾಗಿ ರೂಪಿಸಿಕೊಳ್ಳಬೇಕು. ಕರೆ ನೀಡಿದರು. ಪ್ರಶಸ್ತಿ ಪುರಸ್ಕೃತರಾದ ಜೀವನ್ಮುಖಿ ಸುರೇಶ್ ಅವರು ಪತ್ರಕರ್ತರಾಗಿ ಸಾಹಿತ್ಯ ಮತ್ತು ಸಂಸ್ಕೃತಿಯ ನೆಲೆಯಲ್ಲಿ ಪತ್ರಿಕೆಯನ್ನು ಹೊರತರುತ್ತಿದ್ದಾರೆ. ಅವರ ವೃತ್ತಿ ಬದ್ಧತೆ ಹಾಗೂ ಸೇವಾ ನಿಷ್ಠ ಪ್ರಾಮಾಣಿಕತೆ ಮೆಚ್ಚುವಂತಿದೆ. ಅವರ ಸೇವಾ ಕಾರ್ಯ ಉತ್ತಮ ಸಮಾಜದ ನಿರ್ಮಾಣಕ್ಕೆ ಪೂರಕವಾಗಿದೆ ಎಂದರು. ಹಿರಿಯ ಪತ್ರಕರ್ತ ಹಾಗೂ ಸಾಹಿತಿ ಎಸ್. ದಿವಾಕರ್, ಸಾಂಸ್ಕೃತಿಕ ಸಂಘಟಕ ಜೀವನ್ಮುಖಿ ಸುರೇಶ್ ಮತ್ತು ಚಲನಚಿತ್ರ ನಟ ಶಿವರಾಜ್ ಕೆ.ಆರ್. ಪೇಟೆ ಅವರಿಗೆ 'ಹಸಿರು ಸಿರಿ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಅಧ್ಯಕ್ಷತೆಯನ್ನು ಕರಾವಳಿ ತ್ವರಿತ ಕಾರ್ಯಾಚರಣೆ ಪಡೆ ಮುಖ್ಯಸ್ಥ, ಡಿಐಜಿಪಿ ಡಾ.ಎ.ಎನ್. ಪ್ರಕಾಶ್ ಗೌಡ ವಹಿಸಿದ್ದರು. ಮಾಜಿ ಶಾಸಕ ಡಾ.ಕೆ. ಅನ್ನದಾನಿ, ಸಂಘಟಕ ಟಿ.ಸತೀಶ್ ಜವರೇಗೌಡ, ಟ್ರಸ್ಟ್ ಅಧ್ಯಕ್ಷ ರಘುನಂದನ್ ಉಪಸ್ಥಿತರಿದ್ದರು.

:: ಓದುಗರ ಗಮನಕ್ಕೆ :: ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

ಇಂದು ಮಧ್ಯರಾತ್ರಿ ಧರ್ಮರಾಯಸ್ವಾಮಿ ಮಹಾರಥೋತ್ಸವ

ಸಂಪಂಗಿಕೆರೆ ಶಕ್ತಿ ಪೀಠದಲ್ಲಿ ಹಸಿಕರಗ

ಬೆಂಗಳೂರು: ಸಂಪಂಗಿ ರಾಮನಗರದಲ್ಲಿರುವ ಸಂಪಂಗಿ ಕೆರೆಯ ಶಕ್ತಿಪೀಠದಲ್ಲಿ ಮಂಗಳವಾರ ಹಸಿ ಕರಗ ಅದ್ದೂರಿಯಾಗಿ ಜರುಗಿದ್ದು, ಕರಗ ಶಕ್ತ್ಯೋತ್ಸವ(ಹೂವಿನ ಕರಗ) ಹಾಗೂ ಶ್ರೀ ಧರ್ಮರಾಯಸ್ವಾಮಿ ಮಹಾರಥೋತ್ಸವ (ಏ. 1)ಮಧ್ಯರಾತ್ರಿ ಜರುಗಲಿದೆ. ಇದಕ್ಕಾಗಿ ಸಕಲ ಸಿದ್ಧತೆ ಮಾಡಲಾಗಿದೆ.

ಎ.ಜ್ಞಾನೇಂದ್ರ ಸ್ವಾಮಿಯವರು 16ನೇ ಬಾರಿಗೆ ಯಶಸ್ವಿಯಾಗಿ ಹಸಿ ಕರಗವನ್ನು ಹೊತ್ತಿದ್ದು, ರಾಜಬೀದಿಗಳಲ್ಲಿ ಸಂಚರಿಸಿ ಜಿಬಿಎ ಮುಖ್ಯ ಕಚೇರಿ ತಲುಪಿದರು. ಅಲ್ಲಿ ಪೂಜೆ ಸಲ್ಲಿಸಿ, ಕೆ.ಆರ್. ಮಾರುಕಟ್ಟೆ ರಸ್ತೆಯ ಮೂಲಕ ತಿಗಳರಪೇಟೆಯಲ್ಲಿರುವ ಶ್ರೀ ಧರ್ಮರಾಯಸ್ವಾಮಿ ದೇವಾಲಯಕ್ಕೆ ತೆರಳಿದ್ದಾರೆ. ಈ ವೇಳೆ ಸಹಸ್ರಾರು ಭಕ್ತರು ಗೋವಿಂದ, ಗೋವಿಂದ, ಎಂಬ ನಾಮಸ್ಮರಣೆ ಮಾಡುತ್ತಾ, ಕರಗಕ್ಕೆ ಮಲ್ಲಿಗೆ ಹೂವಿನ ಪುಷ್ಪಾರ್ಚನೆ ಮಾಡಿದರು. ಕರಗ ಸಾಗುವ ದಾರಿಯುದ್ದಕ್ಕೂ ವಿದ್ಯುತ್ ದೀಪಾಲಂಕಾರ ವಿವಿಧ ಹೂಗಳಿಂದ ಅಲಂಕಾರ ಮಾಡಲಾಗಿತ್ತು.

ಕರಗ ಶಕ್ತ್ಯೋತ್ಸವ ಹಾಗೂ ಶ್ರೀ ಧರ್ಮರಾಯಸ್ವಾಮಿ ಮಹಾರಥೋತ್ಸವ: ಚೈತ್ರ ಪೌರ್ಣಿಮೆಯ ಬೆಳದಿಂಗಳ ಬೆಳಕಲ್ಲಿ ಧರ್ಮರಾಯ ದೇವಸ್ಥಾನದಿಂದ ಹೊರಡುವ ಹೂವಿನ ಕರಗ ಉತ್ಸವಕ್ಕೆ ಬುಧವಾರ ಮಧ್ಯರಾತ್ರಿ 12.30ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮುಜರಾಯಿ



ಸಚಿವ ರಾಮಲಿಂಗಾರೆಡ್ಡಿ ಸೇರಿ ವಿವಿಧ ಕ್ಷೇತ್ರದ ಗಣ್ಯರು ಪಾಲ್ಗೊಳ್ಳ ಲಿದ್ದಾರೆ. ಉತ್ಸವ ಪ್ರಯುಕ್ತ ಮುಂಜಾನೆಯಿಂದಲೇ ಧರ್ಮರಾಯಸ್ವಾಮಿ ದೇವಾಲಯದಲ್ಲಿ ವಿಶೇಷ ಪೂಜೆ, ಅಭಿಷೇಕ, ಮಹಾಮಂಗಳಾರತಿ ನಡೆಯಲಿವೆ. ಬೆಳಗ್ಗೆ 10.30ಕ್ಕೆ ಕಬ್ಬನ್ ಪಾರ್ಕ್‌ನ ಕರಗದ ಕುಂಟೆಯಲ್ಲಿ ದ್ರೌಪದಿ ದೇವಿಗೆ ಗಂಗೆ ಪೂಜೆ ಸಲ್ಲಿಸಲಿದ್ದು, ಅಲ್ಲಿಂದ ಹಸಿಕರಗವನ್ನು ಮಂಟಪಕ್ಕೆ ಕರೆತಂದು ವಿಶೇಷ ಪೂಜೆ ನೆರವೇರಿಸಿ ದೇವಾಲಯಕ್ಕೆ ಕರೆತರಲಾಗುವುದು. ರಾತ್ರಿ ಧರ್ಮರಾಯಸ್ವಾಮಿ ರಥೋತ್ಸವದ ನಂತರ ಹೂವಿನ ಕರಗ ಶಕ್ತ್ಯುತ್ಸವ ಜರುಗಲಿದೆ.

ಕರಗ ಶಕ್ತ್ಯೋತ್ಸವ ಎಂದರೆ ಶಕ್ತಿ ದೇವತೆಯಾದ ದ್ರೌಪದಿ ಕರಗ. ಕುಂಭದಲ್ಲಿ ದುರ್ಗೆ (ದ್ರೌಪದಿ)ಯನ್ನು ಆವಾಹಿಸಿ, ಪೂಜಿಸಿ, ಹೂವಿನಿಂದ ಅಲಂಕಾರಗೊಂಡ ಕರಗಕ್ಕೆ ಪೂಜೆ ಸಲ್ಲಿಸಲಾಗುತ್ತದೆ.

ಕರಗ ಶಕ್ತ್ಯೋತ್ಸವಕ್ಕೆ ಸಕಲ ಸಿದ್ಧತೆ

ಏ.1ರಂದು ರಾತ್ರಿ ನಡೆಯುವ ಕರಗ ಉತ್ಸವ ಮತ್ತು ಮಹಾರಥೋತ್ಸವಕ್ಕೆ ಹೆಚ್ಚಿನ ಜನರು ಆಗಮಿಸುವ ಹಿನ್ನೆಲೆಯಲ್ಲಿ ಅಗತ್ಯ ಮೊಬೈಲ್ ಟಾಯ್ಲೆಟ್, ಕುಡಿಯುವ ನೀರಿನ ವ್ಯವಸ್ಥೆ ಸೇರಿದಂತೆ ಸಕಲ ವ್ಯವಸ್ಥೆ ಕೈಗೊಳ್ಳುವ ಮೂಲಕ ಯಾವುದೇ ತೊಂದರೆಯಾಗದಂತೆ ನಿಗಾ ವಹಿಸಲಾಗಿದೆ ಎಂದು ಧರ್ಮರಾಯ ಸ್ವಾಮಿ ದೇವಾಲಯದ ಅಧ್ಯಕ್ಷ ಚಲಕರಿ ನಾರಾಯಣ ಸ್ವಾಮಿ ಹೇಳಿದರು.

ನಂತರ ಧರ್ಮರಾಯ ದೇವಸ್ಥಾನದ ಗಣಾಚಾರಿ, ಗಂಟೆ ಪೂಜಾರಿಯ ಉಸ್ತುವಾರಿಯಲ್ಲಿ ಧಾರ್ಮಿಕ ಕಾರ್ಯಗಳನ್ನು ನೆರವೇರಿಸಿ ಅರ್ಚಕ ಜ್ಞಾನೇಂದ್ರ, ಕತ್ತಿ ಹಿಡಿದ ವೀರಕುಮಾರರ ನಡುವೆ ತಲೆಯ ಮೇಲೆ ಕರಗ ಹೊತ್ತು ಸಾಗಲಿದ್ದಾರೆ. ಹೀಗೆ, ಮಧ್ಯರಾತ್ರಿ ದೇವಾಲಯದಿಂದ ಬಿಜಯ ಮಾಡಿಸಿ ಸಾಗುವ ಕರಗ ಶಕ್ತ್ಯೋತ್ಸವ ಹಳೇ ಬೆಂಗಳೂರಿನ ಹಲವು ಪೇಟೆ ಬೀದಿಗಳಲ್ಲಿ ಸಂಚರಿಸಿ ದೇವಾಲಯಗಳು ಹಾಗೂ ಕುಲಪುರೋಹಿತರ ಮತ್ತು ಭಕ್ತರ ಮನೆಗಳಲ್ಲಿ ಪೂಜೆ ಸ್ವೀಕರಿಸಿ ಸೂರ್ಯೋದಯದ ವೇಳೆಗೆ ದೇವಾಲಯ ಸೇರಲಿದೆ.

ಪೊಂಗಲ್ ಸೇವೆ: ಶಕ್ತ್ಯೋತ್ಸವ ಮೊದಲು ಮುಂಜಾನೆ 3ಗಂಟೆ ಸುಮಾರಿಗೆ ಪೊಂಗಲ್ ಸೇವೆ (ಸಿಹಿ ಅನ್ನ ನೈವೇದ್ಯ) ನಡೆಯಲಿದೆ. ಮಹಿಳೆಯರು ದೇವಾಲಯದ ಆವರಣದೊಳಗೆ ಅಕ್ಕಿ, ಹಾಲು ಮತ್ತು ಸಕ್ಕರೆಯೊಂದಿಗೆ ಪೊಂಗಲ್ ತಯಾರಿಸಿ ಒಂಬತ್ತು ಗ್ರಹಗಳನ್ನು ಸಮಾಧಾನಪಡಿಸಲು ಒಂಬತ್ತು ದಿಕ್ಕುಗಳಲ್ಲಿ ಇಡುತ್ತಾರೆ.

ಭೇಟಿ



ದೇಶೀಯ ಭಾಷೆಗಳ ಹಿತರಕ್ಷಣಾ ಒಕ್ಕೂಟ, ಕರ್ನಾಟಕ ರಾಜ್ಯ ಪ್ರೌಢ ಶಾಲಾ ಹಿಂದಿ ಶಿಕ್ಷಕರ ಸಂಘ, ಕರ್ನಾಟಕ ರಾಜ್ಯ ಸಂಸ್ಕೃತ ವಿಷಯ ಅಧ್ಯಾಪಕರ ಸಂಘದಿಂದ ಮಂಗಳವಾರ ಲೋಕಭವನದಲ್ಲಿ ರಾಜ್ಯಪಾಲ ಥಾವರ ಚಂದ್ ಗೆಹಲೋತ್ ಅವರನ್ನು ಭೇಟಿ ಮಾಡಿ ತ್ರಿಭಾಷಾ ಸೂತ್ರದಲ್ಲಿ ಉಂಟಾದ ಸಮಸ್ಯೆಯನ್ನು ಗಮನಕ್ಕೆ ತಂದರು.

ನವಿಲುಗಳ ಸರಣಿ ಸಾವು | ಜಿಬಿಎ ಮತ್ತು ಅರಣ್ಯ ಇಲಾಖೆಗೆ ಬೆಂಗಳೂರು ವಿಶ್ವವಿದ್ಯಾಲಯ ಪತ್ರ

ಕ್ಯಾಂಪಸ್‌ನಲ್ಲಿ ವನ್ಯಜೀವಿ ಸಂರಕ್ಷಣೆಗೆ ಕ್ರಮ

ಚಂದನ್ ಲಕ್ಕೂರು

ದಿಗಂತ ವಿಶೇಷ

ಬೆಂಗಳೂರು: ಜ್ಞಾನಭಾರತಿ ಆವರಣವು 1200 ಎಕರೆ ವಿಸ್ತಾರವಾಗಿದೆ. ಹಲವು ಜೀವ ವೈವಿಧ್ಯಗಳ ಆಶ್ರಯ ತಾಣವಾಗಿದೆ. ಬೆಂಗಳೂರು ವಿಶ್ವವಿದ್ಯಾಲಯದ ಕ್ಯಾಂಪಸ್‌ನಲ್ಲಿ ಕಳೆದ ಒಂದು ವಾರದಲ್ಲಿ ಮೂರು ನವಿಲುಗಳು ಸಾವನ್ನಪ್ಪಿರುವುದು ಪಕ್ಷಿ ಪ್ರಿಯರಲ್ಲಿ ಆತಂಕ ಮೂಡಿಸಿದೆ. ಈ ಸಂಬಂಧ ಬೆಂಗಳೂರು ವಿಶ್ವವಿದ್ಯಾಲಯ ಕಟ್ಟುನಿಟ್ಟಿನ ಕ್ರಮಕ್ಕೆ ಮುಂದಾಗಿದೆ.

ರಾಷ್ಟ್ರಪಕ್ಷಿಗಳ ಸರಣಿ ಸಾವಿನ ಬಗ್ಗೆ ಕಳವಳ ವ್ಯಕ್ತಪಡಿಸಿರುವ ವಿಶ್ವವಿದ್ಯಾಲಯದ ಆಡಳಿತ ಮಂಡಳಿಯು, ಈ ಕುರಿತು ಸಮಗ್ರ ತನಿಖೆ ನಡೆಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಕೋರಿ ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಮತ್ತು ಅರಣ್ಯ ಇಲಾಖೆಗೆ ಅಧಿಕೃತ ಪತ್ರ ಬರೆದಿದೆ. ಕಳೆದ ಏಳು ದಿನಗಳ ಅಂತರದಲ್ಲಿ ಕ್ಯಾಂಪಸ್‌ನ ವಿವಿಧ ಭಾಗಗಳಲ್ಲಿ ಮೂರು ನವಿಲುಗಳ ಕಳೇಬರಗಳು ಪತ್ತೆಯಾಗಿವೆ. ಜ್ಞಾನಭಾರತಿ ಆವರಣವು ನೂರಾರು ನವಿಲುಗಳಿಗೆ ಆಶ್ರಯ ತಾಣವಾಗಿದ್ದು, ಹೀಗೆ ಏಕಾಏಕಿ ಸಾವು ಸಂಭವಿಸುತ್ತಿರುವುದು ಪರಿಸರ ಪ್ರೇಮಿಗಳ ಕೆಂಗಣ್ಣಿಗೆ ಗುರಿಯಾಗಿದೆ. ಈ ಘಟನೆಯನ್ನು ಗಂಭೀರವಾಗಿ ಪರಿಗಣಿಸಿರುವ ವಿಶ್ವವಿದ್ಯಾಲಯ ಆಡಳಿತ ಮಂಡಳಿ ಸಂಬಂಧಿಸಿದ ಇಲಾಖೆಗಳಿಗೆ ಪತ್ರ ಬರೆದಿದ್ದು ಸೂಕ್ತ ಭದ್ರತಾ ವ್ಯವಸ್ಥೆಗೆ ಮನವಿ ಮಾಡಿದೆ.

ವಿ.ವಿ.ಗೆ ಹೆಚ್ಚಿನ ಭದ್ರತೆ: ಕ್ಯಾಂಪಸ್‌ನಲ್ಲಿ ಬೀದಿ ನಾಯಿಗಳ ಹಾವಳಿ ಹೆಚ್ಚಾಗಿರುವುದರಿಂದ ಈ ನವಿಲುಗಳ ಸಾವು ಸಂಭವಿಸಿದ್ದು ಅರಣ್ಯ ಇಲಾಖೆಯು ಮೃತ ನವಿಲುಗಳ ಮರಣೋತ್ತರ ಪರೀಕ್ಷೆ ನಡೆಸಿ ವರದಿ ನೀಡುವಂತೆ ವಿ.ವಿ. ಕೋರಿದೆ. ಅಲ್ಲದೆ, ಜಿಬಿಎ ಸಂಸ್ಥೆಯು ಈ ಭಾಗದ ಜೀವವೈವಿಧ್ಯದ ರಕ್ಷಣೆಗೆ ಪೂರಕವಾದ ಯೋಜನೆಗಳನ್ನು ರೂಪಿಸಬೇಕೆಂದು ಪತ್ರದಲ್ಲಿ ಉಲ್ಲೇಖಿಸಲಾಗಿದೆ. ಈ ಸರಣಿ ಸಾವುಗಳ ಬೆನ್ನಲ್ಲೇ ವಿಶ್ವವಿದ್ಯಾಲಯದ ಆವರಣದಲ್ಲಿ ಭದ್ರತೆಯನ್ನು ಹೆಚ್ಚಿಸಲಾಗಿದ್ದು, ವನ್ಯಜೀವಿಗಳ ಸಂರಕ್ಷಣೆಗೆ ಆದ್ಯತೆ ನೀಡಲು ವಿ.ವಿ ನಿರ್ಧರಿಸಿದೆ.





ಬೆಂಗಳೂರು ವಿಶ್ವವಿದ್ಯಾಲಯ 1200 ಎಕರೆ ವಿಸ್ತೀರ್ಣವಾದ ಕ್ಯಾಂಪಸ್ ಹೊಂದಿದ್ದು ಸಾಕಷ್ಟು ಪ್ರಾಣಿ, ಪಕ್ಷಿಗಳಿದ್ದು ವಿಶ್ವವಿದ್ಯಾಲಯದ ಆವರಣದಲ್ಲಿನ ಬೀದಿ ನಾಯಿಗಳು ನವಿಲು ಪಕ್ಷಿ ಮೇಲೆ ದಾಳಿ ಮಾಡಿರುವುದು ಕಂಡುಬಂದಿದೆ. ಈ ಬಗ್ಗೆ ವಿಶ್ವವಿದ್ಯಾಲಯ ಕೂಡ ಕಳವಳಗೊಂಡಿದ್ದು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ. ಈ ಸಂಬಂಧ ಅರಣ್ಯ ಇಲಾಖೆ ಮತ್ತು ಜಿಬಿಎ ಅಧಿಕಾರಿಗಳ ಗಮನಕ್ಕೆ ತರಲಾಗಿದ್ದು, ಸೂಕ್ತ ಭದ್ರತೆಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಕೂಡ ಮನವಿ ಮಾಡಲಾಗಿದೆ.

■ ಡಾ.ಜಯಕರ ಎಸ್.ಎಂ. ಕುಲಪತಿ ಬೆಂಗಳೂರು ವಿ.ವಿ.

ಬೀದಿ ನಾಯಿಗಳಿಂದ ತೊಂದರೆ

ಜ್ಞಾನಭಾರತಿ ಆವರಣವು ಸಮೃದ್ಧ ಸಸ್ಯವರ್ಗ ಹಾಗೂ ಅಪಾರ ಸಂಖ್ಯೆಯ ನವಿಲುಗಳನ್ನು ಒಳಗೊಂಡಿದೆ. ಆದರೆ, ಇತ್ತೀಚಿನ ದಿನಗಳಲ್ಲಿ ಕ್ಯಾಂಪಸ್‌ನಲ್ಲಿ ಬೀದಿ ನಾಯಿಗಳ ಸಂಖ್ಯೆ ಗಣನೀಯವಾಗಿ ಏರಿಕೆಯಾಗಿದ್ದು, ಇವು ನವಿಲುಗಳನ್ನು ಭೇಟೆಯಾಡಿ ತಿನ್ನುತ್ತಿವೆ. ಈ ಘಟನೆ ಬಗ್ಗೆ ವಿಶ್ವವಿದ್ಯಾಲಯವು ಅರಣ್ಯ ಇಲಾಖೆ, ಬೆಂಗಳೂರು ಪಶ್ಚಿಮ ನಗರ ಪಾಲಿಕೆ ಹಾಗೂ ಜಿಬಿಎ ಆಯುಕ್ತರಿಗೆ ಪತ್ರ ಬರೆದಿದ್ದು, ಆವರಣದಲ್ಲಿ ಹೆಚ್ಚಾಗಿರುವ ನಾಯಿಗಳಿಂದ ವಿದ್ಯಾರ್ಥಿಗಳಿಗೆ ಮತ್ತು ಸಿಬ್ಬಂದಿಗಳಿಗೆ ತೊಂದರೆಯಾಗುತ್ತಿದೆ ಎಂದು ಉಲ್ಲೇಖಿಸಿದೆ. ಕೂಡಲೇ ಆವರಣದಲ್ಲಿನ ಬೀದಿ ನಾಯಿಗಳನ್ನು ನಿಯಂತ್ರಿಸಲು ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡಿದೆ.



ಕಿರುಸುದ್ದಿ

ಪ್ರಯಾಣಿಕರ ದಟ್ಟಣೆ: ವಿಶೇಷ ರೈಲು ಸಂಚಾರ

ಬೆಂಗಳೂರು: ಗುಡ್ ಫ್ರೈಡೆ ಹಿನ್ನೆಲೆಯಲ್ಲಿ ಪ್ರಯಾಣಿಕರ ದಟ್ಟಣೆಯನ್ನು ನಿಯಂತ್ರಿಸಲು, ನೈಋತ್ಯ ರೈಲ್ವೆಯು ಯಶವಂತಪುರ ಮತ್ತು ಕಣ್ಣೂರು ನಡುವೆ ಮಂಗಳೂರು ಜಂಕ್ಷನ್ ಮಾರ್ಗವಾಗಿ ವಿಶೇಷ ರೈಲನ್ನು ಕಾರ್ಯಾಚರಣೆಗೊಳಿಸಲಿದೆ. ರೈಲು ಸಂಖ್ಯೆ 06551 ಯಶವಂತಪುರ -ಕಣ್ಣೂರು ವಿಶೇಷ ಎಕ್ಸ್‌ಪ್ರೆಸ್ ರೈಲು ಏ.2 ರಂದು ಬೆಳಗ್ಗೆ 11.50ಕ್ಕೆ ಯಶವಂತಪುರದಿಂದ ಹೊರಟು, ಮರುದಿನ ಏ.3ರಂದು ಮುಂಜಾನೆ 3 ಗಂಟೆಗೆ ಕಣ್ಣೂರು ತಲುಪಲಿದೆ. ಮರಳಿ ಪ್ರಯಾಣದಲ್ಲಿ ರೈಲು ಸಂಖ್ಯೆ 06552 ಕಣ್ಣೂರು-ಯಶವಂತಪುರ ವಿಶೇಷ ಎಕ್ಸ್‌ಪ್ರೆಸ್ ರೈಲು ಏ.3ರಂದು ಬೆಳಗ್ಗೆ 8.45ಕ್ಕೆ ಕಣ್ಣೂರಿನಿಂದ ಹೊರಟು, ಅದೇ ದಿನ ರಾತ್ರಿ 9.30ಕ್ಕೆ ಯಶವಂತಪುರವನ್ನು ತಲುಪಲಿದೆ. ಈ ವಿಶೇಷ ರೈಲು ಕುಣಿಗಲ್, ಚನ್ನರಾಯಪಟ್ಟಣ, ಹಾಸನ, ಸಕಲೇಶಪುರ, ಸುಬ್ರಹ್ಮಣ್ಯ ರೋಡ್, ಕಬಕ ಪುತ್ತೂರು, ಬಂಟವಾಳ, ಮಂಗಳೂರು ಜಂಕ್ಷನ್, ಕಾಸರಗೋಡು ಪಯ್ಯನ್ನೂರು ನಿಲ್ದಾಣಗಳಲ್ಲಿ ನಿಲುಗಡೆ ನೀಡಲಿದೆ.

ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ ವಿವಿ ಘಟಿಕೋತ್ಸವ

ಬೆಂಗಳೂರು: ಡಾ.ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯದ ಎರಡನೇ ಘಟಿಕೋತ್ಸವದಲ್ಲಿ ಪದವಿ ಪ್ರಮಾಣ ಪತ್ರ ಪಡೆಯಲು ಅರ್ಹ ವಿದ್ಯಾರ್ಥಿಗಳು ಏ.10ರೊಳಗೆ ಅರ್ಜಿ ಸಲ್ಲಿಸುವಂತೆ ಸೂಚಿಸಲಾಗಿದೆ. ಏ.27ರಂದು ಬೆಳಗ್ಗೆ 11.30ಗಂಟೆಗೆ ಬೇಸ್ ಸಭಾಂಗಣದಲ್ಲಿ ಘಟಿಕೋತ್ಸವ ಹಮ್ಮಿಕೊಳ್ಳಲಾಗಿದೆ. 2023-24 ಮತ್ತು 2024-25ನೇ ಸಾಲಿನ ಪದವಿ ಹಾಗೂ ಸ್ನಾತಕೋತ್ತರ ಪದವಿಗಳಲ್ಲಿ ಅರ್ಹರಾದ ವಿದ್ಯಾರ್ಥಿಗಳಿಗೆ ಘಟಿಕೋತ್ಸವದಲ್ಲಿ ಪದವಿ ಪ್ರಮಾಣ ಪತ್ರ ನೀಡಲಾಗುತ್ತದೆ. ಈ ಎರಡೂ ಸಾಲಿನ ಅರ್ಹ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಈಗಾಗಲೇ ಅಧಿಸೂಚನೆ ಹೊರಡಿಸಲಾಗಿದೆ. ಇದುವರೆಗೂ ಅರ್ಜಿ ಸಲ್ಲಿಸಿದವರು ಕೊನೆಯ ದಿನವಾದ ಏ.10ರೊಳಗೆ ನಿಗದಿತ ಶುಲ್ಕ ಪಾವತಿಸಿ ಅರ್ಜಿ ಸಲ್ಲಿಸುವಂತೆ ಬೇಸ್ ಕುಲಸಚಿವ ಜಿ.ಎಸ್.ಮಮತಾದೇವಿ ಪತ್ರಿಕಾ ಪ್ರಕಟಣೆ ತಿಳಿಸಿದ್ದಾರೆ.

ಏ.16ರಿಂದ ಪ್ಲಂಬೆಕ್ಸ್ ಇಂಡಿಯಾ ಸಮಾವೇಶ

ಬೆಂಗಳೂರು: ನಗರದಲ್ಲಿ ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ನೀರಿನ ಕೊರತೆ ಮತ್ತು ಅಸಮರ್ಥ ಪ್ಲಂಬಿಂಗ್ ವ್ಯವಸ್ಥೆಗಳ ಸಮಸ್ಯೆಗೆ ಪರಿಹಾರ ಕಂಡುಹಿಡಿಯುವ ಉದ್ದೇಶದಿಂದ ಪ್ಲಂಬೆಕ್ಸ್ ಇಂಡಿಯಾ 2026 ಸಮಾವೇಶವನ್ನು ಏ.16ರಿಂದ 18ರವರೆಗೆ ಆಯೋಜಿಸಲಾಗುತ್ತಿದೆ. ಕಾರ್ಯಕ್ರಮವು ಏ.16ರಿಂದ 18ರವರೆಗೆ ಬೆಂಗಳೂರು ಅಂತಾರಾಷ್ಟ್ರೀಯ ಪ್ರದರ್ಶನ ಕೇಂದ್ರದಲ್ಲಿ (ಆಐಉಇ) ನಡೆಯಲಿದೆ. ವೇಗವಾದ ನಗರೀಕರಣ, ಹೆಚ್ಚುತ್ತಿರುವ ಜನಸಂಖ್ಯೆ ಮತ್ತು ಭೂಗರ್ಭ ಜಲದ ಮೇಲಿನ ಒತ್ತಡದ ಹಿನ್ನೆಲೆಯಲ್ಲಿ, ಈ ಕಾರ್ಯಕ್ರಮವು ನವೀನ ತಂತ್ರಜ್ಞಾನಗಳು, ಶಾಶ್ವತ ಪ್ಲಂಬಿಂಗ್ ಪರಿಹಾರಗಳು ಮತ್ತು ನೀರಿನ ಸಮರ್ಥ ಬಳಕೆಯ ಕುರಿತು ಜಾಗೃತಿ ಮೂಡಿಸುವ ಪ್ರಮುಖ ವೇದಿಕೆಯಾಗಲಿದೆ. ತಜ್ಞರು, ಉದ್ಯಮ ಪ್ರತಿನಿಧಿಗಳು ಮತ್ತು ಸಾರ್ವಜನಿಕರು ಭಾಗವಹಿಸುವ ಮೂಲಕ ನಗರದ ನೀರಿನ ಭವಿಷ್ಯವನ್ನು ಉತ್ತಮಗೊಳಿಸುವತ್ತ ಈ ಕಾರ್ಯಕ್ರಮ ಸಹಕಾರ ನೀಡಲಿದೆ.

ಮ್ಯಾನೇಜರ್‌ಗೆ ಚಾಕು ಇರಿದು ಹತ್ಯೆ

ಬೆಂಗಳೂರು: ಕೆಲಸದಿಂದ ವಜಾಗೊಳಿಸಿದ ಸೇಡಿನ ಹಿನ್ನೆಲೆಯಲ್ಲಿ ಉದ್ಯೋಗಿಯೊಬ್ಬ ಕಂಪನಿಯ ಮ್ಯಾನೇಜರ್‌ನನ್ನು ಚಾಕುವಿನಿಂದ ಇರಿದು ಬರ್ಬರವಾಗಿ ಹತ್ಯೆ ಮಾಡಿರುವ ಘಟನೆ ತಿಗಳರಪಾಳ್ಯದಲ್ಲಿ ನಡೆದಿದೆ.

ತಿಗಳರಪಾಳ್ಯದ ಪರ್ವ ಪ್ಲಾಸ್ಟಿಕ್ ಪ್ರೈವೇಟ್ ಲಿಮಿಟೆಡ್ ಕಂಪನಿಯ ಮ್ಯಾನೇಜರ್, ಉತ್ತರ ಪ್ರದೇಶ ಮೂಲದ ರಾಹುಲ್ (38) ಕೊಲೆಯಾದ ದುರ್ದೈವಿ. ಯಾದಗಿರಿ ಮೂಲದ ಹನುಮಂತಪ್ಪ ಎಂಬಾತ ಇದೇ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದನು. ಇತ್ತೀಚೆಗೆ ಆತನನ್ನು ಏಕಾಏಕಿ ಕೆಲಸದಿಂದ ತೆಗೆದುಹಾಕಲಾಗಿತ್ತು. ಇದರಿಂದ ಆಕ್ರೋಶಗೊಂಡಿದ್ದ ಹನುಮಂತಪ್ಪ, ಮಾ.30 ರ ಸೋಮವಾರದಂದು ಕಂಪನಿಗೆ ನುಗ್ಗಿ ಮ್ಯಾನೇಜರ್ ರಾಹುಲ್ ಅವರೊಂದಿಗೆ ಜಗಳವಾಡಿದ್ದಾನೆ. ಈ ವೇಳೆ ತನ್ನ ಬಳಿಯಿದ್ದ ಚಾಕುವಿನಿಂದ ರಾಹುಲ್ ಅವರಿಗೆ ಸುಮಾರು 10ಕ್ಕೂ ಹೆಚ್ಚು



ಬಾರಿ ಇರಿದು ಪರಾರಿಯಾಗಿದ್ದನು.

ದಾಳಿಯಿಂದ ತೀವ್ರ ರಕ್ತಸ್ರಾವಕ್ಕೊಳಗಾಗಿದ್ದ ರಾಹುಲ್ ಅವರನ್ನು ತಕ್ಷಣವೇ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಚಿಕಿತ್ಸೆ ಫಲಕಾರಿಯಾಗದೆ ಮಂಗಳವಾರ ರಾಹುಲ್ ಆಸ್ಪತ್ರೆ ಯಲ್ಲಿ ಕೊನೆಯುಸಿರೆಳೆದಿದ್ದಾರೆ. ಘಟನೆಗೆ ಸಂಬಂಧಿಸಿದಂತೆ ರಾಜಗೋಪಾಲನಗರ ಪೊಲೀಸರು ತಕ್ಷಣ ಕಾರ್ಯಾಚರಣೆ ನಡೆಸಿ ಆರೋಪಿ ಹನುಮಂತಪ್ಪನನ್ನು ಬಂಧಿಸಿದ್ದಾರೆ. ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮೃತರ ಮರಣೋತ್ತರ ಪರೀಕ್ಷೆ ನಡೆಸಿ, ಮೃತದೇಹವನ್ನು ವಾರಸುದಾರರಿಗೆ ಹಸ್ತಾಂತರಿಸಲಾಗಿದೆ.

ರಾಜ್ಯ ಪ್ರಾಸಿಕ್ಯೂಷನ್ ಇಲಾಖೆ ನಿರ್ದೇಶಕಿ ವಿರುದ್ಧ ಪಾಸ್‌ಪೋರ್ಟ್‌ಗೆ ನಕಲಿ ಸಹಿ: ಆರೋಪ

ಕ್ರಿಮಿನಲ್ ಪ್ರಕರಣಕ್ಕೆ ಹೈಕೋರ್ಟ್ ತಡೆ

ಬೆಂಗಳೂರು: ಪಾಸ್‌ಪೋರ್ಟ್ ಪಡೆಯಲು ದಾಖಲೆಗಳಿಗೆ ಸಹಿ ನಕಲು ಮತ್ತು ಕಚೇರಿಯ ಅಧಿಕೃತ ಮೊಹರು ದುರ್ಬಳಕೆ ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ರಾಜ್ಯ ಪ್ರಾಸಿಕ್ಯೂಷನ್ ಇಲಾಖೆಯ ನಿರ್ದೇಶಕಿ ಅಂಜಲಿದೇವಿ ವಿರುದ್ಧ ದಾಖಲಿಸಲಾಗಿರುವ ಕ್ರಿಮಿನಲ್ ಪ್ರಕರಣಕ್ಕೆ ಹೈಕೋರ್ಟ್ ತಡೆ ನೀಡಿದೆ. ಹಲಸೂರು ಗೇಟ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ದೂರು ಮತ್ತು ಆನಂತರದ ನ್ಯಾಯಾಂಗ ಪ್ರಕ್ರಿಯೆ ರದ್ದತಿ ಕೋರಿ ಅಂಜಲಿ ದೇವಿ ಸಲ್ಲಿಸಿರುವ ಅರ್ಜಿ ವಿಚಾರಣೆಯನ್ನು ನ್ಯಾ. ಎಂ.ನಾಗಪ್ರಸನ್ನ ಅವರ ಏಕಸದಸ್ಯ ಪೀಠ ವಿಚಾರಣೆ ನಡೆಸಿತು. ಅರ್ಜಿ ಆಲಿಸಿದ ಪೀಠವು ಆಕ್ಷೇಪಣೆ ಸಲ್ಲಿಸುವವರೆಗೆ ಅಂಜಲಿ ದೇವಿ ಅವರ ವಿರುದ್ಧದ ಪ್ರಕರಣಕ್ಕೆ ತಡೆ ನೀಡಲಾಗಿದೆ. ಆನಂತರ ಇಲಾಖಾ ಪದೋನ್ನತಿ ಸಮಿತಿಯು (ಡಿಪಿಸಿ) ಉಭಯ ಪಕ್ಷಕಾರ ಪ್ರಕರಣವನ್ನು ಪರಿಗಣಿಸಬಹುದು ಎಂದು ಹೇಳಿದ್ದು, ವಿಚಾರಣೆಯನ್ನು ಏ.22ಕ್ಕೆ ಮುಂದೂಡಿದೆ.



ಅರ್ಜಿದಾರರ ಪರ ವಕೀಲ ಪಿ.ಪ್ರಸನ್ನಕುಮಾರ್ ಅವರು ಪ್ರಕರಣ ದಾಖಲಿಸುವ ಮೂಲಕ ದೂರುದಾರೆಯು ತಮ್ಮ ಗುರಿ ಸಾಧಿಸಿದ್ದಾರೆ. ಅಂಜಲಿ ದೇವಿ ಅವರನ್ನು ಪ್ರಾಸಿಕ್ಯೂಷನ್ ಉಪನಿರ್ದೇಶಕರ ಹುದ್ದೆಯಿಂದ ತೆಗೆಯಲಾಗಿದ್ದು, ಕರ್ನಾಟಕ ರಾಜ್ಯ ಆಡಳಿತಾತ್ಮಕ ನ್ಯಾಯ ಮಂಡಳಿಯು ಹೊಸ ದಾಗಿ ಇಲಾಖಾ ಪದೋನ್ನತಿ ಸಮಿತಿ (ಡಿಪಿಸಿ) ಸಭೆ ನಡೆಸಲು ನಿರ್ದೇಶಿಸಿದೆ ಎಂದು ತಿಳಿಸಿದರು. ದೂರುದಾರೆ ಅಂಜನಾ ಚವ್ಹಾಣ್ ಪ್ರತಿನಿಧಿಸಿದ್ದ ವಕೀಲ ಸುನೀಲ್ ನಾರಾಯಣ್ ಆಕ್ಷೇಪಣೆ ಸಲ್ಲಿಸಲು ಎರಡು ವಾರ ಕಾಲಾವಕಾಶ ಕೋರಿದರು. ಅಂಜಲಿದೇವಿ ಸಮುಚಿತ ಕ್ರಮ ಮತ್ತು ಮಾರ್ಗದಲ್ಲಿ ಪಾಸ್‌ಪೋರ್ಟ್ ಪಡೆಯಲು ನಮೂನೆ ಸಲ್ಲಿಸಿದ್ದು, ಸದರಿ ಅರ್ಜಿ ವಿಲೇವಾರಿಯಾಗದೇ ಇರುವಾಗ ಈ ಹಿಂದೆ ಸಲ್ಲಿಸುರುವ ಅರ್ಜಿ ವಿಲೇವಾರಿ ಆಗದೇ ಇರುವುದನ್ನು ಮರೆಮಾಚಿ ಪಾಸ್‌ಪೋರ್ಟ್ ಪಡೆಯಲು ಫಿರ್ಯಾದಿ ಸಹಿಯನ್ನು ನಕಲು ಮಾಡಿ ಈ ಸೃಷ್ಟಿತ ದಾಖಲೆ ಪರಿಶೀಲಿಸಲಾಗಿ ಅದು ನಕಲು ಎಂದು ಕಂಡುಬಂದಿದೆ. ಹೀಗಾಗಿ, ತನ್ನ ಪದನಾಮೆ ಮೊಹರು ದುರ್ಬಳಕೆಯಾದೆ. ಸದರಿ ದಾಖಲೆಗೆ ಸಹಿ ಮಾಡಬೇಕಾದ ಪ್ರಾಧಿಕಾರ ಸಹಿ ಮಾಡಿರುವುದಿಲ್ಲ, ಇದನ್ನು ಪಾಸ್‌ಪೋರ್ಟ್ ಅಧಿಕಾರಿಗೆ ಸಲ್ಲಿಸಿದ್ದಾರೆ ಎಂದು ಆರೋಪಿಸಿ ಹಲಸೂರುಗೇಟ್ ಠಾಣೆಗೆ ದೂರು ನೀಡಿದ್ದರು.

4,047.7ಕೋಟಿ ರೂ.ಆಸ್ತಿ ತೆರಿಗೆ ಸಂಗ್ರಹ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ) 2025-26ನೇ ಸಾಲಿನಲ್ಲಿ 4,047.7 ಕೋಟಿ ರೂ. ಮೊತ್ತದ ಆಸ್ತಿ ತೆರಿಗೆಯನ್ನು ಸಂಗ್ರಹಿಸಿದೆ.



ಹೆಚ್ಚು ತೆರಿಗೆ ಬಾಕಿ ಉಳಿಸಿಕೊಂಡಿರುವವರಿಂದ ವಸೂಲು ಮಾಡಲು ಸರ್ಕಾರ ಒಂದು ಬಾರಿ ಇತ್ಯರ್ಥ (ಒಟಿಎಸ್) ಯೋಜನೆಯನ್ನು ಪ್ರಕಟಿಸಿತ್ತು. ಇದರಿಂದ ಹಲವು ವರ್ಷಗಳಿಂದ ಬಾಕಿ ಉಳಿಸಿಕೊಂಡಿದ್ದ ಸ್ವತ್ತುದಾರರು ಸದುಪಯೋಗಪಡಿಸಿಕೊಂಡಿದೆ. ಈ ಬಾಬ್ತಿನಿಂದಲೇ 1,207 ಕೋಟಿ ರೂ. ಆದಾಯ ದೊರೆತಿದೆ. ಮಾ.31 ಕ್ಕೆ ಈ ಯೋಜನೆ ಕೊನೆಗೊಂಡಿದೆ. ಇನ್ನು ಮುಂದೆ ಒಟಿಎಸ್ ಜಾರಿಯಲ್ಲಿ ಇರುವುದಿಲ್ಲ ಎಂದು ಪಾಲಿಕೆ ಅಧಿಕಾರಿಗಳು ತಿಳಿಸಿದ್ದಾರೆ. 2025-26ನೇ ಸಾಲಿನಲ್ಲಿ ಜಿಬಿಎ 6,700 ಕೋಟಿ ರೂ.ಗಳ ಆದಾಯವನ್ನು ಆಸ್ತಿ ತೆರಿಗೆಯಿಂದ ನಿರೀಕ್ಷಿಸಿತ್ತು.

ಶೇ.5 ರಿಯಾಯಿತಿ ನಿರೀಕ್ಷೆ : ಹಿಂದಿನ ಆರ್ಥಿಕ ವರ್ಷಗಳಂತೆ 2026-27 ಹಣಕಾಸು ವರ್ಷದ ಸಂಪೂರ್ಣ ಆಸ್ತಿ ತೆರಿಗೆಯನ್ನು ಮುಂಚಿತವಾಗಿ, ಸಾಮಾನ್ಯವಾಗಿ ಏ.30ರೊಳಗೆ ಪಾವತಿಸುವ ಆಸ್ತಿ ಮಾಲೀಕರಿಗೆ ಶೇ.5 ರಿಯಾಯಿತಿಯನ್ನು ಜಿಬಿಎ ಮುಂದುವರಿಸುವ ನಿರೀಕ್ಷೆ ಇದೆ.

ದೇಶ ರಕ್ಷಣೆ ನಮ್ಮೆಲ್ಲರ ಹೊಣೆ: ಡಾ.ಶುಭಾ

ಬೆಂಗಳೂರು: ಮಹಿಳೆಯರು ಕೇವಲ ಅಡುಗೆ ಮನೆಗೆ ಮಾತ್ರ ಸೀಮಿತವಾಗಬಾ ರದು. ದೇಶದ ರಕ್ಷಣೆಯ ಬಗ್ಗೆಯೂ ಆಲೋಚಿಸ ಬೇಕು. ದೇಶದ ರಕ್ಷಣೆ ನಮ್ಮೆಲ್ಲರ ಹೊಣೆ ಎಂಬುದನ್ನು ಎಲ್ಲರೂ ಅರಿತುಕೊಳ್ಳಬೇಕೆಂದು ಪದ್ಮಶ್ರೀ ಪ್ರಶಸ್ತಿ ಪುರಸ್ಕೃತೆ ಡಾ.ಶುಭಾ ವಿ.ಅಯ್ಯಂಗಾರ್ ತಿಳಿಸಿದರು.



ಬಸವನಗುಡಿಯ ನ್ಯಾಷನಲ್ ಕಾಲೇಜು ಕ್ಯಾಂಪಸ್‌ನಲ್ಲಿ ಆಯೋಜಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಉದ್ಘಾಟಿಸಿ ಮಾತನಾಡಿ, ಮಹಿಳೆ ಎಂದರೆ ತಾತ್ಸಾರ ಬೇಡ. ಮಹಿಳೆಯು ಪುರುಷರಷ್ಟೇ ಸರಿ ಸಮನಾಗಿ ದುಡಿಯುವ ಶಕ್ತಿಯನ್ನು ಹೊಂದಿದ್ದಾರೆ. ಸಮಾಜದಲ್ಲಿ ನಾವು ಅವರನ್ನು ಸಮನಾಗಿ ಕಾಣಬೇಕಿದೆ. ವಿದ್ಯಾರ್ಥಿಗಳು ದೇಶ ಪ್ರೇಮ ಇಟ್ಟುಕೊಳ್ಳಬೇಕು. ದೇಶ ರಕ್ಷಣೆ ನಮ್ಮ ಹೊಣೆ ಎಂಬುದನ್ನು ಅರಿಯಬೇಕು. ವಿದ್ಯಾರ್ಥಿಗಳು ಜೀವನದಲ್ಲಿ ಸೃಜನಶೀಲತೆ, ಪರಿಶ್ರಮ ಮತ್ತು ಆತ್ಮವಿಶ್ವಾಸವನ್ನು ರೂಢಿಸಿಕೊಳ್ಳಬೇಕು ಎಂದರು. ಕೇಂದ್ರ ಬಾಹ್ಯಕಾಶ ಪ್ರಯೋಗಾಲಯ (ಎನ್‌ಎಎಲ್) ರನ್ ವೇ ಸ್ಪಷ್ಟವಾಗಿ ಕಾಣುವಂತೆ ಮಾಡುವುದಕ್ಕಾಗಿ ದೃಷ್ಟಿ ಎಂಬ ತಂತ್ರಾಂಶವನ್ನು ರೂಪಿಸಲಾಗಿದೆ. ಇದು ನನ್ನ ಅಧ್ಯಕ್ಷತೆಯಲ್ಲಿ ತಯಾರಿಸಿದ ಸಾಫ್ಟ್‌ವೇರ್ ಆಗಿದ್ದು, ಇದರಿಂದ ಪೈಲೈಟ್‌ಗಳಿಗೆ ವಿಮಾನಗಳನ್ನು ಸುರಕ್ಷಿತವಾಗಿ ಲ್ಯಾಂಡ್ ಮಾಡಲು ಅನುಕೂಲವಾಗಿದೆ. ಆಪರೇಷನ್ ಸಿಂಧೂರ್ ವೇಳೆಯಲ್ಲೂ ನಮ್ಮ ತಂತ್ರಾಂಶ ಬಳಕೆ ಮಾಡಲಾಗಿದೆ. ನ್ಯಾಷನಲ್ ಎಜುಕೇಷನ್ ಸೊಸೈಟಿ(ಎನ್‌ಇಎಸ್) ಗೌರವ ಕಾರ್ಯದರ್ಶಿ ವಿ.ವೆಂಕಟಶಿವರೆಡ್ಡಿ ಮಾತನಾಡಿ, ಹೊಸ ಕೋರ್ಸ್‌ಗಳನ್ನು ಪರಿಚಯಿಸಲಾಗಿದೆ. ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಭ್ರಷ್ಟಾಚಾರ ಖಂಡಿಸಿ ಎಬಿವಿಪಿ ಪ್ರತಿಭಟನೆ

ಬೆಂಗಳೂರು: ನಗರದ ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದಲ್ಲಿ ನಡೆದಿರುವ ಸುಮಾರು 3.5 ಕೋಟಿ ಭ್ರಷ್ಟಾಚಾರ ಹಾಗೂ ಮೂಲ ಸೌಕರ್ಯಗಳ ದುರ್ವ್ಯವಸ್ಥೆಯನ್ನು ಖಂಡಿಸಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್, ಬೆಂಗಳೂರು ಮಹಾನಗರದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಈ ವೇಳೆ ರಾಜ್ಯ ಸಹ ಕಾರ್ಯದರ್ಶಿ ಯಶವಂತ್ ಎಂ.ಎನ್. ಮಾತನಾಡಿ, ಮಹಿಳೆಯರನ್ನು ಶಿಕ್ಷಣದಿಂದ ವಂಚಿತರನ್ನಾಗಿ ಮಾಡಿದ ಕಾಲದಲ್ಲಿ ಮಹಿಳೆಯರಿಗಾಗಿ ವಸತಿ ಕಾಲೇಜನ್ನು ಬೆಂಗಳೂರಿನಲ್ಲಿ ಉನ್ನತ ಶಿಕ್ಷಣ ನೀಡುವ ಉದ್ದೇಶದಿಂದ ಸ್ಥಾಪಿಸಲಾಗಿತ್ತು. ಇಂತಹ ಮಹೋನ್ನತ ಕಾಲೇಜಿನ ಧ್ಯೇಯೋದ್ದೇಶವನ್ನು ಮರೆತ ಈಗಿನ ಆಡಳಿತ ಮಂಡಳಿ ಭ್ರಷ್ಟಾಚಾರಕ್ಕಿಳಿಸಿರುವುದು ದುರಂತ ಸಂಗತಿಯಾಗಿದೆ. ಮಕ್ಕಳಿಗೆ ಸಿಗಬೇಕಾಗಿದ್ದ ಮೂಲಸೌಕರ್ಯ ಹಾಗೂ ಗುಣಮಟ್ಟದ ಶಿಕ್ಷಣ ಕಸಿದುಕೊಂಡು ತಮ್ಮ ಹೊಟ್ಟೆ ತುಂಬಿಸಿಕೊಳ್ಳುತ್ತಿರುವುದು ಸಂವಿಧಾನದ ಮೂಲಭೂತ ಹಕ್ಕಿನ ಉಲ್ಲಂಘನೆಯಾಗಿದೆ ಎಂದು ದೂರಿದರು.

ಎಬಿವಿಪಿ ಬೆಂಗಳೂರು ಮಹಾನಗರ ಸಹಕಾರ್ಯದರ್ಶಿ ಧನುಷ್ ಮಾತನಾಡಿ, ಕಾಲೇಜಿನಲ್ಲಿ ಓದುತ್ತಿರುವ ವಿದ್ಯಾರ್ಥಿನಿಯರಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡುವಲ್ಲಿ ವಿಶ್ವವಿದ್ಯಾಲಯ ವಿಫಲವಾಗಿದೆ. ಅಷ್ಟೇ ಅಲ್ಲದೆ ಶೌಚಾಲಯಗಳು ಸ್ವಚ್ಛತೆಗಳನ್ನು ಕಾಣದೆ ಅನಾಥವಾಗಿವೆ. ವಿವಿಧ ಹೆಸರಿನಲ್ಲಿ ಶುಲ್ಕಗಳನ್ನು ಪಡೆಯುವ ವಿಶ್ವವಿದ್ಯಾಲಯವು ಯಾವುದೇ ರೀತಿಯ ಸೌಲಭ್ಯವನ್ನು ನೀಡದೇ ವಿದ್ಯಾರ್ಥಿನಿಯರನ್ನು ವಂಚಿಸುತ್ತಿದೆ. ಮಹಿಳಾ



ವಿಶ್ವವಿದ್ಯಾಲಯದಲ್ಲಿ ಮಹಿಳೆಯರ ಸುರಕ್ಷತೆಗೆ ಅಗತ್ಯವಾದ ಸಿಸಿಟಿವಿ ಸೌಲಭ್ಯವಿಲ್ಲ. ಹತ್ತು ವರ್ಷಗಳ ಹಿಂದೆ 11000ಗಳಷ್ಟಿದ್ದ ಪ್ರವೇಶಾತಿ ಇಂದು 4000 ಕ್ಕೆ ಕುಸಿದಿರುವುದು ಮಹಾರಾಣಿ ಕಾಲೇಜು ಆಡಳಿತ ವೈಖರಿಗೆ ಹಿಡಿದ ಕೈಗನ್ನಡಿ ಎಂದು ಆರೋಪಿಸಿದರು.

ಎಬಿವಿಪಿ ಬೆಂಗಳೂರು ಮಹಾನಗರ ಸಹಕಾರ್ಯದರ್ಶಿ ಕೋಟೆಪ್ಪ ಮರಾಡಿ ಮಾತನಾಡಿ, ಕೋಟಿ ಕೋಟಿ ಹಣದ ಭ್ರಷ್ಟಾಚಾರ ಬೆಳಕಿಗೆ ಬಂದಿರುವ ಹಿನ್ನೆಲೆಯಲ್ಲಿ ಏ.1ರಂದು ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಲಿದೆ. ಸಾಕ್ಷಿ ಸಮೇತ ಭ್ರಷ್ಟಾಚಾರವನ್ನು ಇಡೀ ಕರ್ನಾಟಕದ ಜನತೆ ಮುಂದೆ ಹಾಗೂ ಸರ್ಕಾರದ ಮುಂದೆ ಬಿಚ್ಚಿಡಲಿದೆ ಎಂದು ತಿಳಿಸಿದರು.

ಪ್ರಾಂತ ವಿದ್ಯಾರ್ಥಿನಿ ಪ್ರಮುಖ್ ಅಮೃತಾಂಬ, ಕಾರ್ಯಕರ್ತರಾದ ಅನನ್ಯ, ಆದರ್ಶ, ಅಭಿನವ, ವಿದ್ಯಾರಣ್ಯ, ಚಂದನ್, ಡಿವಿಜ್ ಗೌಡ, ವಿಷ್ಣು, ಲೇಖನ, ಭಾರ್ಗವ ಇತರರು ಉಪಸ್ಥಿತರಿದ್ದರು.

ಪ್ರತಿಷ್ಠಿತ ಕಂಪನಿ ಹೆಸರಲ್ಲಿ ನಕಲಿ ವಾಚ್ ಮಾರಾಟ: ಬಿಡಿಭಾಗ ವಶ

ಅಂಗಡಿಗಳ ಮೇಲೆ ಸಿಸಿಬಿ ದಾಳಿ: ಐವರ ಸೆರೆ

ಬೆಂಗಳೂರು: ಪ್ರತಿಷ್ಠಿತ ಕಂಪನಿಗಳ ಹೆಸರಿನಲ್ಲಿ ನಕಲಿ ವಾಚ್‌ಗಳನ್ನು ಅಸಲಿಯೆಂದು ನಂಬಿಸಿ ಸಾರ್ವಜನಿಕರಿಗೆ ಮಾರಾಟ ಮಾಡುತ್ತಿದ್ದ ಜಾಲವನ್ನು ಸಿಸಿಬಿಯ ಆರ್ಥಿಕ ಅಪರಾಧ ದಳದ ಅಧಿಕಾರಿಗಳು ಪತ್ತೆಹಚ್ಚಿದ್ದಾರೆ. ನಗರದ ವಿವಿಧೆಡೆ ಇರುವ 5 ಅಂಗಡಿಗಳ ಮೇಲೆ ದಾಳಿ ನಡೆಸಿರುವ ಪೊಲೀಸರು, ಸುಮಾರು 25 ಲಕ್ಷ ರೂ. ಮೌಲ್ಯದ ನಕಲಿ ವಾಚ್ ಹಾಗೂ ಬಿಡಿಭಾಗಗಳನ್ನು ವಶಪಡಿಸಿಕೊಂಡಿದ್ದಾರೆ.

ಹರೀಶ್ ಕುಮಾರ್ (44), ಸೈಯದ್ ಜೈದ್ ಇಕ್ಬಾಲ್ (29), ಮೊಹಮ್ಮದ್ ಅಬಿದ್ ಹುಸೇನ್ (53), ಖಲೀಮುಲ್ಲಾ(70), ಅಬ್ದುಲ್ ರೆಹಮಾನ್ (42) ಬಂಧಿತ ಆರೋಪಿಗಳು.

ಟೈಟನ್ ಕಂಪನಿಯ ಪ್ರತಿನಿಧಿಗಳು ನೀಡಿದ ದೂರಿನನ್ವಯ ಈ ಕಾರ್ಯಾಚರಣೆ ನಡೆದಿದೆ. ಚಿಕ್ಕಪೇಟೆ, ಸುಲ್ತಾನ್‌ಪಾಳ್ಯ, ಮುಖ್ಯರಸ್ತೆ, ಗಂಗಾನಗರ ಹಾಗೂ ದಿಣ್ಣೂರು ಮುಖ್ಯರಸ್ತೆಯಲ್ಲಿರುವ 5 ಅಂಗಡಿಗಳಲ್ಲಿ ಸೋನಾಟಾ, ಟೈಟಾನ್ ಮತ್ತು ಫಾಸ್ಟ್‌ಟ್ರಾಕ್ ಕಂಪನಿಗಳ ನಕಲಿ ವಾಚ್



ಗಳನ್ನು ಅಸಲಿ ಎಂದು ನಂಬಿಸಿ ಮಾರಾಟ ಮಾಡಲಾಗುತ್ತಿತ್ತು. ಈ ಮೂಲಕ ಸಾರ್ವಜನಿಕರಿಗೆ ಮೋಸ ಮಾಡಿ ಅಕ್ರಮವಾಗಿ ಹಣ ಸಂಪಾದಿಸುತ್ತಿರುವ ಬಗ್ಗೆ ದೂರಿನಲ್ಲಿ ವಿವರಿಸಲಾಗಿತ್ತು.

ಸಿಸಿಬಿ ಕಾರ್ಯಾಚರಣೆ: ದೂರಿನ ಆಧಾರದ ಮೇಲೆ ತನಿಖೆ ಕೈಗೊಂಡ ಸಿಸಿಬಿ ಅಧಿಕಾರಿಗಳು ಮತ್ತು ಸಿಬ್ಬಂದಿ, ಮಾ.18 ಮತ್ತು 20ರಂದು ನಿಗದಿತ ಅಂಗಡಿಗಳ ಮೇಲೆ ದಾಳಿ ನಡೆಸಿದ್ದಾರೆ. ಈ ವೇಳೆ ವಿವಿಧ ಮಾದರಿಯ 670 ನಕಲಿ ವಾಚ್‌ಗಳು ಹಾಗೂ 414 ವಾಚ್‌ಗಳ ಬಿಡಿಭಾಗಗಳನ್ನು ವಶಕ್ಕೆ ಪಡೆಯಲಾಗಿದೆ. ಜಪ್ತಿ ಮಾಡಲಾದ ಒಟ್ಟು ವಸ್ತುಗಳ ಮೌಲ್ಯ ಸುಮಾರು 25 ಲಕ್ಷ ರೂ. ಎಂದು ಅಂದಾಜಿಸಲಾಗಿದೆ.

ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಅವರ ಮಾರ್ಗದರ್ಶನದಲ್ಲಿ ಹಾಗೂ ಅಪರ ಪೊಲೀಸ್ ಆಯುಕ್ತ ಅಜಯ್ ಹಿಲೋರಿ ಮತ್ತು ಡಿಸಿಪಿ ರಾಜಾ ಇಮಾಮ್ ಕಾಸಿಂ ಅವರ ನೇತೃತ್ವದಲ್ಲಿ ಈ ಯಶಸ್ವಿ ಕಾರ್ಯಾಚರಣೆ ನಡೆದಿದೆ.

ಇಂದು ನಗರದಲ್ಲಿ...

- ಅನುರಾಧ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಿಂದ ವಾಕಥಾನ್, ಸ್ಥಳ: ಹೆಗ್ಗನಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರ, ಬೆಳಗ್ಗೆ 8
- ಧರ್ಮರಾಯಸ್ವಾಮಿ ದೇವಾಲಯದಿಂದ ಕರಗ ಶಕ್ತ್ಯೋತ್ಸವ ಕಾರ್ಯಕ್ರಮ, ಸ್ಥಳ: ಕರಗದ ಕುಂಟೆ, ಕಬ್ಬನ್ ಪಾರ್ಕ್, ಬೆಳಗ್ಗೆ 9
- ರಾಜ್ಯ ಒಕ್ಕಲಿಗರ ಸಂಘದವತಿಯಿಂದ ರಕ್ತದಾನ ಶಿಬಿರ, ಸ್ಥಳ: ಬಿಐಟಿ ಕ್ವಾಡ್ರ್ಯಾಂಗಲ್, ವಿವಿಪುರ, ಬೆಳಗ್ಗೆ 10
- ಎಬಿವಿಪಿಯಿಂದ ಭ್ರಷ್ಟಾಚಾರ ದಾಖಲೆ ಬಿಡುಗಡೆ, ಸ್ಥಳ: ಪ್ರೆಸ್‌ಕ್ಲಬ್, ಮಧ್ಯಾಹ್ನ 1.30



ಕಿರುಸುದ್ದಿ

ಫುಟ್‌ಬಾಲ್: ಭಾರತ ಶುಭಾರಂಭ

ಕೊಚ್ಚಿ: ಇಲ್ಲಿಯ ಜವಾಹರಲಾಲ್ ನೆಹರು ಕ್ರೀಡಾಂಗಣದಲ್ಲಿ ನಡೆದ ಎಎಫ್‌ಸಿ ಏಷ್ಯನ್ ಕಪ್ 2027 ಅರ್ಹತಾ ಪಂದ್ಯದಲ್ಲಿ ಭಾರತ 2-1 ಅಂತರದಲ್ಲಿ ಹಾಂಗ್ ಕಾಂಗ್ ತಂಡವನ್ನು ಸೋಲಿಸಿ ನಗರದಲ್ಲಿ ತನ್ನ ಮೊದಲ ಗೆಲುವು ದಾಖಲಿಸಿದೆ. ಪಂದ್ಯದ ಆರಂಭದಲ್ಲೇ ಎಲ್ಲರ ಗಮನ ಸೆಳೆದ ರಿಯಾನ್ ವಿಲಿಯಮ್ಸ್, ತಮ್ಮ ಡೆಬ್ಯೂ ಪಂದ್ಯದಲ್ಲೇ 4ನೇ ನಿಮಿಷದಲ್ಲಿ ಗೋಲು ಬಾರಿಸಿ ಭಾರತಕ್ಕೆ ಮುನ್ನಡೆ ನೀಡಿದರು. ಇದು ಭಾರತೀಯ ಪುರುಷರ ತಂಡದ ಇತಿಹಾಸದಲ್ಲಿ ಡೆಬ್ಯೂ ಆಟಗಾರರಿಂದ ಬಂದ ಅತ್ಯಂತ ವೇಗದ ಗೋಲು ಕೂಡ ಆಗಿದೆ.

ಇನ್ನೊಂದು ಗೋಲು ಆಕಾಶ್ ಮಿಶ್ರಾ ಅವರಿಂದ ಬಂತು. ಅವರು ಭಾರತ ಪರ ತಮ್ಮ ಮೊದಲ ಗೋಲು ದಾಖಲಿಸಿದರು. 65ನೇ ನಿಮಿಷದಲ್ಲಿ ಎವರ್ಟನ್ ಕಮಾರ್ಗೋ ಗೋಲು ಬಾರಿಸಿ ಹಾಂಗ್ ಕಾಂಗ್ ಅಂತರವನ್ನು ಕಡಿಮೆ ಮಾಡಿದರೂ, ಕೊನೆಯವರೆಗೂ ಮುನ್ನಡೆ ಕಾಯ್ದುಕೊಂಡ ಭಾರತ ಜಯ ಸಾಧಿಸಿತು. ಈ ಗೆಲುವಿನೊಂದಿಗೆ ಖಾಲಿದ್ ಜಮೀಲ್ ನೇತೃತ್ವದ ಭಾರತ ತಂಡ ತನ್ನ ಏಷ್ಯನ್ ಕಪ್ ಅರ್ಹತಾ ಅಭಿಯಾನವನ್ನು ಸಕಾರಾತ್ಮಕವಾಗಿ ಮುಕ್ತಾಯಗೊಳಿಸಿದೆ.

ಬ್ರಾಡ್‌ಕಾಸ್ಟಿಂಗ್ ಸಿಬ್ಬಂದಿ ಅನುಮಾನಾಸ್ಪದ ಸಾವು

ಮುಂಬೈ: ಬ್ರಿಟಿಷ್ ನಾಗರಿಕ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ಬ್ರಾಡ್‌ಕಾಸ್ಟಿಂಗ್ ಸಿಬ್ಬಂದಿ ಇಯಾನ್ ವಿಲಿಯಮ್ಸ್ ಲ್ಯಾಂಗ್ಫೋರ್ಡ್ ಮುಂಬೈನಲ್ಲಿ ಅನುಮಾನಾಸ್ಪದವಾಗಿ ಮೃತಪಟ್ಟರೆಂದು ಮುಂಬೈ ಪೊಲೀಸರು ತಿಳಿಸಿದ್ದಾರೆ. 76 ವರ್ಷದ ಇಯಾನ್ ಮುಂಬೈನ ಖಾಸಗಿ ಹೋಟೆಲಿನಲ್ಲಿ ಮೃತಪಟ್ಟರು. ಐಪಿಎಲ್ ಆಡಳಿತ ಮಂಡಳಿ ಮತ್ತು ಬಿಸಿಸಿಐ ಅವರ ಸಾವಿಗೆ ಸಾಂತ್ವಾನ ತಿಳಿಸಿದೆ. ಪ್ರಕಟಣೆಯಲ್ಲಿ ಐಪಿಎಲ್ ಬ್ರಾಡ್‌ಕಾಸ್ಟಿಂಗ್ ಇಂಜಿನೀಯರ್ ಮೃತರಾದರು. ಬಿಸಿಸಿಐ ಅವರ ಸಾವಿಗೆ ಸಾಂತ್ವಾನ ತಿಳಿಸುತ್ತದೆ. ಮೃತರ ಆತ್ಮಕ್ಕೆ ಶಾಂತಿ ಸಿಗಲಿ, ಐಪಿಎಲ್ ಯಶಸ್ಸಿನಲ್ಲಿ ಅವರ ಪಾತ್ರ ನಮಗೆ ಸದಾ ನೆನಪಿರುತ್ತದೆ. ಅವರ ಕುಟುಂಬಕ್ಕೆ ಬೇಕಾದ ಎಲ್ಲಾ ಬೆಂಬಲ ಬಿಸಿಸಿಐ ನೀಡುತ್ತದೆ ಎಂದು ಬರೆದುಕೊಂಡಿದೆ.

ಕನ್ನಡಿಗ ವಿಜಯ್‌ಗೆ 3 ವಿಕೆಟ್ | ಗುಜರಾತ್ 162/6

ವೈಶಾಖ್ ಮಾರಕ ಬೌಲಿಂಗ್ ಪಂಜಾಬ್‌ಗೆ ಸ್ಪರ್ಧಾತ್ಮಕ ಗುರಿ

ಚಂಡೀಗಢ: ಮೊದಲಿಗೆ ಸ್ಫೋಟಕ ಬ್ಯಾಟಿಂಗ್ ಮಾಡಿದರೂ, ಕನ್ನಡಿಗ ವಿಜಯ್‌ಕುಮಾರ್ ವೈಶಾಖ್ ಅವರ ಕರಾರುವಾಕ್ ಬೌಲಿಂಗ್ ದಾಳಿಗೆ ತತ್ತರಿಸಿದ ಗುಜರಾತ್ ಟೈಟಾನ್ಸ್ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ 4ನೇ ಪಂದ್ಯದಲ್ಲಿ ಸ್ಪರ್ಧಾತ್ಮಕ ಗುರಿ ಮಾತ್ರ ನೀಡಲು ಶಕ್ತವಾಯಿತು.



ಗಿಲ್, ಸುದರ್ಶನ್ ಹಾಗೂ ಬಟ್ಲರ್ ಅವರ ಬ್ಯಾಟಿಂಗ್‌ನೊಂದಿಗೆ ಒಂದು ಹಂತದಲ್ಲಿ ದೊಡ್ಡ ಸ್ಕೋರ್‌ನತ್ತ ಸಾಗುತ್ತಿದ್ದ ಗುಜರಾತ್ ಮಧ್ಯಮ ಇನ್ನಿಂಗ್ಸ್‌ನಲ್ಲಿ ಎಡವಿತು. ವೇಗಿ ವಿಜಯ್ ಕುಮಾರ್ ವೈಶಾಖ್ ಅವರ ದಾಳಿಯಲ್ಲಿ ಸಿಲುಕಿಕೊಂಡು ಚಾಹಲ್ ದಾಳಿಗೆ ತತ್ತರಿಸಿತು. ಟಾಸ್ ಸೋಲಿನೊಂದಿಗೆ ಬ್ಯಾಟಿಂಗ್‌ಗಿಳಿದ ಗುಜರಾತ್ 20 ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡು 162 ರನ್ ಗಳಿಸಿದೆ. ಗಿಲ್ ಹೆಚ್ಚು ರನ್ ಗಳಿಸಿದವರಲ್ಲಿ ಬಂದರೆ, ಬಟ್ಲರ್ ಕೂಡ ಉತ್ತಮ ಬ್ಯಾಟಿಂಗ್ ಮಾಡಿದರು. ಬೌಲಿಂಗ್‌ನಲ್ಲಿ ಪಂಜಾಬ್‌ನ ಬಹುತೇಕ ಎಲ್ಲಾ ಬೌಲರ್‌ಗಳು ಮಿಂಚಿದರು. ವೈಶಾಖ್ 3, ಚಾಹಲ್ 2 ವಿಕೆಟ್ ಪಡೆದರು. ಉಳಿದ ಬೌಲರ್‌ಗಳು ಡಾಟ್‌ಗಳ ಮೂಲಕ ಗಮನ ಸೆಳೆದರು.

ಉತ್ತಮ ಆರಂಭ: ಗುಜರಾತ್‌ನ ಸ್ವಾಭಾವಿಕ ಬ್ಯಾಟಿಂಗ್‌ನೊಂದಿಗೆಪಂದ್ಯ ಶುರುವಾಯಿತು. ಗಿಲ್ ಮತ್ತು ಸಾಯಿ ಸುದರ್ಶನ್ ಆರಂಭಿಕ ಹಂತದಲ್ಲಿ ಸೆಟ್ ಆಗುವತ್ತ ಗಮನ ಹರಿಸಿದರು. ಆದರೆ ಸೆಟ್ ಆಗುವ ಮೊದಲೇ ಸಾಯಿ ಸುದರ್ಶನ್ ಕ್ಯಾಚ್ ಆದರು. 11 ಎಸೆತ ಎದುರಿಸಿದ ಅವರು 13 ರನ್‌ಗೆ ವಿಕೆಟ್ ಒಪ್ಪಿಸಿದರು. ಮೂರನೇ ಕ್ರಮಾಂಕದಲ್ಲಿ ಬಟ್ಲರ್ ಬಂದು ಒಂದು ಬದಿಯಲ್ಲಿ ಅಂಟಿಕೊಂಡು ನಿಲ್ಲುವ ಜವಾಬ್ದಾರಿ ನಂದೆಂದರು. ಅಷ್ಟರೊತ್ತಿಗಾಗಲೇ ಸೆಟ್ ಆಗಿ ನಿಂತಿದ್ದ ಗಿಲ್ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದರು. 6 ಸ್ಟ್ರೋಕ್‌ಗಳ ಮೂಲಕ ಮನಮೋಹಕ ಬೌಂಡರಿಗಳೊಂದಿಗೆ 27 ಬಾಲ್‌ಗಳಲ್ಲಿ 39 ರನ್ ಗಳಿಸಿ ಔಟಾದರು. ಅನಿರೀಕ್ಷಿತವಾಗಿ ಜಾಸ್ ಬಟ್ಲರ್ ಸೆಟ್ ಆಗುವುದಕ್ಕೆ ಹೆಚ್ಚಿನ ಸಮಯ ತೆಗೆದುಕೊಂಡರು. ನಡುವೆ ಒಂದೆರಡು ಬೌಂಡರಿಗಳನ್ನು ಜಾಡಿಸಿದರೂ, 33 ಬಾಲ್‌ಗಳಲ್ಲಿ ಅವರು ಗಳಿಸಿದ್ದು 38 ರನ್ ಮಾತ್ರ. ಇದರಲ್ಲಿ 3 ಬೌಂಡರಿ ಮತ್ತು 2 ಸಿಕ್ಸರ್ ಸೇರಿವೆ. ಮಧ್ಯಮ ಕ್ರಮಾಂಕದಲ್ಲಿ ಫಿಲಿಪ್ಸ್ ಸರಸರನೇ ಬೌಂಡರಿ ಸಿಕ್ಸರ್‌ಗಳನ್ನು ಬಾರಿಸಿ 25 ಕ್ಕೆ ಕ್ಯಾಚ್ ಆದರು. ಸುಂದರ್ ಔಪಚಾರಿಕತೆ ಮುಗಿಸುವಷ್ಟರಲ್ಲಿ 18ಕ್ಕೆ ವಿಕೆಟ್ ಕೊಟ್ಟರು.

ದಿಢೀರ್ ಕುಸಿತ

ಗಿಲ್, ಬಟ್ಲರ್ ಅವರ ಬ್ಯಾಟಿಂಗ್‌ನೊಂದಿಗೆ ಒಂದು ಹಂತದಲ್ಲಿ ಉತ್ತಮವಾಗಿ ಬ್ಯಾಟಿಂಗ್ ಮಾಡುತ್ತಿದ್ದ ಗುಜರಾತ್ ಅವರ ವಿಕೆಟ್ ಬಿದ್ದ ನಂತರ ನಿಧಾನವಾಯಿತು. ರನ್ ವೇಗ ಕುಸಿಯಿತು, ಒತ್ತಡಕ್ಕೆ ಸಿಲುಕಿಕೊಂಡ ಗುಜರಾತ್, ಭಾರೀ ಹಿನ್ನಡೆ ಅನುಭವಿಸಲಾರಂಭಿಸಿತು. ಆರಂಭದಲ್ಲಿ 200 ರನ್ ದಾಟುವ ಭರವಸೆಯಲ್ಲಿದ್ದ ತಂಡ ಈಗ 160 ರನ್ ದಾಟುವುದಕ್ಕೂ ಪರದಾಟ ನಡೆಸಿದಂತೆ ಮಾಡಿತು. ಯಜ್ವೇಂದ್ರ ಚಾಹಲ್ ಮಾರಕ ಬೌಲಿಂಗ್ ದಾಳಿಯೊಂದಿಗೆ 3 ವಿಕೆಟ್ ಕಿತ್ತರು. ಚಾಹಲ್ 2 ವಿಕೆಟ್ ಕಿತ್ತರು. ಅಂತಿಮದಲ್ಲಿ ಟಿವಾಟಿಯಾ 160ರ ಗಡಿ ದಾಟಿಸಿದರು.

ಸ್ಕೋರ್ ವಿವರ

ಗುಜರಾತ್: 162/6

ಸುದರ್ಶನ್	ಸಿ ಶ್ರೇಯಸ್ ಬಿ ಯಾನ್ಸನ್	13
ಗಿಲ್	ಸಿ ಕೂಪರ್ ಬಿ ಚಾಹಲ್	39
ಬಟ್ಲರ್	ಸಿ ಬಾರ್ಟ್‌ಲೆಟ್ ಬಿ ಚಾಹಲ್	38
ಫಿಲಿಪ್ಸ್	ಸಿ ಯಾನ್ಸನ್ ಬಿ ವೈಶಾಖ್	25
ಸುಂದರ್	ಸಿ ಅರ್ಶದೀಪ್ ಬಿ ವೈಶಾಖ್	18
ಶಾರುಖ್	ಸಿ ಅರ್ಶದೀಪ್ ಬಿ ವೈಶಾಖ್	4
ಟಿವಾಟಿಯಾ	ನಾಟೌಟ್	11
ರಶಿದ್	ನಾಟೌಟ್	0
ಇತರೆ	14	
ಅರ್ಶದೀಪ್	4-0-42-0	
ಬಾರ್ಟ್‌ಲೆಟ್	4-0-36-0	
ಯಾನ್ಸನ್	4-0-20-1	
ವೈಶಾಖ್	4-0-34-3	
ಚಾಹಲ್	4-0-28-2	

ಗೆಲುವಿನ ಭರವಸೆಯಲ್ಲಿ ರಿಷಭ್ ಪಂತ್ ಪಡೆ

ಇಂದು ಲಖನೌ vs ದಿಲ್ಲಿ



ಪಿಚ್ ರಿಪೋರ್ಟ್

ಲಖನೌನ ಏಕಾನಾ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ. ಬೌಲರ್‌ಗಳಿಗೆ ಅಲ್ಪ ಅನುವು ಮಾಡಿಕೊಡುವ ಏಕೈಕ ಐಪಿಎಲ್ ಪಿಚ್ ಇದಾಗಿದೆ. ಸ್ಪಿನ್ನರ್‌ಗಳು ಮತ್ತು ವೇಗಿಗಳು ಮಿಂಚುವ ಸಾಧ್ಯತೆ ಇದೆ. ದೊಡ್ಡ ದೊಡ್ಡ ಸ್ಕೋರ್‌ಗಳು ಬಂದರೂ ತೀರಾ ಸ್ಫೋಟಕ ಬ್ಯಾಟಿಂಗ್ ಮಾಡಲಾಗಲ್ಲ. ಪಿಚ್‌ನಲ್ಲಿ ಹೆಚ್ಚಿನ ಬೌನ್ಸ್ ಇರುತ್ತದೆ, ನೇರ ಬ್ಯಾಟ್‌ಗೆ ಬರಬಹುದು.

ಲಖನೌ: ಬದಲಾವಣೆಗಳೊಂದಿಗೆ ಮೈದಾನಕ್ಕಿಳಿಯುತ್ತಿರುವ ದಿಲ್ಲಿ ಕ್ಯಾಪಿಟಲ್ಸ್ ಮತ್ತು ಲಖನೌ ಸೂಪರ್ ಜೇಂಟ್ಸ್ ತಂಡಗಳು ಗುರುವಾರ ನಡೆಯಲಿರುವ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ.

ಕಳೆದ ಕೂಟದಲ್ಲಿ ಉತ್ತಮ ಪ್ರದರ್ಶನ ನೀಡಿದ್ದಾದರೂ ದಿಲ್ಲಿ ಕ್ಯಾಪಿಟಲ್ಸ್ ಕೊನೆಯಲ್ಲಿ ಹಿನ್ನಡೆ ಅನುಭವಿಸಿತ್ತು. ಇತ್ತ ಲಖನೌ ಕೂಡ ಆರಂಭಿಕ ಪಂದ್ಯಗಳಲ್ಲಿ ಉತ್ತಮ ಪ್ರದರ್ಶನ ನೀಡಿ ಬಳಿಕ ಹೊರಬಿದ್ದಿತ್ತು. ದಿಲ್ಲಿ ಪಡೆಯಲ್ಲಿ ಮಧ್ಯಮ ಕ್ರಮಾಂಕದ ಬ್ಯಾಟಿಂಗ್ ಮತ್ತು ಲಖನೌ ಬೌಲಿಂಗ್‌ನಲ್ಲಿ ಹಿನ್ನಡೆ ಅನುಭವಿಸಿತ್ತು. ಅರ್ಜುನ್ ತೆಂಡೂಲ್ಕರ್ ಮತ್ತು ಮುಖ್ಯವಾಗಿ ಮೊಹಮ್ಮದ್ ಶಮಿಯವರನ್ನು ಟ್ರೇಡ್ ಮಾಡಿಕೊಂಡಿತ್ತು. ಇತ್ತ ದಿಲ್ಲಿ ಕ್ಯಾಪಿಟಲ್ಸ್ ಬೇಕಾದ ಆಟಗಾರರನ್ನು ಹರಾಜಿನಲ್ಲಿ ಆಯ್ಕೆ ಮಾಡಿಕೊಂಡಿದ್ದಲ್ಲದೆ ನಿತಿಶ್ ರಾಣಾ ಅವರನ್ನು ಟ್ರೇಡ್ ಮಾಡಿಕೊಂಡಿತ್ತು. ಅಗತ್ಯ ಬದಲಾವಣೆಯೊಂದಿಗೆ ಕಣಕ್ಕಿಳಿಯುತ್ತಿರುವ ಉಭಯ ತಂಡಗಳು ಕುತೂಹಲ ಮೂಡಿಸಿವೆ. ಲಖನೌನ ಏಕಾನಾ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ.

ಪಂತ್ ಲಯ ಲಖನೌ ಶಕ್ತಿ: ಬ್ಯಾಟಿಂಗ್‌ನಲ್ಲಿ ಆರಂಭಿಕರು ಮಾರ್ಕ್ರಂ ಮತ್ತು ಮಾರ್ಷ್ ಮತ್ತೊಮ್ಮೆ ತಯಾರಾಗಿ ನಿಂತಿದ್ದಾರೆ. ಕಳೆದ ಬಾರಿ ಬ್ಯಾಟಿಂಗ್‌ನಲ್ಲಿ ವೈಫಲ್ಯ ಎದುರಿಸಿದ್ದ ರಿಷಭ್ ಪಂತ್ ಅಭ್ಯಾಸದಲ್ಲಿ ಬಲಿಷ್ಠರಾಗಿ ಕಾಣಿಸಿಕೊಂಡಿರುವುದೇ ತಂಡಕ್ಕೆ ಆನೆ ಬಲ. ನಿಕೊಲಸ್ ಪೂರಣ್ ಸ್ಪಷ್ಟ ಹೊಡೆತಗಳ ಮೂಲಕ ಮಿಂಚಲು ಸಿದ್ಧರಾಗಿದ್ದಾರೆ. ಇನ್ನು ಬಲಿಷ್ಠ ಜೋಶ್ ಇಂಗ್ಲಿಸ್ ಅವರನ್ನು ಆಯ್ಕೆ ಖರೀದಿಸಿದ್ದಾರೆ. ಫಿನಿಶಿಂಗ್‌ಗೆ ಅಬ್ದುಲ್ ಸಮಾದ್, ಆಯುಷ್ ಬದೋನಿ ಅಂಥವರು ಕಣಕ್ಕಿಳಿಯಲಿದ್ದಾರೆ. ಬೌಲಿಂಗ್ ವಿಚಾರದಲ್ಲಿ ಶಾರ್ದೂಲ್ ಠಾಕೂರ್ ಈ ಬಾರಿ ಮುಂಬೈ ಸೇರಿಕೊಂಡಿದ್ದಾರೆ. ಆದಾಗ್ಯೂ, ಶಮಿ, ನೋಕಿಯಾ, ಮುಕುಲ್ ಚೌಧ್ರಿ ಅವರನ್ನು ಖರೀದಿಸಿದೆ. ದೇಸಿ ಬೌಲರ್‌ಗಳ ಬಲವೂ ತಂಡಕ್ಕಿದೆ.

ದಿಲ್ಲಿಯಲ್ಲಿ ವಿಶ್ವಾಸ: ಇನ್ನು ಕೆ.ಎಲ್. ರಾಹುಲ್ ಇರುವ ತಂಡ ದಿಲ್ಲಿ ಕೂಡ ಬಲಿಷ್ಠ ಪಡೆಯಾಗಿ ನಿಂತಿದೆ. ಪೃಥ್ವಿ ಶಾ, ಪೋರಲ್ ಅಂಥವರು ತಂಡದಲ್ಲಿದ್ದಾರೆ. ಅಕ್ಷರ್ ಪಟೇಲ್ ಮುನ್ನಡೆಸಲಿರುವ ತಂಡಕ್ಕೆ ಸ್ಟಾರ್ಕ್ ಇಲ್ಲದ ಶಾಕ್ ಇದ್ದರೂ ಚಮೀರಾ, ಕೇಲ್ ಜೆಮಿಸನ್, ಟಿ ನಟರಾಜನ್, ಲುಂಗಿ ಎನ್‌ಗಿಡಿ ಅಂತವರು ತಂಡದಲ್ಲಿದ್ದಾರೆ. ಬ್ಯಾಟಿಂಗ್ ವಿಭಾಗವನ್ನು ನಿಸ್ಸಂಕಾ, ನಿತಿಶ್ ರಾಣಾ, ಕರುಣ್ ನಾಯರ್ ಇದ್ದು ಬಲಿಷ್ಠ ತಂಡ ಸಿದ್ಧವಾಗಿದೆ.

ಪಂದ್ಯದ ವಿವರ:
ಯಾವಾಗ?: ಗುರುವಾರ
ಎಲ್ಲಿ: ಏಕಾನಾ, ಲಖನೌ, ಸಮಯ: ಸಂಜೆ 7:30, ಪ್ರಸಾರ: ಸ್ಟಾರ್‌ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್

ಐಪಿಎಲ್‌ನಲ್ಲಿ ಸೂರ್ಯವಂಶಿಯ ಮಿಂಚಿನಾಟ

ವೈಭವ್ ಅಂತಾರಾಷ್ಟ್ರೀಯ ಪದಾರ್ಪಣೆ ಯಾವಾಗ?


ಸೋಮವಾರದ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯದಲ್ಲಿ 15 ವರ್ಷದ ಸಂಚಲನ ವೈಭವ್ ಸೂರ್ಯವಂಶಿ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಅಬ್ಬರಿಸಿರುವುದು ವಿಶ್ವ ಕ್ರಿಕೆಟ್‌ನಲ್ಲಿ ಮತ್ತೊಂದು ಚರ್ಚೆ ಹುಟ್ಟುಹಾಕಿದೆ.

ರಾಜಸ್ಥಾನ ಹಾಗೂ ಚೆನ್ನೈ ನಡುವಿನ ಪಂದ್ಯದಲ್ಲಿ 17 ಬಾಲ್‌ಗಳಲ್ಲಿ ಅವರು ಅರ್ಧಶತಕ ಬಾರಿಸಿದರು. ಇದರೊಂದಿಗೆ ಹೊಸ ಶೈಲಿಯ ಕ್ರಿಕೆಟ್‌ನಲ್ಲಿ ಮತ್ತೊಂದು ದಾಖಲೆ ಮಾಡಿದರು. ರಾಜಸ್ಥಾನ ಆ ಪಂದ್ಯ ಗೆದ್ದಿತು. ಈ ಬಳಿಕ ವಿಶ್ವದ ಗಣ್ಯ ಕ್ರಿಕೆಟಿಗರೆಲ್ಲಾ ವೈಭವ್ ಸೂರ್ಯವಂಶಿ ಅವರನ್ನು ಪುರುಷರ ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಆಯ್ಕೆ ಮಾಡುವ ಕುರಿತು ಮಾತನಾಡಿದ್ದಾರೆ.

ಸೂರ್ಯವಂಶಿ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದಂತೆ ಇತ್ತ ಇಂಗ್ಲೆಂಡಿನ ಮಾಜಿ ನಾಯಕ ಮೈಕಲ್ ವಾಘನ್ ಬಿಸಿಸಿಐಗೆ ಮನವಿ ಸಲ್ಲಿಸಿದ್ದಾರೆ. ‘ವೈಭವ್ ಸೂರ್ಯವಂಶಿ ಅವರ ಅಂತಾರಾಷ್ಟ್ರೀಯ ತಂಡಕ್ಕೆ ಆಯ್ಕೆ ಯಾವಾಗ? ನಾನು ಕಾಯುತ್ತಿದ್ದೇನೆ, ಅವರು ಒಂದು ತಂಡದಲ್ಲಿ ಮುಖ್ಯ ಪಾತ್ರ ವಹಿಸುತ್ತಾರೆಂದರೆ ಸೀನಿಯರ್ ತಂಡದಲ್ಲಿ ಯಾಕೆ ಆಯ್ಕೆಯಾಗಬಾರದು? ಮುಂದಿನ ದಿನಗಳಲ್ಲಿ ಇಂಗ್ಲೆಂಡ್‌ನೊಂದಿಗೆ ವೈಟ್‌ಬಾಲ್ ಸರಣಿಯಿದೆ ಅಲ್ಲಿ ಅವರನ್ನು ಆಯ್ಕೆ ಮಾಡಿದರೆ ಇತಿಹಾಸ ಆಗುವುದನ್ನು ನೋಡಬಹುದು’ ಎಂದಿದ್ದಾರೆ. ಇತ್ತ ಭಾರತ ತಂಡದ ಮಾಜಿ ಆಟಗಾರ ಮೊಹಮ್ಮದ್ ಕೈಫ್ ಕೂಡ ಈ ಬಗ್ಗೆ ಮಾತನಾಡಿ, ‘ವೈಭವ್ ಸೂರ್ಯವಂಶಿ ಅಂತಾರಾಷ್ಟ್ರೀಯ ಪಂದ್ಯವಾಡುವುದಕ್ಕೆ ಸಿದ್ಧರಿದ್ದಾರೆ’ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಇತ್ತ ಸಾಮಾಜಿಕ ಜಾಲತಾಣದಲ್ಲೂ ಚರ್ಚೆಗಳು ಜೋರಾಗಿವೆ.

ಭಾರತದ ಸರಣಿಯಲ್ಲಿ ಟಿ20: ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿ ಮುಕ್ತಾಯಗೊಂಡ ನಂತರ ಭಾರತ ಪುರುಷರ ತಂಡ ಇಂಗ್ಲೆಂಡಿನಂತಹ ಪ್ರವಾಸ ಕೈಗೊಳ್ಳಲಿದೆ. ತವರು ಸರಣಿಗಳಲ್ಲಿ ಟಿ20 ಪಂದ್ಯಗಳನ್ನಾಡಲಿದೆ. ವೈಟ್ ಬಾಲ್ ಕ್ರಿಕೆಟಿ ನಲ್ಲಿ ವೈಭವ್ ಅವರಿಗೆ ಒಂದಾದರೂ ಅವಕಾಶ ನೀಡಬೇಕೆಂಬ ಮಾತು ವಿವಿಧ ಕ್ರಿಕೆಟ್ ಎಕ್ಸ್‌ಪರ್ಟ್‌ಗಳದ್ದಾಗಿದೆ.

ಅಂಡರ್-19ನಲ್ಲಿ ವೈಭವ್‌ಗಿಲ್ಲ ಅವಕಾಶ?: ವಿಶ್ವಕಪ್ ಗೆದ್ದಿರುವ ಭಾರತ ಅಂಡರ್-19 ತಂಡವು ಮುಂದಿನ ದಿನಗಳಲ್ಲಿ ಮತ್ತಷ್ಟು ಅಂಡರ್-19 ಸರಣಿ, ಪಂದ್ಯಾವಳಿಗಳನ್ನು ಆಡಲಿವೆ. ಆದರೆ ಅಂಡರ್-19 ವಿಶ್ವಕಪ್‌ಗಳಲ್ಲಿ ಒಮ್ಮೆ ಆಡಿದ ಆಟಗಾರರನ್ನು ಎರಡನೇ ಬಾರಿ ಆಯ್ಕೆ ಮಾಡಲಾಗಲ್ಲ. ಈಗಾಗಲೇ ಒಂದು ಬಾರಿ ಆಡಿರುವ ವೈಭವ್ ಸೂರ್ಯವಂಶಿ ಇನ್ನೊಂದು ಬಾರಿ ಆಯ್ಕೆಯಾಗಲ್ಲ, ಇದು ಬಿಸಿಸಿಐ ವಾಡಿಕೆ. ಹೀಗಾಗಿ ಐಪಿಎಲ್ ಮುಗಿದ ತಕ್ಷಣ ವೈಭವ್ ದೇಶಿ ಕ್ರಿಕೆಟ್‌ವರೆಗೂ ಕಾಯಬೇಕಾದ ಪರಿಸ್ಥಿತಿ ನಿರ್ಮಾಣವಾಗಲಿದೆ. ಹೀಗಾಗಿ ವೈಭವ್ ಸೂರ್ಯವಂಶಿಗೆ ಆಯ್ಕೆ ಮಾಡಬೇಕು ಅನ್ನುವ ಅಭಿಪ್ರಾಯಗಳು ಮುಂದೆ ಬರುತ್ತಿವೆ. ಒಟ್ಟಿನಲ್ಲಿ ವೈಭವ್ ಆಯ್ಕೆ ಮಾಡಿದರೆ ಹತ್ತಾರು ದಾಖಲೆಗಳು ಆಗಲಿವೆ. ಕ್ರಿಕೆಟ್ ದೇವರಾದ ಸಚಿನ್ ತೆಂಡೂಲ್ಕರ್ ಅಂತವರ ದಾಖಲೆಗಳನ್ನು ಅವರು ಮುರಿಯಲಿದ್ದಾರೆ. ಆದರೆ ಬಿಸಿಸಿಐನ ಹೊಸ ಮಾನದಂಡಗಳ ಪ್ರಕಾರ ಇಂತಿಷ್ಟು ದೇಶಿ ಕ್ರಿಕೆಟ್ ಪಂದ್ಯಗಳನ್ನಾಡಬೇಕೆಂಬ ನಿಯಮಗಳಿವೆ. ಆದಾಗ್ಯೂ ವೈಭವ್ ದೇಶಿ ಕ್ರಿಕೆಟ್‌ನಲ್ಲೂ ಸಾಧನೆ ಮಾಡಿದ್ದಾರೆ. ಸೂರ್ಯವಂಶಿ ಸಾಧನೆ ಗಮನದಲ್ಲಿಟ್ಟುಕೊಂಡು ಆಯ್ಕೆ ಮಾಡುತ್ತಾ ಎಂಬ ವಿಚಾರ ತಂಡ ಬಿಡಗಡೆ ವೇಳೆ ಗೊತ್ತಾಗಲಿದೆ.



ವೈಭವ್ ದಾಖಲೆ

- 2025ರಲ್ಲಿ ಐಪಿಎಲ್‌ಗೆ ಆಯ್ಕೆಯಾದ ಅತಿ ಕಿರಿಯ ಆಟಗಾರ
- ಐಪಿಎಲ್‌ನಲ್ಲಿ ಶತಕ ಬಾರಿಸಿದ ಅತ್ಯಂತ ಕಿರಿಯ ಆಟಗಾರ
- ಐಪಿಎಲ್‌ನ ವೇಗದ ಶತಕ ಬಾರಿಸಿರುವುದು
- ರಣಜಿ ಆಡಿದ ಅತಿ ಕಿರಿಯ(12 ವರ್ಷ)
- ಒಂದು ಐಪಿಎಲ್ ಆವೃತ್ತಿಯಲ್ಲಿ 300 ರನ್ ಬಾರಿಸಿದ ಅತ್ಯಂತ ಕಿರಿಯ
- ಅಂಡರ್-19 ವಿಶ್ವಕಪ್‌ನಲ್ಲಿ ಸರಣಿಶ್ರೇಷ್ಠ
- ವಿಶ್ವಕಪ್ ಫೈನಲ್‌ನಲ್ಲಿ ಶತಕ
- ಅಂಡರ್-19 ಫೈನಲ್‌ನಲ್ಲಿ ಅತಿ ಹೆಚ್ಚು ರನ್

ವೈಭವ್ ಉದಯ

2024ರಲ್ಲಿ ನಡೆದಿದ್ದ 2025ರ ಐಪಿಎಲ್ ಹರಾಜಿನಲ್ಲಿ 14 ವರ್ಷದ ಬಾಲಕ ನಾಮನಿರ್ದೇಶನ ಮಾಡಿದ್ದ. ಆರ್‌ಆರ್ ತಂಡದ ಪ್ರಮುಖ ಕೋಚ್ ಆಗಿದ್ದ ರಾಹುಲ್ ದ್ರಾವಿಡ್ ಥಟ್ಟನೆ ಖರೀದಿಸಿದರು. ಅಲ್ಲಿಂದ ಐಪಿಎಲ್‌ನಲ್ಲಿ ಹೊಸ ಇತಿಹಾಸ ಶುರುವಾಯಿತು. ಆ ಇತಿಹಾಸ, ಭಾರತದ ಭವಿಷ್ಯದ ಹೆಸರು ವೈಭವ್ ಸೂರ್ಯವಂಶಿ. ಐಪಿಎಲ್ ಪಂದ್ಯದಲ್ಲಿ ಅವಕಾಶ ಸಿಕ್ಕ ನಂತರ 14 ವರ್ಷದ ಬಾಲಕ ಅಂತಾರಾಷ್ಟ್ರೀಯ ಬೌಲರುಗಳನ್ನು ಮನ ಬಂದಂತೆ ದಂಡಿಸಲಾರಂಭಿಸಿದರು. ಎಲ್ಲಿಲ್ಲದ ಸ್ಫೋಟಕ ಬ್ಯಾಟಿಂಗ್, ಬಾನಿನೆತ್ತರದ ಸಿಕ್ಸರ್‌ಗಳನ್ನು ಬಾರಿಸತೊಡಗಿದರು. ಐಪಿಎಲ್‌ನ ವೇಗದ ಶತಕ ಬಾರಿಸಿದರು. ಬಾಲನೊಬ್ಬನ ಸ್ಫೋಟಕ ಬ್ಯಾಟಿಂಗ್ ನೋಡಿ ನಿಬ್ಬೆರಗಾಗಿ ನಿಂತ ಜನರು ಕ್ರಿಕೆಟಿನಲ್ಲಿ ಭಾರತದ ಉಜ್ವಲ ಭವಿಷ್ಯ ಪ್ರತ್ಯಕ್ಷ ಕಂಡರು. ಅಲ್ಲಿಂದ ಭಾರತದಲ್ಲಿ ಹೊಸ ಸಂಚಲನ. ತಕ್ಷಣಕ್ಕೆ ಅವರನ್ನು ಭಾರತ ತಂಡಕ್ಕೆ ಆಯ್ಕೆ ಮಾಡದೆ ಅಂಡರ್-19 ತಂಡದಲ್ಲಿ ಸೇರಿಸಲಾಗಿತ್ತು. ಅಲ್ಲದೆ ದೇಶಿ ಕ್ರಿಕೆಟಿನಲ್ಲಿ ಬಿಹಾರ ತಂಡಕ್ಕೂ ಅವರನ್ನು ಆಯ್ಕೆ ಮಾಡಲಾಗಿತ್ತು. ಅಂಡರ್-19 ತಂಡದ ಏಷ್ಯಾಕಪ್, ವಿಶ್ವಕಪ್ ಪಂದ್ಯಾವಳಿಗಳಲ್ಲಿ ಸ್ಫೋಟಕ ಬ್ಯಾಟಿಂಗ್ ಮೂಲಕ ವಿಶ್ವ ಕ್ರಿಕೆಟ್‌ನಲ್ಲಿ ಅಬ್ಬರದಾಟ ಪ್ರದರ್ಶಿಸಿದ ಸೂರ್ಯವಂಶಿ ಜಾಗತಿಕ ಮಟ್ಟದ ಮಾಧ್ಯಮದಲ್ಲಿ ಹೆಡ್‌ಲೈನ್ ಆದರು. ಸೂರ್ಯವಂಶಿ ಈಗ ವಿಶ್ವದರ್ಜೆಯ ಸ್ಟಾರ್. ಆಸಕ್ತಿದಾಯಕ ಕ್ರಿಕೆಟಿಗರಿಗೆ ವೈಭವ್ ಫೇವರಿಟ್, ಕ್ರಿಕೆಟ್ ಅಭಿಮಾನಿಗಳಿಗೆ ಅವರೊಬ್ಬ ರೋಲ್ ಮಾಡಲ್. ಇಂತದ್ದೇ ಸಮಯದಲ್ಲಿ ಮತ್ತೊಂದು ಬಾರಿ ಐಪಿಎಲ್ ಶುರುವಾಗಿದೆ. ಮೊದಲ ಪಂದ್ಯದಲ್ಲೇ ವೈಭವ್ ಸೂರ್ಯವಂಶಿ ದಾಖಲೆಯ ಬ್ಯಾಟಿಂಗ್ ಮಾಡಿದ್ದಾರೆ.

ಏಪ್ರಿಲ್ 9ಕ್ಕೆ ಒಲಿಂಪಿಕ್ಸ್ ಕೂಟದ ಟಿಕೆಟ್ ಲಭ್ಯ

ಹೊಸದಿಲ್ಲಿ: 2028ರ ಲಾಸ್ ಏಂಜಲೀಸ್ ಒಲಿಂಪಿಕ್ ಕ್ರೀಡಾಕೂಟದ ಟಿಕೆಟ್‌ಗಳು ಏಪ್ರಿಲ್ 9 ರಂದು ಸಾರ್ವಜನಿಕರಿಗೆ ಮಾರಾಟಕ್ಕೆ ಬರಲಿವೆ ಎಂದು ಸಂಘಟಕರು ಸೋಮವಾರ ತಿಳಿಸಿದ್ದಾರೆ. ವಿಶೇಷವಾಗಿ ಈ ಬಾರಿ ಅಭಿಮಾನಿಗಳಿಗೆ ಟಿಕೆಟ್ ಭದ್ರತೆಯ ಬಗ್ಗೆ ಭರವಸೆ ನೀಡಲು ಮುಂದಾಗಿದೆ.

ಲಾಸ್ ಏಂಜಲೀಸ್ ಮತ್ತು ಒಕ್ಲಹೋಮ ನಗರದ ಅರ್ಹತಾ ಪ್ರದೇಶಗಳಲ್ಲಿನ ನಿವಾಸಿಗಳಿಗೆ ಪೂರ್ವ-ಮಾರಾಟವು ಏಪ್ರಿಲ್ 2 ರಂದು ಪ್ರಾರಂಭವಾಗಲಿದ್ದು, ಆಯ್ದ ಖರೀದಿದಾರರಿಗೆ ಅಧಿಸೂಚನೆ ಇಮೇಲ್‌ಗಳು ಮಾರ್ಚ್ 31 ರಿಂದ ಏಪ್ರಿಲ್ 4 ರವರೆಗೆ ಬಿಡುಗಡೆಯಾಗಲಿವೆ ಎಂದು ತಿಳಿಸಿದೆ. ಏಪ್ರಿಲ್ 7 ರಂದು, ಸಂಘಟನಾ ಸಮಿತಿಯು ಉಳಿದ ನೋಂದಣಿದಾರರಿಗೆ ಡ್ರಾಪ್ 1 ಎಂದು ಕರೆಯಲ್ಪಡುವ ಮೊದಲ ಸಾಮಾನ್ಯ ಮಾರಾಟ ಸುತ್ತಿನಲ್ಲಿ ಖರೀದಿ ವಿಂಡೋಗೆ ಆಯ್ಕೆಯಾಗಿದೆಯೇ ಎಂದು ತಿಳಿಸುತ್ತದೆ. ಈ ವಾರ ಅಭಿಮಾನಿಗಳು ಔಅ28 ಒಲಿಂಪಿಕ್ ಕ್ರೀಡಾಕೂಟದಲ್ಲಿ ಸ್ಥಾನವನ್ನು ಪಡೆಯಲು ಮೊದಲ ಅವಕಾಶವನ್ನು ಸೂಚಿಸುತ್ತದೆ ಎಂದು ಔಅ28 ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರೆನಾಲ್ಡ್ ಹೂವರ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಅಭಯ್, ಅನಾಹತ್ ಸಿಂಗ್ ವರ್ಷದ ಸ್ಕ್ವಾಷ್ ಆಟಗಾರರು

ಹೊಸದಿಲ್ಲಿ: ಭಾರತದ ಸ್ಕ್ವಾಷ್ ಆಟಗಾರ ಅಭಯ್ ಸಿಂಗ್ ಅವರಿಗೆ 2025ನೇ ಸಾಲಿನ ಏಷ್ಯನ್ ಸ್ಕ್ವಾಷ್ ಫೆಡರೇಷನ್ ಪುರುಷರ ವರ್ಷದ ಆಟಗಾರ ಪ್ರಶಸ್ತಿ ಲಭಿಸಿದೆ. ಇನ್ನು ಕಿರಿಯರ ವಿಭಾಗದಲ್ಲಿ ಯುವ ಪ್ರತಿಭೆ ಅನಾಹತ್ ಸಿಂಗ್ ಅತ್ಯುತ್ತಮ ಆಟಗಾರ್ತಿಯಾಗಿ ಆಯ್ಕೆಯಾಗಿದ್ದಾರೆ.

ಈ ನಡುವೆ, ಈಜಿಪ್ಟ್‌ನಲ್ಲಿ ನಡೆದ 2025ರ ವಿಶ್ವ ಜೂನಿಯರ್ ತಂಡ ಚಾಂಪಿಯನ್‌ಶಿಪ್‌ನಲ್ಲಿ ಕಂಚು ಪದಕ ಗೆದ್ದ ಭಾರತೀಯ ಬಾಲಕರ ತಂಡಕ್ಕೂ ಪುರುಷರ ತಂಡ’ ಪ್ರಶಸ್ತಿ ಲಭಿಸಿದೆ ಎಂದು ಫೆಡರೇಷನ್ ಪ್ರಕಟಿಸಿದೆ. ಪ್ರಸ್ತುತ ವಿಶ್ವ ಶ್ರೇಯಾಂಕದಲ್ಲಿ 25ನೇ ಸ್ಥಾನದಲ್ಲಿರುವ ಅಭಯ್ ಸಿಂಗ್, ಏಷ್ಯನ್ ಗೇಮ್ಸ್ ಹಾಗೂ ಏಷ್ಯನ್ ಚಾಂಪಿಯನ್‌ಶಿಪ್ ಪದಕ ವಿಜೇತರಾಗಿದ್ದು, ಕಳೆದ ವರ್ಷ ಭಾರತ ಗೆದ್ದ ವಿಶ್ವಕಪ್ ಮಿಶ್ರ ಟೀಮ್ ಪ್ರಶಸ್ತಿ ವಿಜೇತ ತಂಡದ ಭಾಗವಾಗಿದ್ದರು.

ವಿಶ್ವ 20ನೇ ಶ್ರೇಯಾಂಕದಲ್ಲಿರುವ ಅನಾಹತ್ ಸಿಂಗ್ ಕೂಡ ಏಷ್ಯನ್ ಗೇಮ್ಸ್ ಮತ್ತು ಏಷ್ಯನ್ ಚಾಂಪಿಯನ್‌ಶಿಪ್ ಪದಕ ವಿಜೇತೆ. 2025ರಲ್ಲಿ ಕೈರೋದಲ್ಲಿ ನಡೆದ ವಿಶ್ವ ಜೂನಿಯರ್ ಚಾಂಪಿಯನ್‌ಶಿಪ್‌ನಲ್ಲಿ ಕಂಚು ಪದಕ ಗೆದ್ದಿದ್ದು, ವಿಶ್ವಕಪ್ ಮಿಶ್ರ ತಂಡ ಚಿನ್ನದ ಸಾಧನೆಯಲ್ಲೂ ಭಾಗಿಯಾಗಿದ್ದರು. ಇದಕ್ಕೂ ಮುನ್ನ 2022ರಲ್ಲಿ ಸೌರವ್ ಘೋಷಾಲ್ ಮತ್ತು ಜೋಷ್ನಾ ಚಿನಪ್ಪಾ ಕ್ರಮವಾಗಿ ಪುರುಷ ಹಾಗೂ ಮಹಿಳಾ ವಿಭಾಗಗಳಲ್ಲಿ ಈ ಪ್ರಶಸ್ತಿಗಳನ್ನು ಪಡೆದಿದ್ದರು.

ಟಿಟಿ ವಿಶ್ವಕಪ್: ಮನಿಕಾ ಆಸೆ ಜೀವಂತ

ಹೊಸದಿಲ್ಲಿ: ಮನಿಕಾ ಬಾತ್ರಾ, ಐಟಿಟಿಎಫ್ ಟೇಬಲ್ ಟೆನಿಸ್ ವರ್ಲ್ಡ್ ಕಪ್‌ನಲ್ಲಿ ನಾಕೌಟ್ ಹಂತದ ನಿರೀಕ್ಷೆ ಜೀವಂತವಾಗಿಟ್ಟುಕೊಂಡಿದ್ದಾರೆ.



ಚೀನಾದ ಮಕಾವಿನಲ್ಲಿ ನಡೆದ ಪಂದ್ಯದಲ್ಲಿ ಮನಿಕಾ ಅಮೆರಿಕದ ಲಿಲ್ಲಿ ಝಾಂಗ್ ವಿರುದ್ಧ 3-2 (11-7, 11-2, 14-16, 5-11, 11-6) ಅಂತರದಲ್ಲಿ ಕಠಿಣ ಜಯ ಸಾಧಿಸಿದರು. 43 ನಿಮಿಷಗಳ ಈ ಪಂದ್ಯದಲ್ಲಿ ಮಣಿಕಾ ತಾಳ್ಮೆಯ ಆಟ ಪ್ರದರ್ಶಿಸಿದರು. ಟೂರ್ನಿಯ ಮೊದಲ ಪಂದ್ಯದಲ್ಲಿ ಅವರು ಜಪಾನ್‌ನ ಮಿವಾ ಹರಿಮೋಟೋ ವಿರುದ್ಧ 0-3 ಅಂತರದಲ್ಲಿ ಸೋತಿದ್ದರು.

ಇನ್ನೊಂದೆಡೆ, ವಿಶ್ವದ 43ಶ್ರೇಯಾಂಕದ ಹೊಂದಿರುವ ಶ್ರೀಜಾ ಅಕುಲಾ ತಮ್ಮ ಮೊದಲ ಪಂದ್ಯದಲ್ಲಿ ಪೋರ್ಚುಗಲ್‌ನ ಫು ಯು ವಿರುದ್ಧ 1-3 (11-8, 9-11, 13-15, 8-11) ಅಂತರದಲ್ಲಿ ಸೋಲು ಕಂಡರು. ಅವರು ಮುಂದಿನ ಗುಂಪು ಹಂತದ ಪಂದ್ಯದಲ್ಲಿ ವಿಶ್ವ ನಂ.2 ಚೀನಾದ ವಾಂಗ್ ಮಾನ್ಯು ವಿರುದ್ಧ ಬುಧವಾರ ಆಡಲಿದ್ದಾರೆ. ಪುರುಷರ ವಿಭಾಗದಲ್ಲಿ ಭಾರತದಿಂದ ಏಕೈಕ ಆಟಗಾರ ಮಾನವ್ ಠಕ್ಕರ್, ಕೊರಿಯಾದ ಪಾರ್ಕ್ ಗ್ಯಾಂಗ್ ಹ್ಯೋನ್ ವಿರುದ್ಧ 0-3 ಸೋಲಿನ ನಂತರ, ಸ್ವೀಡನ್‌ನ ಟ್ರುಲ್ಸ್ ಮೊರೆಗಾರ್ಡ್ ವಿರುದ್ಧ ನಡೆಯುವ ಮಹತ್ವದ ಪಂದ್ಯದಲ್ಲಿ ಗೆಲುವು ಸಾಧಿಸಲೇಬೇಕಾಗಿದೆ. ಒಟ್ಟು 16 ಗುಂಪುಗಳಲ್ಲಿ ನಡೆಯುತ್ತಿರುವ ಈ ಟೂರ್ನಿಯಲ್ಲಿ, ಪ್ರತಿ ಗುಂಪಿನ ಅಗ್ರಸ್ಥಾನ ಪಡೆದ ಆಟಗಾರರು ಮಾತ್ರ ರೌಂಡ್ 16ರ ಸುತ್ತಿಗೆ ಪ್ರವೇಶ ಪಡೆಯುತ್ತಾರೆ.

ಬಾಲ್ ವಿರೂಪ: ಜಮಾನ್‌ಗೆ 2 ವರ್ಷ ನಿಷೇಧ

- ಪಿಎಸ್‌ಎಲ್ ಪಂದ್ಯದಲ್ಲಿ ಘಟನೆ
- ಪಂದ್ಯಾವಳಿಯಿಂದ 2 ವರ್ಷ ನಿಷೇಧ

ಕರಾಚಿ: ಐಪಿಎಲ್‌ನಲ್ಲಿ ಸೊಗಸಾದ ಪಂದ್ಯಗಳು ನಡೆಯುತ್ತಿರುವ ಸಮಯದಲ್ಲೇ ಅಲ್ಲಿ ಪಾಕಿಸ್ತಾನ ಸೂಪರ್ ಲೀಗ್ ಪಂದ್ಯಾವಳಿಯಲ್ಲಿ ಬಾಲ್ ವಿರೂಪಗೊಳಿಸಿರುವ ಆರೋಪದಲ್ಲಿ ಪಾಕಿಸ್ತಾನ ಕ್ರಿಕೆಟ್ ತಂಡದ ಪ್ರಮುಖ ಆಟಗಾರ ಫಕರ್ ಜಮಾನ್‌ಗೆ ಪಿಸಿಬಿ ಎರಡು ವರ್ಷದ ನಿಷೇಧ ಹೇರಿದೆ.



ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಗೂ ಮುನ್ನವೇ ಪಾಕಿಸ್ತಾನ ಸೂಪರ್ ಲೀಗ್ ಪಂದ್ಯಾವಳಿ ಶುರುವಾಗಿದೆ. ಹೀಗಿರುವಾಗ ಭಾನುವಾರ ಲಾಹೋರ್ ಹಾಗೂ ಕರಾಚಿ ತಂಡಗಳು ಎದುರಾಗಿದ್ದವು. ಕರಾಚಿ ತಂಡದ ನಾಯಕ ಶಾಹಿನ್ ಆಫ್ರಿದಿ ಹಾಗೂ ಹ್ಯಾರಿಸ್ ರೌಫ್ ಅವರೊಂದಿಗೆ ಗೇಮ್ ಪ್ಲಾನ್ ಮಾಡುವಾಗ ಅದೇ ತಂಡದ ಫಕರ್ ಜಮಾನ್ ಅವರು ಬಾಲನ್ನು ವಿರೂಪಗೊಳಿಸುವ ತುಣುಕುಗಳು ಹರಿದಾಡಿವೆ. ಖಾತರಿಗೊಂಡಂತೆ ಪಿಸಿಬಿ ಕಠಿಣ ನಿರ್ಧಾರಕ್ಕೆ ಮುಂದಾಯಿತು. ಮಂಗಳವಾರ ಈ ಬಗ್ಗೆ ಹೇಳಿರುವ ಪಿಸಿಬಿ, ಫಕರ್ ಜಮಾನ್ ಟೂರ್ನಮೆಂಟಿನ ಲೆವೆಲ್ ಮೂರರ ಮಾನದಂಡ ಉಲ್ಲಂಘನೆ ಮಾಡಿದ್ದಾರೆ. ನಮ್ಮ ನಿಯಮ ಪಟ್ಟಿಯ ವಿಧಿ 2.14ರ ಅಡಿಯಲ್ಲಿ ಅವರಿಗೆ ಸಜೆ ನೀಡಲಾಗುತ್ತದೆ. ಅಲ್ಲದೆ, ವಿಧಿ 41.3ರ ಅಡಿಯಲ್ಲಿ ಬಾಲ್ ವಿರೂಪಗೊಳಿಸಿರುವುದು ಖಾತರಿಯಾಗಿದೆ. ಇದಕ್ಕೆ ಕಠಿಣ ಕ್ರಮ ಕೈಗೊಳ್ಳಲಿರುವ ಪಿಸಿಬಿ ಜಮಾನ್ ಅವರನ್ನು ಪಿಎಸ್‌ಎಲ್‌ನಿಂದ 2 ವರ್ಷ ನಿಷೇಧ ಮಾಡುತ್ತದೆ ಎಂದು ಹೇಳಿದೆ. ಬಾಲ್ ವಿರೂಪಗೊಳಿಸಿರುವ ವಿಚಾರಕ್ಕೆ ಸಂಬಂಧಿಸಿದಂತೆ ಮೈದಾನದಲ್ಲೇ ನಿರ್ಣಾಯಕರು ಹಾಗೂ ಆಟಗಾರರ ನಡುವೆ ಗೊಂದಲಗಳಾಗಿವೆ. ಇದಕ್ಕೂ ಅವರಿಗೆ ದಂಡ ವಿಧಿಸಲಾಗಿದೆ.

ಪದಬಂಧ

ರಾಜಾ ಸಂಗಮೇಶ ಹಿರೇಮಠ

5940



ಎಡದಿಂದ ಬಲಕ್ಕೆ
1.ವಾರೆಯಾಗಿ ಕಂಡ ಮುಖ (2)
2.ತೆಂಗಿನ ಕಾಯಿಯಿಂದ ಮಾಡಿದ ಮೋದಕ (5)
4. ಕಾಯು-ರಕ್ಷಿಸು ಎಂಬರ್ಥದ ಶಬ್ದ (3)
5. ಓಟು ಚಲಾಯಿಸುವ ವ್ಯಕ್ತಿ (4)
7.ವಸ್ತು-ವಿಷಯವು ಸಾರದಿಂದ ಕೂಡಿದೆ (4)
9.ಶಬ್ದಗಳೊಂದಿಗೆ ಆಡುವ ಬೌದ್ಧಿಕ ಆಟ (4)
13.ಅಂಕುರ-ಮೊಳಕೆಯಿದು (4)
15.ಬರವನ್ನು ಹೋಗಲಾಡಿಸಲು ಮಾಡಿದ ಕಾಳಗ (3)
16.ಗೆಲುವಿನ ಹಬ್ಬ-ವಿಜಯೋತ್ಸವವಿದು (5)
17.ಮನೆಸಾಲುಗಳ ನಡುವಿನ ಹಾದಿ (2)

ಮೇಲಿನಿಂದ ಕೆಳಕ್ಕೆ
1.ಭೂಮಿಯನ್ನು ಅಳತೆ ಮಾಡುವವನು (5)
2.ಕಾನನದಲ್ಲಿರುವ ಸದನ (4)
3.ಮರದ ಕಾಂಡದ ಕೆಳಗಿನ ಭಾಗ (2)
4.ಸಾಹಿತಿಯ ಪರ್ಯಾಯ ಹೆಸರಿದು (4)
6.ಸುವರ್ಣವಿಲ್ಲಿ ತಲೆಕೆಳಗಾಗಿದೆ (3)
8.ತಕ್ಕಮಟ್ಟಿಗೆ ಒಂದೇ ಆಗಿರುವುದು (3)
10.ದರದ ಬಗ್ಗೆ ತಿಳಿದುಕೊಂಡ ಹಿರಿಯ ಪೇದೆ (4)
11.ಬಿಳಿಯ ಬಣ್ಣದ ಹಿಮಾಚ್ಛಾದಿತ ಪರ್ವತ (5)
12.ಅಸಾಧಾರಣವಾದ ಶಕ್ತಿ ಆಲದ ನಡುವೆ ಇದೆ (4)
14.ಗಿಡ-ಮರಗಳ ಹುಟ್ಟಿಗೆ ಕಾರಣವಾದುದು (2)

5939 ಉತ್ತರ

ಎಡದಿಂದ ಬಲಕ್ಕೆ:
3.ತಾಣದೀವಿಗೆ
5.ಗುಟುರು 6.ತಬಲ
7.ಕರಜ 9.ರಣರಂಗ
11.ಜಡತನ 14.ಈಚಲ
16.ಶಿಲ್ಪಿಗ 17.ದಕ್ಷಿಣ
18.ತೋರಣದ್ವಾರ

ಮೇಲಿನಿಂದ ಕೆಳಕ್ಕೆ :
1. ಸಂಗೀತಗಾರ
2.ಅಂಗುಲ
3.ತಾರುಮಾರು 4.ದೀಪಕ
8.ರಕುತ 10.ಚರಣ
12.ನಖಶಿಖಾಂತ
13.ಪುರಂದರ 15.ಲಕ್ಷಣ
16.ಗಣನೆ

ಹೊಸ ದಿಗಂತ

ಮಾರ್ನಿಂಗ್ ಶೋ

ಬುಧವಾರ 1 ಏಪ್ರಿಲ್ 2026,
ಬೆಂಗಳೂರು

ಎಲ್ರ ಕಾಲೆಳೆಯುತ್ತೆ ಕಾಲ

ಮಾತು ಮಧುರ.. ಹಾಡು



ಈ ಹಿಂದೆ ಕಾರ್ನಿ, ಕೃಷ್ಣ ಟಾಕೀಸ್ ಚಿತ್ರಗಳನ್ನು ನಿರ್ಮಿಸಿದ್ದ ಗೋವಿಂದರಾಜು ಅವರ ನಿರ್ಮಾಣದ ಮತ್ತೊಂದು ಚಿತ್ರ ಎಲ್ರ ಕಾಲೆಳೆಯುತ್ತೆ ಕಾಲ. ಒಂದು ಘಟನೆ ವ್ಯಕ್ತಿಯೊಬ್ಬನ ಜೀವನದಲ್ಲಿ ಯಾವ ರೀತಿ ಪ್ರಮುಖ ಪಾತ್ರ ವಹಿಸುತ್ತದೆ, ಅಲ್ಲದೆ ಕಾಲ ಎನ್ನುವುದು ಯಾರನ್ನೂ ಸಹ ಬಿಡುವುದಿಲ್ಲ, ಎಲ್ಲರ ಕಾಲನ್ನೂ ಎಳೆಯುತ್ತದೆ ಎಂಬ ಕಾನ್ಸೆಪ್ಟ್ ಇಟ್ಟುಕೊಂಡು ಸುಜಯ್ ಶಾಸ್ತ್ರಿ ಅವರು ಈ ಚಿತ್ರಕ್ಕೆ ಆಕ್ಷನ್ ಕಟ್ ಹೇಳಿದ್ದಾರೆ.



ಈಗಾಗಲೇ ತನ್ನ ಟೀಸರ್, ಚಂದನ್ ಶೆಟ್ಟಿ, ರಾಗಿಣಿ ದ್ವಿವೇದಿ ಅಭಿನಯದ ಪ್ರೊಮೋಷನ್ ಸಾಂಗ್ ಮೂಲಕ ಗಮನ ಸೆಳೆದಿದ್ದ ಚಿತ್ರತಂಡ ಇದೀಗ ಮತ್ತೊಂದು ಸುಂದರ ರೆಟ್ರೋ ಹಾಡಿನೊಂದಿಗೆ ಪ್ರೇಕ್ಷಕರ ಮುಂದೆ ಬಂದಿದೆ. ಹೌದು, ಮಂಗಳವಾರ ಈ ಚಿತ್ರದ ಮಾತು ಮಧುರಾ ಎಂಬ ಹಾಡಿನ ಬಿಡುಗಡೆ ಕಾರ್ಯಕ್ರಮ ನಡೆಯಿತು. ಅನುರಾಧಾ ಭಟ್ ಹಾಗೂ ದರ್ಶನ್ ನಾರಾಯಣ್ ಕಂಠದಲ್ಲಿ ಮೂಡಿಬಂದಿರುವ ಈ ಗೀತೆಯಲ್ಲಿ ನಾಯಕ ಚಂದನ್ ಶೆಟ್ಟಿ ಹಾಗೂ ನಾಯಕಿ ಅರ್ಚನಾ ಕೊಟ್ಟಿಗೆ ಅಭಿನಯಿಸಿದ್ದಾರೆ.



ಅಂದಹಾಗೆ ರೆಟ್ರೋ ಶೈಲಿಯ ಕಥೆ ಹೊಂದಿರುವ ಈ ಚಿತ್ರದಲ್ಲಿ ರ‍್ಯಾಪರ್, ಸಂಗೀತ ನಿರ್ದೇಶಕ ಚಂದನ್ ಶೆಟ್ಟಿ ಅವರು ನಾಯಕನಾಗಿ ಕಾಣಿಸಿಕೊಂಡಿದ್ದಾರೆ. ಈಗಾಗಲೇ ತನ್ನ ಶೂಟಿಂಗ್ ಪೋಸ್ಟ್ ಪ್ರೊಡಕ್ಷನ್ ಕೆಲಸಗಳನ್ನು ಮುಗಿಸಿಕೊಂಡಿರುವ ಎಲ್ರ ಕಾಲೆಳೆಯುತ್ತೆ ಕಾಲ ಚಿತ್ರವು ಏಪ್ರಿಲ್ 10ರಂದು ರಾಜ್ಯಾದ್ಯಂತ ತೆರೆಕಾಣಲಿದೆ, ಗೋಕುಲ ಎಂಟರ್‌ಪ್ರೈಸಸ್ ಬ್ಯಾನರ್ ಮೂಲಕ ಗೋವಿಂದರಾಜು ಹಾಗೂ ಉಷಾ ಗೋವಿಂದರಾಜು ಅವರ ನಿರ್ಮಾಣದ ಈ ಚಿತ್ರಕ್ಕೆ ಚಂದನ್‌ಶೆಟ್ಟಿ ಅವರೇ ಸಂಗೀತ ಸಂಯೋಜನೆ ಮಾಡಿದ್ದಾರೆ.

ಈ ಪ್ರೇಮಗೀತೆಯ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದ ನಿರ್ದೇಶಕ ಕಮ್ ನಟ ಸುಜಯ್ ಶಾಸ್ತ್ರಿ ನಾನು ಗುಬ್ಬಿಮೇಲೆ ಬ್ರಹ್ಮಾಸ್ತ್ರ ನಂತರ ನಿರ್ದೇಶಿಸಿರುವ ಚಿತ್ರವಿದು. 80-90ರ ದಶಕದಲ್ಲಿ ನಡೆಯೋ ರೆಟ್ರೋ ಕಥೆಯನ್ನು ಈ ಚಿತ್ರದಲ್ಲಿ ಹೇಳಿದ್ದೇನೆ, ಅದೇ ಶೈಲಿಯಲ್ಲಿ ಚಿತ್ರದ ಪ್ರಮೋಷನ್ ಕೂಡ ಮಾಡ್ತಾ ಇದ್ದೇವೆ. ಕನಕಪುರದ ಸುತ್ತಮುತ್ತ ಚಿತ್ರದ ಶೂಟಿಂಗ್ ನಡೆಸಿದ್ದೇವೆ. ತಾರಾ, ದತ್ತಣ್ಣ, ರಾಕೇಶ್ ಪೂಜಾರಿ, ಮಂಜು ಪಾವಗಡ ಮುಂತಾದವರು ಅಭಿನಯಿಸಿರುವ ತಿಳಿಹಾಸ್ಯದಿಂದ ಕೂಡಿದ ಕೌಟುಂಬಿಕ ಚಿತ್ರವಿದು. ಸಮಯಕ್ಕೆ ನಾವು ಅಗೌರವ ಕೊಟ್ಟರೆ, ಅದು ನಮಗೆ ಅಗೌರವ ಕೊಡುತ್ತದೆ. ಚಿತ್ರದಲ್ಲಿ ನಾಯಕನ ಪರಿಸ್ಥಿತಿ ನಮಗೆ ಹಾಸ್ಯವಾಗಿಯೇ ಕಾಣುತ್ತದೆ ಎಂದರು.

ನಿರ್ಮಾಪಕ ಗೋವಿಂದರಾಜು ಮಾತನಾಡುತ್ತ ನಮ್ಮ ಗೋಕುಲ ಎಂಟರ್‌ಪ್ರೈಸಸ್ ಬ್ಯಾನರ್ ಅಡಿ ಹೊರಬರುತ್ತಿರುವ ಮೂರನೇ ಚಿತ್ರವಿದು. ನಮ್ಮ ಸಿನಿಮಾ ಪ್ರೇಕ್ಷಕರನ್ನು 80-90ನೇ ಸೆಂಚುರಿಗೆ ಕರೆದುಕೊಂಡು ಹೋಗುತ್ತದೆ. ನಿರ್ದೇಶಕರು ಅದ್ಭುತವಾಗಿ ಈ ಚಿತ್ರವನ್ನು ಕಟ್ಟಿಕೊಟ್ಟಿದ್ದಾರೆ. ಇಡೀ ಕುಟುಂಬ ಕುಳಿತು ನೋಡುವಂತ ಸಂಪೂರ್ಣ ಮನರಂಜನಾತ್ಮಕ ಚಿತ್ರ ಇದಾಗಿದ್ದು, ಚಿತ್ರವನ್ನು ಏಪ್ರಿಲ್ 17ರಂದು ರಿಲೀಸ್ ಮಾಡುತ್ತಿದ್ದೇವೆ ಎಂದರು.

ನಾಯಕನಟ ಚಂದನ್ ಶೆಟ್ಟಿ ಮಾತನಾಡುತ್ತ ನಾನು ನಾಯಕನಾಗಬೇಕೆಂದು ಆಯ್ಕೆ ಮಾಡಿಕೊಂಡ ಮೊದಲ ಚಿತ್ರವಿದು, ಸುಜಯ್ ಅವರ ಗುಬ್ಬಿ ಮೇಲೆ ಬ್ರಹ್ಮಾಸ್ತ್ರ ಚಿತ್ರ ನೋಡಿದಾಗ ಇಷ್ಟವಾಗಿತ್ತು. ತುಂಬಾ ಫಾಸ್ಟ್ ಆಗಿ ಸಿನಿಮಾ ಮಾಡಿದ್ವಿ, ಆದರೆ ರಿಲೀಸ್ ಆಗಲು ತುಂಬಾ ಸಮಯ ತೆಗೆದುಕೊಂಡಿತು. ನಿರ್ದೇಶಕ ಹೇಳಿದಂತೆ ಅಭಿನಯ ಮಾಡಿದ್ದೇನೆ. ಆಗ ನಟನೆ ನನಗೆ ತೀರಾ ಹೊಸದು ಎಂದರು,

ಸಂಗೀತ ನಿರ್ದೇಶಕ ಪ್ರವೀಣ್ ಮಾತನಾಡಿ 90ರ ಕಾಲಘಟ್ಟದಲ್ಲಿದ್ದ ಸಂಗೀತವನ್ನೇ ಚಿತ್ರದಲ್ಲಿ ಬಳಸಿಕೊಂಡಿದ್ದೇವೆ. ಚಿತ್ರದಲ್ಲಿ ಒಟ್ಟು 5 ಹಾಡುಗಳಿದ್ದು, ಇದು ನಾಲ್ಕನೇ ಹಾಡು, ಈ ಹಾಡನ್ನು ನಾನೇ ಬರೆದು ಸಂಗೀತ ಸಂಯೋಜನೆ ಮಾಡಿದ್ದೇನೆ, ರೆಟ್ರೋ ಸ್ಟೈಲ್‌ನಲ್ಲಿಯೇ ಸಂಗೀತ ಮಾಡೋದು ಚಾಲೆಂಜ್ ಆಗಿತ್ತು ಎಂದರು.

ನಾಯಕಿ ಅರ್ಚನಾ ಕೊಟ್ಟಿಗೆ ಮಾತನಾಡಿ ಚಿತ್ರದಲ್ಲಿ ನನ್ನ ಪಾತ್ರದ ಹೆಸರು ವಸಂತ. ಮೆಸ್ ನಡೆಸುವ ಹುಡುಗಿ ಎಂದು ಹೇಳಿದರು, ಕಥೆ ಬರೆದ ರಾಜಗುರು ಹೊಸಕೋಟೆ ಮಾತನಾಡಿ ಕಾಲದ ಮೇಲೆ ನಮ್ಮ ಸಿನಿಮಾ ಇದ್ದಿದ್ದರಿಂದ ಈ ಶೀರ್ಷಿಕೆ ಇಡಲಾಯಿತು. ಕಥೆಯಲ್ಲಿ ಸಮಯಕ್ಕೆ ಬೆಲೆ ಕೊಡಬೇಕು ಇಲ್ಲಾಂದ್ರೆ ಏನಾಗುತ್ತದೆ ಎಂಬುದನ್ನು ಹೇಳಿದ್ದೇವೆ ಎಂದರು,

ವಿಶ್ವಜೀತ್‌ರಾವ್ ಅವರ ಛಾಯಾಗ್ರಹಣ, ಪ್ರವೀಣ್ ಅವರ ಸಂಗೀತ ಈ ಚಿತ್ರಕ್ಕಿದೆ.

ಐವತ್ತರ ಸಂಭ್ರಮದಲ್ಲಿ ಮಗ್ಗಿಪುಸ್ತಕ



ಹರಿವರಾಸನಂ ತಾವೇ ಬರೆದ ಅವನಿ ಎಂಬ ಕಾದಂಬರಿಯನ್ನಾಧರಿಸಿ ನಿರ್ಮಾಣವಾದ ಚಿತ್ರ ಮಗ್ಗಿ ಪುಸ್ತಕ ಇದೀಗ ಯಶಸ್ವಿಯಾಗಿ 50ದಿನಗಳನ್ನು ಪೂರೈಸಿ ಮುನ್ನಡೆದಿದೆ, ಅವನಿ ಎಂಬ ಮಗುವಿನ ಸುತ್ತ ನಡೆಯುವ ಘಟನೆಗಳನ್ನು ಇಟ್ಟುಕೊಂಡು ಹರಿವರಾಸನಂ ಅವರೇ ಚಿತ್ರಕಥೆ, ಸಂಭಾಷಣೆ ಬರೆದು ಈ ಚಿತ್ರವನ್ನು ನಿರ್ದೇಶನ ಮಾಡಿದ್ದರು, ಮಗ್ಗಿಪುಸ್ತಕ ಚಿತ್ರದ ಐವತ್ತರ ಸಂಭ್ರಮದ ಸಮಾರಂಭ ಮಂಗಳವಾರ ನಡೆಯಿತು, ಈ ಸಂದರ್ಭದಲ್ಲಿ ಚಿತ್ರದಲ್ಲಿ ಕೆಲಸ ಮಾಡಿ ಗೆಲುವಿಗೆ ಕಾರಣರಾದ ಕಲಾವಿದರು ಹಾಗೂ ತಂತ್ರಜ್ಞರಿಗೆ ಸ್ಮರಣ ಫಲಕ ನೀಡಿ ಗೌರವಿಸಲಾಯಿತು, 4 ಆಯಾಮಗಳಲ್ಲಿ ನಡೆಯುವ ಕಥೆಯಿರುವ ಈ ಚಿತ್ರದಲ್ಲಿ ಮಕ್ಕಳ ಜತೆಗೆ ಪೋಷಕರಿಗೂ ಉತ್ತಮವಾದ ಸಂದೇಶ ಈ ಚಿತ್ರದಲ್ಲಿದೆ.

ನಿರ್ದೇಶಕ ಹರಿವರಾಸನಂ ಅವರು ತಮ್ಮ ಮೊದಲ ಪ್ರಯತ್ನದಲ್ಲೇ ಪ್ರೇಕ್ಷಕರ ನಾಡಿಮಿಡಿತವನ್ನರಿತು ನಿರೂಪಿಸಿದ್ದಾರೆ. ಅವರ ಪ್ರಥಮ ಚಿತ್ರವೇ 50 ದಿನಗಳನ್ನು ಪೂರೈಸಿದೆ. ರಾಜ್ಯಾದ್ಯಂತ ಸಾವಿರಾರು ಸಂಖ್ಯೆಯ ವಿದ್ಯಾರ್ಥಿಗಳು, ಪೋಷಕರು ಚಿತ್ರ ವೀಕ್ಷಿಸಿ ಮೆಚ್ಚಿಕೊಂಡಿದ್ದಾರೆ. ಸದ್ಯ ಈ ಚಿತ್ರ ಉತ್ತರ ಕರ್ನಾಟಕದಲ್ಲಿ ಭರ್ಜರಿ ಪ್ರದರ್ಶನ ಕಾಣುತ್ತಿದೆ.

ಚಿನ್ನಸ್ವಾಮಿ ಫಿಲಂಸ್ ಅಡಿ ಎತಿರಾಜ್ ಅವರು ಈ ಚಿತ್ರವನ್ನು ನಿರ್ಮಿಸಿದ್ದಾರೆ. ಮಗ್ಗಿಪುಸ್ತಕವೆಂಬುದು ಬದುಕಿನ ಲೆಕ್ಕಾಚಾರವಾಗಿದ್ದು, ಜೀವನವೇ ಒಂದು ಮಗ್ಗಿಪುಸ್ತಕವಿದ್ದಂತೆ, ಇದರಲ್ಲಿ ಒಳ್ಳೆಯದನ್ನು ಕೂಡಬೇಕು, ಕೆಟ್ಟದ್ದನ್ನು ಕಳೆಯಬೇಕು, ಜ್ಞಾನವನ್ನು ಗುಣಿಸಬೇಕು, ಅಜ್ಞಾನವನ್ನು ಭಾಗಿಸಬೇಕು ಎಂಬ ಸಂದೇಶವಿದೆ, ನಾಲ್ಕು ಆಯಾಮಗಳಲ್ಲಿ ನಡೆಯುವ ಹೈಪರ್ ಲಿಂಕ್ ಕಥೆ ಈ ಚಿತ್ರದಲ್ಲಿದೆ.

ವೇದಿಕೆಯಲ್ಲಿ ಮಾತನಾಡಿದ ಹರಿವರಾಸನಂ ಇಡೀ ಚಿತ್ರತಂಡದ ಪರಿಶ್ರಮವೇ ಈ ಯಶಸ್ಸಿಗೆ ಕಾರಣ. ನಮ್ಮ ಚಿತ್ರ 100 ದಿನಗಳನ್ನೂ ಪೂರೈಸಬೇಕೆಂಬ ಆಸೆಯಿದೆ, ಚಿತ್ರವೀಗ 13 ಥೇಟರ್‌ಗಳಲ್ಲಿ ರನ್ ಆಗುತ್ತಿದೆ. ಮುಂದಿನ ವಾರದಿಂದ ರಜೆಗಳು ಪ್ರಾರಂಭವಾಗುತ್ತಿದ್ದು, ಮತ್ತಷ್ಟು ಥೇಟರ್‌ಗಳು ಸೇರ್ಪಡೆಯಾಗುತ್ತಿವೆ ಎಂದು ಹೇಳಿದರು. ನಿರ್ಮಾಪಕ ಎತಿರಾಜ್ ಮಾತನಾಡುತ್ತ ನಮ್ಮ ಚಿತ್ರ 50 ದಿನ ಓಡಿದ್ದೇ ಖುಷಿಯ ವಿಚಾರ, ಈ ಯಶಸ್ಸಿಗೆ ಸಹಕರಿಸಿದ ಎಲ್ಲ ತಂತ್ರಜ್ಞರು,



ಕಲಾವಿದರಿಗೆ ನನ್ನ ಕೃತಜ್ಞತೆಗಳು ಎಂದು ಹೇಳಿದರು,

ಸಂಗೀತ ನಿರ್ದೇಶಕ ಯಶಸ್ ನಾಚಪ್ಪ ಮಾತನಾಡುತ್ತ 50 ದಿನ ಅನ್ನೋದೇ ವಿಶೇಷ. ನನ್ನ ಮೊದಲ ಚಿತ್ರವೇ 50 ದಿನ ಆಗಿದೆ. 7 ಹಾಡುಗಳನ್ನು 17 ಜನ ಸಿಂಗರ್ಸ್ ಹಾಡಿದ್ದಾರೆ ಎಂದು ಹೇಳಿದರೆ, ಛಾಯಾಗ್ರಾಹಕ ನಂದಕುಮಾರ್ ಮಾತನಾಡುತ್ತ ಈ ಸಕ್ಸಸ್ಸಿಗೆ ಕಾರಣ ನಮ್ಮ ನಿರ್ದೇಶಕರು. ಅವರು ಚಿತ್ರಕ್ಕಾಗಿ ತುಂಬಾ ಕಷ್ಟಪಟ್ಟಿದ್ದಾರೆ. ಈಗಿನ ದಿನಗಳಲ್ಲಿ 50 ದಿನ ಓಡೋದು ತುಂಬಾ ಕಮ್ಮಿ, ನನ್ನ ಇಷ್ಟು ದಿನಗಳ ಜರ್ನಿಯಲ್ಲಿ 50 ದಿನ ಕಂಡ ಮೊದಲ ಚಿತ್ರವಿದು ಎಂದು ಸಂತಸ ವ್ಯಕ್ತಪಡಿಸಿದರು,

ಸದ್ಯ ಪರೀಕ್ಷೆಗಳು ಮುಗಿಯುತ್ತಿದ್ದು, ಈವಾರ ಭೂಮಿಕಾ ಸೇರಿದಂತೆ ಮತ್ತಷ್ಟು ಸೆಂಟರ್‌ಗಳಲ್ಲಿ ಚಿತ್ರ ರಿಲೀಸಾಗುತ್ತಿದೆ, ಚಿತ್ರದ ಕಲೆಕ್ಷನ್ ಕೂಡ ಜಾಸ್ತಿಯಾಗುವ ನಿರೀಕ್ಷೆಯಿದೆ, ಅಲ್ಲದೆ ನಮ್ಮ ಚಿತ್ರದ ಓಟಿಟಿ ಹಕ್ಕನ್ನು ಅಮೆಜಾನ್ ಸಂಸ್ಥೆ ಪಡೆದಿದೆ ಎಂದೂ ನಿರ್ದೇಶಕರು ಹೇಳಿಕೊಂಡರು,

ಬೆಂಗಳೂರು, ಮೈಸೂರು, ಮಂಗಳೂರು, ನಂಜನಗೂಡು, ಶ್ರೀರಂಗಪಟ್ಟಣ, ಹೆಚ್.ಡಿ.ಕೋಟೆ ಸುತ್ತಮುತ್ತಲ ಪ್ರದೇಶಗಳಲ್ಲಿ ಸುಮಾರು 80ಕ್ಕೂ ಹೆಚ್ಚು ದಿನಗಳ ಕಾಲ ಈ ಚಿತ್ರದ ಚಿತ್ರೀಕರಣ ನಡೆಸಲಾಗಿದೆ. ಮಗ್ಗಿಪುಸ್ತಕ ಚಿತ್ರದಲ್ಲಿ ಒಟ್ಟು 7 ಹಾಡುಗಳಿದ್ದು ಎಸ್. ಎಸ್.ನಾಚಪ್ಪ ಅವರ ಸಂಗೀತ ಸಂಯೋಜನೆಯಿದೆ. ಎಂ.ಎಂ. ಕೀರವಾಣಿ ಅವರು ಚಿತ್ರದ ಹಾಡೊಂದಕ್ಕೆ ದನಿಯಾಗಿರುವುದು ವಿಶೇಷ. ಉಳಿದಂತೆ ಕನ್ನಡ ಗಾಯಕರಾದ ರಾಜೇಶ್ ಕೃಷ್ಣನ್, ವಿಜಯ ಪ್ರಕಾಶ್, ಕಂಭದ ರಂಗಯ್ಯ, ನವೀನ್ ಸಜ್ಜು, ಇಂದು ನಾಗರಾಜ್, ಗುರುರಾಜ್ ಹೊಸಕೋಟೆ, ಸೈಂಧವಿ, ವೈಕಂ ವಿಜಯಲಕ್ಷ್ಮಿ ಹಾಗೂ ರವೀಂದ್ರ ಸೊರಗಾವಿ ಸೇರಿದಂತೆ 17 ಜನ ಈ ಚಿತ್ರದಲ್ಲಿ ಹಾಡಿದ್ದಾರೆ.

ಒಬ್ಬ ಪ್ರಬುದ್ಧ ನಟಿ, ಲೇಖಕಿಯಾಗಿಯೂ ಗುರುತಿಸಿಕೊಂಡಿರುವ ರಂಜನಿ ರಾಘವನ್ ಅವರು ನಿರ್ದೇಶನ ಮಾಡುತ್ತಿರುವ ಚಿತ್ರದ ಹೆಸರು ಡೀ ಡೀ ಢಿಕ್ಕಿ. ಗುರುಶಿಷ್ಯರು, ಲ್ಯಾಂಡ್‌ಲಾರ್ಡ್ ಚಿತ್ರಗಳ ನಿರ್ದೇಶಕ ಹಾಗೂ ಕಾಟೇರ ಚಿತ್ರದ ಕಥೆಗಾರ ಜಡೇಶ್ ಕೆ.ಹಂಪಿ ಅವರ ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ. ನೆನಪಿರಲಿ ಪ್ರೇಮ್ ಈ ಚಿತ್ರದಲ್ಲಿ ನಾಯಕನಾಗಿ ನಟಿಸಿದ್ದಾರೆ. ಅಲ್ಲದೆ ಗೋಲ್ಡನ್‌ಸ್ಟಾರ್ ಗಣೇಶ್ ಅವರ ಪುತ್ರ ಮಾಸ್ಟರ್ ವಿಹಾನ್ ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಈಗಾಗಲೇ ಈ ಚಿತ್ರದ ಚಿತ್ರೀಕರಣ ಸಂಪೂರ್ಣವಾಗಿದೆ.

ಚಿತ್ರೀಕರಣ ಮುಗಿಸಿದ ಡೀ ಡೀ ಢಿಕ್ಕಿ

ಇದು ಊರುಬಿಟ್ಟು ಬಂದವರ ಕಥೆ





ಧಾರಾವಾಹಿಗಳಲ್ಲಿ ನಟಿಸುವ ಮೂಲಕ ಬಣ್ಣದ ಲೋಕಕ್ಕೆ ಎಂಟ್ರಿ ಕೊಟ್ಟ ನಟಿ, ಲೇಖಕಿ ರಂಜನಿ ರಾಘವನ್ ಅವರು ಒಬ್ಬ ಬಹುಮುಖ ಪ್ರತಿಭೆ, ನಟನೆಯ ಜತೆಗೆ ಬರವಣಿಗೆಯನ್ನೂ ಸಹ ಮೈಗೂಡಿಸಿಕೊಂಡು ಬಂದಿರುವ ಇವರು ಇದೀಗ ಒಬ್ಬ ನಿರ್ದೇಶಕಿಯಾಗಿಯೂ ಸಹ ತಮ್ಮ ಪ್ರತಿಭಾವಂತಿಕೆಯನ್ನು ಮೆರೆದಿದ್ದಾರೆ, ಈಗ ನಿರ್ದೇಶಕಿಯಾಗಿ ಪ್ರಥಮ ಪ್ರಯತ್ನದಲ್ಲೇ ಮ್ಯೂಸಿಕ್ ಮಾಸ್ಟರೋ ಲೆಜೆಂಡ್ ಇಳಯರಾಜಾ ಅವರ ಜತೆ ಕೆಲಸ ಮಾಡುವ ಅದೃಷ್ಟ ಪಡೆದಿದ್ದಾರೆ.

ಒಬ್ಬ ಪ್ರಬುದ್ಧ ನಟಿ, ಲೇಖಕಿಯಾಗಿಯೂ ಗುರುತಿಸಿಕೊಂಡಿರುವ ರಂಜನಿ ರಾಘವನ್ ಅವರು ನಿರ್ದೇಶನ ಮಾಡುತ್ತಿರುವ ಚಿತ್ರದ ಹೆಸರು ಡೀ ಡೀ ಢಿಕ್ಕಿ. ಗುರುಶಿಷ್ಯರು, ಲ್ಯಾಂಡ್ ಲಾರ್ಡ್ ಚಿತ್ರಗಳ ನಿರ್ದೇಶಕ ಹಾಗೂ ಕಾಟೇರ ಚಿತ್ರದ ಕಥೆಗಾರ ಜಡೇಶ್ ಕೆ.ಹಂಪಿ ಅವರ ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ. ನೆನಪಿರಲಿ ಪ್ರೇಮ್ ಈ ಚಿತ್ರದಲ್ಲಿ ನಾಯಕನಾಗಿ ನಟಿಸಿದ್ದಾರೆ. ಅಲ್ಲದೆ ಗೋಲ್ಡನ್‌ಸ್ಟಾರ್ ಗಣೇಶ್ ಅವರ ಪುತ್ರ ಮಾಸ್ಟರ್ ವಿಹಾನ್ ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಈಗಾಗಲೇ ಈ ಚಿತ್ರದ ಚಿತ್ರೀಕರಣ ಸಂಪೂರ್ಣವಾಗಿದೆ. ಈ ಹಿಂದೆ ಡಬ್ಬಿ ಪುಸ್ತಕ ಎಂಬ ಕಥೆ ಬರೆದು ಓದುಗರನ್ನ ಸೆಳೆದಿರುವ ರಂಜನಿ ರಾಘವನ್ ಅವರು ಈಗ ಡೀ ಡೀ ಢಿಕ್ಕಿ ಸಿನಿಮಾದ ಚಿತ್ರೀಕರಣವನ್ನು ಯಶಸ್ವಿಯಾಗಿ ಮುಗಿಸಿದ್ದಾರೆ, ಈ ಮೂಲಕ ಕನ್ನಡ ಚಿತ್ರರಂಗಕ್ಕೆ ಮತ್ತೊಬ್ಬ ಯುವ ನಿರ್ದೇಶಕಿಯಾಗಿ ಕಾಲಿಡುತ್ತಿದ್ದಾರೆ. ಜಡೇಶ್ ಕೆ ಹಂಪಿ ಅವರ ನಿರ್ಮಾಣದ ಈ ಚಿತ್ರದ ಕ್ರಿಯೇಟಿವ್ ಹೆಡ್ ಆಗಿ ತರುಣ್ ಕಿಶೋರ್ ಸುಧೀರ್ ಅವರು ಚಿತ್ರತಂಡಕ್ಕೆ ಜತೆಯಾಗಿದ್ದಾರೆ, ಚಿತ್ರದ ಕುರಿತಂತೆ ನಿರ್ದೇಶಕಿ ರಂಜನಿ ರಾಘವನ್ ಮಾತನಾಡುತ್ತ ನಿರ್ದೇಶಕಿಯಾಗಬೇಕೆಂಬುದು ನನ್ನ ಬಹುದಿನಗಳ ಕನಸಾಗಿತ್ತು, ಈ ಕಥೆ ಬರೆಯುವಾಗ ನನಗೆ ಅನೇಕರು ಸಾಥ್ ನೀಡಿದರು. ಕಥೆ ಅಂತಿಮ ಹಂತವನ್ನು ತಲುಪಿದಾಗ ಇದರಲ್ಲಿ ಪ್ರೇಮ್ ಅವರೆ ನಾಯಕನಾಗಿ ನಟಿಸಬೇಕೆಂಬುದು ಎಲ್ಲರ ಆಸೆಯಾಗಿತ್ತು. ಹಾಸ್ಯದ ಮೂಲಕ ಭಾವನಾತ್ಮಕ ಸನ್ನಿವೇಶಗಳನ್ನು ತೋರಿಸುವ ಪ್ರಯತ್ನವಾಗಿ ಡಿ ಡಿ ಢಿಚ್ಚಿ ಮೂಡಿಬಂದಿದೆ. ಸಂಗೀತ ಕ್ಷೇತ್ರದ ಲೆಜೆಂಡ್ ಇಳಯರಾಜ ಅವರು ಚಿತ್ರದ ನಾಲ್ಕು ಹಾಡುಗಳಿಗೆ ಸಂಗೀತ ಸಂಯೋಜನೆ ಮಾಡಿದ್ದು, ಇದೊಂದು ಸಂಗೀತ ಪ್ರಧಾನ ಚಿತ್ರವೂ ಆಗಲಿದೆ ಎಂದು ಹೇಳಿದರು.



ವಿಶೇಷವಾಗಿ ಈ ಚಿತ್ರದಲ್ಲಿ ನಟ ನೆನಪಿರಲಿ ಪ್ರೇಮ್ ಮತ್ತು ಗೋಲ್ಡನ್ ಸ್ಟಾರ್ ಗಣೇಶ್ ಅವರ ಪುತ್ರ ವಿಹಾನ್ ಗಣೇಶ್ ಅಪ್ಪ ಮಗನಾಗಿ ನಟಿಸುತ್ತಿದ್ದಾರೆ. ಡೀ ಡೀ ಢಿಕ್ಕಿ ಸಿನಿಮಾದ ಚಿತ್ರೀಕರಣ ಇತ್ತೀಚೆಗಷ್ಟೇ ಕಂಪ್ಲೀಟ್ ಆಗಿದೆ. ಆರೂರು ಸುದಾಕರ್ ಶೆಟ್ಟಿ ಅವರ ಛಾಯಾಗ್ರಹಣ, ಕೆ.ಎಂ.ಪ್ರಕಾಶ್ ಅವರ ಸಂಕಲನ ಡೀ ಡೀ ಢಿಕ್ಕಿ ಚಿತ್ರಕ್ಕಿದೆ.

ಡಾ.ರಾಜ್‌ಕುಮಾರ್ ಹುಟ್ಟುಹಬ್ಬಕ್ಕೆ ಪುನೀತ್‌ನಿವಾಸ ಬಿಡುಗಡೆ



ಪುನೀತ್ ರಾಜ್‌ಕುಮಾರ್ ಕನ್ನಡಿಗರ ಆರಾಧ್ಯದೈವ, ಪುನೀತ್ ಅವರ ಆದರ್ಶಗಳನ್ನು ತನ್ನ ಜೀವನದಲ್ಲಿ ಅಳವಡಿಸಿಕೊಂಡು 'ಪುನೀತ್‌ನಿವಾಸ' ಕಟ್ಟಿದ ಬಡ ಅಭಿಮಾನಿಯೊಬ್ಬನ ಕಥೆಯನ್ನು ಹೇಳುವ ಚಿತ್ರ ಪುನೀತ್‌ನಿವಾಸ ಏಪ್ರಿಲ್ 24ರಂದು ಡಾ|| ರಾಜ್ ಕುಮಾರ್ ಅವರ ಹುಟ್ಟುಹಬ್ಬದ ದಿನವೇ ತೆರೆಕಾಣಲಿದೆ.

ಶ್ರೀಪಂಚಮಿ ಸಿನಿ ಕ್ರಿಯೇಷನ್ಸ್ ಮೂಲಕ ಪುನೀತ್ ಅಪ್ಪಟ ಅಭಿಮಾನಿಯೂ ಆದ ಎಸ್. ಮೋಹನ್ ಅವರು ಈ ಚಿತ್ರವನ್ನು ನಿರ್ಮಿಸಿದ್ದಾರೆ. ಈ ಚಿತ್ರಕ್ಕೆ ನಾಗೇಂದ್ರಪ್ರಸಾದ್ ಕಥೆ, ಚಿತ್ರಕಥೆ ಬರೆದು ಆಕ್ಷನ್ ಕಟ್ ಹೇಳಿದ್ದಾರೆ. ಕನ್ನಡ ರಾಜು ಅವರು ಇಡೀ ಚಿತ್ರತಂಡಕ್ಕೆ ಬೆನ್ನೆಲುಬಾಗಿ ನಿಂತಿದ್ದಾರೆ.

ಪುನೀತ್ ಅವರ ಅಪ್ಪಟ ಅಭಿಮಾನಿ ಮಲ್ಲು, ಒಬ್ಬ ಅನಾಥ ಹುಡುಗ. ಕಟ್ಟಡ ಕೂಲಿಕೆಲಸ ಮಾಡಿಕೊಂಡಿದ್ದ, ಒಮ್ಮೆ ಆತ ತನ್ನ ಮಾಲೀಕನ ಮನೆಯನ್ನು ಒಳ್ಳೇ ಬೆಲೆಗೆ ಮಾರಾಟ ಮಾಡಿಸಿಕೊಡುತ್ತಾನೆ. ಆಗ ಮಾಲೀಕ ನೀಡಿದ 5 ಲಕ್ಷ ಕಮೀಷನ್ ಹಣದಲ್ಲಿ ಕನಸಿನ ಪುನೀತ್ ನಿವಾಸವನ್ನು ನಿರ್ಮಿಸುತ್ತಾನೆ. ನಂತರ ಆ ಪುನೀತ್ ನಿವಾಸದ ಒಳಗೆ ಬಂದಾಗ ಅಲ್ಲಿ ಆತನಿಗೆ ಪುನೀತ್ ಅವರೇ ಕಾಣಿಸ್ತಾರೆ. ಅದು ಹೇಗೆ ಕಾಣಿಸುತ್ತಾರೆ ಅನ್ನೋದೇ ಚಿತ್ರದ ಕುತೂಹಲ.

ಅಲ್ಲೇ ತಾನೊಂದು ಸಿನಿಮಾ ಮಾಡಬೇಕೆಂದು ಹೊರಟ ಮಲ್ಲು ಸಿನಿಮಾ ಮಾಡಿದನೇ, ಇಲ್ಲವೇ, ಪುನೀರ್‌ರ ಆದರ್ಶಗಳನ್ನೇ ಪಾಲಿಸಿಕೊಂಡು ಬಂದ ಆತನ ಕನಸು ನನಸಾಯಿತೇ ಇಲ್ಲವೇ ಎಂಬುದನ್ನು ಈ ಚಿತ್ರದಲ್ಲಿ ನಿರ್ದೇಶಕರು ಹೇಳಿದ್ದಾರೆ.

ನಿರ್ಮಾಪಕ ಎಸ್. ಮೋಹನ್ ಕೂಡ ರಾಜಕುಮಾರ್, ಪುನೀತ್ ಅವರ ಆದರ್ಶಗಳಿಂದ ಪ್ರೇರಿತರಾದವರು. ಟೈಟಲ್ ಗಾಗಿಯೇ ಅವರು 50 ಕಥೆಗಳನ್ನು ಮಾಡಿಕೊಂಡಿದ್ದಾರೆ, ಕೊನೆಗೆ ಈ ಕಥೆ ಸೂಕ್ತ ಎಂದು ಫೈನಲ್ ಮಾಡಿದ್ದಾರೆ.

ಹಣ ಕೂಡಿಟ್ಟುಕೊಂಡಿದ್ದ ಒಬ್ಬ ಬಡ ಹುಡುಗ ಕೊನೆಗೆ ತನ್ನ ಕನಸಿನ ಚಿತ್ರವನ್ನು ಹೇಗೆ ನಿರ್ಮಿಸುತ್ತಾನೆ ಅನ್ನೋದೇ ಕಥಾಹಂದರ, ಈ ಚಿತ್ರಕ್ಕಾಗಿ ಕೆಲವು ಸೀನ್‌ಗಳನ್ನು ನಾನು, ನಿರ್ದೇಶಕರು ಸೇರಿ ಸೆಟ್‌ನಲ್ಲೇ ರೆಡಿ ಮಾಡಿಕೊಂಡಿದ್ದೆವು ಎಂದು ನಿರ್ಮಾಪಕ ಮೋಹನ್ ಚಿತ್ರೀಕರಣದ ಅನುಭವ ಹೇಳಿಕೊಂಡಿದ್ದಾರೆ,

ಈ ಚಿತ್ರದ ಪ್ರಮುಖ ಪಾತ್ರದಲ್ಲಿ ಹಿರಿಯ ನಟ ಅಭಿಜಿತ್ ಕಾಣಿಸಿಕೊಂಡಿದ್ದಾರೆ. ಪುನೀತ್‌ರ ಆದರ್ಶಗಳನ್ನು ಮೈಗೂಡಿಸಿಕೊಂಡಿರುವ ನಿರ್ಮಾಪಕ ಮೋಹನ್ ಅವರು ಚಿತ್ರೀಕರಣಕ್ಕಾಗಿ ನಿಜವಾದ ಮನೆಯನ್ನೇ ಕಟ್ಟಿಸಿದ್ದಾರೆ.

ಮಲ್ಲು ಪಾತ್ರದಲ್ಲಿ ಮಾಸ್ಟರ್ ವಿಠ್ಠಲ್ ಕಾಣಿಸಿಕೊಂಡಿದ್ದಾರೆ, ಹಿರಿಯನಟ ಶಂಕರ್‌ಭಟ್, ಗಂಡಸಿ ಸದಾನಂದಸ್ವಾಮಿ, ಕರಿಸುಬ್ಬು ಶ್ರೇಯಸ್, ಐಶ್ವರ್ಯ, ಎಂ.ಎಸ್. ಉಮೇಶ್, ಡಿಂಗ್ರಿ ನಾಗರಾಜ್, ಟೆನ್ನಿಸ್ ಕೃಷ್ಣ, ರೇಖಾದಾಸ್, ಗಣೇಶರಾವ್ ಕೇಸರಕರ್ ಹಾಗೂ ಇತರರು ಪುನೀತ್ ನಿವಾಸ ಚಿತ್ರದ ಪ್ರಮುಖ ಪಾತ್ರಗಳಲ್ಲಿದ್ದಾರೆ.

ಎಸ್, ಬಾಲು ಅವರ ಛಾಯಾಗ್ರಹಣ, ಎಂ.ಎನ್. ಕೃಪಾಕರ್ ಅವರ ಸಂಗೀತ ನಿರ್ದೇಶನ, ಜೆಮ್ ಶಿವು ಅವರ ಸಂಭಾಷಣೆ, ಮುತ್ತುರಾಜ್ ಅವರ ಸಂಕಲನ ಪುನೀತ್ ನಿವಾಸ ಚಿತ್ರಕ್ಕಿದೆ.

ವಾಸಿಯಾಗದೆ ಇರುವಂಥ ಖಾಯಿಲೆ, ಅದನ್ನು ಬೇಸ್ ಮಾಡಿಕೊಂಡು ಹೆಣೆದಿರುವ ವಿಶೇಷವಾದ ಕಥೆಯಿದು, ಸೊಸೈಟಿಯಲ್ಲಿ ಅದನ್ನು ಹೈಡ್ ಮಾಡಿಕೊಂಡು ಹೇಗೆ ಜೀವನವನ್ನು ಎದುರಿಸಬಹುದು ಎಂಬುದನ್ನು ಹೇಳುವ ಪ್ರಯತ್ನವೇ ಈ ಚಿತ್ರದ ಆಶಯ. ನಾಯಕ ಜೆಕೆ ಅವರ ಪಾತ್ರದ ಹೆಸರೇ ಕಾಡಾ. ಇದೊಂದು ಥ್ರಿಲ್ಲರ್ ಜಾನರ್ ಚಿತ್ರವಾದ್ದರಿಂದ ಪ್ರೇಕ್ಷಕರಿಗೆ ಏನು ಬೇಕೋ ಅಷ್ಟನ್ನು ಮಾತ್ರವೇ ಕೊಟ್ಟು ನಿರೂಪಿಸಲಾಗಿದೆ

ಏ.10ಕ್ಕೆ ಸೈಕಲಾಜಿಕಲ್ ಥ್ರಿಲ್ಲರ್ ಕಾಡಾ





ಈ ಹಿಂದೆ ಥ್ರಿಲ್ಲರ್ ಜಾನರ್ ಕಥಾಹಂದರ ಒಳಗೊಂಡ ರಿಂಗ್ ಮಾಸ್ಟರ್ ಹಾಗೂ ಹಾರರ್ ಕಂಟೆಂಟ್ ಇರುವ ಮಂಜರಿ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದ್ದ ನಿರ್ದೇಶಕ ವಿಶೃತ್ ನಾಯಕ್ ಅವರು ಮತ್ತೊಂದು ಚಿತ್ರವನ್ನು ನಿರ್ದೇಶಿಸಿ ತೆರೆಗೆ ತರುತ್ತಿದ್ದಾರೆ. ಏಪ್ರಿಲ್ 10ರಂದು ರಾಜ್ಯಾದ್ಯಂತ ತೆರೆಕಾಣುತ್ತಿರುವ ಆ ಚಿತ್ರದ ಹೆಸರು ಕಾಡಾ. ಸೈಕಲಾಜಿಕಲ್ ಥ್ರಿಲ್ಲರ್ ಕಥಾಹಂದರ ಒಳಗೊಂಡ ಈ ಚಿತ್ರದಲ್ಲಿ ಜಯರಾಮ್ ಕಾರ್ತೀಕ್ (ಜೆಕೆ) ಅವರು ನಾಯಕನಾಗಿ ಕಾಣಿಸಿಕೊಂಡಿದ್ದಾರೆ. ಅಲ್ಲದೆ ಕಾವ್ಯ ಶೆಟ್ಟಿ ಅವರು ನಾಯಕಿಯ ಪಾತ್ರಕ್ಕೆ ಬಣ್ಣ ಹಚ್ಚಿದ್ದಾರೆ. ಇದೊಂದು ಸೈಕಲಾಜಿಕಲ್, ಥ್ರಿಲ್ಲರ್ ಸಬ್ಜೆಕ್ಟ್ ಹೊಂದಿರೋ ಚಿತ್ರವಾಗಿದ್ದುಷಿ, ಸಾಕಷ್ಟು ಟ್ವಿಸ್ಟ್ ಅಂಡ್ ಟರ್ನ್‌ಗಳನ್ನು ಚಿತ್ರಕಥೆ ಒಳಗೊಂಡಿದೆ. ವಿಶೃತ್ ನಾಯಕ್ ಅವರ ಕಥೆ, ಚಿತ್ರಕಥೆ ಹಾಗೂ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಮೂರನೇ ಚಿತ್ರ ಇದಾಗಿದ್ದುಷಿ, ಮಂಜರಿ ಚಿತ್ರದಲ್ಲಿನ ಅವರ ಅತ್ಯುತ್ತಮ ಅಭಿನಯಕ್ಕೆ ರಾಜ್ಯಪ್ರಶಸ್ತಿಯ ಗೌರವ ಕೂಡ ಸಂದಿತ್ತು.

ಕಾಡಾ ಚಿತ್ರದ ಕುರಿತಂತೆ ಮಾತನಾಡಿದ ವಿಶೃತ್ ನಾಯಕ್ ಅವರು ನಾನು ಈ ಕಥೆ ಮಾಡಿಕೊಂಡಾಗ ಹೊಸಬರನ್ನಿಟ್ಟುಕೊಂಡು ಮಾಡಬೇಕೆಂಬ ಆಲೋಚನೆಯಿತ್ತು. ಸ್ನೇಹಿತರೊಬ್ಬರು ಜೆ.ಕೆ. ಅವರ ಹೆಸರನ್ನು ಸೂಚಿಸಿದಾಗ ಅವರಿಗೆ ಈ ಕಥೆಯನ್ನು ಹೇಳಿದೆ. ಅವಗರು ಕಥೆಯನ್ನು ತುಂಬಾ ಇಷ್ಟಪಟ್ಟು ಪಾತ್ರ ನಿರ್ವಹಿಸಲು ಒಪ್ಪಿಕೊಂಡರು. ಬೆಂಗಳೂರು, ಸಕಲೇಶಪುರ ಹಾಗೂ ಇತರ ಭಾಗಗಳಲ್ಲಿ ಕಾಡಾ ಚಿತ್ರದ ಚಿತ್ರೀಕರಣವನ್ನು ನಡೆಸಿದ್ದೇವೆ.

ವಾಸಿಯಾಗದೆ ಇರುವಂಥ ಖಾಯಿಲೆ, ಅದನ್ನು ಬೇಸ್ ಮಾಡಿಕೊಂಡು ಹೆಣೆದಿರುವ ವಿಶೇಷವಾದ ಕಥೆಯಿದು, ಸೊಸೈಟಿಯಲ್ಲಿ ಅದನ್ನು ಹೈಡ್ ಮಾಡಿಕೊಂಡು ಹೇಗೆ ಜೀವನವನ್ನು ಎದುರಿಸಬಹುದು ಎಂಬುದನ್ನು ಹೇಳುವ ಪ್ರಯತ್ನವೇ ಈ ಚಿತ್ರದ ಆಶಯ. ನಾಯಕ ಜೆಕೆ ಅವರ ಪಾತ್ರದ ಹೆಸರೇ ಕಾಡಾ. ಇದೊಂದು ಥ್ರಿಲ್ಲರ್ ಜಾನರ್ ಚಿತ್ರವಾದ್ದರಿಂದ ಚಿತ್ರಕಥೆಯಲ್ಲಿ ಎಲ್ಲೂ ಬೋರ್ ಹೊಡೆಸದ ಹಾಗೆ ಪ್ರೇಕ್ಷಕರಿಗೆ ಏನು ಬೇಕೋ ಅಷ್ಟನ್ನು ಮಾತ್ರವೇ ಕೊಟ್ಟು ನಿರೂಪಿಸುತ್ತಿದ್ದೇವೆ, ಸ್ಪ್ಲೆಂಡಿಡ್ ಫಿಲಂಸ್ ನಿರ್ಮಾಣದ ಈ ಚಿತ್ರಕ್ಕೆ ನಂದು ಅವರು ಸಂಗೀತ ಸಂಯೋಜನೆ ಮಾಡಿದ್ದು, ಅರುಣ್ ಸುರೇಶ್ ಅವರು ಕ್ಯಾಮೆರಾ ವರ್ಕ್ ನಿಭಾಯಿಸಿದ್ದಾರೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M N S Printers No.345/4, Bhattarahalli, Virgo Nagar Post Old Madras Road, K R Puram, Bangalore 560 049 and Published at No. 1/1, 1Floor, 6th cross, 8th Main, Malleshwara, Bengaluru 03 Ph: (080) 23560302, 340 , Editor: P.S.Prakash, Group Editor: Vinayak S. Bhat, Posted at PSO Bengaluru, Bengaluru 26

ಗರಿಷ್ಠ 35° | ಕನಿಷ್ಠ 21°
ಹೊಸ ದಿಗಂತ
ಲೋಕಹಿತಂ ಮಮ ಕರಣೀಯಂ
ಬುಧವಾರ
1 ಏಪ್ರಿಲ್ 2026

ಮೈಸೂರು

ಹೊಲೆಗೆಯಂತ್ರ ವಿತರಣೆ



ಮೈಸೂರು ನಗರಪಾಲಿಕೆ ವಲಯ ಕಚೇರಿ 2ರಲ್ಲಿ ಪಾಲಿಕೆಯಿಂದ ನೀಡುವ ಹೊಲಿಗೆಯಂತ್ರಗಳನ್ನು ಶಾಸಕ ಟಿ.ಎಸ್.ಶ್ರೀವತ್ಸ ಅವರು ಎಸ್ಸಿ, ಎಸ್ಟಿಯ 82 ಹಾಗೂ ಒಬಿಸಿಯ 50 ಜನ ಮಹಿಳಾ ಫಲಾನುಭವಿಗಳಿಗೆ ಹೊಲಿಗೆ ಯಂತ್ರಗಳನ್ನು ವಿತರಿಸಿದರು. ಈ ಸಂದರ್ಭದಲ್ಲಿ ವಲಯ ಕಚೇರಿ 2ರ ಉಪ ಆಯುಕ್ತ ಗಿರೀಶ್, ಮುಖಂಡರಾದ ವಿಶ್ವೇಶ್ವರಯ್ಯ ಇನ್ನಿತರ ಅಧಿಕಾರಿಗಳು ಇದ್ದರು.

ಅಭಿವೃದ್ಧಿಗೆ ಭಾರೀ ಅನುದಾನ: ಶಾಸಕ | ೨
ಗೃಹಬಳಕೆ ಅನಿಲ ಸಿಲಿಂಡರ್‌ಗೆ ಭಾರೀ ಬೇಡಿಕೆ | ೩
ರಾಜ್ಯ ಸರ್ಕಾರ ಜಾಣ ಮೌನ | ೪

ಕಿರುಸುದ್ದಿ

ಸುತ್ತೂರು ಶ್ರೀ ಕ್ಷೇತ್ರದಲ್ಲಿ ರೈತರ ಶಿಬಿರ

ಮೈಸೂರು: ಸುತ್ತೂರು ಶ್ರೀಮಠ, ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಗಳ ಸಂಯುಕ್ತಾಶ್ರಯದಲ್ಲಿ ಮೇ 1 ರಿಂದ 3ರವರೆಗೆ ಸುತ್ತೂರು ಶ್ರೀಕ್ಷೇತ್ರದಲ್ಲಿ ರೈತರ ಶಿಬಿರವನ್ನು ಏರ್ಪಡಿಸಲಾಗಿದೆ. ಶಿಬಿರದಲ್ಲಿ ಸಾಮೂಹಿಕ ಪ್ರಾರ್ಥನೆ, ಯೋಗ, ವಿಶೇಷ ಉಪನ್ಯಾಸ, ಚಿಂತನ-ಮಂಥನ, ದೇಸಿ ಆಟಗಳು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಿರುತ್ತವೆ. ಶಿಬಿರದಲ್ಲಿ ಭಾಗವಹಿಸಲು ಇಚ್ಛೆಯುಳ್ಳವರು ಶಿಬಿರದ ಸಂಚಾಲಕರಾದ ಡಾ.ಬಿ.ಎನ್.ಜ್ಞಾನೇಶ್ (7893900859), ಎಸ್.ಶಶಿಕುಮಾರ್ (9880949689), ಜಗದೀಶ್ ಎಸ್.ಹಿರೇಮಠ (7406124948) ಯೋಗೇಶ್ ಪ್ರಭುಸ್ವಾಮಿ (9741397666) ಹಾಗೂ ಪಿ.ಶಿವಕುಮಾರ್ (7899877940) ಇವರುಗಳನ್ನು ದೂರವಾಣಿಗಳಲ್ಲಿ ಸಂಪರ್ಕಿಸಿ ವಿವರಗಳನ್ನು ಪಡೆದು ನೋಂದಾಯಿಸಿಕೊಳ್ಳಬಹುದಾಗಿದೆ ಎಂದು ಶಿಬಿರದ ಸಂಚಾಲಕ ನಡಾ.ಬಿ.ಎನ್.ಜ್ಞಾನೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚಿಕಿತ್ಸೆ ಫಲಿಸದೆ ಗಾಯಾಳು ಸಾವು

ಮೈಸೂರು: ಅಪಘಾತದಲ್ಲಿ ಗಾಯಗೊಂಡು ಮೈಸೂರಿನ ಆಸ್ಪತ್ರೆಯಲ್ಲಿ ದಾಖಲಾಗಿದ್ದ ವ್ಯಕ್ತಿಯೊಬ್ಬರು ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ. ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ತಾಲೂಕಿನ ಸತ್ತೇಗಾಲದ ನಿವಾಸಿ ನಿಂಗರಾಜು(50) ಮೃತಪಟ್ಟವರು. ಮೈಸೂರು ನಗರದ ಆಲನಹಳ್ಳಿಯಲ್ಲಿ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದ ನಿಂಗರಾಜು ಅವರು ಮಾ.20ರಂದು ತನ್ನ ಪತ್ನಿ ಮನೆಯಾದ ಟಿ.ಬೆಟ್ಟಹಳ್ಳಿ ಗ್ರಾಮಕ್ಕೆ ತಮ್ಮ ಮಾರುತಿ ಓಮ್ನಿ ವಾಹನದಲ್ಲಿ ತೆರಳುತ್ತಿದ್ದರು. ಈ ವೇಳೆ ವರಕೂಡು ಗ್ರಾಮದ ಬಳಿ ಅವರ ವಾಹನದ ಟೈರ್ ಸಿಡಿದಿದೆ. ಇದರಿಂದಾಗಿ ವಾಹನ ರಸ್ತೆಗೆ ಉರುಳಿ ಬಿದ್ದಿದೆ. ಅಪಘಾತದಿಂದ ಗಾಯಗೊಂಡಿದ್ದ ಅವರನ್ನು ಸಾರ್ವಜನಿಕರು ಚಿಕಿತ್ಸೆ ಗಾಗಿ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲಿಸಿದ್ದರು. ಆದರೆ ಇದೀಗ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ. ಈ ಸಂಬಂಧ ವರುಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ಶಿಬಿರ

ಮೈಸೂರು: ಇಲ್ಲಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ಐ.ಎ.ಎಸ್ ಮತ್ತು ಕೆ.ಎ.ಎಸ್ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ 50 ದಿನಗಳ ತರಬೇತಿ ಶಿಬಿರದ ಸಮಾರೋಪ ಸಮಾರಂಭವನ್ನು ಏ.2 ರಂದು ಬೆಳಗ್ಗೆ 11 ಗಂಟೆಗೆ ಕರಾಮುವಿಯ ಕಾವೇರಿ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ. ರಾಜ್ಯದ ವಿವಿಧ ಜಿಲ್ಲೆಗಳಿಂದ 233 ಅಭ್ಯರ್ಥಿಗಳು ತರಬೇತಿ ಪಡೆಯುತ್ತಿದ್ದಾರೆ. ಈ ತರಬೇತಿ ಶಿಬಿರಾರ್ಥಿಗಳಿಗೆ ಶುಭಹಾರೈಕೆಯನ್ನು ಚಾಮರಾಜನಗರ ಜಿಲ್ಲಾಧಿಕಾರಿ ಶ್ರೀರೂಪ ಅವರು ನೆರವೇರಿಸುವರು. 'ಮುಕ್ತಭಂಡಾರ' ಅಧ್ಯಯನ ಪುಸ್ತಕವನ್ನು ಮೈಸೂರು ಮಹಾನಗರ ಪಾಲಿಕೆಯ ಹೆಚ್ಚುವರಿ ಆಯುಕ್ತ ಬಿ.ಎನ್. ವೀಣಾ ಬಿಡುಗಡೆ ಮಾಡಿ ಶುಭಹಾರೈಸುವರು. ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ ಅಧ್ಯಕ್ಷತೆ ವಹಿಸುವರು. ಕುಲಸಚಿವ ಪ್ರೊ.ಎಸ್.ಕೆ ನವೀನ್‌ಕುಮಾರ್ ಉಪಸ್ಥಿತರಿರುವರು ಎಂದು ಕೇಂದ್ರದ ಸಂಯೋಜನಾಧಿಕಾರಿ ಜೈನಹಳ್ಳಿ ಸತ್ಯನಾರಾಯಣಗೌಡ ತಿಳಿಸಿದ್ದಾರೆ.

ವಿದ್ಯುತ್ ವ್ಯತ್ಯಯ ಇಂದು

ಮೈಸೂರು: ರಾಮಕೃಷ್ಣನಗರ ಉಪ ವಿಭಾಗದ 66/11 ಕೆ.ವಿ.ಆರ್.ಕೆ ನಗರ ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಹೊಮ್ಮುವ 11 ಕೆ.ವಿ ಪರಮಹಂಸ ವಿದ್ಯುತ್ ಮಾರ್ಗದ ನಿರ್ವಹಣಾ ಕೆಲಸದ ನಿಮಿತ್ತ ಏಪ್ರಿಲ್ 01 ರಂದು ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ವಾಸು ಲೇಔಟ್, ಚರ್ಚ್ ಸುತ್ತಮುತ್ತ, ಕೆ ಬ್ಲಾಕ್, ಮಹದೇವ ಪಾರ್ಕ್ ಸುತ್ತಮುತ್ತ, ಜಯಲಕ್ಷ್ಮೀಕಾಲೇಜು ಸುತ್ತಮುತ್ತಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಚಾ.ವಿ.ಸ.ನಿ.ನಿ., ವಿ.ವಿ.ಮೊಹಲ್ಲಾ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಹಾಪುರುಷರ ತತ್ವಗಳ ಅಳವಡಿಕೆಯಿಂದ ಮಾತ್ರ ವ್ಯಕ್ತಿತ್ವ ವಿಕಸನ ಸಾಧ್ಯ: ಶಾಸಕ ಶ್ರೀವತ್ಸ

ಮಹಾವೀರರು ಸಾರ್ವಕಾಲಿಕ ಪುರುಷ

ಮೈಸೂರು: ಮಹಾಪುರುಷರ ತತ್ವಗಳ ಅಳವಡಿಕೆಯಿಂದ ಮಾತ್ರ ವ್ಯಕ್ತಿತ್ವ ವಿಕಸನ ಸಾಧ್ಯ, ಮೌಲ್ಯಯುತ ಜೀವನಕ್ಕೆ ಮಹಾವೀರರ ಬೋಧನೆಗಳೇ ಆಧಾರ ಎಂದು ಕೃಷ್ಣರಾಜ ಕ್ಷೇತ್ರದ ಶಾಸಕ ಟಿ ಎಸ್ ಶ್ರೀವತ್ಸ ಹೇಳಿದರು.

ಜಿಲ್ಲಾಡಳಿತ, ಮಹಾನಗರ ಪಾಲಿಕೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಭಗವಾನ್ ಮಹಾವೀರ ಜಯಂತೋತ್ಸವ ಸಮಿತಿವತಿಯಿಂದನಗರದಕಲಾಮಂದಿರದಆವರಣದಲ್ಲಿರುವ ಕಿರುರಂಗಮಂದಿರದಲ್ಲಿ ಆಯೋಜಿಸಲಾಗಿದ್ದ ಭಗವಾನ್ ಮಹಾವೀರ ಜಯಂತಿಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಮಹಾಪುರುಷರ ಸ್ಮರಣೆಯನ್ನು ಮಾಡುವ ಮುಖಾಂತರ, ನಾವು ನಮ್ಮಲ್ಲಿ ಏನಾದರೂ ಪರಿವರ್ತನೆಯನ್ನು ಕಾಣಬೇಕೆಂಬ ಹಿತದೃಷ್ಟಿಯಿಂದ ಇಂತಹ ಜಯಂತಿ ಕಾರ್ಯಕ್ರಮಗಳನ್ನು ಸರ್ಕಾರ ಆಯೋಜಿಸುತ್ತಾ ಬಂದಿದೆ ಎಂದು ಹೇಳಿದರು.

ಭಗವಾನ್ ಮಹಾವೀರರು, ಜೈನ ಧರ್ಮದ 24ನೇ ತೀರ್ಥಂಕರರಾಗಿದ್ದರು. ಮಹಾರಾಜರಾಗಿ ಜೀವನ ನಡೆಸಬೇಕಾದವರು ಅರಮನೆಯ ಸಕಲ ವೈಭವಗಳನ್ನು ತ್ಯಜಿಸಿ, ವೈರಾಗ್ಯವನ್ನು ತಾಳಿದ ಮಹಾಪುರುಷರು. ಜಗತ್ತಿಗೆ ಅಹಿಂಸೋ ಪರಮೋಧರ್ಮ ಎಂಬ ಸಂದೇಶವನ್ನು ಸಾರಿದ ವ್ಯಕ್ತಿ ಎಂದು ಹೇಳಿದರು.

ಭಗವಾನ್ ಮಹಾವೀರರು ನಮಗೆ ಇಂದ್ರಿಯ ನಿಗ್ರಹ, ಬ್ರಹ್ಮಚರ್ಯ, ಅಹಿಂಸೆ, ಅಸ್ತೇಯ ಹಾಗೂ ಅಪರಿಗ್ರಹಗಳ ಬಗ್ಗೆ ತಿಳಿಸಿದ್ದಾರೆ. ಇದೆಲ್ಲದಕ್ಕಿಂತ ಹೆಚ್ಚಾಗಿ ಅನ್ಯರ ವಸ್ತುಗಳಿಗೆ ಆಸೆ ಪಡಬಾರದು ಎಂಬ ಅವರ ಪರಿಕಲ್ಪನೆಯನ್ನು ನಾವು ನಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ, ದೇಶಗಳಲ್ಲಿ ಯುದ್ಧ ಎಂಬ ಶಬ್ದವೇ ಇಲ್ಲದಂತಾಗುತ್ತದೆ ಎಂದು ತಿಳಿಸಿದರು.

ಹಿರಿಯ ಸಾಹಿತಿ ಪ್ರೊ.ಎಸ್. ಶಿವರಾಜಪ್ಪ ಮಾತನಾಡಿ, ಈ ಜಗತ್ತಿಗೆ ಶಾಂತಿ, ಸೌಹಾರ್ದತೆ ಹಾಗೂ ಬದುಕುವ ರೀತಿ ನೀತಿಯನ್ನು ದಯಪಾಲಿಸಿದಂತಹ ಮಹಾವೀರ ಜಯಂತಿಯನ್ನು ಬಹಳ ಅರ್ಥಪೂರ್ಣವಾಗಿ ನಾವು ಇಂದು ಆಚರಿಸುತ್ತಿರುವುದು ಸಂತೋಷವಾಗಿದೆ. ನಾವು ಮಹಾವೀರ, ಗೌತಮ ಬುದ್ಧ, ಬಸವಣ್ಣ, ಗಾಂಧೀಜಿ, ಅಂಬೇಡ್ಕರಂತಹ ಮಹಾವೀರರ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಅವರ ಜೀವನ, ಶ್ರಮ, ಸಾಧನೆ, ತ್ಯಾಗ ಹಾಗೂ ಹೋರಾಟಗಳ ಬಗ್ಗೆ ತಿಳಿಯಲು ಇಂತಹ ಕಾರ್ಯಕ್ರಮಗಳಿಗೆ ಭಾಗವಹಿಸಿ ಅವರ ತತ್ವ ಆದರ್ಶಗಳನ್ನು ನಮ್ಮ ಜೀವನದಲ್ಲಿ ತೊಡಗಿಸಿಕೊಳ್ಳುವ ಪ್ರಯತ್ನವನ್ನು ಮಾಡಬೇಕು ಎಂದು ಹೇಳಿದರು.

ಇಂದು ಅವರನ್ನು ಕೇವಲ ಆರಾಧನೆ ಮತ್ತು ಆಚರಣೆ ಮಾಡಿದರೆ ಸಾಲದು, ಅವರ ಆದರ್ಶಗಳನ್ನು ನಾವು ಪಾಲಿಸಬೇಕು. ಈ ಜಗತ್ತೆಲ್ಲವನ್ನು ಭ್ರಾತೃತ್ವದಿಂದ ಕಾಣುವುದು ಜೈನ ಧರ್ಮದ ಮೂಲ ಆಶಯವಾಗಿದೆ. ನಾವು ನಮ್ಮ ಜೀವನದಲ್ಲಿ ಬುದ್ಧನ ಕರುಣೆ, ಬಸವಣ್ಣನ ಸಮಾನತೆ, ಮಹಾವೀರರು ಶಾಂತಿ ಮತ್ತು ಅಹಿಂಸೆಯನ್ನು ಅಳವಡಿಸಿಕೊಳ್ಳಬೇಕು. ಮಹಾವೀರ ಕೇವಲ ಏಕಕಾಲಕ್ಕೆ ಮಾತ್ರ ಸೀಮಿತವಾದವರಲ್ಲ ಬದಲಾಗಿ ಸಾರ್ವಕಾಲಿಕ ಪುರುಷ ಎಂದು ಹೇಳಿದರು.



ಮಾನವೀಯತೆ ಮೆರೆದ ಸಂತ

ವ್ಯಕ್ತಿತ್ವ ವಿಕಸನದ ಪರಿಕಲ್ಪನೆಯನ್ನು ಸಾರಿದ ವ್ಯಕ್ತಿ ಎಂದರೆ ಅದು ಮಹಾವೀರ. ಜಗತ್ತಿನ ಯಾವ ಜೀವಿ ಜಂತುಗಳಿಗೂ ಹಿಂಸೆಯನ್ನು ಕೊಡಬಾರದೆಂದು ಹೇಳಿ ಮಾನವೀಯತೆಯನ್ನು ಮೆರೆದ ಸಂತ. ಮಹಾತ್ಮ ಗಾಂಧೀಜಿ ಅವರು ಮಹಾವೀರರು ಹೇಳಿದ ಮೂಲತತ್ವಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಜಗತ್‌ಪ್ರಸಿದ್ಧವಾದರು ಹಾಗೂ ವಿಶ್ವದಲ್ಲಿ ಮೂಲ ಸ್ಥಾನ ಪಡೆದುಕೊಂಡಿದ್ದಾರೆ ಎಂದು ಶಾಸಕ ಶ್ರೀವತ್ಸ ಹೇಳಿದರು.

> ಮಹಾವೀರರು ತಮ್ಮ ತ್ರಿರತ್ನಗಳಾದ ಸಮ್ಯಕ್ ಜ್ಞಾನ, ಸಮ್ಯಕ್ ದರ್ಶನ ಹಾಗೂ ಸಮ್ಯಕ್ ಚರಿತ್ರೆಗಳ ಕುರಿತು ತಿಳಿಸಿದ್ದಾರೆ. ಸರಿಯಾದ ನಂಬಿಕೆಯು ಜ್ಞಾನಕ್ಕೆ ದಾರಿಯಾದರೆ, ಆ ಜ್ಞಾನವು ವ್ಯಕ್ತಿಯನ್ನು ಸನ್ಮಾರ್ಗದ ನಡತೆಯಲ್ಲಿ ನಡೆಸುತ್ತದೆ. ಇವುಗಳ ಪಾಲನೆಯಿಂದ ಮಾತ್ರ ಒಬ್ಬ ವ್ಯಕ್ತಿಯು ಕರ್ಮದಿಂದ ಮುಕ್ತನಾಗಿ ಮೋಕ್ಷ ಪಡೆಯಲು ಸಾಧ್ಯ ಎಂಬುದಾಗಿ ಬೋಧಿಸಿದ್ದಾರೆ.
>
> ■ ಭಾನುಕೀರ್ತಿ ಭಟ್ಟಾರಕ ಭಟ್ಟಾಚಾರ್ಯವರ್ಯ ಮಹಾಸ್ವಾಮೀಜಿ, ಕಂಬದಹಳ್ಳಿ ಜೈನ ಮಠ

ಕಂಬದಹಳ್ಳಿ ಜೈನ ಮಠ ಶ್ರೀ ಕ್ಷೇತ್ರದ ಸ್ವಸ್ತಿ ಶ್ರೀ ಭಾನುಕೀರ್ತಿ ಭಟ್ಟಾರಕ ಭಟ್ಟಾಚಾರ್ಯವರ್ಯ ಮಹಾಸ್ವಾಮೀಜಿ ಮಾತನಾಡಿ, ಮಹಾವೀರರು ಜಾತಿ ಪದ್ಧತಿ ಮತ್ತು ಪ್ರಾಣಿ ಬಲಿಯನ್ನು ತೀವ್ರವಾಗಿ ವಿರೋಧಿಸಿದರು. ಆತ್ಮ ಶುದ್ಧೀಕರಣಕ್ಕೆ ಹೆಚ್ಚಿನ ಒತ್ತು ನೀಡಿದರು. ಜೈನ ಧರ್ಮದ ಪ್ರಕಾರ ಮಹಾವೀರರು ಕೇವಲ ಒಬ್ಬ ಧರ್ಮ ಪ್ರಚಾರಕರಲ್ಲ ಬದಲಿಗೆ ಆತ್ಮದ ವಿಮೋಚನೆಯ ಹಾದಿಯನ್ನು ತೋರಿಸಿಕೊಟ್ಟ ಮಹಾನ್ ಗುರು ಆಗಿದ್ದಾರೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನ ಸ್ವಾಮಿ, ಸಹಾಯಕ ನಿರ್ದೇಶಕ ಡಾ.ಎಂ.ಡಿ. ಸುದರ್ಶನ್, ದಿಗಂಬರ ಜೈನ ಸಮಾಜದ ಅಧ್ಯಕ್ಷ ಅಮರ್ ಸುನಿಲ್ ಕುಮಾರ್, ಕಾರ್ಯದರ್ಶಿ ಲಕ್ಷ್ಮೀಶ್ ಬಾಬು, ಜೈನ ಮಹಿಳಾ ಸಮಾಜದ ಅಧ್ಯಕ್ಷ ನಂದಿನಿ ಸುಜಯ್ ಹಾಗೂ ಕಾರ್ಯದರ್ಶಿಗಳಾದ ಸುಮಾ ದಾಯಕರ್ ಉಪಸ್ಥಿತರಿದ್ದರು.

ಶಿವಕುಮಾರ ಶ್ರೀಗಳ ಜಯಂತ್ಯುತ್ಸವ ಇಂದು

ಮೈಸೂರು: ನಡೆದಾಡುವ ದೇವರು, ತ್ರಿವಿಧ ದಾಸೋಹಿ ಎಚಿದೇ ಖ್ಯಾತರಾದ ಸಿದ್ಧಗಂಗಾ ಮಠದ ಡಾ. ಶ್ರೀ ಶಿವಕುಮಾರ ಮಹಾಸ್ವಾಮೀಜಿಗಳವರ 119ನೇ ಜಯಂತ್ಯುತ್ಸವ ಹಾಗೂ ಗುರುವಂದನಾ ಕಾರ್ಯಕ್ರಮವನ್ನು ಏ.1ರಂದು ನಮ್ಮ ಬಳಗದ ವತಿಯಿಂದ ಮೈಸೂರಿನ ಬಸವೇಶ್ವರ ರಸ್ತೆಯಲ್ಲಿ ಅತ್ಯಂತ ಸಡಗರ-ಸಂಭ್ರಮದಿಂದ ಆಯೋಜಿಸಲಾಗಿದೆ ಎಂದು ಬಳಗದ ಮುಖಂಡ ಸಂದೀಪ್ ತಿಳಿಸಿದರು.

ಮಂಗಳವಾರ ನಗರದ ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 9 ಗಂಟೆಗೆ ಬಸವೇಶ್ವರ ರಸ್ತೆಯಲ್ಲಿ ಶ್ರೀಗಳ ಭಾವಚಿತ್ರವುಳ್ಳ ಭವ್ಯ ಮೆರವಣಿಗೆಯನ್ನು ವಿವಿಧ ಮಠಗಳ ಪೂಜ್ಯ ಸ್ವಾಮೀಜಿಗಳ ದಿವ್ಯ ಸನ್ನಿಧಿಯಲ್ಲಿ ಹಾಗೂ ಗಣ್ಯರ ಉಪಸ್ಥಿತಿಯಲ್ಲಿ ಹಮ್ಮಿಕೊಳ್ಳಲಾಗಿದೆ.

ಮೆರವಣಿಗೆಯ ಮಾರ್ಗ: ಬಸವೇಶ್ವರ ರಸ್ತೆಯ 13ನೇ ಕ್ರಾಸ್‌ನಿಂದ ಪ್ರಾರಂಭವಾಗಿ ನೂರೊಂದು ಗಣಪತಿ ದೇವಸ್ಥಾನ, ರಾಮಾನುಜ ರಸ್ತೆ, ಕಂಸಾಳೆ ಮಾದೇವಯ್ಯ ವೃತ್ತ ಹಾಗೂ ಚಾಮುಂಡಿಪುರಂ ವೃತ್ತದ ಮೂಲಕ ಸಾಗಿ ಪುನಃ ಬಸವೇಶ್ವರ ರಸ್ತೆಯಲ್ಲಿ ಮುಕ್ತಾಯಗೊಳ್ಳಲಿದೆ.



ವಿಶೇಷ ಗಮನಕ್ಕೆ: ಮೆರವಣಿಗೆಯಲ್ಲಿ ವಿವಿಧ ಜಾನಪದ ಕಲಾತಂಡಗಳು ಹಾಗೂ ಸಾವಿರಾರು ಭಕ್ತಾದಿಗಳು ಪಾಲ್ಗೊಳ್ಳಲಿದ್ದಾರೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮುಖಂಡರಾದ ಅಂಬಳೆ ಶಿವಣ್ಣ, ಸಂದೀಪ್ ಚಂದ್ರಶೇಖರ್, ಶಂಕರ್, ಲೋಹಿತ್, ಮುಕುಂದ ರಾಜೇ ಅರಸ್, ಮಹಾದೇವ ಸ್ವಾಮಿ, ಪ್ರಭು, ಮಹದೇವು, ಮಲ್ಲೇಶ್, ವೃಷಭೇಂದ್ರ, ಬಸವರಾಜು, ಜಯಣ್ಣ, ಗುರುಸ್ವಾಮಿ, ಚಂದ್ರು, ಕಾಂತರಾಜು, ನವೀನ್ ಹಾಜರಿದ್ದರು.

ಗೋಮಾಂಸ ಮಾರಾಟ: ಮೂವರ ವಿರುದ್ಧ ಕೇಸ್

ಮೈಸೂರು: ಅಕ್ರಮವಾಗಿ ಗೋಮಾಂಸ ಮಾರಾಟ ಮಾಡುತ್ತಿದ್ದ ಮೂವರನ್ನು ಪೊಲೀಸರು ಬಂಧಿಸಿರುವ ಘಟನೆ ನಗರದಲ್ಲಿ ನಡೆದಿದೆ. ನಗರದ ಪಾಳ್ಯ ನಿವಾಸಿ ಜಮೀರ್ ಖಾನ್, ಇರ್ಫಾನ್ ಹಾಗೂ ಮತ್ತೊಬ್ಬ ಬಂಧಿತ ಆರೋಪಿ. ಪೊಲೀಸರ ತಂಡ ನಾಚನಹಳ್ಳಿ ಪಾಳ್ಯ ಬಳಿಯಲ್ಲಿ ಗಸ್ತು ಮಾಡುತ್ತಿದ್ದ ವೇಳೆ ಇರ್ಫಾನ್ ಹಾಗೂ ಇನ್ನಿತರರು ಅಕ್ರಮವಾಗಿ ಗೋಮಾಂಸ ಮಾರಾಟ ಮಾಡುತ್ತಿದ್ದಾರೆ ಎಂಬ ಮಾಹಿತಿ ಸಿಕ್ಕಿದೆ. ಕೂಡಲೇ ಪೊಲೀಸರ ತಂಡ ಗ್ರಾಹಕರ ಸೋಗಿನಲ್ಲಿ ನಾಚನಹಳ್ಳಿ ಬಳಿಯ 6ನೇ ಕ್ರಾಸ್ ಬಳಿಯಮನೆಯ ಬಳಿಗೆ ತೆರಳಿ ಗೋಮಾಂಸಕ್ಕೆ ಬೇಡಿಕೆ ಇಟ್ಟಿದ್ದಾರೆ. ಆರೋಪಿಗಳು ಗೋ ಮಾಂಸವನ್ನು ತೋರಿಸಿದ್ದಾರೆ. ಕೂಡಲೇ ಪೊಲೀಸರು ಆರೋಪಿಗಳನ್ನು ಬಂಧಿಸಿ ಮಾಂಸ ಹಾಗೂ ಇನ್ನಿತರೆ ವಸ್ತುಗಳನ್ನು ವಶಕ್ಕೆ ಪಡೆದಿದ್ದಾರೆ. ಈ ಬಗ್ಗೆ ವಿದ್ಯಾರಣ್ಯಪುರಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗೂಡ್ಸ್ ಆಟೋ ಡಿಕ್ಕಿ: ಬಾಲಕ ಸಾವು

ಮೈಸೂರು: ಗೂಡ್ಸ್ ಆಟೋಡಿಕ್ಕಿ ಹೊಡೆದ ಪರಿಣಾಮ ಬಾಲಕನೊಬ್ಬ ಮೃತಪಟ್ಟಿರುವ ಘಟನೆ ಜಿಲ್ಲೆಯ ಹುಣಸೂರಿನ ಶಬ್ಬಿರ್ ನಗರದಲ್ಲಿನಡೆದಿದೆ. ಶಬ್ಬಿರ್ ನಗರದ ಫಜಲ್ ಅಹಮದ್ ಮತ್ತು ಅಸ್ತಿಯಬಾನು ದಂಪತಿಯ ಪುತ್ರ ಮೊಹಮ್ಮದ್ ರಹಾನ್ (7) ಮೃತಪಟ್ಟ ಬಾಲಕ. ಕಟ್ಟೆಮಳಲವಾಡಿ ಕಡೆಯಿಂದ ಗೂಡ್ಸ್ ರಹಾನ್‌ಗೆ ಡಿಕ್ಕಿ ಹೊಡೆದಿದ್ದರಿಂದ ಆತ ರಸ್ತೆಯಲ್ಲೇ ಕುಸಿದು ಬಿದ್ದಿದ್ದಾನೆ. ತಕ್ಷಣ

ಹುಣಸೂರು ಸಾರ್ವಜನಿಕ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಿದರೂ ಚಿಕಿತ್ಸೆ ಫಲಕಾರಿಯಾಗದೆ ಆತ ಮೃತಪಟ್ಟಿದ್ದಾನೆ. ಹುಣಸೂರು ನಗರ ಪೋಲಿಸರು ಈ ಕುರಿತು ಪ್ರಕರಣ ದಾಖಲಿಸಿಕೊಂಡು ಗೂಡ್ಸ್ ಆಟೋ ವಶಕ್ಕೆ ಪಡೆದು ಚಾಲಕ ಚಿಕ್ಕಹುಣಸೂರಿನ ನವೀನ್‌ನನ್ನು ಬಂಧಿಸಿದ್ದಾರೆ.

ಮೈಸೂರು ಪ್ರಾಧಿಕಾರದ ಆಸ್ತಿ ಉಳಿವಿಗೆ ತಮಟೆ ಚಳವಳಿ

ಮೈಸೂರು: ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಆಸ್ತಿ ಉಳಿಸುವಂತೆ ಆಗ್ರಹಿಸಿ ದಲಿತ ಸಂಘರ್ಷ ಸಮಿತಿ ಮುಖಂಡರು ಎಂಡಿಎ ಪ್ರಭಾರ ಆಯುಕ್ತ ಹಾಗೂ ವಿಶೇಷ ಭೂಸ್ವಾಧೀನ ಅಧಿಕಾರಿ ಕೆಎಸ್ ರಕ್ಷಿತ್ ರವರ ಕಚೇರಿ ಬಾಗಿಲ ಬಳಿ ತಮಟೆ ಚಳವಳಿ ನಡೆಸಿದರು. ಮೈಸೂರಿನ ದೇವನೂರು ಗ್ರಾಮದ ಸರ್ವೆ ನಂ.208 ಹಾಗೂ 184/6 ರ ಜಮೀನುಗಳನ್ನ ಖಾಸಗಿ ವ್ಯಕ್ತಿಗಳು ಕಬಳಿಸಿ, ಮಾರಾಟ ಮಾಡಿದ್ದಾರೆ.ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ಡಿಎಸ್‌ಎಸ್ ಮುಖಂಡರು ಮನವಿ ಸಲ್ಲಿಸಿದ್ದರು.ಇದುವರೆಗೆ ಯಾವುದೇ ಕ್ರಮ ಕೈಗೊಳ್ಳದ ಹಿನ್ನಲೆ ಇಂದು ಮತ್ತೊಮ್ಮೆ ಪ್ರಭಾರ ಆಯುಕ್ತ ರಕ್ಷಿತ್ ರವರಿಗೆ ಮನವಿ ಕೊಡಲು ಬಂದಾಗ ಸೂಕ್ತವಾಗಿ ಸ್ಪಂದಿಸದೆ ನಿರ್ಲಕ್ಷಿಸಿದರು.ಇದರಿಂದ ಬೇಸತ್ತ ದಲಿತ ಸಂಘಟನೆ ಮುಖಂಡರು ಬಾಗಿಲ ಬಳಿ ನಿಂತು ತಮಟೆ ಹೊಡೆಯುವ ಮೂಲಕ ಎಂಡಿಎ ಅಧಿಕಾರಿಗಳ ವಿರುದ್ಧ ಘೋಷಣೆಗಳನ್ನು ಕೂಗುವ ಮೂಲಕ ಆಕ್ರೋಶ ವ್ಯಕ್ತಪಡಿಸಿದರು. ಇನ್ನಾದರೂ ಎಚ್ಚೆತ್ತುಕೊಂಡು ಕ್ರಮ ಕೈಗೊಳ್ಳದಿದ್ದರೆ ಹೋರಾಟವನ್ನು ತೀವ್ರಗೊಳಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಸ್ವಯಂ ಗಣತಿ: ಸಾರ್ವಜನಿಕರಿಗೆ ಅವಕಾಶ

ಮೈಸೂರು: ಜನಗಣತಿ-2027 ರ ಅಂಗವಾಗಿ ಸಾರ್ವಜನಿಕರು ಸುರಕ್ಷಿತ ವೆಬ್ ಪೋರ್ಟಲ್ ಮೂಲಕ ಸ್ವಯಂ- ಗಣತಿಯಲ್ಲಿ ಪಾಲ್ಗೊಳ್ಳಲು ಅವಕಾಶ ಕಲ್ಪಿಸಲಾಗಿದ್ದು ಜಿಲ್ಲೆಯ ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಂಡು ಜನಗಣತಿಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು ಎಂದು ಮೈಸೂರು ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ ಜಿ ತಿಳಿಸಿದ್ದಾರೆ.

ಜಿಲ್ಲೆಯಲ್ಲಿ ಮನೆ ಪಟ್ಟಿ ಮತ್ತು ಮನೆಗಣತಿ ಕಾರ್ಯವು ಏಪ್ರಿಲ್ 16 ರಿಂದ ಆರಂಭವಾಗಲಿದ್ದು, ಇದಕ್ಕೂ ಮುನ್ನ 15 ದಿನಗಳ ಮುಂಚಿತವಾಗಿ ಅಂದರೆ ಏ. 01 ರಿಂದ 15 ವರೆಗೆ ಸ್ವಯಂ ಗಣತಿಗೆ ಅವಕಾಶ ಕಲ್ಪಿಸಲಾಗಿದೆ.

ಸಾರ್ವಜನಿಕರು ಸ್ವಯಂ ಗಣತಿಗಾಗಿ ವೆಬ್ ಸೈಟ್ ವಿಳಾಸ ಡಿಡಿಡಿ.ಠಛಿ.ಟ್ಟಿಹ್ಠ.ಜಟಡ.ಜ್ಞ ಬಳಸಿಕೊಂಡು ಲಾಗ್ ಇನ್ ಆಗಿ ಮನೆಗಳ ಪಟ್ಟಿ ಮತ್ತು ವಸತಿ ಗಣತಿ ಸಂಬಂಧ ಕೇಳಲಾಗುವ 33 ಪ್ರಶ್ನೆಗಳಿಗೆ ಉತ್ತರಿಸಬೇಕಾಗುತ್ತದೆ.

ಸಾರ್ವಜನಿಕರು ಸ್ವಯಂ ಗಣತಿ ಮಾಹಿತಿಯನ್ನು ಯಶಸ್ವಿಯಾಗಿ ಸಲ್ಲಿಸಿದ ನಂತರ ಎಸ್‌ಎಂಎಸ್ ಮತ್ತು ಈ ಮೇಲ್ ಪೋರ್ಟಲ್ ಗೆ ರೆಫರೆನ್ಸ್ ಐ.ಡಿ ಸ್ವೀಕೃತವಾಗುತ್ತದೆ.

ಗಣತಿದಾರರು ಮನೆಗೆ ಭೇಟಿ ನೀಡಿದಾಗ ರೆಫರೆನ್ಸ್ ಐ.ಡಿ ನೀಡುವ ಮೂಲಕ ಗಣತಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕಿರುತ್ತದೆ. ಒಂದು ವೇಳೆ ರೆಫರೆನ್ಸ್ ಐ.ಡಿ ನೀಡದಿದ್ದಾರೆ ಗಣತಿದಾರರು ಮೊದಲಿನಿಂದಲೂ ಎಲ್ಲಾ ಪ್ರಶ್ನೆಗಳನ್ನು ಕೇಳಿ ಹೊಸದಾಗಿ ಗಣತಿ ಮಾಡಬೇಕಿರುತ್ತದೆ. ಸ್ವಯಂ ಗಣತಿಯಲ್ಲಿ ಪಾಲ್ಗೊಳ್ಳುವುದರಿಂದ ಗಣತಿದಾರರು ಬಂದಾಗ ಆಗುವ ಸಮಯ ವ್ಯಯವನ್ನು ತಪ್ಪಿಸಬಹುದಾಗಿದೆ. ಜಿಲ್ಲೆಯ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಸ್ವಯಂ ಗಣತಿಯಲ್ಲಿ ಪಾಲ್ಗೊಳ್ಳುವಂತೆ ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

» ಇಂದಿನಿಂದ 15 ವರೆಗೆ ಸ್ವಯಂ ಜನಗಣತಿ: ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ ಜಿ.

ಕಾರು ಹರಿದು ಬೈಕ್ ಸವಾರ ಮೃತ್ಯು

ಮೈಸೂರು: ಕಾರು ಆಟೋಗೆ ಡಿಕ್ಕಿ ಹೊಡೆದು, ಅದರಿಂದಾಗಿ ಬೈಕ್‌ಗೆ ಆಟೋ ಡಿಕ್ಕಿ ಹೊಡೆದ ಪರಿಣಾಮ ಕೆಳಕ್ಕೆ ಬಿದ್ದ ಬೈಕ್ ಸವಾರನ ಮೇಲೆ ಕಾರು ಹರಿದು ಆತ ಸಾವಿಗೀಡಾಗಿರುವ ಘಟನೆ ಜಿಲ್ಲೆಯ ಪಿರಿಯಾಪಟ್ಟಣ ತಾಲೂಕಿನ ಬೈಲಕುಪ್ಪೆ ಹಳೆಯಾರು ಸಮೀಪ ಬಿ.ಎಂ.ರಸ್ತೆಯಲ್ಲಿ ನಡೆದಿದೆ. ಪಿರಿಯಾಪಟ್ಟಣ ತಾಲ್ಲೂಕಿನ ಕೊಪ್ಪ ಗ್ರಾಮದ ಶಿವಣ್ಣ ಎಂಬವರ ಮಗ ಅನಿಲ್ ಕುಮಾರ್ (32) ಮೃತಪಟ್ಟ ಬೈಕ್ ಸವಾರ. ಪಿರಿಯಾಪಟ್ಟಣ ತಾಲ್ಲೂಕಿನ ಬೈಲಕುಪ್ಪೆ ಹಳೆಯಾರು ಸಮೀಪ ಬಿ.ಎಂ. ರಸ್ತೆಯಲ್ಲಿ ಕುಶಾಲನಗರ ಕಡೆಯಿಂದ ಆಟೋ ತೆರಳುತ್ತಿದ್ದು, ಇದರ ಹಿಂದೆ ಸ್ಕೂಟರ್‌ನಲ್ಲಿ ಅನಿಲ್ ಕುಮಾರ್ ಬರುತ್ತಿದ್ದರು. ಈ ವೇಳೆ ಪಿರಿಯಾಪಟ್ಟಣ ಕಡೆಯಿಂದ ಬರುತ್ತಿದ್ದ ಕಾರೊಂದು ಆಟೋಗೆ ಡಿಕ್ಕಿ ಹೊಡೆದಿದೆ. ಈ ವೇಳೆ ಬೈಕ್ ಆಟೋಗೆ ಡಿಕ್ಕಿಯಾಗಿ ಸವಾರ ಕೆಳಗೆ ಬಿದ್ದಿದ್ದಾರೆ. ಅವರ ಮೇಲೆ ಕಾರು ಹತ್ತಿದ್ದು, ತೀವ್ರ ಗಾಯಗೊಂಡಿದ್ದ ಅವರಿಗೆ ಕುಶಾಲನಗರ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಮಡಿಕೇರಿ ಸಾರ್ವಜನಿಕರ ಆಸ್ಪತ್ರೆಗೆ ತೆರಳುವ ಮಾರ್ಗ ಮಧ್ಯೆ ಮೃತಪಟ್ಟಿದ್ದಾರೆ. ಮೃತನ ಸಹೋದರ ಮಂಜು ಎಂಬವರು ನೀಡಿದ ದೂರಿನ ಮೇರೆಗೆ ಬೈಲಕುಪ್ಪೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮ್ಯಾರಥಾನ್ ಓಟ | ಸಮಾಜಸೇವಕ ಮಹೇಂದ್ರಸಿಂಗ್ ಕಾಳಪ್ಪ ಅಭಿಮತ


ಸ್ವಚ್ಛತೆಗೆ ಆದ್ಯತೆ ನೀಡಿದರೆ ಊರು ಸುಂದರ

ಬನ್ನೂರು: ಎಲ್ಲೆಂದರಲ್ಲಿ ಕಸವನ್ನು ಹರಡುವುದು, ಎಲ್ಲೆಂದರಲ್ಲಿ ಉಗುಳುವುದರಿಂದ ನಾವೇ ನಮ್ಮ ಆರೋಗ್ಯವನ್ನು ಹಾಳು ಮಾಡಿಕೊಂಡಂತೆ ಆಗುತ್ತದೆ. ಎಲ್ಲರೂ ಪೌರಕಾರ್ಮಿಕರಿಗೆ ಸಹಕಾರವನ್ನು ನೀಡುವ ಮೂಲಕ ಸ್ವಚ್ಛತೆಗೆ ಆದ್ಯತೆಯನ್ನು ನೀಡಿದರೆ ಊರು ಸುಂದರಗೊಳಿಸಬಹುದು ಎಂದು ಸಮಾಜಸೇವಕ ಡಾ.ಕೆ.ಮಹೇಂದ್ರ ಸಿಂಗ್ ಕಾಳಪ್ಪ ತಿಳಿಸಿದರು.

ಅವರು ಪಟ್ಟಣದ ಫುಟ್ಬಾಲ್ ಮೈದಾನದ ಆವರಣದಲ್ಲಿ ಬನ್ನೂರು ಪುರಸಭೆ, ರೋಟರಿ ಸಂಸ್ಥೆ ಹಾಗೂ ಲಯನ್ಸ್‌ಗ್ರೀನ್ ಲ್ಯಾಂಡ್ ವತಿಯಿಂದ ಹಮ್ಮಿಕೊಳ್ಳಲಾದ ಸ್ವಚ್ಛ ಬನ್ನೂರಿಗಾಗಿ ಮ್ಯಾರಥಾನ್ ಓಟ ಕಾರ್ಯಕ್ರಮದಲ್ಲಿ ಬ್ರಾಂಡ್ ಅಂಬಾಸಿಡರ್ ಆಗಿ ಪಾಲ್ಗೊಂಡು ಮಾತನಾಡಿದರು.

ಪುರಸಭೆಯ ವತಿಯಿಂದ ಪ್ರತಿಮನೆ ಮನೆಯ ಬಳಿಗೆ ಕಸ ತುಂಬಿಕೊಳ್ಳುವ ವಾಹನ ಬರುತ್ತಿದ್ದು, ಅದಕ್ಕೆ ಕಸವನ್ನು ಹಾಕುವ ಮೂಲಕ ಕಸವನ್ನು ಎಲ್ಲೆಂದರಲ್ಲಿ ಬಿಸಾಡುವುದನ್ನು ತಪ್ಪಿಸುವಂತೆ ಮನವಿಯನ್ನು ಮಾಡಿದರು. ಕಲೆವೊಂದು ವಸ್ತುಗಳು ಪರಿಸರದಲ್ಲಿ ವಿಲೀನವಾಗುವುದಿಲ್ಲ. ಇದರಿಂದ ಪರಿಸರದ ಮೇಲೆ ದುಷ್ಪರಿಣಾಮವನ್ನುಂಟು ಮಾಡುವ ಸಾಧ್ಯತೆ ಹೆಚ್ಚಾಗಿದ್ದು ಕಸವನ್ನು ವಿಂಗಡಣೆ ಮಾಡಿ ವಾಹನಗಳಿಗೆ ಕಸವನ್ನು ಹಾಕುವಂತೆಯೂ ಅವರು ಇದೇ ಸಂದರ್ಭದಲ್ಲಿ ತಿಳಿಸಿದರು. ಊರಿನ ಅಭಿವೃದ್ಧಿಗೊಳಿಸುವನಿಟ್ಟಿನಲ್ಲಿಇಂದುಹಮ್ಮಿಕೊಳ್ಳಲಾದ ಮ್ಯಾರಾಥಾನ್ ಓಟ ಪ್ರಮುಖವಾಗಿದುದ, ಇದರ ಮೂಒಕ ನಬಾವೆಲ್ಲರೂ ಕಸವನ್ನು ಹಾಕುವುದನ್ನು ಆದಷ್ಟು ಕಡಿಮೆ ಮಾಡುತ್ತೇವೆ ಎನ್ನುವ ನಿಟ್ಟಿನಲ್ಲಿ ಪ್ರತಿಜ್ಞೆಯನ್ನು ಸ್ವೀಕರಿಸೋಣ ಎಂದು ತಿಳಿಸಿದರು.

ಬನ್ನೂರನ್ನು ಕಸಮುಕ್ತ ಪ್ರದೇಶವನ್ನಾಗಿ ಮಾಡುವ ಉದ್ದೇಶದಿಂದ ಇಂದು ಮ್ಯಾರಥಾನ್ ಓಟ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದಾಗಿ ತಿಳಿಸಿದರು. ನಂತರ ಮ್ಯಾರಥಾನ್ ಓಟಕ್ಕೆ ಚಾಲನೆ ನೀಡಲಾಯಿತು. ಪರಿಸರ ಅಭಿಯಂತರ ನಸೀಮ ಅಂಜುಂ, ಬಸವರಾಜು, ಆರೋಗ್ಯಾಧಿಕಾರಿ ಪ್ರೇಮ, ಸುಭಾಷ್, ಕಾಂತರಾಜು, ಆಗಾಜ್, ರೋಟರಿ ಅಧ್ಯಕ್ಷ ಡಾ. ರಾಜೀವ್, ಮುರಳಿ, ಅತ್ತಹಳ್ಳಿ ಕೆಂಪೇಗೌಡ, ಪ್ರಸನ್ನ, ಶಿವಕುಮಾರ್, ನಂಜುಂಡ ಸೇರಿದಂತೆ ಪುರಸಭೆಯ ಪೌರಕಾರ್ಮಿಕರು, ಸಿಬ್ಬಂದಿವರ್ಗದವರು ಮತ್ತಿತರರಿದ್ದರು.



ಮುನಿಗೋಪಾಲ್ ರಾಜುಗೆ ಅಧಿಕಾರಿಗಳು, ಸಿಬ್ಬಂದಿಯಿಂದ ಸನ್ಮಾನ

ಸೆಸ್ಕ್ ನಿರ್ದೇಶಕರಿಗೆ ಆತ್ಮೀಯ ಬೀಳ್ಕೊಡುಗೆ

ಮೈಸೂರು: ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ (ಸೆಸ್ಕ್) ವ್ಯವಸ್ಥಾಪಕ ನಿರ್ದೇಶಕ ಕೆ.ಎಂ. ಮುನಿಗೋಪಾಲ್ ರಾಜು ಅವರು ಮಂಗಳವಾರ ಸೇವೆಯಿಂದ ನಿವೃತ್ತಿ ಹೊಂದಿದ್ದು, ನಿಗಮದ ವತಿಯಿಂದ ಅವರನ್ನು ಆತ್ಮೀಯವಾಗಿ ಬೀಳ್ಕೊಡಲಾಯಿತು.

ಮೈಸೂರಿನ ವಿಜಯನಗರ 2ನೇ ಹಂತದಲ್ಲಿರುವ ಸೆಸ್ಕ್ ಪ್ರಧಾನ ಕಚೇರಿಯಲ್ಲಿ ನಡೆದ ಬೀಳ್ಕೊಡುಗೆ ಸಮಾರಂಭದಲ್ಲಿ ನಿಗಮದ ಹಿರಿಯ ಹಾಗೂ ಕಿರಿಯ ಅಧಿಕಾರಿಗಳು ಮತ್ತು ಸಿಬ್ಬಂದಿ ಕೆ.ಎಂ.ಮುನಿಗೋಪಾಲ್ ರಾಜು ಅವರನ್ನು ಆತ್ಮೀಯವಾಗಿ ಅಭಿನಂದಿಸಿ ಪ್ರೀತಿಯ ವಿದಾಯ ಹೇಳಿದರು. ಈ ವೇಳೆ ಮಾತನಾಡಿದ ಹಲವು ಅಧಿಕಾರಿಗಳು, ಕೆ.ಎಂ ಮುನಿಗೋಪಾಲ್ ರಾಜು ಅವರ ನಾಯಕತ್ವ, ಕಾರ್ಯವೈಖರಿ ಮತ್ತು ಸ್ನೇಹಪರ ವ್ಯಕ್ತಿತ್ವವನ್ನು ಸ್ಮರಿಸಿ, ಅವರ ನಿವೃತ್ತಿ ಜೀವನ ಸುಖಕರವಾಗಿರಲಿ ಎಂದು ಹಾರೈಸಿದರು.

ನಂತರ ಶಾಸಕ ಹಾಗೂ ಸೆಸ್ಕ್ ಅಧ್ಯಕ್ಷ ಎ.ಬಿ.ರಮೇಶ್ ಬಂಡಿಸಿದ್ದೇಗೌಡ ಮಾತನಾಡಿ, ಕೆ.ಎಂ ಮುನಿಗೋಪಾಲ್ ರಾಜು ಅವರು ಬಂಡೆಯಂತಹ ವ್ಯಕ್ತಿತ್ವ ಹೊಂದಿದ್ದು, ಕೆಲಸದ ವಿಚಾರದಲ್ಲಿ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು, ಯಾರನ್ನೂ ನೋಯಿಸದೆ ಮತ್ತು ಅಗೌರವದಿಂದ ಕಾಣದೆ, ಕಾರ್ಯನಿರ್ವಹಿಸುವ ಗುಣ ಹೊಂದಿದ್ದರು. ಯಾವುದೇ ಯೋಜನೆಗಳ ಅನುಷ್ಠಾನ ಮತ್ತು ನಿರ್ಧಾರಗಳಲ್ಲಿ ದೃಢ ನಿಲುವು ತಾಳುತ್ತಿದ್ದ ಅವರು, ಜವಾಬ್ದಾರಿಯುತ ವ್ಯಕ್ತಿಯಾಗಿ ಮಾರ್ಗದರ್ಶನ ನೀಡಿದವರಾಗಿದ್ದಾರೆ. ಅವರ ನಿವೃತ್ತಿ ಜೀವನ ಸುಖಕರವಾಗಿರಲಿ ಎಂದು ಹಾರೈಸಿದರು.

ಕಾರ್ಯಕ್ರಮದಲ್ಲಿ ತಾಂತ್ರಿಕ ನಿರ್ದೇಶಕ ಡಿ.ಜೆ.ದಿವಾಕರ್, ಪ್ರಮುಖ ಅಧಿಕಾರಿಗಳಾದ ಎಲ್.ಲೋಕೇಶ್, ಜಿ.ರೇಣುಕಾ, ಶರಣಮ್ಮ ಜಂಗಿನ್, ಲಿಂಗರಾಜಮ್ಮ, ಬಿ.ಆರ್.ರೂಪ, ಸುನೀಲ್ ಕುಮಾರ್, ಸೋಮಶೇಖರ್ ಮತ್ತಿತರರು ಇದ್ದರು.



ಕಿರುಸುದ್ದಿ

ರಸ್ತೆ ಕಾಮಗಾರಿಗೆ ಚಾಲನೆ

ಕೊಳ್ಳೇಗಾಲ: ತಾಲೂಕಿನ ಮುಳ್ಳೂರು ಗ್ರಾಮದಲ್ಲಿ ಮಂಗಳವಾರ 50 ಲಕ್ಷ ರೂ.ವೆಚ್ಚದಲ್ಲಿ ರಸ್ತೆ ಕಾಮಗಾರಿಯನ್ನು ಶಾಸಕ ಎ.ಆರ್.ಕೃಷ್ಣಮೂರ್ತಿ ಅವರು ಚಾಲನೆ ನೀಡಿದರು. ಬಳಿಕ ಮಾತನಾಡಿದ ಶಾಸಕರು, ಎಲ್ಲಾ ಧರ್ಮದ, ಎಲ್ಲಾ ವರ್ಗದ ಜನರನ್ನು ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ನಾನು ಕಂಕಣಬದ್ಧನಾಗಿದ್ದೇನೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ತೋಟೇಶ್, ಮಾಜಿ ಅಧ್ಯಕ್ಷರು ಕಮಲಮ್ಮ, ಸಿದ್ದಶೆಟ್ಟಿ, ಮಾಜಿ ಉಪಾಧ್ಯಕ್ಷ ದೊರೆರಾಜು, ಮಹದೇವಮ್ಮ, ಜಿ.ಪಂ ಮಾಜಿ ಸದಸ್ಯರು ಕಮಲ್, ಪಿಎಸಿಸಿಎಸ್ ನಿರ್ದೇಶಕ ಪುಟ್ಟಸ್ವಾಮಿ, ಮುಳ್ಳೂರು ಮಂಜು, ಮುಖಂಡ ಚೇತನ್, ಕೆ.ಆರ್.ಡಿ.ಐ.ಎಲ್ ಎಇಇ ಚಿಕ್ಕಲಿಂಗಯ್ಯ, ಗುತ್ತಿಗೆದಾರ ವಿವೇಕ್ ಹಾಗೂ ಇತರರು ಇದ್ದರು.

ರಸ್ತೆ ಅಪಘಾತ: ಹಸು ಸಾವು, ಪ್ರಯಾಣಿಕರಿಗೆ ಗಾಯ

ಚಾಮರಾಜನಗರ: ನಗರದ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು ಸಮೀಪ ಟೆಂಪೋಗೆ ಅಡ್ಡಲಾಗಿ ಬಂದ ಹಸುವಿಗೆ ಡಿಕ್ಕಿ ಹೊಡೆದ ಪರಿಣಾಮ ಹಸು ಸ್ಥಳದಲ್ಲೇ ಮೃತಪಟ್ಟಿದ್ದು, ಚಾಲಕನ ನಿಯಂತ್ರಣ ತಪ್ಪಿ ಟೆಂಪೋ ಲಗ್ಗೇಜ್ ಆಟೋಗೆ ಗುದ್ದಿದ ಪರಿಣಾಮ ಟೆಂಪೋದಲ್ಲಿದ್ದ ಪ್ರಯಾಣಿಕರು ಗಾಯಗೊಂಡಿರುವ ಘಟನೆ ನಡೆದಿದೆ. ನಗರದ ನಂಜನಗೂಡು ರಸ್ತೆಯಿಂದ ಚಾ.ನಗರದ ಕಡೆಗೆ ಬರುತ್ತಿದ್ದ ಟೆಂಪೋಗೆ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನ ಬಳಿ ಹಸುವೊಂದು ಅಡ್ಡ ಬಂದಿದೆ ಎನ್ನಲಾಗಿದೆ. ಈ ವೇಳೆ ನಿಯಂತ್ರಣ ತಪ್ಪಿದ ಟೆಂಪೋ ಹಸುವಿಗೆ ಡಿಕ್ಕಿ ಹೊಡೆದು ಬಳಿಕ ಆಟೋಗೆ ಗುದ್ದಿ ನಂತರ ರಸ್ತೆ ಬದಿಯಲ್ಲಿದ್ದ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದಿದೆ. ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯವಾಗಿಲ್ಲ. ಘಟನಾ ಸ್ಥಳಕ್ಕೆ ಸಂಚಾರ ಠಾಣೆಯ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಗಾಯಗೊಂಡಿದ್ದ ಆಟೋ ಚಾಲಕ ಹಾಗೂ ಪ್ರಯಾಣಿಕರನ್ನು ಸಿಮ್ಸ್ ಆಸ್ಪತ್ರೆಗೆ ದಾಖಲಿಸಿದ್ದಾರೆ. ವಾಹನಗಳನ್ನು ವಶಕ್ಕೆ ಪಡೆದು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಜೂಜು ಅಡ್ಡೆ ಮೇಲೆ ದಾಳಿ: ಏಳು ಮಂದಿ ಬಂಧನ

ಚಾಮರಾಜನಗರ: ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಜೂಜಾಟ ಅಡ್ಡೆ ಮೇಲೆ ಪೊಲೀಸರು ದಾಳಿ ನಡೆಸಿ 7 ಮಂದಿಯನ್ನು ಬಂಧಿಸಿದ್ದು ಪಣಕ್ಕಿಟ್ಟಿದ್ದ ಹಣವನ್ನು ವಶಪಡಿಸಿಕೊಂಡಿದ್ದಾರೆ. ತೊಡಗಿದ್ದವರ ಮೇಲೆ ಪಿಎಸ್ಐ ಮಹೇಶ್ ನೇತೃತ್ವದಲ್ಲಿ ದಾಳಿ ನಡೆಸಿ ನಾಲ್ವರನ್ನು ಬಂಧಿಸಿದ್ದು 4,700 ರೂ.ಗಳನ್ನು ವಶಪಡಿಸಿಕೊಳ್ಳಲಾಗಿದೆ. ತಾಲೂಕಿನ ಸರಗೂರುಮೋಳೆ ಗ್ರಾಮದಲ್ಲಿ ಸ್ಥಳದಲ್ಲಿ ಜೂಜಾಟ ಆಡುತ್ತಿರುವ ಕುರಿತು ಖಚಿತ ಶೀರೆಗೆ ಪೂರ್ವ ಪೊಲೀಸ್ ಠಾಣೆಯ ಪಿಎಸ್ಐ ತೃತ್ವದಲ್ಲಿ ದಾಳಿ ನಡೆಸಿ ಮೂವರನ್ನು ಬಂಧಿಸಿದ್ದು 2.200 ರೂ.ಗಳನ್ನು ವಶಪಡಿಸಿಕೊಂಡು ಪ್ರಕರಣ ತಾಲೂಕಿನ ತೆರಕಣಾಂಬಿ ಪೊಲೀಸ್ ಠಾಣಾ ರಾಮಯ್ಯನಪರ ಗ್ರಾಮದಲ್ಲಿ ನಡೆದಿದೆ.

ಅಕ್ರಮವಾಗಿ ಮದ್ಯ ಸಾಗಿಸುತ್ತಿದ್ದ ವ್ಯಕ್ತಿ ಬಂಧನ: ಚಾಮರಾಜನಗರ ತಾಲೂಕಿನ ಉಡಿಗಾಲ ಗ್ರಾಮದ ಬಸ್ ನಿಲ್ದಾಣದ ಬಳಿ ಅಕ್ರಮವಾಗಿ ಮದ್ಯ ಸಾಗಣೆ ಮಾಡುತ್ತಿದ್ದ ವ್ಯಕ್ತಿಯನ್ನು ಗ್ರಾಮಾಂತರ ಠಾಣೆಯ ಪೊಲೀಸರು ಬಂಧಿಸಿ, ಆತನಿಂದ 7,200 ರೂ. ಮೌಲ್ಯದ 144 ಮದ್ಯದ ಪೌಚ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಚಾಮರಾಜನಗರ ತಾಲೂಕಿನ ಬೊಮ್ಮಲಾಪುರ ಗ್ರಾಮದ ಸಿದ್ದರಾಜು ಬಂಧಿತ ಆರೋಪಿ. ಈ ಸಂಬಂಧ ಚಾಮರಾಜನಗರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಈಜಲು ಹೋದ ವ್ಯಕ್ತಿ ಸಾವು

ಹನೂರು: ತಾಲೂಕಿನ ಹೊಗೇನಕಲ್ ಫಾಲ್ಸ್‌ನಲ್ಲಿ ನೀರಿನಲ್ಲಿ ಈಜಾಡುತ್ತಿದ್ದ ವೇಳೆ ವ್ಯಕ್ತಿಯೋರ್ವ ನೀರಿನ ಸುಳಿಗೆ ಸಿಲುಕಿ ಮೃತಪಟ್ಟಿರುವ ಘಟನೆ ಹೊಗೇನಕಲ್ ಜಲಪಾತದಲ್ಲಿ ಜರುಗಿದೆ. ಯಳಂದೂರು ತಾಲೂಕಿನ ಗುಂಬಳ್ಳಿ ಗ್ರಾಮದ ನಿವಾಸಿ, ಮಡಿಲು ಹೋಟೆಲ್ ಮಾಲೀಕ ಲಿಂಗರಾಜು (42) ಮೃತಪಟ್ಟ ವ್ಯಕ್ತಿಯಾಗಿದ್ದಾರೆ.



ಘಟನೆಯ ವಿವರ: ಗುಂಬಳ್ಳಿ ಗ್ರಾಮದ ನಿವಾಸಿ ಲಿಂಗರಾಜು, ಪತ್ನಿ ಶೃತಿ ಮಕ್ಕಳು ಹಾಗೂ ಸ್ನೇಹಿತರು ಮಲೆ ಮಹದೇಶ್ವರ ಬೆಟ್ಟಕ್ಕೆ ತೆರಳಿ ಪೂಜೆ ಸಲ್ಲಿಸಿ ಹೊಗೇನಕಲ್ ಫಾಲ್ಸ್ ಗೆ ಹೋಗಿದ್ದಾರೆ. ಈ ವೇಳೆ ನೀರಿನಲ್ಲಿ ಕುಟುಂಬಸ್ಥರು ಹಾಗೂ ಸ್ನೇಹಿತರು ನೀರಿನಲ್ಲಿ ಈಜಾಡುತ್ತಿದ್ದ ವೇಳೆ ನೀರಿನ ರಭಸಕ್ಕೆ ಲಿಂಗರಾಜು ಸುಳಿಗೆ ಸಿಲುಕಿ ಮೃತಪಟ್ಟಿದ್ದಾರೆ. ಜೊತೆಯಲ್ಲಿದ್ದ ಕುಟುಂಬಸ್ಥರನ್ನು ನುರಿತ ಈಜುಗಾರರು ರಕ್ಷಣೆ ಮಾಡಿದ್ದಾರೆ.

ನೀರಿನ ರಭಸಕ್ಕೆ ಸುಳಿಗೆ ಸಿಲುಕಿ ಲಿಂಗರಾಜುರವರ ಶವ ನೀರಿನಲ್ಲಿ ಮುಳುಗಿದೆ ಎನ್ನಲಾಗಿದೆ. ಘಟನಾ ಸ್ಥಳಕ್ಕೆ ಮಲೆ ಮಹದೇಶ್ವರ ಬೆಟ್ಟ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸುತ್ತಿದ್ದಾರೆ.



ಕೊಳ್ಳೇಗಾಲ: ತಾಲೂಕಿನ ಮುಳ್ಳೂರು ಗ್ರಾಮದಲ್ಲಿ ಮಂಗಳವಾರ 50 ಲಕ್ಷ ರೂ. ವೆಚ್ಚದ ರಸ್ತೆ ಕಾಮಗಾರಿಯನ್ನು ಶಾಸಕ ಎ.ಆರ್. ಕೃಷ್ಣಮೂರ್ತಿ ಅವರು ಚಾಲನೆ ನೀಡಿದರು.

ಸಾಧಕ ಮಹಿಳೆಯರಿಗೆ ಅಭಿನಂದನೆ

ಕೊಳ್ಳೇಗಾಲ: ತಾಲೂಕು ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ವತಿಯಿಂದ ಮಂಗಳವಾರ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ನಡೆಯಿತು.

ಪಟ್ಟಣದ ವೆಂಕಟೇಶ್ವರ ಮಹಲ್ ನಲ್ಲಿ ಇಂದು ನಡೆದ ಕಾರ್ಯಕ್ರಮವನ್ನು ಕ್ಷೇತ್ರದ ಶಾಸಕ ಎ.ಆರ್.ಕೃಷ್ಣಮೂರ್ತಿ ಅವರು ಉದ್ಘಾಟನೆ ಮಾಡಿದರು.

ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿರುವ ಮಹಿಳೆಯರಿಗೆ ಹಾಗೂ ಗ್ಯಾರಂಟಿ ಅನುಷ್ಠಾನ ಸಮಿತಿ ಸನ್ಮಾನಿಸಿ ಅಭಿನಂದಿಸಿ ಗೌರವಿಸಿದರು.

ಈ ಕಾರ್ಯಕ್ರಮದಲ್ಲಿ ತಾಲೂಕು ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ರಾಜೇಂದ್ರ, ಜಿಲ್ಲಾ ಉಪಾಧ್ಯಕ್ಷ ಬಸ್ತೀಪುರ ರವಿ, ಸದಸ್ಯರು ಗ್ರೇಡ್ 2 ತಹಶಿಲ್ದಾರ್ ಕುಮಾರ್, ತಾ.ಪಂ ಸಹಾಯಕ ನಿರ್ದೇಶಕರು ಗೋಪಾಲಕೃಷ್ಣ, ಕ್ಷೇತ್ರಶಿಕ್ಷಣಾಧಿಕಾರಿ ಮಂಜುಳಾ, ಸಿಡಿಪಿಒ ಅಂಬಿಕಾ, ಉಪವಿಭಾಗ ಆಸ್ಪತ್ರೆಯ ಆಡಳಿತಾಧಿಕಾರಿ ಡಾ.ಲೋಕೇಶ್ವರಿ, ಆಹಾರ ಇಲಾಖೆಯ ಶಿರಸ್ತೇದಾರ್ ವಿಶ್ವನಾಥ್, ಫುಡ್ ಇನ್‌ಸ್ಪೆಕ್ಟರ್ ಪ್ರಸಾದ್, ಸೆಸ್ಕ್ ಎಇಇ ರಾಜು, ಮುಖಂಡ ತೋಟೇಶ್ ಹಾಗೂ ಇತರರು ಇದ್ದರು.



ಕೊಳ್ಳೇಗಾಲದಲ್ಲಿ ತಾಲೂಕು ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ವತಿಯಿಂದ ಮಂಗಳವಾರ ಏರ್ಪಡಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಹಿಳೆಯರನ್ನು ಅಭಿನಂದಿಸಲಾಯಿತು.

ಶಾಸಕರಿಂದ ಕಿರಸಗೂರು ಮಾರ್ಗ ರಸ್ತೆ ಅಭಿವೃದ್ಧಿಗೆ ಚಾಲನೆ
ಅಭಿವೃದ್ಧಿಗೆ ಭಾರೀ ಅನುದಾನ

ಚಾಮರಾಜನಗರ: ಕ್ಷೇತ್ರ ವ್ಯಾಪ್ತಿಗಳ ಹಳ್ಳಿಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳ ಅಭಿವೃದ್ಧಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೆಚ್ಚಿನ ಅನುದಾನ ನೀಡಿದ್ದು, ಮಾದಪುರದಿಂದ ಕಿರಸೂರಿಗೆ ಹೋಗುವ ರಸ್ತೆಗೆ 1.25 ಕೋಟಿ ರೂ. ಮಂಜೂರಾಗಿದೆ ಎಂದು ಎಂಎಸ್ಐಎಲ್ ಅಧ್ಯಕ್ಷರಾದ ಶಾಸಕ ಸಿ. ಪುಟ್ಟರಂಗಶೆಟ್ಟಿ ತಿಳಿಸಿದರು.

ತಾಲೂಕಿನ ರಾಷ್ಟ್ರೀಯ ಹೆದ್ದಾರಿ ಮಾದಪುರದಿಂದ ಕಿರಸೂರು ಗ್ರಾಮದವರೆಗೆ ಸುಮಾರು 2 ಕಿ.ಮೀ. ರಸ್ತೆ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿಪೂಜೆ ನೆರವೇರಿಸಿ ಅವರು ಮಾತನಾಡಿದರು.

ನಮ್ಮ ಸರ್ಕಾರ ಅಧಿಕಾರ ಬಂದ ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗ್ಯಾರಂಟಿ ಯೋಜನೆಗಳಿಗೆ ಅನುದಾನವನ್ನು ಹೊಂದಾಣಿಕೆ ಮಾಡುವ ಜೊತೆಗೆ ಕ್ಷೇತ್ರಗಳ ಅಭಿವೃದ್ಧಿಗೂ ಹೆಚ್ಚಿನ ಅನುದಾನ ನೀಡಿದ್ದಾರೆ. ಇದರಿಂದ ಕ್ಷೇತ್ರದ ವ್ಯಾಪ್ತಿಯ ಬಹಳಷ್ಟು ಹಳ್ಳಿಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳು ಅಭಿವೃದ್ಧಿಯಾಗುತ್ತಿದೆ. ಕಾಡಂಚಿನ ಗ್ರಾಮಗಳಿಗೂ ವಿಶೇಷ ಒತ್ತು ನೀಡಲಾಗಿದೆ.

ತಾಲೂಕಿನ ಪುಣಜನೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮುಖ್ಯರಸ್ತೆಯಿಂದ ಕುಳ್ಳೂರು ಗ್ರಾಮದವರೆಗೆ ರಸ್ತೆ ಅಭಿವೃದ್ಧಿಗೆ 75 ಲಕ್ಷ ರೂ. ದೊಡ್ಡಮೂಡಹಳ್ಳಿಯಿಂದ ಚಿಕ್ಕಮೂಡಹಳ್ಳಿ ವರೆಗಿನ ರಸ್ತೆ ಅಭಿವೃದ್ಧುಗೆ 75 ಲಕ್ಷ ರೂ. ಅದೇ ರೀತಿ ಸಂತೇಮರಹಳ್ಳಿ ಮಾರ್ಗದ ಮಾದಾಪುರ ಮುಖ್ಯ ರಸ್ತೆಯಿಂದ ಕಿರಗಸೂರು ಗ್ರಾಮದವರೆಗೆ



» ಕಾಡಂಚಿನ ಗ್ರಾಮಗಳ ಅಭಿವೃದ್ಧಿಗೆ ವಿಶೇಷ ಒತ್ತು

» ಮಾದಪುರದಿಂದ ಕಿರಸೂರಿಗೆ ಹೋಗುವ ರಸ್ತೆಗೆ 1.25 ಕೋಟಿ ರೂ. ಮಂಜೂರು

ಡಾಂಬರೀಕರಣ ಗೊಳಿಸಿ ಅಭಿವೃದ್ಧಿಪಡಿಸುವ ಕಾಮಗಾರಿಗೆ 1.25 ಕೋಟಿ ರೂ. ನೀಡಿದ್ದು, ಕಾಮಗಾರಿ ಗುಣಮಟ್ಟದಿಂದ ಕೂಡಿರಬೇಕು ಎಂದು ಶಾಸಕರು ಗುತ್ತಿಗೆದಾರರಿಗೆ ಸೂಚನೆ ನೀಡಿದರು.

ಕಾಡಂಚಿನ ಗ್ರಾಮಗಳಲ್ಲಿ ಜನರಿಗೆ ಕುಡಿಯುವ ನೀರು, ರಸ್ತೆ, ಚರಂಡಿಯಂತಹ ಮೂಲಭೂತ ಸೌಕರ್ಯ ಕಲ್ಪಿಸಲು ಹೆಚ್ಚಿನ ಒತ್ತು ನೀಡಲಾಗಿದೆ. ಹಾಡಿಗಳ ಕಾಲೋನಿಗಳಲ್ಲಿ ಹೈಮಾಸ್ಟ್ ಲೈಟ್ ಸೇರಿದಂತೆ ಸೋಲಾರ್ ಲೈಟ್‌ಗಳನ್ನು ಕೂಡ ಅಳವಡಿಸಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಕಿರಗಸೂರು ಗ್ರಾಮದ ಎಲ್ಲಾ ಕೋಮಿನ ಯಜಮಾನರುಗಳು, ಮುಖಂಡರುಗಳು, ಮಹಿಳೆಯರು, ಸ್ಥಳೀಯ ಗ್ರಾಮಸ್ಥರು ಹಾಗೂ ಗ್ರಾ.ಪಂ. ಸದಸ್ಯರಾದ ಸೈಯದ್ ನಬ್ಬುಲ್ಲಾ, ಎಂ.ಮೋಹನ್ ಕುಮಾರ್ ಹಾಗೂ ಗ್ರಾಮಸ್ಥರಾದ ಸೈಯದ್ ಅಮೀನ್ ಸಾಹೇಬ್, ಸೈಯದ್ ತೌಸಿಬ್, ಪುಟ್ಟಪ್ಪ, ಕಿರಣ್ ಕುಮಾರ್, ಎಜಾಜ್ ಅಹಮ್ಮದ್, ಉಮಾಪತಿ, ಪಿ.ನಾಗರಾಜಪ್ಪ, ಶಿವಣ್ಣ, ಬಸವಣ್ಣ, ಮಲ್ಲೇಶ, ಮಹೇಶ, ಪಟೇಲ್ ನಾಗರಾಜಪ್ಪ, ಶಫೀಉಲ್ಲಾ, ಮಾದೇಶ, ಪ್ರಶಾಂತ್, ಇಮ್ಮಾನುವೇಲ್, ದೊರೆಸ್ವಾಮಿ, ಮಹದೇವಸ್ವಾಮಿ, ನಾಗೇಶ, ಅಂಕಯ್ಯ, ಅರುಣಪ್ಪ ಅನೇಕು ಇದ್ದರು.

ಏ.21ರಂದು ಅಭಿವೃದ್ಧಿ ಕಾಮಗಾರಿಗೆ ಸಿಎಂ ಚಾಲನೆ



ಗುಂಡ್ಲುಪೇಟೆ: ಏ.21 ರಂದು ತಾಲೂಕಿನಲ್ಲಿ 600 ಕೋಟಿ ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಲಿದ್ದಾರೆ ಎಂದು ಶಾಸಕ ಎಚ್.ಎಂ.ಗಣೇಶ್ ಪ್ರಸಾದ್ ತಿಳಿಸಿದರು.

ಗುಂಡ್ಲುಪೇಟೆ ಪಟ್ಟಣಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಆಗಮಿಸುವ ಹಿನ್ನೆಲೆಯಲ್ಲಿ ಇಂದು ಅಧಿಕಾರಿಗಳೊಂದಿಗೆ ಸಭೆ ನಡೆಸಿ ಮಾತನಾಡಿದ ಅವರು, 475 ಕೋಟಿ ವೆಚ್ಚದಲ್ಲಿ ತಾಲ್ಲೂಕಿನ ಕೆರೆಗಳಿಗೆ ನೀರು ತುಂಬಿಸುವುದು, ಹಾಗೂ ಬೇಗೂರು ಎಪಿಎಂಸಿ ಹತ್ತಿ ಮಾರುಕಟ್ಟೆ ಮತ್ತು ಬೊಮ್ಮನಹಳ್ಳಿ ಅಂಬೇಡ್ಕರ್ ವಸತಿ ಶಾಲೆ, ಪಟ್ಟಣದಲ್ಲಿ ಬಾಲಕರ ಮೆಟ್ರಿಕ್ ವಿದ್ಯಾರ್ಥಿ ನಿಲಯ ಹಾಗೂ ತೆರಕಣಾಂಬಿ ಆಸ್ಪತ್ರೆ ಉದ್ಘಾಟನೆ ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗೆ ಸಿಎಂ ಚಾಲನೆ ನೀಡಲಿದ್ದಾರೆ ಎಂದರು.ಮೂರು

ವರ್ಷಗಳ ನಂತರ ಮುಖ್ಯ ಮಂತ್ರಿಗಳಾದ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಸೇರಿದಂತೆ ಸಚಿವರು ಗುಂಡ್ಲುಪೇಟೆಗೆ ಆಗಮಿಸಲಿದ್ದು ಪಟ್ಟಣದ ಡಿ.ದೇವರಾಜ ಅರಸು ಕ್ರೀಡಾಂಗಣದಲ್ಲಿ ವೇದಿಕೆ

ಕಾರ್ಯಕ್ರಮ ನಡೆಯಲಿದ್ದು ದೊಡ್ಡಹುಂಡಿ ಭೋಗಪ್ಪ ಪ್ರೌಢಶಾಲೆಯ ಆವರಣದಲ್ಲಿ ವಾಹನ ನಿಲುಗಡೆ ವ್ಯವಸ್ಥೆ ಮಾಡುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಪುರಸಭೆಯವರು ಸ್ವಚ್ಛತೆಗೆ ಒತ್ತು ನೀಡುವ ಮೂಲಕ ರಸ್ತೆಯಲ್ಲಿನ ಧೂಳು ತೆಗೆಸಬೇಕು. ಬೇಕು. ಹೆಲಿಪ್ಯಾಡ್ ನಿರ್ಮಾಣ ಮಾಡುವ ನಿಟ್ಟಿನಲ್ಲಿ ಸಂಬಂಧಪಟ್ಟವರು ಕ್ರಮವಹಿಸಬೇಕು. ಜೊತೆಗೆ ಈಗಾಗಲೇ ವಾಲ್ಮೀಕಿ ಭವನ ಕಾಮಗಾರಿ ಪೂರ್ಣಗೊಂಡಿದ್ದು ಉದ್ಘಾಟನೆಗೆ ಅಗತ್ಯ ಸಿದ್ಧತೆ ಕೈಗೊಳ್ಳಬೇಕು ಎಂದು ಹೇಳಿದರು. ಮುಂದಿನ ದಿನಗಳಲ್ಲಿ ಜಿಲ್ಲಾಧಿಕಾರಿಗಳ ಜೊತೆ ಸಭೆ ನಡೆಸಿ ಅಂತಿಮ ಸಿದ್ಧತೆ ಬಗ್ಗೆ ಚರ್ಚೆ ನಡೆಸಲಾಗುವುದು ಎಂದು ತಿಳಿಸಿದರು.

ಒತ್ತಡಮುಕ್ತವಾಗಿ ಪರೀಕ್ಷೆ ಬರೆಯಿರಿ

ಚಾಮರಾಜನಗರ: ವಿದ್ಯಾರ್ಥಿಗಳು ಒತ್ತಡ ಮುಕ್ತರಾಗಿ ಪರೀಕ್ಷೆ ಎದುರಿಸಲು ಮುಂದಾಗಬೇಕು ಎಂದು ಎಲ್ಲರೊಳಗೊಂದಾಗು ಮಂಕುತಿಮ್ಮ ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ ಎಂ. ವಿನಯ್ ಕುಮಾರ್ ಹೇಳಿದರು.

ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ ಜನಪರ ಸಾಹಿತ್ಯ ಪರಿ?ತ್ತು, ಕರ್ನಾಟಕ ರಾಜ್ಯ ಕಾಲೇಜು ಶಿಕ್ಷಣ ಇಲಾಖೆ, ಚಾಮರಾಜನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು , ಬೆಂಗಳೂರು ಇನ್ಸೈಟ್ ಐಎಸ್ ತರಬೇತಿ ಕೇಂದ್ರ , ಮಂಡ್ಯದ ಎಲ್ಲರೊಳಗೊಂದಾಗು ಮಂಕುತಿಮ್ಮ ಟ್ರಸ್ಟ್ ಮಂಡ್ಯ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ವಿದ್ಯಾರ್ಥಿ ಮತ್ತು ಸ್ಪರ್ಧಾ ಪರೀಕ್ಷೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮನುಷ್ಯನಲ್ಲಿ ಸುಪ್ತ ಮನಸ್ಸು ಮತ್ತು ಜಾಗೃತ ಮನಸ್ಸುಗಳಿದ್ದು, ಸುಪ್ತ ಮನಸ್ಸನ್ನು ಜಾಗೃತ ಮನಸ್ಸು ಜಾಗೃತಗೊಳಿಸಿ ಗುರಿ ತಲುಪಿಸುತ್ತದೆ. ಗುರಿ ತಲುಪುವುದರೊಂದಿಗೆ ನಾವು ಸಮಾಜಕ್ಕೆ ಏನಾದರು ಕೊಡುಗೆ ನೀಡಬೇಕು. ಈ ನಿಟ್ಟಿನಲ್ಲಿ ಸಕರಾತ್ಮಕ ಚಿಂತನೆಯನ್ನು ಮಾಡಬೇಕು ಎಂದರು.

ಬೆಂಗಳೂರಿನ ಇನ್ಸೈಟ್ ಐಎಎಸ್ ತರಬೇತಿ ಸಂಸ್ಥೆಯ ಸಂಪನ್ಮೂಲ ವ್ಯಕ್ತಿ ಶಮಂತ್ ಕುಮಾರ್ ಮಾತನಾಡಿ, ವಿದ್ಯಾರ್ಥಿಗಳಿಗೆ ಕಲಿಯುವ ಕುತೂಹಲವಿದ್ದರೆ ಸ್ಪರ್ಧಾತ್ಮಕ ಪರೀಕ್ಷೆಯನ್ನು ಸುಲಭವಾಗಿ ಎದುರಿಸಬೇಕು. ವಿದ್ಯಾರ್ಥಿಗಳು ಗುರುಗಳಿಗೆ ಗೌರವ ನೀಡುವ ಮೂಲಕ ಅವರ ಮಾರ್ಗದರ್ಶನವನ್ನು ಸರಿಯಾಗಿ ಬಳಸಿಕೊಂಡರೆ ಯಶಸ್ಸು ಗಳಿಸಲು ಸಾಧ್ಯ ಎಂದರು.

ಬೆಂಗಳೂರಿನ ಇನ್‌ಸೈಟ್ ಐಎಎಸ್ ತರಬೇತಿ ಸಂಸ್ಥೆಯ ಸಂಪನ್ಮೂಲ ವ್ಯಕ್ತಿ ಪ್ರದೀಪ್ ಮಾತನಾಡಿ, ವಿದ್ಯಾರ್ಥಿಗಳು ದೊಡ್ಡ ದೊಡ್ಡ ಕನಸು ಕಾಣುವ ಮೂಲಕ ಸಿಕ್ಕ ಸಮಯವನ್ನು ಸೂಕ್ತ ರೀತಿಯಲ್ಲಿ ಬಳಸಿಕೊಂಡರೆ ಹಾಕಿಕೊಂಡ ಗುರಿ ಮುಟ್ಟಲು ಸಾಧ್ಯ ಎಂದು ತಿಳಿಸಿದರು.

ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲೆ ಡಾ.ಆರ್ ಅಶ್ವಿನಿ ಮಾತನಾಡಿ, ಸ್ಪರ್ಧಾತ್ಮಕ ಪರೀಕ್ಷೆಗೆ ಬೇಕಾದ ತಯಾರಿ ಬಗ್ಗೆ ಪ್ರತಿಷ್ಠಿತ ಸಂಸ್ಥೆಯ ಸಂಪನ್ಮೂಲ ವ್ಯಕ್ತಿಗಳು, ಸಾಹಿತಿಗಳು, ಹಿರಿಯ ಪತ್ರಕರ್ತರು ನಮ್ಮ ಕಾಲೇಜಿಗೆ ಆಗಮಿಸಿ ಸಾಕಷ್ಟು ವಿಚಾರವನ್ನು ತಿಳಿಸಿಕೊಟ್ಟಿದ್ದಾರೆ. ಇಂತಹ ಅವಕಾಶವನ್ನು ಸದ್ಬಳಕೆ ಮಾಡಿಕೊಳ್ಳಿ ಎಂದು ತಿಳಿಸಿದರು

ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಜನಪರ ಸಾಹಿತ್ಯ ಪರಿಷತ್ತು ರಾಜ್ಯಾಧ್ಯಕ್ಷ ಡಾ.ಎಂ.ಮಹೇಶ್, ಡಾ. ಪ್ರೇಮ, ಕಾಲೇಜು ಉದ್ಯೋಗ ಮಾಹಿತಿ ಕೋಶ ಸಂಚಾಲಕ ಬಿ.ಎನ್. ಲೋಕೇಶ್, ನಾರಾಯಣ ಇದ್ದರು.



ಚಿಕ್ಕರಂಗಶೆಟ್ಟಿ ಬಳಿ ಕಾಡಾನೆ ದಾಳಿ: ಆಟೋ ಜಖಂ

ಹನೂರು: ತಾಲೂಕಿನ ಮಂಚಾಪುರ ಗ್ರಾಮದಿಂದ ಒಡೆಯರ ಪಾಳ್ಯ ಗ್ರಾಮಕ್ಕೆ ಗೃಹ ಬಳಕೆಯ ಪ್ಲಾಸ್ಟಿಕ್ ವಸ್ತುಗಳನ್ನು ವ್ಯಾಪಾರ ಮಾಡಲು ತೆರಳುತ್ತಿದ್ದ ಆಟೋದ ಮೇಲೆ ಕಾಡಾನೆ ದಾಳಿ ಮಾಡಿದ ಪರಿಣಾಮ ಆಟೋ ಜಖಂಗೊಂಡಿರುವ ಘಟನೆ ಪಿ.ಜಿ.ಪಾಳ್ಯ ಸಮೀಪದ ಚಿಕ್ಕರಂಗಶೆಟ್ಟಿ ಗ್ರಾಮದ ಬಳಿ ಜರುಗಿದೆ.

ರಸ್ತೆ ಸಮೀಪದಲ್ಲಿ ಆನೆ ನಿಂತಿದ್ದರಿಂದ ಆಟೋ ಚಾಲಕ ನಿಧಾನವಾಗಿ ತೆರಳಿದ್ದಾನೆ ಆದರೆ ಆನೆ ಏಕಾಏಕಿ ದಾಳಿ ಮಾಡಿದ ಪರಿಣಾಮ ರಸ್ತೆ ಬದಿಯ ಗುಂಡಿಗೆ ಆಟೋ ಪಲ್ಟಿ ಹೊಡೆದಿದೆ. ಅದೃಷ್ಟವಶಾತ್ ಚಾಲಕನಿಗೆ ಯಾವುದೇ ಅನಾಹುತ ಸಂಭವಿಸಿಲ್ಲ. ಘಟನೆ ಬಳಿಕ ಆನೆ ಅರಣ್ಯದತ್ತ ಹೋಗಿದೆ.

ವಿದ್ಯುತ್ ಕಂಬ ಮುರಿತ: ಒಂಟಿ ಸಲಗ ಆಟೋ ಮೇಲೆ ದಾಳಿ ಮಾಡಿದ ಪರಿಣಾಮ ಚಾಲಕ ಗಾಬರಿಗೊಂಡು ವಾಹನ ಚಾಲನೆ ಮಾಡಿದ್ದಾರೆ.



ಈ ವೇಳೆ ಚಾಲಕನ ನಿಯಂತ್ರಣ ತಪ್ಪಿ ಆಟೋ ರಸ್ತೆ ಬದಿಯ ಗುಂಡಿಗೆ ಬಿದ್ದು ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದಿದೆ. ಪರಿಣಾಮ ವಿದ್ಯುತ್ ಕಂಬ ಮುರಿದಿದೆ. ಇದೇ ಮಾರ್ಗದಲ್ಲಿ ಆಗಮಿಸುತ್ತಿದ್ದ ಸಾರ್ವಜನಿಕರು ಹಾಗೂ ಚಿಕ್ಕರಂಗಶೆಟ್ಟಿ ದೊಡ್ಡಿ ಗ್ರಾಮಸ್ಥರ ಸಹಕಾರದಿಂದ ಟ್ರಾಕ್ಟರ್ ಮೂಲಕ ಗುಂಡಿಗೆ ಬಿದ್ದಿದ್ದ ಟ್ರಾಕ್ಟರನ್ನು ಮೇಲೆತ್ತಿದ್ದಾರೆ. ವ್ಯಾಪಾರಕ್ಕಿಟ್ಟಿದ್ದ ಬಿಂದಿಗೆ ಪ್ಲಾಸ್ಟಿಕ್ ಸಾಮಗ್ರಿಗಳು ಹಾಗೂ ಆಟೋವಿನ ಬಲ ಭಾಗ ಜಖಂಗೊಂಡಿದೆ.

ಬಿಆರ್‌ಟಿ ವಲಯ ಹಾಗೂ ಮಲೆ ಮಹದೇಶ್ವರ ವಲಯ ವ್ಯಾಪ್ತಿಯಲ್ಲಿ ಒಂಟಿ ಸಲಗವೊಂದು ಪ್ರತಿನಿತ್ಯ ರಸ್ತೆ ಮಧ್ಯದಲ್ಲಿಯೇ ಅಡ್ಡಾಡುತ್ತಿದೆ. ರಾತ್ರಿ ವೇಳೆ ರೈತರ ಜಮೀನುಗಳಿಗೆ ಲಗ್ಗೆ ಇಟ್ಟು ಬೆಳೆ ಹಾಗೂ ಕೃಷಿ ಪರಕರಗಳನ್ನು ನಾಶಪಡಿಸುತ್ತಿದೆ. ಇದೇ ಚಿಕ್ಕರಂಗಶೆಟ್ಟಿ ದೊಡ್ಡಿ ಬಸ್ ನಿಲ್ದಾಣದ ಬಳಿ ಇರುವ ನೀರಿನ ತೊಟ್ಟಿಯಲ್ಲಿ ಆನೆ ನೀರು ಕುಡಿಯುತ್ತಿರುವ ಸಂಬಂಧ ಪತ್ರಿಕೆ ಸೋಮವಾರ ಸುದ್ದಿ ಪ್ರಕಟಿಸಿ ಸಾರ್ವಜನಿಕರು ಜಾಗೂರುಕತೆಯಿಂದ ತೆರಳುವಂತೆ ವರದಿ ಮಾಡಲಾಗಿತ್ತು.

ಸಾರ್ವಜನಿಕರ ಆಕ್ರೋಶ: ಅರಣ್ಯದ ಮಾರ್ಗ ಮಧ್ಯದಲ್ಲಿ ಕಾಡು ಪ್ರಾಣಿಗಳಿಗೆ ವಾಹನ ಡಿಕ್ಕಿಯಾಗಿ ಮೃತಪಟ್ಟರೆ, ಕ್ಷಣಾರ್ಧದಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳು ಭೇಟಿ ನೀಡಿ ವಾಹನ ಸವಾರರ ಮೇಲೆ ಪ್ರಕರಣ ದಾಖಲಾಗಿದೆ.

ಸೆಸ್ಕ್ ಎಇಇ ರಾಜುಗೆ ಆತ್ಮೀಯ ಬೀಳ್ಕೊಡುಗೆ

ಕೊಳ್ಳೇಗಾಲ: ಮಂಗಳವಾರ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ಉಪವಿಭಾಗ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಯಾಗಿ ಸೇವೆ ಸಲ್ಲಿಸಿ ವಯೋನಿವೃತ್ತಿ ಹೊಂದಿದ್ದ ಎಂ.ರಾಜು ಅವರು ಸನ್ಮಾನಿಸಿ ಬೀಳ್ಕೊಟ್ಟರು.

ಪಟ್ಟಣದ ಸೆಸ್ಕ್ ಉಪವಿಭಾಗ ಕಚೇರಿಯಲ್ಲಿ ಎಇಇ ರಾಜುರವರಿಗೆ ಇಲಾಖಾ ವತಿಯಿಂದ ಹಾರ, ಶಾಲು ಹಾಕಿ ಉಡುಗೊರೆ ನೀಡುವ ಸನ್ಮಾನಿಸಿ ಬೀಳ್ಕೊಟ್ಟರು, ಬಳಿಕ ಸಿಬ್ಬಂದಿಗಳು, ವಿವಿಧ ಸಂಘಸಂಸ್ಥೆಗಳ ಪದಾಧಿಕಾರಿಗಳು ಹಾಗೂ ರೈತ ಮುಖಂಡರು ಸನ್ಮಾನಿಸಿ ಅಭಿನಂದಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ್ದ ಸೆಸ್ಕ್ ಕಾರ್ಯಪಾಲಕ ಇಂಜಿನಿಯರ್ ತಬ್ಬಸ್ಸುಮ್ ಅಪ್ಸಾ



ಅವರು, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರಾಜು ಅವರ ಜೊತೆಗೆ ಕಳೆದ ಒಂದೂವರೆ ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ ಅವರಲ್ಲಿರುವ ತಾಳ್ಮೆ ಮತ್ತು ಸಹನೆ ನಿಜವಾಗಿಯೂ ಮೆಚ್ಚುವಂತಹದ್ದು ಎಂದರು. ಸನ್ಮಾನ ಸ್ವೀಕರಿಸಿದ ಎಇಇ ಎಂ. ರಾಜು ಅವರು ಮಾತನಾಡಿ, ನನಗೆ ನಿಮ್ಮೆಲ್ಲರ ಈ ಪ್ರೀತಿ ಮತ್ತು ವಿಶ್ವಾಸ ಕಂಡು ಮಾತನಾಡಲೇ ಆಗುತ್ತಿಲ್ಲ ಎಂದು ಭಾವುಕರಾದರು. ಬಡತನದಲ್ಲಿ ಬೆಳೆದ ನಾನು ತಂದೆ ತಾಯಿಗಳ ಹಾದಿಯಲ್ಲಿ ನಡೆದೆ. ಕುಟುಂಬದ ಜೊತೆಗೆ ಕರ್ತವ್ಯದಲ್ಲೂ ಉತ್ತಮವಾಗಿ ಸೇವೆ ಸಲ್ಲಿಸಿದ ತೃಪ್ತಿ ನನಗೆ ಇದೆ ಎಂದರು. ನಿವೃತ್ತಿ ನಂತರವೂ ಇಲಾಖೆಗೆ ಗೌರವ ತರುವ ಕೆಲಸದಲ್ಲಿ ತೊಡಗಿಸಿ ಕೊಳ್ಳುತ್ತೇನೆ ಎಂದರು.

ಯಳಂದೂರು ಸೆಸ್ಕ್ ಎಇಇ ಲಿಂಗರಾಜು, ಹನೂರು ಸೆಸ್ಕ್ ಎಇಇ ರಂಗಸ್ವಾಮಿ, ಸಂತೋಷ್ ಕುಮಾರ್, ಶ್ರೀನಿಧಿ, ಲೆಕ್ಕಾಧಿಕಾರಿ ವಿನೋದ್ ಕುಮಾರ್, ಆಂತರಿಕ ಲೆಕಾಧಿಕಾರಿ ಪ್ರಸನ್ನ, ನೌಕರರ ಸಂಘದ ಅಧ್ಯಕ್ಷ ರೇವಣ್ಣ, ಕಾರ್ಯಕಾರಿ ಸಮಿತಿ ಸದಸ್ಯ ಮಹದೇವಯ್ಯ, ಗುತ್ತಿಗೆದಾರ ಸಂಘದ ಅಧ್ಯಕ್ಷ ನಾಗರಾಜು ಹಾಗೂ ಎಇಇ ರಾಜು ಅವರ ತಂದೆ ಮಾದಯ್ಯ ಇನ್ನಿತರರು ಇದ್ದರು.

ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಶಾಸಕ ಎ.ಆರ್.ಕೃಷ್ಣಮೂರ್ತಿ ಹೇಳಿಕೆ
ಮಹಿಳಾ ಸಬಲೀಕರಣಕ್ಕೆ ಅಂಬೇಡ್ಕರ್ ಕೊಡುಗೆ

ಯಳಂದೂರು: ಶತಮಾನಗಳ ಹಿಂದೆ ಶಿಕ್ಷಣ, ಉದ್ಯೋಗ ಮತ್ತು ಅಧಿಕಾರದಿಂದ ವಂಚಿತರಾಗಿದ್ದ ಮಹಿಳೆಯರು ಇಂದಿನ ದಿನಗಳಲ್ಲಿ ಎಲ್ಲಾ ಕ್ಷೇತ್ರದಲ್ಲಿಯೂ ಮುಂದಿದ್ದಾರೆ ಎಂದರೆ ಅದಕ್ಕೆ ಕಾರಣ ಬಾಬಾಸಾಹೇಬ್ ಅಂಬೇಡ್ಕರ್ ರವರು ಎಂದು ಶಾಸಕ ಎ.ಆರ್.ಕೃಷ್ಣಮೂರ್ತಿ ರವರು ಮೆಚ್ಚುಗೆ ವ್ಯಕ್ತಪಡಿಸಿದರು.

ಪಟ್ಟಣದ ತಾಲೂಕು ಕಚೇರಿ ಆವರಣದಲ್ಲಿ ಯಳಂದೂರು ತಾಲ್ಲೂಕು ಪಂಚಾಯಿತಿ ಹಾಗೂ ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ವತಿಯಿಂದ ಆಯೋಜಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ದೇಶದ ಪ್ರತಿಯೊಬ್ಬ ಮಹಿಳೆಯೂ ಅಂಬೇಡ್ಕರ್ ರವರನ್ನು ಸದಾಕಾಲ ಸ್ಮರಿಸಬೇಕೆಂದು ಕರೆ ನೀಡಿದರು.

ನಿವೃತ್ತ ಪ್ರಾಚಾರ್ಯರಾದ ಬಿ.ಸಿ.ಇಂದಿರಮ್ಮ ಮುಖ್ಯಭಾಷಣಕಾರರಾಗಿ ಮಾತನಾಡಿ, ಭಾರತದ ಮಹಿಳೆಯರು ಪ್ರತಿನಿತ್ಯ ಪೂಜಿಸಬೇಕಾದ ಮಹಾತ್ಮರೆಂದರೆ ಅದು ಅಂಬೇಡ್ಕರ್ ರವರು ಮಾತ್ರ.



ಯಾಕೆಂದರೆ ಮಹಿಳೆಯರಿಗೆ ಶಿಕ್ಷಣ, ಉದ್ಯೋಗ, ಸಮಾನ ಕೆಲಸಕ್ಕೆ ಸಮಾನ ವೇತನ, ವೇತನ ಸಹಿತ ಹೆರಿಗೆ ರಜೆ ಮುಂತಾದ ಮಹಿಳಾ ಪರ ಹಕ್ಕುಗಳನ್ನು ಕಲ್ಪಿಸಿಕೊಟ್ಟದ್ದು ಅಂಬೇಡ್ಕರ್ ರವರ ಸಂವಿಧಾನ ಎಂದು ತಿಳಿಸಿದರು.

ತಾ.ಪಂ. ಆಡಳಿತಾಧಿಕಾರಿ ದೀಪಾ.ವಿ. ಮಾತನಾಡಿ, ಒಬ್ಬ ಯಶಸ್ವಿ ಪುರುಷನ ಹಿಂದೆ ಮಹಿಳೆ ಇರುತ್ತಾಳೆ ಎಂಬ ಮಾತಿನಂತೆ, ಪ್ರಸ್ತುತ ದಿನಗಳಲ್ಲಿ ಮಹಿಳೆಯರ ಯಶಸ್ಸಿನ ಹಿಂದೆಯೂ ಕೂಡ ಪುರುಷರು ಇರುತ್ತಾರೆ. ನಾವು ಎಷ್ಟೇ ಎತ್ತರಕ್ಕೆ ಏರಿದರೂ ಕೂಡ ನಮ್ಮ ಯಶಸ್ಸಿಗೆ ಕಾರಣರಾದ ತಂದೆ, ಸಹೋದರ, ಪತಿಯಂತಹ ಪುರುಷರನ್ನು ಸ್ಮರಿಸಿಕೊಳ್ಳಬೇಕೆಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಮಹಿಳೆಯರನ್ನು ಸನ್ಮಾನಿಸಲಾಯಿತು ಹಾಗೂ 2025-26ನೇ ಸಾಲಿನ ತೆರಿಗೆ ವಸೂಲಾತಿಯಲ್ಲಿ ಶೇಕಡ 100 ಕ್ಕಿಂತ ಹೆಚ್ಚು ಪ್ರಗತಿ ಸಾಧಿಸಿದ ಬಿಳಿಗಿರಿರಂಗನಬೆಟ್ಟ, ಅಂಬಳೆ, ಮಾಂಬಳ್ಳಿ, ಗೌಡಹಳ್ಳಿ, ಅಗರ, ದುಗ್ಗಹಟ್ಟಿ ಗ್ರಾ.ಪಂ.ಗಳ ಪಿಡಿಒ ಹಾಗೂ ಬಿಲ್ ಕಲೆಕ್ಟರ್ ಗಳಿಗೆ ನಗದು ಬಹುಮಾನ ಹಾಗೂ ಪ್ರಶಸ್ತಿ ಪತ್ರ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ತಾಲ್ಲೂಕು ಗ್ಯಾರಂಟಿ ಯೋಜನೆ ಅಧ್ಯಕ್ಷ ಪ್ರಭುಪ್ರಸಾದ್, ಕಾರ್ಯನಿರ್ವಾಹಕ ಅಧಿಕಾರಿ ಎ.ಬಿ.ವೇಣು, ಜಿ.ಪಂ. ಮಾಜಿ ಉಪಾಧ್ಯಕ್ಷ ಜೆ.ಯೋಗೇಶ್, ಟಿಹೆಚ್ಒ ಡಾ.ತನುಜ, ವೈದ್ಯಾಧಿಕಾರಿ ಡಾ.ಲಾವಣ್ಯ, ತಾ.ಪಂ. ಎಡಿ ರವೀಂದ್ರ, ಟಿಪಿಒ ಜಗದೀಶ್, ಅಧೀಕ್ಷಕ ಸಚಿನ್, ರಾಜೇಶ್, ನಂದೀಶ್, ಎನ್.ಆರ್.ಎಲ್.ಎಂ. ಸಿಬ್ಬಂದಿಗಳಾದ ಶ್ರೀಕಾಂತ್, ರವಿ, ಶಿವಶಂಕರ್, ವಸಂತ, ಶರ್ವರಿ, ಸುಪ್ರಿಯ ಸೇರಿದಂತೆ ಸಮಿತಿಯ ಸದಸ್ಯರುಗಳು ಹಾಜರಿದ್ದರು.

ಶ್ರೀ ರೇಣುಕಾಚಾರ್ಯರ ಜಯಂತ್ಯುತ್ಸವ | ವಿವಿಧ ಮಠಾಧೀಶರು ಭಾಗಿ
ರೇಣುಕಾಚಾರ್ಯರ ರಥಯಾತ್ರೆ ಅದ್ಧೂರಿ

ಕೊಳ್ಳೇಗಾಲ: ಶ್ರೀ ರೇಣುಕಾಚಾರ್ಯರ ಜಯಂತ್ಯುತ್ಸವದ ಅಂಗವಾಗಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಪಂಚಲೋಹ ಪುತ್ಥಳಿಯ ಬೆಳ್ಳಿ ರಥಯಾತ್ರೆ, ಮೆರವಣಿಗೆ ಮಂಗಳವಾರ ವಿಜೃಂಭಣೆಯಿಂದ ನಡೆಯಿತು.

ಪಟ್ಟಣದ ಬಸವೇಶ್ವರ ನಗರದ ಗಣಪತಿ ದೇವಸ್ಥಾನದಲ್ಲಿ ಮೆರವಣಿಗೆ ಅಜ್ಜೀಪುರ ಮಠದ ಶ್ರೀ ನಂದೀಶ ಶಿವಚಾರ್ಯ ಸ್ವಾಮಿಗಳ ಅಧ್ಯಕ್ಷತೆಯಲ್ಲಿ ಹಾಗೂ ಮ.ಬೆಟ್ಟದ ಸಾಲೂರು ಮಠದ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮಿಗಳು, ಮರಳೆಗವಿ ಮಠ ಡಾ.ಮುಮ್ಮಡಿ ಶಿವರುದ್ರಸ್ವಾಮಿ, ಪೂರಿಗಾಲಿ, ಕುಂದೂರು, ಮುಡುಕುತೊರೆ, ತಲಕಾಡು, ದನಗೂರು, ಚಿಕ್ಕಿಂದುವಾಡಿ, ಕೆಸ್ತೂರು, ಚಿಲಕವಾಡಿ, ಕೊಳ್ಳೇಗಾಲ ಭಿಕ್ಷುದ ಮಠದ ಶ್ರೀ ಶಿವಪ್ಪ ಸ್ವಾಮಿಗಳು ಸೇರಿದಂತೆ ಹರಗುರು ಚರಮೂರ್ತಿಗಳು ಹಾಗೂ ವಿವಿಧ ಮಠ ಸ್ವಾಮಿಗಳ ದಿವ್ಯಸಾನಿಧ್ಯದಲ್ಲಿ ನಡೆಯಿತು.



ಮೆರವಣಿಗೆಯನ್ನು ಕ್ಷೇತ್ರದ ಶಾಸಕ ಎ.ಆರ್.ಕೃಷ್ಣಮೂರ್ತಿ ಅವರು ಚಾಲನೆ ನೀಡಿದರು.

ಬಳಿಕ ವಿವಿಧ ಕಲಾತಂಡದೊಂದಿಗೆ ಪಟ್ಟಣದ ಬಸವೇಶ್ವರ ನಗರ ಬಡಾವಣೆಯ ಗಣಪತಿ ದೇವಸ್ಥಾನದಿಂದ ಹೊರಟು ಶ್ರೀನಿವಾಸ ಟಾಕೀಸ್ ರಸ್ತೆ, ಗುರುಕಾರ್ ವೃತ್ತ, ಡಾ.ರಾಜಕುಮಾರ ರಸ್ತೆ, ಮಸೀದಿ ವೃತ್ತ, ಕನ್ನಿಕಾ ಪರಮೇಶ್ವರಿ ರಸ್ತೆ, ಆಟದ ಮೈದಾನ ವೃತ್ತ, ಕಾವೇರಿ ರಸ್ತೆ, ನಾರಾಯಣಸ್ವಾಮಿ ದೇವಸ್ಥಾನ ರಸ್ತೆ, ಈಶ್ವರ ದೇವಸ್ಥಾನ, ಚಿನ್ನಬೆಳ್ಳಿ ರಸ್ತೆ, ಚೌಡೇಶ್ವರಿ ಕಲ್ಯಾಣ ಮಂಟಪ ರಸ್ತೆ ಮೂಲಕ ಮೆರವಣಿಗೆ ತೆರಳಿ ರಾಜರಾಜೇಶ್ವರಿ ಕಲ್ಯಾಣ ಮಂಟಪ ತಲುಪಿದೆ

ಈ ವೇಳೆ ಮಂಗಳವಾದ್ಯ, ವೀರಗಾಸೆ, ಮಹಿಳಾ ವೀರಗಾಸೆ, ಕಂಬ ಕುಣಿತ, ಚಂಡಿ ಸಿಂಗಾರಿ ಮೇಳ ಹಾಗೂ ನಂದಿಕಂಬಗಳನ್ನು ಹೊತ್ತು ಕುಣಿದು ಕುಪ್ಪಳಿಸಿದರು.

ಈ ಸಂದರ್ಭದಲ್ಲಿ ಮಾಜಿ ಶಾಸಕರು ಜಿ.ಎನ್.ನಂಜುಂಡಸ್ವಾಮಿ,ಆರ್.ನರೇಂದ್ರ, ಪರಿಮಳಾ ನಾಗಪ್ಪ, ಎಸ್.ಬಾಲರಾಜು, ಚಾಮುಲ್ ಅಧ್ಯಕ್ಷ ನಂಜುಂಡಸ್ವಾಮಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ತೋಟೇಶ್, ಉಪ್ಪಾರ ನಿಗಮ ಮಾಜಿ ಅಧ್ಯಕ್ಷ ಶಿವಕುಮಾರ್, ಡಾ.ಎಸ್.ದತ್ತೇಶ್ ಕುಮಾರ್, ಯುವ ಮುಖಂಡ ಉದ್ಯಮಿ ನಿಶಾಂತ್, ಜಗದ್ಗುರು ರೇಣುಕಾಚಾರ್ಯ ಜಯಂತಿ ಆಚರಣಾ ಸಮಿತಿಯ ಪದಾಧಿಕಾರಿಗಳು ಸೇರಿದಂತೆ ಮುಖಂಡರು, ಯುವಕರು, ಸಂಘಸಂಸ್ಥೆ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಕಿರುಸುದ್ದಿ

ಹೈನುಗಾರಿಕೆಯಿಂದ ಸ್ವಾವಲಂಬಿ ಬದುಕು

ನಾಗಮಂಗಲ: ಗ್ರಾಮೀಣ ಪ್ರದೇಶದ ರೈತರು ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡರೆ ಆರ್ಥಿಕವಾಗಿ ಅಭಿವೃದ್ಧಿ ಹೊಂದುವ ಜೊತೆಗೆ ಸ್ವಾವಲಂಬಿ ಬದುಕು ಕಟ್ಟಿಕೊಳ್ಳಬಹುದು ಎಂದು ಎಂಡಿಸಿಸಿ ಬ್ಯಾಂಕ್ ಅಧ್ಯಕ್ಷ ಸಚ್ಚಿನ್ ಚಲುವರಾಯಸ್ವಾಮಿ ಅಭಿಪ್ರಾಯಪಟ್ಟರು.

ತಾಲೂಕಿನ ಸಣ್ಣೇನಹಳ್ಳಿ ಹಾಗೂ ದಾಸರಹಳ್ಳಿ ಗ್ರಾಮದಲ್ಲಿ ಸ್ಥಾಪಿಸಿರುವ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಡೈರಿ ಉದ್ಘಾಟಿಸಿ ಮಾತನಾಡಿದ ಅವರು, ಗ್ರಾಮೀಣ ಪ್ರದೇಶದ ರೈತರಿಗೆ ಉಳಿದೆಲ್ಲಾ ಸಂಪನ್ಮೂಲಕ್ಕಿಂತ ಹೈನುಗಾರಿಕೆ ಆರ್ಥಿಕವಾಗಿ ಹೆಚ್ಚು ಶಕ್ತಿ ಕೊಡುತ್ತದೆ ಎಂದರು. ರೈತರು ಕೃಷಿ ಜೊತೆಗೆ ಮಿಶ್ರತಳಿ ಹಸುಗಳನ್ನು ಸಾಕುವುದರಿಂದ ಕುಟುಂಬ ನಿರ್ವಹಣೆಗೆ ಹಣಕಾಸಿನ ನೆರವು ಸಿಕ್ಕಂತಾಗುತ್ತದೆ. ರಾಜ್ಯ ಸರ್ಕಾರ ಪ್ರತಿ ಲೀಟರ್ ಹಾಲಿಗೆ 5ರು. ಪ್ರೋತ್ಸಾಹ ಧನ ನೀಡುತ್ತಿರುವುದು ರೈತರಿಗೆ ಮತ್ತಷ್ಟು ಬಲ ಸಿಕ್ಕಂತಾಗಿದೆ. ಹಾಲು ಉತ್ಪಾದಕರ ಸಹಕಾರ ಸಂಘಗಳು ಸದೃಡವಾಗಿ ಉಳಿಯಬೇಕೆಂದರೆ ಉತ್ಪಾದಕರು ಸಂಘಕ್ಕೆ ಗುಣಮಟ್ಟದ ಹಾಲು ಪೂರೈಕೆ ಮಾಡಬೇಕು ಎಂದು ತಿಳಿಸಿದರು. ಮನ್‌ಮುಲ್ ನಿರ್ದೇಶಕ ಲಕ್ಷ್ಮಿನಾರಾಯಣ, ಬಿಂಡಿಗನವಿಲೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ನೂತನ್‌ಗೌಡ, ಮುಖಂಡ ಸುನಿಲ್ ಲಕ್ಷ್ಮಿಕಾಂತ್ ಸೇರಿದಂತೆ ಮನ್‌ಮುಲ್ ನಾಗಮಂಗಲ ಉಪ ವಿಭಾಗದ ಅಧಿಕಾರಿಗಳು, ಸಣ್ಣೇನಹಳ್ಳಿ ಹಾಗೂ ದಾಸರಹಳ್ಳಿ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಕಾರ್ಯಕಾರಿ ಮಂಡಳಿ ನಿರ್ದೇಶಕರು, ಸದಸ್ಯರು ಇದ್ದರು.

ಖಾಸಗಿ ಕ್ಲಿನಿಕ್ ನಡೆಸಲು ಲೈಸೆನ್ಸ್ ನೀಡದಂತೆ ಮನವಿ

ಮಂಡ್ಯ: ಶ್ರೀರಂಗಪಟ್ಟಣ ಕಾವೇರಿ ಬಡಾವಣೆಯಲ್ಲಿನ ರಿವರ್‌ವ್ಯಾಲಿ ಶಾಲೆ ಮತ್ತು ಪದವಿ ಪೂರ್ವ ಕಾಲೇಜಿಗೆ ಸೇರಿದ ಕಟ್ಟಡ ಹಾಗೂ ನಿವೇಶನದಲ್ಲಿ ವ್ಯಸನಮುಕ್ತ ಕೇಂದ್ರ/ಖಾಸಗಿ ಕ್ಲಿನಿಕ್ ನಡೆಸಲು ಕೆಪಿಎಂಇ ಕಾಯ್ದೆಯಡಿ ಪರವಾನಿಗೆ ನೀಡಬಾರದೆಂದು ಒತ್ತಾಯಿಸಿ ರಿವರ್ ವ್ಯಾಲಿ ಶಿಕ್ಷಣ ಸಂಸ್ಥೆಯಿಂದ ನಗರದಲ್ಲಿ ಮಂಗಳವಾರ ಮನವಿ ಸಲ್ಲಿಸಲಾಗಿದೆ. ಜಿಲ್ಲಾಽಕಾರಿ ಕಚೇರಿಗೆ ಭೇಟಿ ನೀಡಿದ ಶಿಕ್ಷಣ ಸಂಸ್ಥೆಯ ಪದಾಽಕಾರಿಗಳು, ಡಿಸಿ ಕಚೇರಿ ಸಹಾಯಕ ಅಽಕಾರಿ ಡಾ.ರೋಹಿಣಿ ಅವರಿಗೆ ಮನವಿ ಸಲ್ಲಿಸಿದರು. ರಿವರ್ ವ್ಯಾಲಿ ಶಿಕ್ಷಣ ಸಂಸ್ಥೆಯಿಂದ ಕಳೆದ 35 ವರ್ಷದಿಂದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡಲಾಗುತ್ತಿದೆ. ಶಾಲಾ ಆಡಳಿತ ಮಂಡಳಿಯ ಮನವಿ ಮೇರೆಗೆ ಎಂ.ರಾಮೇಗೌಡ ಎಂಬುವರು ತಮಗೆ ಸೇರಿದ ಸರ್ವೇ ನಂ 417 ಮತ್ತು 956ರಲ್ಲಿ ಸುಮಾರು 6 ಎಕರೆ ವಿಸ್ತೀರ್ಣದ ಜಮೀನು ಹಾಗೂ ಅದರಲ್ಲಿರುವ ಕಟ್ಟಡವನ್ನು ಶಾಲೆಗಾಗಿ ವಾರ್ಷಿಕ ಬಾಡಿಕೆ 101 ರೂಪಾ. ನಂತರ 2013 ಡಿ.31ರಿಂದ 2043 ಡಿ.30ರವರೆಗೆ ಭೋಗ್ಯ ಕರಾರು ಮಾಡಿದ್ದಾರೆ. ಕರಾರಿನನ್ವಯ ಜಮೀನು ಮತ್ತು ಕಟ್ಟಡವನ್ನು ಶೈಕ್ಷಣಿಕ ಉದ್ದೇಶಕ್ಕೆ ಮಾತ್ರ ಬಳಸಿಕೊಳ್ಳಲು ಅಂದರೆ ಶಾಲೆ ಮತ್ತು ಕಾಲೇಜಿಗೆ ಉಪಯೋಗಿಸಿಕೊಳ್ಳಬೇಕು. ಅದರಂತೆ ಅನ್ಯಕಾರ್ಯಕ್ಕೆ ಬಳಸಿಕೊಂಡಿಲ್ಲ ಎಂದಿದ್ದಾರೆ. ಆದರೀಗ ಈ ಕಟ್ಟಡದ ಆವರಣದಲ್ಲಿ ಹೊಸದಾಗಿ ವ್ಯಸನಮುಕ್ತ ಕೇಂದ್ರ ಪ್ರಾರಂಭಿಸಲು ಪರವಾನಿಗೆ ನೀಡುವಂತೆ ಕೆ.ಪ್ರೇಮಾ ಹಾಗೂ ಆರ್.ರೂಪಶ್ರೀ ಎಂಬುವರು ಆರೋಗ್ಯ ಇಲಾಖೆಗೆ ಅರ್ಜಿ ಸಲ್ಲಿಸಿದ್ದಾರೆ. ಶೈಕ್ಷಣಿಕ ಚಟುವಟಿಕೆ ನಡೆಯುತ್ತಿವೆ. ಜತೆಗೆ ಕರಾರಿನನ್ವಯ ಅನ್ಯಕಾರ್ಯಕ್ಕೆ ಬಳಸುವಂತಿಲ್ಲ, ಜತೆಗೆ ಶಾಲಾ ಆವರಣದಲ್ಲಿ ವ್ಯಸನಮುಕ್ತ ಕೇಂದ್ರ ತೆರೆಯುವುದರಿಂದ ಶೈಕ್ಷಣಿಕ ವಾತಾವರಣಕ್ಕೆ ಅಡಚಣೆಯಾಗಲಿದೆ. ವಿದ್ಯಾರ್ಥಿಗಳ ಮಾನಸಿಕ ನೆಮ್ಮದಿಯ ಮೇಲೆ ನಕಾರಾತ್ಮಕ ಪ್ರಭಾವ ಬೀರುವ ಸಾಧ್ಯತೆ ಇದೆ. ಇದು ಪಾಲಕರಲ್ಲಿ ಆತಂಕ ಉಂಟು ಮಾಡಿದೆ. ಆದ್ದರಿಂದ ನ್ಯಾಯಾಲಯದಲ್ಲಿ ಅಂತಿಮ ತೀರ್ಪು ಬರುವವರೆಗೆ ಹಾಗೂ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಪರವಾನಿಗೆ ನೀಡಬಾರದೆಂದು ಒತ್ತಾಯಿಸಿದರು. ರಿವರ್‌ವ್ಯಾಲಿ ಶಿಕ್ಷಣ ಸಂಸ್ಥೆಯ ಆಡಳಿತಾಧಿಕಾರಿ ಭಾನುಪ್ರಿಯ, ಪ್ರಾಂಶುಪಾಲ ಕೆ.ಎಸ್.ರಾಘವೇಂದ್ರ, ಮುಖ್ಯಶಿಕ್ಷಕಿ ಸ್ಪಂದನಾ, ವಕೀಲ ಪ್ರದೀಪ್, ದಲಿತ ಸಂಘರ್ಷ ಸಮಿತಿ ಜಿಲ್ಲಾ ಉಪಾಧ್ಯಕ್ಷ ಸೋಮಶೇಖರ್ ಇತರರಿದ್ದರು.

ಚಿಕಿತ್ಸೆ ಫಲಿಸದೆ ಬಾಲಕ ಸಾವು

ಹಲಗೂರು: ವಾಂತಿ ಬೇಧಿಯಿಂದ ಅಸ್ವಸ್ಥಗೊಂಡಿದ್ದ ಬಾಲಕ ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ ಘಟನೆ ಕಳೆದ ಸೋಮವಾರ ನಡೆದಿದೆ.

ಸಮೀಪದ ದಳವಾಯಿ ಕೋಡಿಹಳ್ಳಿ ಗ್ರಾಮದ ನಿವಾಸಿ ದುಂಡಯ್ಯ ಅವರ ಪುತ್ರ ಅಭಿಷೇಕ್ (16) ಮೃತ ಬಾಲಕ. ಮಾರ್ಚ್ 28 ರಂದು ದಳವಾಯಿ ಕೋಡಿಹಳ್ಳಿ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ವಾಣಿವಿಲಾಸ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಮಾರ್ಚ್ 30 ಸೋಮವಾರ ಮಧ್ಯಾಹ್ನ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿದ್ದಾನೆ. ಈ ಸಂಬಂಧ ಹಲಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ನಾಗಮಂಗಲ ತಾಲೂಕಿನ ಸಣ್ಣೇನಹಳ್ಳಿ ಗ್ರಾಮದಲ್ಲಿ ಸ್ಥಾಪಿಸಿರುವ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ಎಂಡಿಸಿಸಿ ಬ್ಯಾಂಕ್ ಅಧ್ಯಕ್ಷ ಸಚ್ಚಿನ್ ಚಲುವರಾಯಸ್ವಾಮಿ ಅವರು ಹಾಲು ಪರೀಕ್ಷಿಸುವ ಮೂಲಕ ನೂತನ ಡೈರಿಯನ್ನು ಉದ್ಘಾಟಿಸಿದರು.

ಬೂತ್ ಮಟ್ಟದಲ್ಲಿ ಪಕ್ಷ ಸಂಘಟನೆಗೆ ಒತ್ತು

ನಾಗಮಂಗಲ: ಬಿಜೆಪಿ ಪಕ್ಷವನ್ನು ಬೂತ್ ಮಟ್ಟದಲ್ಲಿ ಬಲಪಡಿಸಲು ಹಾಗೂ ಕಾರ್ಯಕರ್ತರನ್ನು ಗಟ್ಟಿಗೊಳಿಸಲು ಹಗಲಿರುಳು ಶ್ರಮವಹಿಸುತ್ತೇನೆ ಎಂದು ಭಾರತೀಯ ಜನತಾ ಪಾರ್ಟಿಯ ಮಂಡಲದ ನೂತನ ಅಧ್ಯಕ್ಷರಾದ ಪರಮೇಶ್ವರ್ ಎಂ. ತಿಳಿಸಿದರು.

ಪಟ್ಟಣದ ಅಂಬೇಡ್ಕರ್ ಭವನದಲ್ಲಿ ಭಾರತೀಯ ಜನತಾ ಪಾರ್ಟಿ ವತಿಯಿಂದ ಆಯೋಜಿಸಲಾಗಿದ್ದ ವಿಧಾನಸಭಾ ಕ್ಷೇತ್ರ ವಿಶೇಷ ಮತದಾರರ ಪಟ್ಟಿ ಪರಿಷ್ಕರಣ ಕಾರ್ಯಗಾರ ಮತ್ತು ಮಂಡಲದ ನೂತನ ಅಧ್ಯಕ್ಷರ ಅಭಿನಂದನಾ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಅವರು ತಾಲ್ಲೂಕಿನಲ್ಲಿ ಅಭಿವೃದ್ಧಿಯು ಕುಂಠಿತ ಗೊಂಡಿದ್ದು ಕೇವಲ ಗುದ್ದಲಿ ಪೂಜೆಯಲ್ಲಿಯೆ ಕಾಲ ಕಳೆಯುತ್ತಿದ್ದಾರೆ ಕಾಂಗ್ರೆಸ್ ದುರಾಡಳಿತದ ಗ್ಯಾರಂಟಿಗಳ ಕೆಟ್ಟ ಯೋಜನೆಯ ನಡುವೆ ರಾಜ್ಯ ದಿವಾಳಿಯತ್ತ ಸಾಗುತ್ತಿದೆ ಕೃಷಿ ಸಚಿವರ ಕ್ಷೇತ್ರದಲ್ಲಿ ಅಭಿವೃದ್ಧಿಯಂದರೆ ಕೇವಲ ಕನಸಿನ ಮಾತು ಎಂದು ಬೇಸರ ವ್ಯಕ್ತಪಡಿಸಿದರು. ರಾಜ್ಯ ಹಾಗೂ ಜಿಲ್ಲೆಯ ನಮ್ಮ ಬಿಜೆಪಿ ನಾಯಕರು ನನ್ನನ್ನು ತಾಲ್ಲೂಕು ಅಧ್ಯಕ್ಷರಾಗಿ ಆಯ್ಕೆ ಮಾಡಿರುವುದು ಸಂತಸ ತಂದಿದೆ ಉನ್ನತ ಜವಾಬ್ದಾರಿಯಲ್ಲಿರುವ ನಾನು ಪಕ್ಷ ಬಲವರ್ಧನೆಗೆ ಕಾರ್ಯಕರ್ತರ ಬೆಳವಣಿಗೆಗೆ ಹಗಲಿರುಳು ಕ್ಷಮಿಸುತ್ತೇನೆ ಮುಂದಿನ ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ನಮ್ಮ ಪಕ್ಷದ ಗೆಲುವಿಗಾಗಿ ತಾಲ್ಲೂಕಿನಾದ್ಯಂತ ಬೂತ್ ಮಟ್ಟದಲ್ಲಿ ಕಾರ್ಯಕರ್ತರ ಪಡೆಯನ್ನು ರಚಿಸಲಾಗುವುದು ಎಂದು ಆಶಾಭಾವನೆ ವ್ಯಕ್ತಪಡಿಸಿದರು. ಈ ಸಮಯದಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಿವೇಕ್, ಜಿಲ್ಲಾ ಕಾರ್ಯಾಲಯ ಕಾರ್ಯದರ್ಶಿ ಚಂದ್ರು ಭಾಗವಹಿಸಿದ್ದರು.



ನಾಗಮಂಗಲದ ಪಟ್ಟಣದ ಅಂಬೇಡ್ಕರ್ ಭವನದಲ್ಲಿ ಬಿಜೆಪಿ ವತಿಯಿಂದ ಆಯೋಜಿಸಲಾಗಿದ್ದ ವಿಧಾನಸಭಾ ಕ್ಷೇತ್ರ ವಿಶೇಷ ಮತದಾರರ ಪಟ್ಟಿ ಪರಿಷ್ಕರಣ ಕಾರ್ಯಗಾದಲ್ಲಿ ಮಂಡಲದ ನೂತನ ಅಧ್ಯಕ್ಷ ಪರಮೇಶ್ವರ್ ಎಂ. ಅವರನ್ನು ಸನ್ಮಾನಿಸಲಾಯಿತು.

ಮಧ್ಯಪ್ರಾಚ್ಯ ಯುದ್ಧದ ಪರಿಣಾಮ | ವಾಣಿಜ್ಯ ಸಿಲಿಂಡರ್ ಪೂರೈಕೆಗೆ ನಿಯಂತ್ರಣ

ಗೃಹಬಳಕೆ ಅನಿಲ ಸಿಲಿಂಡರ್‌ಗೆ ಭಾರೀ ಬೇಡಿಕೆ

ಶ್ರೀನಿವಾಸ್ ಕೆ. ಬೆಳ್ಳೂರು

ದಿಗಂತ ವಿಶೇಷ



ಮಂಡ್ಯ: ಮಧ್ಯ ಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧದ ಪರಿಣಾಮ ಅಡುಗೆ ಅನಿಲ ಪೂರೈಕೆಯಲ್ಲಿ ಭಾರೀ ವ್ಯತ್ಯಯ ಉಂಟಾಗಿದೆ. ಗೃಹ ಬಳಕೆ ಅಡುಗೆ ಅನಿಲಕ್ಕೆ ಇದೀಗ ಭಾರೀ ಬೇಡಿಕೆ ಸೃಷ್ಟಿಯಾಗಿದೆ. ವಾಣಿಜ್ಯ ಉದ್ದೇಶದ ಸಿಲಿಂಡರ್‌ಗಳ ಪೂರೈಕೆಗೆ ನಿಯಂತ್ರಣ ವಿಧಿಸಿರುವುದರಿಂದ ಹೆಚ್ಚಿನ ದರ ಕೊಟ್ಟು ಗೃಹ ಬಳಕೆ ಸಿಲಿಂಡರ್‌ಗಳನ್ನು ಖರೀದಿಸಲು ಹೋಟೆಲ್, ಬೇಕರಿ, ಟೀ-ಕಾಫೀ ಅಂಗಡಿ ಮಾಲೀಕರು ಮುಗಿಬಿದ್ದಿದ್ದಾರೆ.

ಗೃಹ ಬಳಕೆ ಸಿಲಿಂಡರ್‌ಗಳು ವಾಣಿಜ್ಯ ಉದ್ದೇಶಕ್ಕೆ ಬಳಕೆ: ಗೃಹ ಬಳಕೆ ಅಡುಗೆ ಅನಿಲ ಸಂಪರ್ಕ ಹೊಂದಿರುವವರು ವಾಣಿಜ್ಯ ಉದ್ದೇಶಕ್ಕೆ ಸಿಲಿಂಡರ್‌ಗಳನ್ನು ನೀಡುತ್ತಿದ್ದುದು ಈಗ ಹೊಸದೇನಲ್ಲ. ಅದು ಹಿಂದಿನಿಂದಲೂ ನಡೆದುಕೊಂಡೇ ಬಂದಿದೆ. 917 ರು.ನ ಅಡುಗೆ ಅನಿಲ ಸಿಲಿಂಡರ್‌ನ್ನು ಹೋಟೆಲ್, ಬೇಕರಿ ಅಥವಾ ಇನ್ನಿತರ ವಾಣಿಜ್ಯ ಉದ್ದೇಶದವರಿಗೆ ನೀಡಿ ಅವರಿಂದ 1200 ರಿಂದ 1300 ರು.ವರೆಗೆ ಹಣ ಪಡೆಯುತ್ತಿದ್ದರು. ಈಗ ಅದರ ಪ್ರಮಾಣ ಕಡಿಮೆಯಾಗಿದ್ದರೂ ಸಿಲಿಂಡರ್ ಬಳಕೆ ಕಡಿಮೆ ಇರುವ ಹಾಗೂ ಡಬಲ್ ಸಿಲಿಂಡರ್ ಹೊಂದಿರುವ ಗ್ರಾಹಕರು ಹೆಚ್ಚಿನ ದರಕ್ಕೆ ಒಂದು ಸಿಲಿಂಡರ್ ಕೊಟ್ಟು ಒಂದೇ ಒಂದು ಸಿಲಿಂಡರ್‌ನಲ್ಲಿ ಅಡುಗೆ ಮಾಡಿ ಲಾಭ ಮಾಡಿಕೊಳ್ಳುವಲ್ಲಿ ನಿರತರಾಗಿದ್ದಾರೆ. ಗೃಹ ಬಳಕೆ ಸಿಲಿಂಡರ್‌ಗಳ ಬುಕ್ಕಿಂಗ್ ಅವಧಿಯನ್ನು ಗ್ರಾಮಾಂತರ ಪ್ರದೇಶಕ್ಕೆ 45 ದಿನ ಹಾಗೂ ನಗರ ಪ್ರದೇಶಕ್ಕೆ 25 ದಿನಗಳಿಗೆ ನಿಗದಿಪಡಿಸಲಾಗಿದೆ. ಇದರಲ್ಲೂ ಗೃಹ ಬಳಕೆಗೆ ಸಿಗುತ್ತಿರುವ ಅಡುಗೆ ಅನಿಲ ಪ್ರಮಾಣ ಕಡಿಮೆಯಾಗಿದೆ ಎಂದು ತಿಳಿದುಬಂದಿದೆ.

ಬುಕ್ಕಿಂಗ್ ಮಾಡಿದವರ ಕಣ್ತಪ್ಪಿಸಿ ಮಾರಾಟ: ಇದೀಗ ಅಡುಗೆ ಅನಿಲ ಬಿಕ್ಕಟ್ಟಿನ ಸಮಯದಲ್ಲೂ ವಾಮಮಾರ್ಗದಲ್ಲಿ ವಾಣಿಜ್ಯ ಉದ್ದೇಶಕ್ಕೆ ಗೃಹ ಬಳಕೆ ಸಿಲಿಂಡರ್‌ಗಳು ಮಾರಾಟವಾಗುತ್ತಿವೆ. ಒಂದು ಸಿಲಿಂಡರ್‌ಗೆ 1500 ರು.ವರೆಗೆ ಹೋಟೆಲ್, ಬೇಕರಿ, ಆಟೋ ಮಾಲೀಕರು ಹಣ ಕೊಟ್ಟು ಖರೀದಿಸುತ್ತಿದ್ದಾರೆ. ನಿತ್ಯ ನಾಲ್ಕೈದು ಸಿಲಿಂಡರ್‌ಗಳ ಅವಶ್ಯಕತೆ ಇರುವ ಹೋಟೆಲ್ ಮಾಲೀಕರು ಸದ್ಯಕ್ಕೆ ಸಿಗುತ್ತಿರುವ ಗೃಹ ಬಳಕೆ ಸಿಲಿಂಡರ್‌ಗಳನ್ನು ವಾಣಿಜ್ಯ ಉದ್ದೇಶದತ್ತ ಸೆಳೆಯುವ ಪ್ರಯತ್ನ ನಡೆಸಿದ್ದು ಅದರಲ್ಲಿ ಸಫಲತೆಯನ್ನೂ ಕಂಡಿದ್ದಾರೆ.

ಪ್ರಸ್ತುತ ಸನ್ನಿವೇಶದಲ್ಲಿ ಗೃಹ ಬಳಕೆಯ ಸಿಲಿಂಡರ್‌ಗಳು ಗ್ರಾಹಕರ ಹೆಸರಿನಲ್ಲಿ ವಾಣಿಜ್ಯೋದ್ಯಮಿಗಳ ಕೈಸೇರುತ್ತಿದೆ. ಇದನ್ನು ತಡೆಯುವುದಕ್ಕೆ ಯಾರಿಂದಲೂ ಸಾಧ್ಯವಾಗುತ್ತಿಲ್ಲ. ಸಿಲಿಂಡರ್ ಬುಕ್ ಮಾಡಿದ ಗ್ರಾಹಕರನ್ನೇ ಯಾಮಾರಿಸಿ ವಾಣಿಜ್ಯ ಉದ್ದೇಶಗಳಿಗೆ ನೀಡುತ್ತಿರುವುದು ಅಲ್ಲಲ್ಲಿ ವರದಿಯಾಗುತ್ತಿವೆ.

ಗ್ರಾಮೀಣ ಭಾಗದ ಗ್ರಾಹಕರೊಬ್ಬರು ಮಾ.17ರಂದು ಸಿಲಿಂಡರ್ ಬುಕ್ ಮಾಡಿದ್ದು, ಮಾ.20ಕ್ಕೆ ಅಡುಗೆ ಅನಿಲ ಸರಬರಾಜಿನ ಸಂದೇಶ ಬರುತ್ತದೆ. ಡೆಲಿವರಿ ಕೋಡ್, ಒಟಿಪಿ ನೀಡದಿದ್ದರೂ ಸಹ ಅಡುಗೆ ಅನಿಲ ಸರಬರಾಜಾಗಿರುವ ಬಗ್ಗೆ ಮಾ.21ಕ್ಕೆ ಅಡುಗೆ ಅನಿಲ ಬುಕ್ ಮಾಡಿದ ಗ್ರಾಹಕರ ಮೊಬೈಲ್‌ಗೆ ಸಂದೇಶ ಬರುತ್ತದೆ. ಹಾಗಾದರೆ ಒಟಿಪಿ, ಡೆಲಿವರಿ ಕೋಡ್‌ನ್ನು ಏಜೆನ್ಸಿಯವರಿಗೆ ನೀಡಿದವರು ಯಾರು. ಈ ಬಗ್ಗೆ ತಿಳಿಯಲು ಗ್ಯಾಸ್ ಏಜೆನ್ಸಿಯವರಿಗೆ ಕರೆ ಮಾಡಿದರೆ ನಮಗೆ ಗೊತ್ತಿಲ್ಲವೆಂಬ ಸಿದ್ಧ ಉತ್ತರ ನೀಡಿದ್ದಾರೆ.

ಬಾಗಿಲು ಮುಚ್ಚಿ ಗ್ಯಾಸ್ ಏಜೆನ್ಸಿಗಳ ಕೆಲಸ: ಅಡುಗೆ ಅನಿಲ ಪೂರೈಕೆಯಲ್ಲಾಗಿರುವ ವ್ಯತ್ಯಯದಿಂದ ಗ್ರಾಹಕರಿಗೆ ಉತ್ತರಿಸಲಾಗದೆ ಗ್ಯಾಸ್ ಏಜೆನ್ಸಿಗಳ ಸಿಬ್ಬಂದಿ ಬಾಗಿಲು ಮುಚ್ಚಿಕೊಂಡು ಕೆಲಸ ನಿರ್ವಹಿಸುತ್ತಿದ್ದಾರೆ. ಗ್ಯಾಸ್ ಬುಕ್ಕಿಂಗ್ ಮಾಡಿದವರಿಗೆ ನಿಗದಿತ ಅವಧಿ ಮುಗಿದರೂ ಅಡುಗೆ ಅನಿಲ ಪೂರೈಕೆಯಾಗದಿರುವ ಬಗ್ಗೆ ಕೇಳಲು ಬರುವ ಗ್ರಾಹಕರಿಂದ ತಪ್ಪಿಸಿಕೊಳ್ಳಲು ಏಜೆನ್ಸಿಗಳ ನೌಕರರು-ಸಿಬ್ಬಂದಿ ಕಣ್ಣಾಮುಚ್ಚಾಲೆ ಆಟವಾಡುತ್ತಿದ್ದಾರೆ. ಹೊರಗಡೆ ಒಬ್ಬ ಸಿಬ್ಬಂದಿಯನ್ನು ನಿಲ್ಲಿಸಿ ಗ್ಯಾಸ್ ಸಮಸ್ಯೆ ಹೇಳಿಕೊಂಡು ಬರುವವರಿಗೆ ಅಂಗಡಿಯಲ್ಲಿ ಯಾರೂ ಇಲ್ಲವೆಂದು ಹೇಳಿ ಕಳುಹಿಸುತ್ತಿದರೆ, ಇತರೆ ಉದ್ದೇಶಗಳಿಗೆ ಬರುವವರನ್ನು ಮಾತ್ರ ಪ್ರವೇಶಾವಕಾಶ ನೀಡಿ ಕಾರ್ಯನಿರ್ವಹಿಸುತ್ತಿದ್ದಾರೆ.

ಆಟೋ ದರ, ಕಾಫೀ-ಟೀ, ತಿಂಡಿ ದರ ಏರಿಕೆ

ವಾಣಿಜ್ಯ ಬಳಕೆಯ ಅಡುಗೆ ಅನಿಲ ಪೂರೈಕೆಯಲ್ಲಿ ವ್ಯತ್ಯಯವಾಗಿರುವ ಹಿನ್ನಲೆಯಲ್ಲಿ ಎಲ್‌ಪಿಜಿ ಆಟೋ ದರ, ಕೆಲವು ಹೋಟೆಲ್‌ಗಳಲ್ಲಿ ಕಾಫೀ-ಟೀ, ತಿಂಡಿ, ಊಟದ ದರದಲ್ಲಿ ಕೊಂಚ ಏರಿಕೆ ಮಾಡಲಾಗಿದೆ. ಎಲ್‌ಪಿಜಿ ಆಟೋಗಳು ನಿಗದಿತ ದರಕ್ಕಿಂತ 10 ರು. ಹೆಚ್ಚು ಪಡೆದರೆ, ಕಾಫೀ-ಟೀ ದರದಲ್ಲಿ ಕನಿಷ್ಠ 5 ರು., ಊಟ-ತಿಂಡಿ ದರವನ್ನು ಹೆಚ್ಚಿಸಿದ್ದಾರೆ. ಕೆಲವು ಹೋಟೆಲ್‌ನವರು ದರ ಹೆಚ್ಚಿಸದಿದ್ದರೂ ಮೊದಲು ನೀಡುತ್ತಿದ್ದ ತಿಂಡಿ-ಊಟದ ಪ್ರಮಾಣವನ್ನು ಕಡಿಮೆ ಮಾಡಿರುವುದು ಕಂಡುಬರುತ್ತಿದೆ. ಕೆಲವು ಹೋಟೆಲ್ ಹಾಗೂ ಬೇಕರಿ ಅಂಗಡಿ ಮಾಲೀಕರು ಅಡುಗೆ ಅನಿಲಕ್ಕೇ ಕಾಯದೆ ಕಟ್ಟಿಗೆ ಒಲೆಯಲ್ಲಿ ಅಡುಗೆ, ಬೇಕರಿ ತಿಂಡಿ-ತಿನಿಸುಗಳನ್ನು ತಯಾರಿಸಲು ಆರಂಭಿಸಿದ್ದಾರೆ. ಮರದ ಹೊಟ್ಟು, ಕಟ್ಟಿಗೆಯನ್ನು ಬಳಸಿ ಪರಿಸ್ಥಿತಿಯನ್ನು ಹತೋಟಿಯಲ್ಲಿಡುವ ಪ್ರಯತ್ನದಲ್ಲಿ ಮುಂದುವರೆದಿದ್ದಾರೆ.

ವೈರಮುಡಿ ಬ್ರಹ್ಮೋತ್ಸವ ವೇಳೆ ಅಪವಿತ್ರ ನಡವಳಿಕೆಗೆ ಖಂಡನೆ



ಮೇಲುಕೋಟೆ: ಚೆಲುವನಾರಾಯಣ ಸ್ವಾಮಿ ವೈರಮುಡಿ ಉತ್ಸವದಂದು ಗಂಡು ಬೇರುಂಡ ಸ್ವರೂಪಿಯಾದ ರಾಜಗೋಪುರದ ಮುಂಭಾಗ ಮೂರು ಮಂದಿ ಪೊಲೀಸ್ ಅಧಿಕಾರಿಗಳು ಷೂ ಧರಿಸಿ ಮಾತನಾಡುತ್ತಿರುವ ದೃಶ್ಯ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದ್ದು ಭಕ್ತವಲಯದಿಂದ ವ್ಯಾಪಕ ಕಂಡನೆ ವ್ಯಕ್ತವಾಗಿದೆ.

ತಿರುಪತಿಗೆ ಸಮಾನ ದಿವ್ಯಕ್ಷೇತ್ರವಾದ ಮೇಲುಕೋಟೆಯ ವೈರಮುಡಿ ಉತ್ಸವಕ್ಕೆ ದರ್ಶನಮಾಡಿ ಪುನೀತರಾಗಲು ಲಕ್ಷಾಂತರ ಭಕ್ತರು ಆಗಮಿಸುತ್ತಾರೆ ಪೊಲೀಸ್ ಮತ್ತು ಇತರ ಸಿಬ್ಬಂದಿಯವರು ಕರ್ತವ್ಯನಿರತವಾಗಿ ಭಾಗವಹಿಸುತ್ತಾರೆ ಕನಿಷ್ಠ ದೇವಾಲಯದ ಆವರಣದಲ್ಲಿ ಪಾವಿತ್ರತೆ ಸಂಪ್ರದಾಯ ಪಾಲಿಸುವುದು ಕಾಪಾಡುವುದು ಭಕ್ತರ ಜೊತೆಗೆ ಎಲ್ಲರ ಕರ್ತವ್ಯವಾಗಿದೆ. ಆದರೆ ದೃಶ್ಯದಲ್ಲಿ ಕಂಡು ಬರುವ ಪೊಲೀಸ್ ಅಧಿಕಾರಿಗಳು ಗೋಪುರದ ಮುಂಭಾಗವೇ ದರ್ಪತೋರಿಸುತ್ತಾ ಷೂ ಹಾಕಿ ಪಾವಿತ್ರತೆಗೆ ಧಕ್ಕೆ ತರುತ್ತಾ ನಿಂತಿರುವುದು ಭಕ್ತರ ಆಕ್ರೋಶಕ್ಕೆ ಕಾರಣವಾಗಿದೆ. ಈ ದೃಶ್ಯ ವೈರಲ್ ಆಗುತ್ತಿದ್ದನ್ನು ಗಮನಿಸಿದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಪರಮೇಶ್‌ಗೌಡ ಪೊಲೀಸರ ವರ್ತನೆಯನ್ನು ಖಂಡಿಸಿದ್ದು ಇವರು ಎಲ್ಲಿಯ ಪೊಲೀಸ್ ಅಧಿಕಾರಿಗಳು ಎಂಬುದು ನಮಗೆ ಗೊತ್ತಿಲ್ಲ. ದೇವಾಲಯದ ಪಾವಿತ್ರತೆಗೆ ಧಕ್ಕೆ ತಂದಿರುವ ಇವರ ವಿರುದ್ಧ ಕ್ರಮಜರುಗಿಸಲು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಪತ್ರ ಬರೆಯುತ್ತೇವೆ. ವೈರಮುಡಿ ಉತ್ಸವ ಭದ್ರತೆಯಲ್ಲಿದ್ದ ಕೆಲವು ಪೊಲೀಸ್ ಅಧಿಕಾರಿಗಳು ಮಾನವೀಯತೆ ಮರೆತು ದರ್ಪಮೆರೆದಿದ್ದಾರೆ. ಕರ್ತವ್ಯದಲ್ಲಿದ್ದ ಮಹಿಳಾ ಅಧಿಕಾರಿಯನ್ನು ಎತ್ತಿ ಗೇಟ್‌ನಿಂದ ಆಚೆಗೆ ಬಿಸಾಡಿದ್ದಾರೆ ಭಕ್ತರ ಮೇಲೆ ದರ್ಪಮೆರೆದಿದ್ದಾರೆ ಇಂತಹ ವರ್ತನೆಗಳು ಯಾರಿಗೂ ಶೋಭೆ ತರವುದಿಲ್ಲ ಇಂತಹ ವ್ಯವಸ್ಥೆ ಮುಂದುವರೆಯಬಾರದು. ದೇವಾಲಯದ ಪರಂಪರೆ ಕಾಪಾಡುವುದು ಕರ್ತವ್ಯ, ಕ್ರಮವಹಿಸುತ್ತೇವೆ ಭಕ್ತರ ಭಾವನೆಗೆ ಧಕ್ಕೆಯಾಗಿದ್ದರೆ ಕ್ಷಮಿಸಬೇಕು ಎಂದಿದ್ದಾರೆ.

ಕಾಲಭೈರವೇಶ್ವರ ದೇವಸ್ಥಾನ ನಿರ್ಮಾಣಕ್ಕೆ ಭೂಮಿಪೂಜೆ

ಶ್ರೀರಂಗಪಟ್ಟಣ: ಬೆಂಗಳೂರು ಮೈಸೂರು ಹೆದ್ದಾರಿ ಬಳಿ ತಾಲೂಕಿನ ಟಿ.ಎಂ.ಹೊಸೂರು ಗೇಟ್ ಹತ್ತಿರ ಶ್ರೀ ಕಾಳಿಮಾತೆ ದೇವಾಲಯದ ಆವರಣದಲ್ಲಿ ಶ್ರೀ ಕಾಲಭೈರವೇಶ್ವರ ನೂತನ ದೇವಸ್ಥಾನ ನಿರ್ಮಾಣಕ್ಕೆ ಗ್ಯಾರಂಟಿ ಯೋಜನೆಗಳ ಅಧ್ಯಕ್ಷರಾದ ಎಂ. ಎಲ್. ದಿನೇಶ್ ಭೂಮಿ ಪೂಜೆ ನೇರವೆರಿಸಿದರು.

ಶ್ರೀ ಕಾಳಿ ದೇವಸ್ಥಾನದ ಪ್ರಧಾನ ಅರ್ಚಕರಾದ ಶ್ರೀ ಜೈ ಗುರುದೇವ್ ನೇತೃತ್ವದಲ್ಲಿ ಪಂಚ ಕಳಸ ಪ್ರತಿಷ್ಠಾಪನೆ ಮಾಡಿ ವಿಶೇಷ ಪೂಜಾ ಕೈಂಕರ್ಯ ನೆರವೇರಿಸಿ ಶಂಕು ಸ್ಥಾಪನೆಗೆ ಅಡಿಗಲ್ಲು ಹಾಕಲಾಯಿತು, ಜೈಗುರು ದೇವ್ ಸ್ವಾಮಿಜಿ ಇದೇವೇಳೆ ಮಾತನಾಡಿ ಶ್ರೀ ಶಕ್ತಿ ಕಾಳಿಮಾತೆಗೆ ನಿರಂತರವಾಗಿ ಪ್ರತಿಮಂಗಳವಾರ ಶುಕ್ರವಾರ, ಆಮಾವಾಸ್ಯೆ ಮತ್ತು ಬೀಮನಮಾವಾಸ್ಯೆಯಲ್ಲಿ ವಿಶೇಷ ಪೂಜೆ ಪ್ರತ್ಯಂಗಿರಾ ಹೋಮ ನಡೆಯುತಿದ್ದು, ತಾಲೂಕು, ಜಿಲ್ಲೆ, ರಾಜ್ಯದಾದ್ಯಂತ ಭಕ್ತರು ಆಗಮಿಸಿ ಈದೇವಸ್ಥಾನದ ಅಭಿವೃದ್ಧಿ ಮಾಡುತಿದ್ದು,



ಉಚಿತವಾಗಿ ಭೂದಾನ ಸಹ ಮಾಡಿರುತ್ತಾರೆ, ಇನ್ನೂ ಮುಂದೆಯೂ ಸಹ ಇದೇರೀತಿ ತಮ್ಮ ತನು ಮನ ಧನ ನೀಡಿ ಸಹಕರಿಸಿ ಈ ದೇವಾಲಯವನ್ನು ಅಭಿವೃದ್ಧಿಗೊಳಿಸಿ ನೂತನ ದೇವಸ್ಥಾನ ನಿರ್ಮಾಣ ಮಾಡಿ ದೇವಿಕೃಪೆಗೆ ಪಾತ್ರರಾಗಬೇಕು, ದೇವಸ್ಥಾನದ ಆವರಣದಲ್ಲಿ ವಾಹನ ನಿಲ್ಲಿಸಲು ಸುಸಜ್ಜಿತ ಪಾರ್ಕಿಂಗ್ ವ್ಯವಸ್ಥೆ ಮತ್ತು ಭಕ್ತರಿಗೆ ಮೂಲಭೂತ ಸೌಕರ್ಯವನ್ನು ಸಹ ವ್ಯವಸ್ಥೆ ನಿರ್ಮಾಣ ಮಾಡಲಾಗುವುದೆಂದು ತಿಳಿಸಿದರು. ಬೆಂಗಳೂರಿನ ಕುಮಾರಿ ಪದ್ಮ, ರಾಣಿ ಪ್ರಭಾ ಪ್ರಧಾನ ಕಾರ್ಯದರ್ಶಿ ಮಹಿಳಾ ಕಾಂಗ್ರೆಸ್ ಸಮಿತಿ ಮೈಸೂರು, ಪಿಕಾರ್ಡ ಬ್ಯಾಂಕ್ ನ ಮಾಜಿ ಉಪಾಧ್ಯಕ್ಷ ಎಚ್.ಡಿ. ಮಹದೇವ್, ವಿಜೇಂದ್ರಣ್ಣ, ಲೋಕೇಶ್, ಜಿ.ಎನ್.ರವೀಶ್, ನಂಜೇಗೌಡ, ಎಂ.ಸಿ.ಪ್ರಕಾಶ್ ಹಾಗೂ ಟ್ರಸ್ಟಿಗಳು ಇದ್ದರು.

ಶಿವಕುಮಾರ ಸ್ವಾಮಿಗಳ ಜಯಂತ್ಯುತ್ಸವ ಇಂದು

ಮದ್ದೂರು: ಚುಂಚಶ್ರೀ ಗೆಳೆಯರ ಬಳಗ, ಟೌನ್ ಕ್ಲಬ್ ಮತ್ತು ನಾಡಪ್ರಭು ಕೆಂಪೇಗೌಡ ಒಕ್ಕಲಿಗರ ಸಂಘದ ವತಿಯಿಂದ ನಡೆದಾಡುವ ದೇವರು ತ್ರಿವಿಧ ದಾಸೋಹಮೂರ್ತಿ ಪರಮ ಪೂಜ್ಯ ಶ್ರೀಶಿವಕುಮಾರ ಮಹಾಸ್ವಾಮೀಜಿಗಳ 119ನೇ ಜಯಂತ್ಯುತ್ಸವ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದಾಗಿ ಚುಂಚಶ್ರೀ ಗೆಳೆಯರ ಬಳಗದ ಅಧ್ಯಕ್ಷ ಪ್ರೊ.ಬಿ.ಕೃಷ್ಣ ತಿಳಿಸಿದ್ದಾರೆ.

ಏ.1ರ ಬುಧವಾರ ಮಧ್ಯಾಹ್ನ 12 ಗಂಟೆಗೆ ಟೌನ್‌ಕ್ಲಬ್ ಆವರಣದ ಶ್ರೀ ಉಗ್ರನರಸಿಂಹಸ್ವಾಮಿ ಸಭಾಂಗಣದಲ್ಲಿ ಜಯಂತ್ಯುತ್ಸವ ಕಾರ್ಯ ಕ್ರಮವನ್ನು ಹಮ್ಮಿಕೊಂಡಿದ್ದು, ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವನಂಜಯ್ಯ ಕಾರ್ಯಕ್ರಮಕ್ಕೆ ಚಾಲನೆ



ನೀಡಲಿದ್ದಾರೆ. ಚುಂಚಶ್ರೀ ಗೆಳೆಯರ ಬಳಗದ ಅಧ್ಯಕ್ಷ ಡಾ.ಬಿ.ಕೃಷ್ಣ ಅಧ್ಯಕ್ಷತೆ ವಹಿಸಲಿದ್ದು ಜೀವವಿಮಾ ಮಾರ್ಗದರ್ಶಕರಾದ ವೀರಣ್ಣ ಅವರನ್ನು ಅಭಿನಂದಿಸಲಿದ್ದು ನಿವೃತ್ತ ಮುಖ್ಯಶಿಕ್ಷಕ ಬಿ.ವಿ. ಮಂಜುನಾಥ್ ಗುರುಸಂಸ್ಮರಣೆ ಮಾಡಿಕೊಡಲಿದ್ದು ನಾಡಪ್ರಭು ಕೆಂಪೇಗೌಡ ಒಕ್ಕಲಿಗರ ಸಂಘದ ಅಧ್ಯಕ್ಷ ವಿ.ಟಿ.ರವಿಕುಮಾರ್, ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ಎಂ.ಜಿ.ಶ್ರೀಕಂಠಯ್ಯ, ಭಾ.ವಿ.ಪ ಅಧ್ಯಕ್ಷ ಎಲ್.ಮಹಾಲಿಂಗಯ್ಯ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಶಿವಕುಮಾರಸ್ವಾಮಿಗಳ ಶಿಷ್ಯವೃಂದ ವಿವಿಧ ಸಂಘಟನೆಯ ಪದಾಧಿಕಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯ ಕ್ರಮವನ್ನು ಯಶಸ್ವಿಗೊಳಿಸುವಂತೆ ಮನವಿ ಮಾಡಿದ್ದಾರೆ.

ಬಿಜೆಪಿ ಜಿಲ್ಲಾಧ್ಯಕ್ಷ ಡಾ.ಎನ್.ಎಸ್.ಇಂದ್ರೇಶ್ ವಿಶ್ವಾಸ

2028ಕ್ಕೆ ಕರ್ನಾಟಕದಲ್ಲಿ ಬಿಜೆಪಿಗೆ ಅಧಿಕಾರ

ಪಾಂಡವಪುರ: ಜೆಡಿಎಸ್ ಜತೆಗಿನ ಮೈತ್ರಿ ರಾಜಕಾರಣದಿಂದಾಗಿ ಬಿಜೆಪಿಗೆ ಯಾವುದೇ ರೀತಿಯ ತೊಂದರೆಯಾಗುವುದಿಲ್ಲ, ಈ ಬಗ್ಗೆ ಬಿಜೆಪಿ ಕಾರ್ಯಕರ್ತರಿಗೆ ಯಾವುದೇ ಆತಂಕ ಬೇಡ. ಮುಂಬರುವ 2028ರ ವಿಧಾನಸಭಾ ಚುನಾವಣೆಯಲ್ಲಿ ಮಂಡ್ಯ ಜಿಲ್ಲೆಯಲ್ಲಿ 3, 4 ಸ್ಥಾನಗಳಲ್ಲಿ ಬಿಜೆಪಿ ಗೆಲುವು ಸಾಧಿಸಲಿದ್ದು, ರಾಜ್ಯದಲ್ಲಿ ಸ್ಪಷ್ಟ ಬಹುಮತದೊಂದಿಗೆ ಬಿಜೆಪಿ ಅಧಿಕಾರ ಹಿಡಿಯುವುದು ನಿಚ್ಚಿತ. ಆ ಮೂಲಕ ಕರ್ನಾಟಕದಲ್ಲಿ ಬಿಜೆಪಿ ಯುಗ ಆರಂಭವಾಗಲಿದೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಡಾ.ಎನ್.ಎಸ್.ಇಂದ್ರೇಶ್ ವಿಶ್ವಾಸ ವ್ಯಕ್ತಪಡಿಸಿದರು.

ತಾಲೂಕಿನ ಕೆನ್ನಾಳು ಗೇಟ್ ಬಳಿ ಇರುವ ಸಂಪ್ರದಾಯ ಕನ್ವೆಂಷನ್ ಹಾಲ್‌ನಲ್ಲಿ ಮಂಗಳವಾರ ಬಿಜೆಪಿ ತಾಲೂಕು ಘಟಕದ ಆಯೋಜಿಸಿದ್ದ 'ಮತದಾರರ ಪಟ್ಟಿಗಳ ವಿಶೇಷ ಸಮಗ್ರ ಪರಿಷ್ಕರಣೆ 2026 ಬಿಎಲ್‌ಎ2 ಕಾರ್ಯಾಗಾರದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಗುಜರಾತ್ ಮತ್ತು ಮಧ್ಯಪ್ರವೇಶದಂತೆಯೇ ಕರ್ನಾಟಕ ರಾಜ್ಯದಲ್ಲಿಯೂ 2028ಕ್ಕೆ ಬಿಜೆಪಿ ಯುಗ ಪ್ರಾರಂಭವಾಗಲಿದ್ದು, ಕನಿಷ್ಠ 25 ವರ್ಷ ರಾಜ್ಯದಲ್ಲಿ



ಅಧಿಕಾರದಲ್ಲಿರುತ್ತದೆ. ಕಾರ್ಯಕರ್ತರು ದೃತಿಗೆಡದೆ ಪಕ್ಷವನ್ನು ಬಲಗೊಳಿಸುವುದರಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕು ಎಂದರು.

ರಾಜಕೀಯದಲ್ಲಿ ಏರುಪೇರು: ರಾಜಕೀಯದಲ್ಲಿ ಯಾವಾಗ ಬೇಕಾದರೂ ಏರುಪೇರಾಗುವ ಸಾಧ್ಯತೆಗಳನ್ನು ಊಹಿಸಲು ಆಗದು. ಈಗಿನ ರಾಜಕಾರಣವು ಮುಂದೆ ಇದೇ ರೀತಿ ಇರುತ್ತದೆ ಎಂದು ಹೇಳಲು ಸಾಧ್ಯವಿಲ್ಲ. ರಾಜಕಾರಣದಲ್ಲಿ ನಾಳೆ ಏನುಬೇಕಾದರೂ ಸಂಭವಿಸಬಹುದು. ಬಿಜೆಪಿ ಪಕ್ಷವು ಇನ್ನೊಂದು ಪಕ್ಷದೊಂದಿಗೆ ಮೈತ್ರಿ ಮಾಡಿಕೊಂಡಿರಬಹುದು. ಆದರೆ, ಕಾರ್ಯಕರ್ತರ ಸ್ವಾಭಿಮಾನ ಮತ್ತು ಭವಿಷ್ಯವನ್ನು ಅಡವಿಟ್ಟು ರಾಜಕಾರಣ ಮಾಡಲಿಕ್ಕೆ ನಾವು ಸಿದ್ದರಿಲ್ಲ, ಕಾರ್ಯಕರ್ತರೇ ಪಕ್ಷದ ಜೀವಾಳ. ನಿಮ್ಮೊಂದಿಗೆ ಸದಾ ನಾವಿರುತ್ತೇವೆ. ಯಾವುದೇ ತ್ಯಾಗಕ್ಕೂ ಸಿದ್ದ. ನಮಗೆ ಮೈತ್ರಿಗಿಂತ ಕಾರ್ಯಕರ್ತರೇ ಮುಖ್ಯ ಎಂದು ಹೇಳಿದರು.

ಮೈಸೂರು ವಿಭಾಗೀಯ ಬಿಜೆಪಿ ಪ್ರಭಾರಿ, ಸ್ವಾಮಿ ಮರಳಾಪುರ, ಸಹ ಪ್ರಭಾರಿ ಈ.ಸಿ.ನಿಂಗರಾಜೇಗೌಡ, ಮೈಷುಗರ್ ಮಾಜಿ ಅಧ್ಯಕ್ಷ ಜೆ.ಶಿವಲಿಂಗೇಗೌಡ, ಬಿಜೆಪಿ ಮಹಿಳಾ ಮೋರ್ಚಾದ ಜಿಲ್ಲಾಧ್ಯಕ್ಷ ಮಂಗಳ ನವೀನ್, ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ.ಎಲ್.ಆನಂದ್, ತಾಲೂಕು ಅಧ್ಯಕ್ಷ ನೀಲನಹಳ್ಳಿ ಧನಂಜಯ, ಟೌನ್ ಘಟಕದ ಅಧ್ಯಕ್ಷ ಎನ್. ಸೋಮಶೇಖರ್, ಮುಖಂಡರಾದ ಎಸ್.ಎನ್.ಟಿ.ಸೋಮಶೇಖರ್, ಕಣಿವೆ ಮಹೇಶ್, ಸುರೇಶ್ ಕನ್ನಂಬಾಡಿ, ಶಂಭೂನಹಳ್ಳಿ ಮಂಜುನಾಥ್ ಇದ್ದರು.

ಚಲುವನಾರಾಯಣಸ್ವಾಮಿ ದರ್ಶನ ಪಡೆದು ಪುನೀತರಾದ ಭಕ್ತವೃಂದ

ವಿಜೃಂಭಣೆಯ ವೈರಮುಡಿ ಬ್ರಹ್ಮಮಹಾರಥ

ಮೇಲುಕೋಟೆ: ಚಲುವನಾರಾಯಣ ಸ್ವಾಮಿಯ ವೈರಮುಡಿ ಬ್ರಹ್ಮೋತ್ಸವದ 'ಬ್ರಹ್ಮಮಹಾರಥ' ಮಂಗಳವಾರ ವಿಜೃಂಭಣೆ ಯಿಂದ ನೆರವೇರಿತು. ನಾಡಿನ ವಿವಿಧ ಭಾಗಗಳಿಂದ ಆಗಮಿಸಿದ ಲಕ್ಷಾಂತರಭಕ್ತರು ರಥೋತ್ಸವದಲ್ಲಿ ಭಾಗಿಯಾಗಿ ಶ್ರೀದೇವಿ-ಭೂದೇವಿ ಕಲ್ಯಾಣ ನಾಯಕಿಯರೊಡನೆ ರಥಾರೂಢನಾದ ಚಲುವನಾರಾಯಣಸ್ವಾಮಿಯ ದರ್ಶನ ಪಡೆದು ರಥಕ್ಕೆ ಹಣ್ಣು ದವನ ಎಸೆದು ಸಂಭ್ರಮಿಸಿದರು.

ರಥೋತ್ಸವಕ್ಕೂ ಮುನ್ನ ನಡೆದ ಉತ್ಸವದಲ್ಲಿ ಮೇಲುಕೋಟೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಭಾಗವಹಿಸಿದ್ದರು. ವೈರಮುಡಿ ಜಾತ್ರಾ ಮಹೋತ್ಸವದ 7ನೇ ತಿರುನಾಳ್ ಅಂಗವಾಗಿ ನಡೆದ ಮಹಾರಥಕ್ಕೆ ಮದ್ಯಾಹ್ನ ಶುಭ ವೃಷಭ ಲಗ್ನಕೂಡಿದ 12-30ರ ವೇಳೆಗೆ ಜಿಲ್ಲಾ ಉಸ್ತುವಾರಿ ಸಚಿವರ ಪುತ್ರ ಹಾಗೂ ಮಂಡ್ಯ ಜಿಲ್ಲಾ ಸಹಕಾರ ಬ್ಯಾಂಕ್ ಅಧ್ಯಕ್ಷ ಸಚಿನ್ ಚಲುವರಾಯಸ್ವಾಮಿ ಅಪರಜಿಲ್ಲಾಧಿಕಾರಿ ಶಿವಾನಂದಮೂರ್ತಿ ಮತ್ತಿತರ ಅಧಿಕಾರಿಗಳು ತೆಂಗಿನಕಾಯಿ ಒಡೆದು ಚೈನ್‌ಎಳೆಯುವ ಮೂಲಕ ಚಾಲನೆ ನೀಡಿದರು. ರಥೋತ್ಸವ ಚಾಲನೆಯ ವೇಳೆ ಆಕಾಶದಲ್ಲಿ ಕಾಣಿಸಿಕೊಂಡ ಗರುಡಪಕ್ಷಿಗಳು ಪ್ರದಕ್ಷಿಣೆ



ಹಾಕಿದ್ದು ಭಕ್ತರಲ್ಲಿ ಸಂಭ್ರಮೋಲ್ಲಾಸ ಉಂಟುಮಾಡಿ ಶುಭಸೂಚನೆ ನೀಡಿತು. ಭಕ್ತರ ಜಯಘೋಷದೊಂದಿಗೆ ಮಾರಿಗುಡಿಬೀದಿ, ರಾಜಬೀದಿಗಳಲ್ಲಿ ಸಾಗಿದ ಮಹಾರಥ 1.40ರ ವೇಳೆಗೆ ದೇವಾಲಯದ ರಾಜಗೋಪುರದ ಬಳಿನೆಲೆನಿಂತಿತು. ಅಲ್ಲಿ ದೇವಾಲಯದಿಂದ ಪೂಜೆ ನೆರವೇರಿದ ನಂತರ ವಾನಮಾಮಲೈ ಬೀದಿ ರಥದ ಬೀದಿಯಲ್ಲಿ ಸಾಗಿದ ಬೃಹತ್‌ರಥ 3ರ ವೇಳೆಗೆ ಸ್ವಸ್ಥಾನವಾದ ರಥದಮಂಟಪಕ್ಕೆ ತಲುಪಿತು. ದೇವಾಲಯದ ಶ್ರೀಪಾದದವರು, ಬಂಡೀಕಾರರು, ಗ್ರಾಮದ ಯುವಕರು ಮಹಾರಥ ಸಗುಮ ಚಾಲನೆಗೆ ಶ್ರಮಿಸಿ ರಥೋತ್ಸವ ಯಶಸ್ವಿಗೊಳಿಸಿದರು. ಮಹಾರಥೋತ್ಸವದಲ್ಲಿ ಉಪವಿಭಾಗಾಧಿಕಾರಿ ಶ್ರೀನಿವಾಸ್, ತಹಸೀಲ್ದಾರ್ ಬಸವರಾಜ ರೆಡ್ಡಪ್ಪ, ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಪರಮೇಶ್‌ಗೌಡ, ಸದಸ್ಯರು ದೇವಾಲಯದ ಇಓ ಶೀಲಾ, ರಾಘವಪ್ರಕಾಶ್ ಇದ್ದರು. ಪಾರುಪತ್ತೇಗಾರರಾದ ಸ್ಥಾನಾಚಾರ್ಯ ಶ್ರೀನಿವಾಸನರಸಿಂಹನ್ ಗುರೂಜಿ. ರಥೋತ್ಸವದ ಯಶಸ್ಸಿಗೆ ಶ್ರಮಿಸಿದ್ದರು.

ಕಿರುಸುದ್ದಿ

ಬಡಾವಣೆ ನಿವಾಸಿಗಳ ಸಮಸ್ಯೆ ಆಲಿಸಿದ ಶಾಸಕ

ಹಾಸನ: ನಗರದ ಹೊಯ್ಸಳ ನಗರ ಹಾಗೂ ಬೀರನಹಳ್ಳಿಕೆರೆ ಬಡಾವಣೆಗಳಿಗೆ ಶಾಸಕ ಸ್ವರೂಪ್ ಪ್ರಕಾಶ್ ಅವರು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಬಡಾವಣೆಯಲ್ಲಿ ಹಲವು ಸಮಸ್ಯೆಗಳಿರುವ ಬಗ್ಗೆ ಅಲ್ಲಿನ ನಿವಾಸಿಗಳು ದೂರು ಸಲ್ಲಿಸಿದ ಹಿನ್ನೆಲೆಯಲ್ಲಿ ಸ್ಥಳಕ್ಕೆ ಭೇಟಿ ನೀಡಿದ ಶಾಸಕರು ಬೀರನಹಳ್ಳಿ ಕೆರೆ ಮತ್ತು ಹೊಯ್ಸಳ ನಗರ ಎರಡು ಕಡೆ ಇರುವ ಸಮಸ್ಯೆಗಳ ಬಗ್ಗೆ ಸ್ಥಳೀಯರಿಂದ ಮಾಹಿತಿ ಪಡೆದು ಅವುಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಕೆಲಸ ಮಾಡಬೇಕೆಂದು ನಗರಸಭೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ಈ ಸಂದರ್ಭದಲ್ಲಿ ನಗರಸಭೆ ಕಮಿಷನರ್ ಹಾಗೂ ಇತರ ಅಧಿಕಾರಿಗಳು ಹಾಜರಿದ್ದರು

ನಾಳೆ ದಿಶಾ ಸಭೆ

ಹಾಸನ: ಸಂಸದ ಶ್ರೇಯಸ್ ಎಂ. ಪಟೇಲ್‌ರವರ ಅಧ್ಯಕ್ಷತೆಯಲ್ಲಿ ಏ.2 ರಂದು ಬೆಳಗ್ಗೆ 11 ಗಂಟೆಗೆ ಜಿಲ್ಲಾ ಪಂಚಾಯಿತಿ ಹೊಯ್ಸಳ ಸಭಾಂಗಣದಲ್ಲಿ ಕೇಂದ್ರ ಪುರಸ್ಕೃತ ಯೋಜನೆಗಳ ಪ್ರಗತಿ ಪರಿಶೀಲನೆ ಸಭೆಯನ್ನು(ದಿಶಾ ಸಭೆ) ಏರ್ಪಡಿಸಲಾಗಿದೆ ಎಂದು ಸದಸ್ಯ ಕಾರ್ಯದರ್ಶಿ ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿ ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ತಿಳಿಸಿದ್ದಾರೆ.

ಬಿ.ಕಾಂ ಪಠ್ಯಕ್ರಮ ವಿನ್ಯಾಸ ಕುರಿತ ಕಾರ್ಯಾಗಾರ

ಹಾಸನ: ಹಾಸನ ವಿಶ್ವವಿದ್ಯಾಲಯದ ವತಿಯಿಂದ ವಾಣಿಜ್ಯಶಾಸ್ತ್ರ ಪಠ್ಯಕ್ರಮ ವಿನ್ಯಾಸ ಕುರಿತು ಒಂದು ದಿನದ ಕಾರ್ಯಾಗಾರವನ್ನು ಜಿಲ್ಲೆಯ ಎಲ್ಲಾ ಪದವಿ ಕಾಲೇಜುಗಳ ವಾಣಿಜ್ಯಶಾಸ್ತ್ರ ಪ್ರಾಧ್ಯಾಪಕರಿಗಾಗಿ ಹಾಸನ ನಗರದ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಲಾಗಿತ್ತು. ಕಾರ್ಯಾಗಾರವನ್ನು ಹಾಸನ ವಿಶ್ವವಿದ್ಯಾಲಯ ವಾಣಿಜ್ಯಶಾಸ್ತ್ರ ಶಿಕ್ಷಕರ ಸಂಘ (ಏಖಿಇಖಿಅ) ಸಹಯೋಗದಲ್ಲಿ ನಡೆಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಹಾಸನ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ತರೀಕೆರೆ. ಸಿ. ತಾರನಾಥ್ ಅವರು ಮಾತನಾಡಿ, ಬದಲಾವಣೆ ಇಂದಿನ ಅಗತ್ಯ, ಉತ್ತಮ ಪಠ್ಯಕ್ರಮ ಉತ್ತಮ ವಿದ್ಯಾರ್ಥಿಗಳನ್ನು ಸೃಷ್ಟಿಸಲು ಸಾಧ್ಯ? ಎಂದು ಅಭಿಪ್ರಾಯಪಟ್ಟರು. ವಾಣಿಜ್ಯಶಾಸ್ತ್ರ ಅಧ್ಯಯನ ಮಂಡಳಿಯ ಅಧ್ಯಕ್ಷರಾದ ಡಾ. ಟಿ.ಎಸ್. ದೇವರಾಜ್ ಅವರು ಮಾತನಾಡಿ ಇಂದಿನ ಕಾಲಕ್ಕೆ ತಕ್ಕಂತೆ ಪಠ್ಯಕ್ರಮವನ್ನು ನವೀಕರಿಸುವ ಅಗತ್ಯತೆಯನ್ನು ವಿವರಿಸಿದರು. ಗೌರವ ಅತಿಥಿಯಾಗಿ ಹಾಸನ ವಿಶ್ವವಿದ್ಯಾಲಯದ (ಕುಲಸಚಿವ)ಆಡಳಿತ ಬಿ.ಎ.ಜಗದೀಶ್ ಉಪಸ್ಥಿತರಿದ್ದರು. ಕಾರ್ಯಾಗಾರದಲ್ಲಿ ಜಿಲ್ಲೆಯ ಹಲವಾರು ಕಾಲೇಜುಗಳ ಪ್ರಾಧ್ಯಾಪಕರು ಭಾಗವಹಿಸಿ ಪಠ್ಯಕ್ರಮ ಅಭಿವೃದ್ಧಿ ಕುರಿತಾಗಿ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು.

ವಿಜೃಂಭಣೆಯ ಶನೈಶ್ಚರ ಸ್ವಾಮಿ ಜಾತ್ರಾ ಮಹೋತ್ಸವ



ಬೇಲೂರು: ತಾಲೂಕು ಅರೇಹಳ್ಳಿ ಹೋಬಳಿ ಕಡೇಗರ್ಜೆ ಗ್ರಾಮದಲ್ಲಿ 12ನೇ ವರ್ಷದ ಶ್ರೀ ಗುರು ಶನೈಶ್ಚರ ಸ್ವಾಮಿಯ ಜಾತ್ರಾ ಮಹೋತ್ಸವವು ಪ್ರಧಾನ ಅರ್ಚಕ ಅಶೋಕ್ ಸ್ವಾಮಿ ನೇತೃತ್ವದಲ್ಲಿ ಸಂಭ್ರಮದಿಂದ ಜರುಗಿತು.ಈ ಪೂಜೋತ್ಸವದಲ್ಲಿ ಕೊಂಡೋತ್ಸವ ಹಾಗೂ ಸ್ವಾಮಿಯವರನ್ನು ಬೆಳ್ಳಿ ರಥದಲ್ಲಿ ಪ್ರತಿಷ್ಠಾಪಿಸಿ 108 ಕುಂಭ ಕಳಸ ಮತ್ತು ಮಾದೇಶ್ವರ ಮಂಗಳ ವಾದ್ಯಗೋಷ್ಠಿಯೊಂದಿಗೆ ರಾಜಬೀದಿಯಲ್ಲಿ ಮೆರವಣಿಗೆ ನಡೆಸಲಾಯಿತು. ಮಹೋತ್ಸವದ ನಡೆದ ರಾತ್ರಿ ಶನಿ ಪ್ರಭಾವ ಅಥವಾ ರಾಜಾ ಸತ್ಯವೃತ ಎಂಬ ಪೌರಾಣಿಕ ಹರಿಕತೆಯನ್ನು ಏರ್ಪಡಿಸಲಾಗಿತ್ತು. ಸುತ್ತಮುತ್ತಲಿನ ಗ್ರಾಮಗಳ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಪೂಜೋತ್ಸವ ಕಾರ್ಯಕ್ರಮವನ್ನು ಯಶಸ್ವಿಗೊಳಿಸದರು.

ಅನ್ನ ಸಂತರ್ಪಣೆಗೆ ದೇಣಿಗೆ ನೀಡಿದ ಸಮಾಜ ಸೇವಕ ಸೈಯ್ಯದ್ ವೇಝ್ ಹಾಗೂ ಯುವ ಮುಖಂಡ ಮಹೇಂದ್ರರವರನ್ನು ಈ ವೇಳೆ ಪ್ರಧಾನ ಅರ್ಚಕ ಅಶೋಕ್ ಸ್ವಾಮಿ ಗೌರವಿಸಿದರು. ಈ ವೇಳೆ ಅನಿಲ್, ಋತ್ವಿನ್,ಅರ್ಜುನ್,ಪ್ರಜ್ವಲ್, ಪ್ರದೀಪ್, ರಕ್ಷಿತ್ ,ದರ್ಶನ್, ಸಚಿನ್ ಹಾಗೂ ಹಲವರು ಇದ್ದರು.



ಸಕಲೇಶಪುರ ನಗರದ ಎಸ್.ಬಿ.ಐ ಬ್ಯಾಂಕ್ ಮುಂಭಾಗ ನೂತನವಾಗಿ ನಿರ್ಮಾಣವಾಗಲಿರುವ ಫುಡ್ ಕೋರ್ಟ್ ಮತ್ತು ಸಕಲೇಶಪುರ ನಗರದ ಹೇಮಾವತಿ ಪ್ರತಿಮೆ ಕಾಮಗಾರಿಗಳಿಗೆ ಶಾಸಕ ಸಿಮೆಂಟ್ ಮಂಜುನಾಥ್ .ಭೂಮಿಪೂಜೆ ನೆರವೇರಿಸಿದರು.

ನಗರ ಸೌಂದರ್ಯಕ್ಕೆ ಆದ್ಯತೆ

ಸಕಲೇಶಪುರ: ನಗರದ ಎಸ್.ಬಿ.ಐ ಬ್ಯಾಂಕ್ ಮುಂಭಾಗ ನೂತನವಾಗಿ 35 ಲಕ್ಷ ರೂ ವೆಚ್ಚದಲ್ಲಿ ನಿರ್ಮಾಣವಾಗಲಿರುವ ಫುಡ್ ಕೋರ್ಟ್ ಮತ್ತು ಸಕಲೇಶಪುರ ನಗರದ ಹೇಮಾವತಿ ಪ್ರತಿಮೆ (ಶ್ರೀನಿವಾಸ ಕಲ್ಯಾಣ ಮಂಟಪದ ಬಳಿ) 45 ಲಕ್ಷ ರೂ.ವೆಚ್ಚದಲ್ಲಿ ನಿರ್ಮಾಣವಾಗಲಿರುವ ಫುಡ್ ಕೋರ್ಟ್ ಕಾಮಗಾರಿಗಳಿಗೆ ಶಾಸಕ ಸಿಮೆಂಟ್ ಮಂಜುನಾಥ್ ಭೂಮಿಪೂಜೆ ನೆರವೇರಿಸಿದರು.

ಸಕಲೇಶಪುರ ನಗರದ ಸೌಂದರ್ಯವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಮತ್ತು ಬೀದಿಬದಿ ವ್ಯಾಪಾರಿಗಳಿಗೆ ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ ಈ ಯೋಜನೆ ರೂಪಿಸಲಾಗಿದೆ. ಬೀದಿ ಬದಿ ವ್ಯಾಪಾರಿಗಳಿಗೆ ಸುಸಜ್ಜಿತ ಸ್ಥಳ ಕಲ್ಪಿಸುವ ನಿಟ್ಟಿನಲ್ಲಿ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಇಂದು ಸಕಲೇಶಪುರ ನಗರದ ಹಳೆ ಬಸ್ ನಿಲ್ದಾಣದ ಬಳಿ 27 ಲಕ್ಷ ರೂಪಾಯಿ ವೆಚ್ಚದಲ್ಲಿ ಭೂಮಿ ಪೂಜೆ ನೆರವೇರಿಸಿದರು.

ನಗರದ ಹಳೇ ಬಸ್ ನಿಲ್ದಾಣದ ಬಳಿ ಬಹುದಿನಗಳ ಬೇಡಿಕೆಯಾಗಿದ್ದ ನೂತನ ಬಸ್ ನಿಲ್ದಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಲಾಯಿತು. ಈ ಬಸ್ ನಿಲ್ದಾಣ 14 ಲಕ್ಷದ 32 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣವಾಗಲಿದೆ.

ಈ ಸಂದರ್ಭದಲ್ಲಿ ಸ್ಥಳೀಯ ಮುಖಂಡರು, ಬಿಜೆಪಿ ಕಾರ್ಯಕರ್ತರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.



ಚನ್ನರಾಯಪಟ್ಟಣ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ತಾಲೂಕು ಅಧ್ಯಕ್ಷ ಎಚ್.ಎನ್.ಲೋಕೇಶ್‌ರವರು ಶ್ರವಣಬೆಳಗೊಳದ ಜೈನ ಮಠದ ಅಭಿನವ ಚಾರುಶ್ರೀಗಳನ್ನು ಭೇಟಿ ಮಾಡಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುವ ಹಿನ್ನೆಲೆಯಲ್ಲಿ ಸ್ವಾಮೀಜಿಗಳ ಆಶೀರ್ವಾದ ಪಡೆದರು.

ಹೆದ್ದಾರಿ ಕಾಮಗಾರಿಗೆ ಭೂಸ್ವಾಧೀನ ಕಾರ್ಯಕ್ಕೆ ಮೀನಾಮೇಷ

ರಾಜ್ಯ ಸರ್ಕಾರ ಜಾಣ ಮೌನ

ಬೇಲೂರು: ಹಾಸನ-ಬೇಲೂರು ರೈಲ್ವೆ ಹಾಗೂ ಹಾಸನ-ಬೇಲೂರು ರಾಷ್ಟ್ರೀಯ ಹೆದ್ದಾರಿ ರಸ್ತೆ ಕಾಮಗಾರಿಗೆ ಭೂಸ್ವಾದೀನ ನಡೆಸಲು ಜಿಲ್ಲಾಡಳಿತ ಮೀನಾ-ಮೇಷ ಎಣಿಸುತ್ತಿದ್ದು, ಕಾಮಗಾರಿ ತೀವ್ರ ವಿಳಂಭವಾಗಲು ಜಿಲ್ಲಾಡಳಿತ ನೇರ ಕಾರಣವಾಗಿದೆ. ರಾಜ್ಯ ಸರ್ಕಾರ ಈ ಬಗ್ಗೆ ಜಾಣ ಮೌನ ತಾಳಿದೆ ಎಂದು ಮಾಜಿ ಸಚಿವ ಹಾಗೂ ಹಾಲಿ ಶಾಸಕ ಎಚ್ .ಡಿ.ರೇವಣ್ಣ ಹಾಸನ ಜಿಲ್ಲಾಡಳಿತದ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದರು ಪಡಿಸಿದರು.

ವಿಳಂಬಕ್ಕೆ ಜಿಲ್ಲಾಡಳಿತ ಕಾರಣ

ಪಟ್ಟಣದ ಜೆಡಿಎಸ್ ಅಧ್ಯಕ್ಷ ತೊ.ಚ.ಅನಂತಸುಬ್ಬರಾಯ ಅವರು ಸ್ವಗೃಹದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಕಳೆದ ಎಂಟು ವರ್ಷದಿಂದ ಬೇಲೂರು-ಹಾಸನ ರೈಲ್ವೆ ಕಾಮಗಾರಿ ಕುಂಟುತ್ತಾ ಸಾಗಿದೆ. ನೂರಾರು ಎಕ್ಕರೆ ಭೂಸ್ವಾಧೀನವಾಗಿಲ್ಲ, ಪ್ರಶ್ನೆ ಮಾಡಿದರೆ ಅರಣ್ಯ ಇಲಾಖೆ ಎಂಬ ಸಬೂಬು ಹೇಳುತ್ತಾರೆ ಎಂದ ಅವರು ಇದೇ ರೀತಿಯಲ್ಲಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌರ ಅವಿರತ ಶ್ರಮದಿಂದ ಹಾಸನ-ಬೇಲೂರು ಚತುಷ್ಪಥ ರಸ್ತೆ ಕಾಮಗಾರಿ ಭೂಸ್ವಾಧೀನವಿಲ್ಲದೆ ನೆನಗುಂದಿಗೆ ಬಿದ್ದಿದೆ. ಕನಿಷ್ಟ ಸೌಜನ್ಯಕ್ಕೂ ರಾಜ್ಯ ಸರ್ಕಾರ ತುಟಿ ಬಿಚ್ಚುತ್ತಿಲ್ಲ, ಇನ್ನು ಜಿಲ್ಲಾಡಳಿತ ಕೇವಲ ಮುಖ್ಯಮಂತ್ರಿಗಳ ಓಲೈಕೆಗೆ ಕಾರ್ಯಕ್ರಮಗಳನ್ನು ನಡೆಸಲು ಇಡೀ ಜಿಲ್ಲಾಡಳಿತವನ್ನು ನೇಮಕ ಮಾಡಿಕೊಂಡಿದ್ದಾರೆ. ಕಂದಾಯ ಇಲಾಖೆ ಕಾರ್ಯಕ್ರಮವನ್ನು ರಾಜ್ಯ ಸರ್ಕಾರ ದುರ್ಭಳಿಕೆ ಮಾಡಿಕೊಂಡಿದೆ. ನಮಗೆ ಕಂದಾಯ ಮಂತ್ರಿಗಳ ಬಗ್ಗೆ ಗೌರವಾಭಿಮಾನವಿದೆ ಆದರೆ ಕಂದಾಯ ದಾಖಲಾತಿ ನೀಡುವ ನೆಪದಲ್ಲಿ ಸಮಾವೇಶಗಳನ್ನು ನಡೆಸುವುದು ಎಷ್ಟರ ಮಟ್ಟಿಗೆ ಸರಿ, ಎಲ್ಲದಕ್ಕೂ ಕಾಲ ಬರುತ್ತದೆ ನಾವುಗಳು ಕೂಡ ತಾಳ್ಮೆಯಿಂದ ಕಾಯುತ್ತಿರುವ ಬಗ್ಗೆ ವಿಶ್ವಾಸದ ಮಾತುಗಳನ್ನು ಆಡಿದ ಅವರು ಲೋಕಸಭಾ ಸದಸ್ಯರ ಕಾರ್ಯವೈಖರಿ ಬಗ್ಗೆ ನಾನು ಮಾತನಾಡುವ ಬದಲು ಜನಸಾಮಾನ್ಯರ ಅಭಿಪ್ರಾಯವೇ ಮುಖ್ಯವಾಗುತ್ತದೆ ಎಂದು ಮೂದಲಿಸಿದರು.



ಜೆಜೆಎಂ ಕಾಮಗಾರಿ ಕಳಪೆಯಿಂದ ಕೂಡಿದೆ ಎಂಬ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ಅವರು ರಾಜ್ಯ ಸರ್ಕಾರ ಮನೆ-ಮನೆಗೆ ಕುಡಿಯುವ ನೀರು ನೀಡುವ ಬದಲು ಮದ್ಯವನ್ನು ರಾಜರೋಷವಾಗಿ ಹಂಚಿಕೆ ಮಾಡುತ್ತಿದೆ ಎಂದು ವ್ಯಂಗ್ಯವಾಡಿದ ಅವರು ಜೆಡಿಎಸ್ ಪಕ್ಷ ಕಾರ್ಯಕರ್ತರ ಶ್ರಮದಿಂದ ರಾಜ್ಯದಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದ ಜನಪರ ಕೆಲಸ ಮಾಡಿದ್ದು ಮುಂದಿನ ದಿನದಲ್ಲಿ ಬಿಜೆಪಿ ಮತ್ತು ಜೆಡಿಎಸ್ ಮೈತ್ರಿಯ ಬಗ್ಗೆ ನಮ್ಮ ಪಕ್ಷದ ವರಿಷ್ಟರು ತೆಗೆದುಕೊಳ್ಳುವ ನಿರ್ಧಾರಕ್ಕೆ ನಾವುಗಳು ಸಂಪೂರ್ಣ ಬದ್ಧ, ಇನ್ನು ಅರಸೀಕೆರೆ ಕ್ಷೇತ್ರದಲ್ಲಿ ಸ್ಪರ್ಧಿಸುವ ಬಗ್ಗೆ ಸ್ಪಷ್ಟನೆ ನೀಡಿದ ಅವರು 2023 ರ ಚುನಾವಣೆಯಲ್ಲಿ ಕೆಲವರು ನಮ್ಮ ಬಗ್ಗೆ ಯಾವ ರೀತಿಯಲ್ಲಿ ಹೇಳಿಕೆ ನೀಡಿದ್ದರೂ ಅಂತಿಮವಾಗಿ ಜನರ ಹೇಗೆ ಉತ್ತರ ನೀಡಿದ್ದಾರೆ ಎಂದು ಪ್ರೀತಂಗೌಡ ಬಗ್ಗೆ ಪರೋಕ್ಷ ಟಾಂಗ್ ನೀಡಿದ ಅವರು ಅರಸೀಕೆರೆ ಜನತೆ ಬಯಸಿದರೆ ಪಕ್ಷದ ನಿರ್ಧಾರವೇ ಅಂತಿಮ ಎಂದರು.

ಈ ಸಂದರ್ಭದಲ್ಲಿ ಮಾಜಿ ಜಿಲ್ಲಾ ಪಂಚಾಯಿತಿ ಸದಸ್ಯ ಬಿ.ಡಿ.ಚಂದ್ರೇಗೌಡ ಹಾಗೂ ಜೆಡಿಎಸ್ ಮುಖಂಡರಾದ ಎಂಕೆಆರ್ ಸೋಮೇಶ್, ಅದ್ದೂರಿ ಚೇತನ್ ಕುಮಾರ್, ಉಮೇಶ್, ಶ್ರೀವತ್ಸ, ಗಿರೀಶ್ ಸೇರಿದಂತೆ ಇನ್ನು ಮುಂತಾದವರು ಹಾಜರಿದ್ದರು.

ನಾಡಿನ ಜನರ ನೆಮ್ಮದಿಗಾಗಿ ಪ್ರಾರ್ಥನೆ

ಹಾಸನ ಜಿಲ್ಲೆಯ ಬೇಲೂರಿನಲ್ಲಿ ಪ್ರತಿವರ್ಷ ನಡೆಯುವ ಚನ್ನಕೇಶವಸ್ವಾಮಿ ಬ್ರಹ್ಮರಥೋತ್ಸವಕ್ಕೆ ಆಗಮಿಸಿ ದೇವರ ದರ್ಶನ ಪಡೆದು ರಾಜ್ಯ ಜನತೆಗೆ ಉತ್ತಮ ಮಳೆ-ಬೆಳೆ ಆಗಲಿ ಎಂದು ಪ್ರಾರ್ಥನೆಯನ್ನು ನಡೆಸುವ ವಾಡಿಕೆ ಬೆಳೆದುಕೊಂಡು ಬಂದಿದೆ. ಅಂತೆಯೇ ಪ್ರಸಕ್ತ ವರ್ಷದಲ್ಲಿ ಕೂಡ ಸ್ವಾಮಿಯ ದರ್ಶನವನ್ನು ಪಡೆದ ಬಗ್ಗೆ ಮಾಜಿ ಸಚಿವ ಎಚ್ .ಡಿ.ರೇವಣ್ಣ ತಿಳಿಸಿದರು.

ಸರ್ಕಾರಿ ವೈದ್ಯರು ಖಾಸಗಿ ಆಸ್ಪತ್ರೆಯಲ್ಲಿ ಕೆಲಸ

ರೋಗಿಗಳಿಗೆ ತೊಂದರೆ ಕೆಡಿಪಿ ಸದಸ್ಯರ ಆಕ್ರೋಶ

ಚನ್ನರಾಯಪಟ್ಟಣ: ಸರ್ಕಾರಿ ಆಸ್ಪತ್ರೆಯ ವೈದ್ಯರು ಖಾಸಗಿ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿರುವುದರಿಂದ ರೋಗಿಗಳಿಗೆ ತೊಂದರೆಯಾಗುತ್ತಿದೆ ಎಂದು ಕೆಡಿಪಿ ಸದಸ್ಯರು ಆಕ್ರೋಶ ವ್ಯಕ್ತಪಡಿಸಿದರು.

ಪಟ್ಟಣದ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಮಂಗಳವಾರ ಶಾಸಕ ಸಿ.ಎನ್.ಬಾಲಕೃಷ್ಣರವರ ಅಧ್ಯಕ್ಷತೆಯಲ್ಲಿ ನಡೆದ ಕೆಡಿಪಿ ಸಭೆಯಲ್ಲಿ ಸದಸ್ಯರುಗಳಾದ ಗುರುಪ್ರಸಾದ್, ಕಬ್ಬಾಳು ಮಹೇಶ್, ಮಧುಸೂದನ್ ಮಾತನಾಡಿ, ಪಟ್ಟಣದ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯರ ನಿರ್ಲಕ್ಷದಿಂದ ರೋಗಿಗಳು ಹರಿಯಾಣ ಆಗಿದ್ದು ವೈದ್ಯರು ಸರ್ಕಾರಿ ಆಸ್ಪತ್ರೆಯಲ್ಲಿ ಕೆಲಸ ಮಾಡಿ ಎಂದು ಹೇಳಿದರೆ ಖಾಸಗಿ ಆಸ್ಪತ್ರೆಯಲ್ಲಿ ಸುಲಿಗೆ ಮಾಡುತ್ತಿದ್ದಾರೆ ರೋಗಿಗಳು ಸರ್ಕಾರಿ ಆಸ್ಪತ್ರೆಗೆ ಬಂದರೆ ಚಿಕಿತ್ಸೆ ನೀಡದೆ ಖಾಸಗಿ ಆಸ್ಪತ್ರೆಗೆ ಕಳುಹಿಸುವ ನರ್ಸ್‌ಗಳ ದಂದೆ ಹೆಚ್ಚಾಗಿದೆ ಈ ಬಗ್ಗೆ ಸಾಕಷ್ಟು ದೂರು ನೀಡಿದರು ಸಹ ತಾಲೂಕು ವೈದ್ಯಾಧಿಕಾರಿಗಳು ಕ್ರಮ ವಹಿಸುತ್ತಿಲ್ಲ ರೋಗಿಗಳಿಗೆ ಚಿಕಿತ್ಸೆ ನೀಡಲು ಆಗದೇ ಇದ್ದರೆ ಕೆಲಸದಿಂದ ಹೊರ ಹೋಗಲಿ ಅದನ್ನು ಬಿಟ್ಟು ರೋಗಿಗಳಿಗೆ ತೊಂದರೆ ನೀಡುವುದು ಸರಿಯಲ್ಲ ಎಂದು ಆರೋಪಿಸಿದರು.

ಇದಕ್ಕೆ ಉತ್ತರಿಸಿದ ತಾಲೂಕು ವೈದ್ಯಾಧಿಕಾರಿ ಯುವರಾಜ್ ಸರ್ಕಾರದ ಆದೇಶದಂತೆ ಸರ್ಕಾರಿ ಆಸ್ಪತ್ರೆಯಲ್ಲಿ ಕೆಲಸ ನಿರ್ವಹಿಸಿದ ನಂತರ ಖಾಸಗಿ ಆಸ್ಪತ್ರೆಯಲ್ಲಿ ವೈದ್ಯರು ಕೆಲಸ ಮಾಡಬಹುದೆಂದು ಆದೇಶವಿದೆ ಅದನ್ನ ಹೊರತುಪಡಿಸಿ ಉಲ್ಲಂಘನೆ ಮಾಡಿದ್ದರೆ ನಮಗೆ ದೂರು ನೀಡಿ ಕ್ರಮ ವಹಿಸಲಾಗುವುದು ಎಂದು ತಿಳಿಸಿದರು. ಸಭೆಯಲ್ಲಿ ಶಾಸಕ ಸಿ.ಎನ್ .ಬಾಲಕೃಷ್ಣ, ತಾಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಹರೀಶ್, ಡಿವೈಎಸ್‌ಪಿ ಕುಮಾರ್, ಶಿರಸ್ತೆದಾರ್ ಪವನ್‌ಕುಮಾರ್ ಮತ್ತಿತರಿದ್ದರು.



ರಾಗಿ ಖರೀದಿಯಲ್ಲಿ ಅವ್ಯವಹಾರ: ನಂತರ ಕೆಡಿಪಿ ಸದಸ್ಯರುಗಳು ರಾಗಿ ಖರೀದಿ ಕೇಂದ್ರದಲ್ಲಿ ಸಾಕಷ್ಟು ಅವ್ಯವಹಾರವಾಗಿದ್ದು ಮೂಲ ರೈತರಿಗೆ ರಾಗಿ ಬೆಂಬಲ ಬೆಲೆ ಸಿಗದೇ ದಲ್ಲಾಳಿಗಳು ದಾವಣಗೆರೆ ಚಿತ್ರದುರ್ಗ ಹುಳಿಯಾರ್ ಕಡೆಯಿಂದ ರಾಗ್ನಿ ತಂದು ಇದರಲ್ಲಿ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳ ಶಾಮೀಲು ಎದ್ದು ಕಾಣುತ್ತಿದೆ.

ವಿವಿಧ ಪೂಜಾ ಕೈಂಕರ್ಯ | ಗೋವಿಂದ ನಾಮಸ್ಮರಣೆ

ಬ್ರಹ್ಮರಥೋತ್ಸವಕ್ಕೆ ಜನಸಾಗರ

ಬೇಲೂರು: ಶ್ರೀ ಚನ್ನಕೇಶವ ಸ್ವಾಮಿಯವರ ಬ್ರಹ್ಮ ರಥೋತ್ಸವವು ಸಹಸ್ರಾರು ಭಕ್ತಾದಿಗಳ ಸಮ್ಮುಖದಲ್ಲಿ ವಿಜೃಂಬಣೆಯಿಂದ ನೆರವೇರಿತು.

ವಿಶ್ವ ವಿಖ್ಯಾತ ಬೇಲೂರು ಪಟ್ಟಣದಲ್ಲಿ ನೆಲೆಸಿರುವ ಶ್ರೀ ಚನ್ನಕೇಶವ ಸ್ವಾಮಿಯವರ ರಥೋತ್ಸ ವವು ಬೆಳಗ್ಗೆ 11.5 ಗಳಿಗೆಯ ಮಿಥುನ ಲಗ್ನದಲ್ಲಿ ಆರಂಭಗೊಂಡ ದಿವ್ಯ ಬ್ರಹ್ಮ ರಥೋತ್ಸವವು ಸಹಸ್ರಾರು ಭಕ್ತಾದಿಗಳ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು.

ಕರ್ನಾಟಕ ಸರ್ಕಾರ ಧಾರ್ಮಿಕ ದತ್ತಿ ಇಲಾಖೆ, ಹಾಸನ ಜಿಲ್ಲಾಡಳಿತ ಮತ್ತು ಬೇಲೂರು ತಾಲೂಕು ಆಡಳಿತದ ಆದೇಶದ ಮೇರೆಗೆ ಪ್ರತಿ ವರ್ಷದಂತೆ ಶ್ರೀ ಚನ್ನಕೇ ಶವಸ್ವಾಮಿ ಅವರ ರಥೋತ್ಸವ ನೆಡಸಲು ಕಳೆದ 20 ದಿನಗಳಿಂದ ಸಕಲ ಸಿದ್ಧತೆಗಳೊಂದಿಗೆ ಇದೆ ಮಾರ್ಚ್ 23 ರಿಂದ ಆರಂಭಗೊಂಡು ಏಪ್ರಿಲ್ 5 ರ ವರೆಗೆ ವಿವಿಧ ಪೂಜಾ ಕೈಂಕರ್ಯಗಳನ್ನು ನೆರ ವೇರಿಸಲು ತೀರ್ಮಾನಿಸಿ ಸಾಂಪ್ರದಾಯಿಕವಾಗಿ ನಿತ್ಯ ಬಗೆ ಬಗೆ ಉತ್ಸವಾದಿ ಗಳನ್ನು ನೆರವೇರಿಸಿ ಇಂದು ಬೆಳಗ್ಗೆ 11.5 ರ ಗಳಿಗೆಯಲ್ಲಿ ದಿವ್ಯ ಬ್ರಹ್ಮ ರಥೋತ್ಸವವು ದೇಶ ವಿದೇಶ ಹಾಗೂ ರಾಜ್ಯ ಹೊರ ರಾಜ್ಯಗಳಿಂದ ಆಗಮಿಸಿದ್ದ ಸಹಸ್ರಾರು ಭಕ್ತಾದಿಗಳ ಸಮ್ಮುಖದಲ್ಲಿ ದಿವ್ಯ ಬ್ರಹ್ಮ ರಥವನ್ನು ಗೋವಿಂದ ಗೋವಿಂದ ಚನ್ನಕೇಶವ ಸ್ವಾಮಿ ಪಾದಕ್ಕೆ ಗೋವಿಂದ ಎಂಬ ಘೋಷಣೆಯೊಂದಿಗೆ ಬಸ್ಮಾಸುರ ಮೂಲೆಗೆ ಎಳೆದು ತರುವ ಮೂಲಕ ಯಶಸ್ವಿಯಾಗಿ ನೆರವೇರಿ ಸಿದರು.

ದಿವ್ಯ ಬ್ರಹ್ಮರಥೋತ್ಸವನಡೆಯುವವೇಳೆ ತಾಲೂಕಿನ ಸುತ್ತಮುತ್ತಲ ಗ್ರಾಮಸ್ಥರು ರಾಜ್ಯ ಹೊರರಾಜ್ಯಗಳಿಂದ ಆಗಮಿಸಿದ್ದ ಭಕ್ತಾದಿಗಳು ರಥಕ್ಕೆ ದವನ ಬಾಳೆಹಣ್ಣು ಎಸೆಯುವ ಮೂಲಕ ಭಕ್ತಿ ಮೆರೆದರು.

ಈ ಸಂದರ್ಭ ಮಾಜಿ ಸಚಿವ ಹಾಲಿ ಶಾಸಕ ಎಚ್ .ಡಿ.ರೇವಣ್ಣ, ಶಾಸಕ ಎಚ್.ಕೆ.ಸುರೇಶ್, ಮಾಜಿ ಸಚಿವ ಬಿ.ಶಿವರಾಂ, ಪುರಸಭೆ ಅಧ್ಯಕ್ಷೆ ಉಷಾ ಸತೀಶ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭನ್ವಿತಾ, ನಾರಾಯಣ ರಾಮಾನುಜ ಜೀಯರ್ ಸ್ವಾಮೀಜಿ, ತಹಸೀಲ್ದಾರ್ ಶ್ರೀಧರ್ ಕಂಕನವಾಡಿ, ಮಾಜಿ ಧರ್ಮದರ್ಶಿ ಯು.ಟಿ.ಕೇಶವಮೂರ್ತಿ, ದೇವಾಲಯದ ಕಾರ್ಯ ನಿರ್ವಹಣಾಧಿಕಾರಿ ಕೆ.ಎನ್.ಯೋಗೇಶ್ ಸೇರಿದಂತೆ ಪುರಸಭೆ ಮಾಜಿ ಅಧ್ಯಕ್ಷರಾದ ಜಿ.ಶಾಂತಕುಮಾರ್, ಬಿ.ಗಿರೀಶ್, ಎ.ಆರ್. ಅಶೋಕ್, ಎಂ.ಆರ್. ವೆಂಕಟೇಶ್, ತೀರ್ಥ ಕುಮಾರಿ, ಸದಸ್ಯರಾದ ಬಿ.ಸಿ.ಜಗದೀಶ್, ಶೈಲೇಶ್ ಸೇರಿದಂತೆ ಇತರರು ಹಾಜರಿದ್ದರು.

ಪ್ರಸಾದ ವಿತರಣೆ

ಇದೇ ಸಂದರ್ಭ ಸಾರ್ವಜನಿಕರು ದೇವಾಲಯದ ಮುಖ್ಯರಸ್ತೆ ಸೇರಿದಂತೆ ಇತರ ಸ್ಥಳಗಳಲ್ಲಿ ಬಗೆ ಬಗೆ ರೀತಿಯ ಪ್ರಸಾದ ಹಾಗೂ ತಂಪಾದ ಪಾನೀಯಗಳನ್ನು ಸ್ವಯಂಪ್ರೇರಿತವಾಗಿ ವಿತರಿಸಿದ್ದು ಕಂಡು ಬಂದಿತು.



ಶ್ರೀ ಶಂಭುನಾಥ ಸ್ವಾಮೀಜಿ ಸಾನ್ನಿಧ್ಯ | ವಿಶೇಷ ಪೂಜೆ

ಗ್ರಾಮದೇವತಾ ದೇಗುಲ ಜೀರ್ಣೋದ್ಧಾರ

ಹಾಸನ: ತಾಲೂಕು ಕಸಬಾ ಹೋಬಳಿ ಎತ್ತಿನಕಟ್ಟೆ ಗ್ರಾಮದಲ್ಲಿ ಮಂಗಳವಾರ ಶ್ರೀ ಗ್ರಾಮದೇವತಾ ದೇವಾಲಯ ಜೀರ್ಣೋದ್ಧಾರಮತ್ತು ವಿಗ್ರಹಪ್ರತಿಷ್ಠಾಪನಾ ಕಾರ್ಯಕ್ರಮದಲ್ಲಿ ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಹಾಸನ ಮತ್ತು ಕೊಡಗು ಶಾಖಾಮಠದ ಪೀಠಾಧ್ಯಕ್ಷರಾದ ಶ್ರೀ ಶಂಭುನಾಥ ಸ್ವಾಮೀಜಿಯವರ ದಿವ್ಯ ಸಾನ್ನಿಧ್ಯದಲ್ಲಿ ಮತ್ತು ಶಾಸಕರಾದ ಎಚ್.ಡಿ.ರೇವಣ್ಣ, ಶಾಸಕ ಸ್ವರೂಪ್ ಪ್ರಕಾಶ್ ಅವರು ಭಾಗವಹಿಸಿ ದೇವರಿಗೆ ವಿಶೇಷ ಪೂಜೆ ಸಲ್ಲಿಸಿದರು.ನೂತನವಾಗಿ ನಿರ್ಮಾಣವಾಗಿರುವ ದೇವಾಲಯದ ಜೀರ್ಣೋದ್ಧಾರ ಕಾರ್ಯಕ್ರಮದಲ್ಲಿ ಸುತ್ತಮುತ್ತಲ ಗ್ರಾಮಸ್ಥರು ಭಾಗವಹಿಸಿ ದೇವರ ಕೃಪೆಗೆ ಪಾತ್ರರಾದರು. ಈ ವೇಳೆ ಗ್ರಾಮಸ್ಥರ ಬಹುದಿನಗಳ ಬೇಡಿಕೆಯಾಗಿದ್ದ ಹೊಸದಾಗಿ ನಿರ್ಮಾಣವಾಗಿರುವ ದೇವೇಗೌಡ ಸಮುದಾಯ ಭವನವನ್ನು ಉದ್ಘಾಟಿಸಲಾಯಿತು. ಶಾಸಕ ಸ್ವರೂಪ್ ಪ್ರಕಶ್ ಅವರು ಮಾತನಾಡಿ, ದೇವೇಗೌಡ ಸಮುದಾಯ ಭವನವು ಗ್ರಾಮಸ್ಥರಿಗೆ ಶುಭ-ಸಮಾರಂಭಗಳಿಗೆ ಅನುಕೂಲವಾಗಲಿದೆ. ಅಚ್ಚುಕಟ್ಟಾಗಿ ನಿರ್ವಹಣೆ ಮಾಡಿ ಎಂದ ಅವರು, ಇನ್ನಷ್ಟು ಅಭಿವೃದ್ಧಿ ಕಾರ್ಯಗಳ ಕುರಿತು ಗ್ರಾಮದ ಮುಖಂಡರ ಜೊತೆ ಚರ್ಚಿಸಿ ಸಮಸ್ಯೆಗಳನ್ನು ಬಗೆಹರಿಸಿ ಅಭಿವೃದ್ಧಿ ಕಾಮಗಾರಿಗಳನ್ನು ಮಾಡಲಾಗುವುದು ಎಂದರು. ಸ್ಥಳೀಯ ಮುಖಂಡರುಗಳು, ಕಾರ್ಯಕರ್ತರುಗಳು, ಯುವಕರು, ಹಿರಿಯರು, ಸುತ್ತ ಮುತ್ತಲಿನ ಗ್ರಾಮದ ಸಾರ್ವಜನಿಕರು ಹಾಜರಿದ್ದರು.



ಮಹಾವೀರರು ಮಹಾನ್ ದಾರ್ಶನಿಕ

ಚನ್ನರಾಯಪಟ್ಟಣ: ಜೈನ ಧರ್ಮದ 24ನೇ ಮತ್ತು ಅಂತಿಮ ತೀರ್ಥಂಕರ ಭಗವಾನ್ ಮಹಾವೀರರು 30ನೇ ವಯಸ್ಸಿನಲ್ಲಿ ತಮ್ಮ ಲೌಕಿಕಸುಖವನ್ನು ತ್ಯಜಿಸಿ ಜೀವನದ ಸತ್ಯದಾರಿಯ ಹುಡುಕಾಟದಲ್ಲಿ ಸಾಗಿದ ಮಹಾನ್ ದಾರ್ಶನಿಕ ವ್ಯಕ್ತಿ ಎಂದು ಶಾಸಕ ಸಿ. ಎನ್. ಬಾಲಕೃಷ್ಣ ಹೇಳಿದರು.

ಪಟ್ಟಣದ ಮಿನಿ ವಿಧಾನ ಸೌಧದಲ್ಲಿ ಆಯೋಜಿಸಿದ್ದ ಭಗವಾನ್ ಮಹಾವೀರರ 2625ನೇ ಜಯಂತ್ಯುತ್ಸವ ಸಮಾರಂಭದಲ್ಲಿ ಮಾತನಾಡಿ, 12ವ?ಗಳ ಕಾಲ ತಮ್ಮ ಇಂದ್ರಿಯಗಳನ್ನು ಹಿಡಿತದಲ್ಲಿಟ್ಟುಕೊಂಡಿದ್ದ ಮಹಾವೀರರು ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ ಮತ್ತು ಅಪರಿಗ್ರಹ ಎಂಬ 5 ಪ್ರಮುಖ ತತ್ವಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದರು.

ಹಾಗಾಗಿ ಇಂದಿಗೂ ಕೂಡ ಜೈನ ಸಮುದಾಯ ಪ್ರಾಣಿ ಹಿಂಸೆ, ಅಸತ್ಯ, ಸುಳ್ಳು, ಮೋಸ, ಕಳ್ಳತನ ಸುಲಿಗೆಯನ್ನು ಸಹಿಸುವುದಿಲ್ಲ, ಲೌಕಿಕವಾದ ಸಂಬಂಧಗಳಿಗೆ ಭಾವನಾತ್ಮಕ ಸಂಬಂಧ ಬೆಳೆಸಿಕೊಂಡರೆ ಮೋಕ್ಷಸಿಗುವುದಿಲ್ಲ ಎಂದು ಪ್ರತಿಪಾದಿಸುತ್ತದೆ. ಜೈನ ಸಮುದಾಯದ ಪ್ರತಿಯೊಬ್ಬರೂ ಕೂಡ ಕ?ಪಟ್ಟು ದುಡಿಯುವ ಶ್ರಮಿಕರು. ದೇಶದ ಆರ್ಥಿಕತೆಗೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಭಗವಾನ್ ಮಹಾವೀರರ ಬೋಧನೆ ಹಾಗೂ ತತ್ವಗಳನ್ನು ಪಾಲಿಸಿದರೆ ಸದೃಢ ರಾ?ವನ್ನು ಕಾಣಬಹುದಾಗಿದೆ ಎಂದರು.

ಮನೆಗಳ ಕೀಲಿ ವಿತರಿಸುವ ಮೂಲಕ ಶುಭ ಹಾರೈಸಿದ ಶಾಸಕ ಶಿವಲಿಂಗೇಗೌಡ

ಫಲಾನುಭವಿಗಳಿಗೆ ಲಾಟರಿ ಮೂಲಕ ಮನೆ ಹಂಚಿಕೆ

ಅರಸೀಕೆರೆ: ನಗರದಲ್ಲಿ ದಶಕಗಳಿಂದ ಸ್ವಂತ ಸೂರು ಹೊಂದಿಸಿಕೊಳ್ಳಬೇಕೆಂಬ ಕನಸು ಕಾಣುತ್ತಾ ಬಂದಿದ್ದ, ನಿರಾಶ್ರಿತರು ಹಾಗೂ ಬಡವರ ಕನಸು ಕಡೆಗೂ ಸಾಕಾರ ರೂಪ ಪಡೆದಿದೆ.

ಸೋಮವಾರ ನಗರ ವ್ಯಾಪ್ತಿಯ ವಸತಿ ರಹಿತ ಫಲಾನುಭವಿಗಳಿಗೆ ಗೃಹ ನಿರ್ಮಾಣ ಮಂಡಳಿ ಅಧ್ಯಕ್ಷರೂ ಆದ, ಸ್ಥಳೀಯ ಶಾಸಕ ಕೆ.ಎಂ. ಶಿವಲಿಂಗೇಗೌಡ ನೂತನ ಮನೆಗಳ ಕೀ ವಿತರಿಸುವ ಮೂಲಕ ಶುಭ ಹಾರೈಸಿ, ಬಡವರ ಕನಸನ್ನು ನನಸು ಮಾಡಿದರು.ಹೌಸಿಂಗ್ ಫಾರ್ ಆಲ್ ಯೋಜನೆಯಡಿ ರಾಜ್ಯ ಮತ್ತು ಕೇಂದ್ರ ಸರ್ಕಾರದ ಜೊತೆಗೆ ಫಲಾನುಭವಿಯಿಂದ 1 ಲಕ್ಷ ಸ್ವೀಕರಿಸಿ, ನಗರದ ಸುಬ್ರಹ್ಮಣ್ಯ ಬೆಟ್ಟದ ತಪ್ಪಲಿನಲ್ಲಿ 1181 ಮನೆಗಳನ್ನು ನಿರ್ಮಿಸುತ್ತಿದ್ದು, ಈ ಪೈಕಿ ಮೊದಲ ಹಂತದಲ್ಲಿ ಕಾಮಗಾರಿ ಪೂರ್ಣಗೊಂಡಿರುವ 350 ಮನೆಗಳಲ್ಲಿ, 231 ಫಲಾನುಭವಿಗಳಿಗೆ ಲಾಟರಿ ಮೂಲಕ ಮನೆಗಳನ್ನು ಶಾಸಕರು ಹಂಚಿಕೆ ಮಾಡಿದರು. ನಂತರ ಅವರು ಮಾತನಾಡಿ, ನಗರಕ್ಕೆ ನೂರಾರು ವರ್ಷಗಳ ಇತಿಹಾಸವಿದ್ದು, ಕೆಲವು ಕುಟುಂಬಗಳು ನಗರದಲ್ಲಿ ಮನೆ ನಿರ್ಮಿಸಿಕೊಳ್ಳಬೇಕೆಂಬ ನನಸಾಗದೇ ದಿನ ದೂಡುತ್ತಾ ಬಂದಿದ್ದರು.

ಇಂತಹ ನಿರಾಶ್ರಿತರಿಗೆ ಸ್ವಂತ ಸೂರು ಕಲ್ಪಿಸಿಕೊಡಬೇಕೆಂಬ ಮಹದಾಸೆಯಿಂದ ನಾನು ಹೌಸಿಂಗ್ ಫಾರ್ ಆಲ್ ಯೋಜನೆಯನ್ನು ಕ್ಷೇತ್ರಕ್ಕೆ ಮಂಜೂರು ಮಾಡಿಸಿಕೊಂಡು ಬಂದು ಸುಬ್ರಹ್ಮಣ್ಯ ಬೆಟ್ಟದ ತಪ್ಪಲಿನ ಜಾಗ ಗೊತ್ತುಪಡಿಸಲಾಯಿತು.ರಾಜ್ಯ ಸರ್ಕಾರದಿಂದ ಎರಡೂವರೆ ಲಕ್ಷ, ಕೇಂದ್ರದಿಂದ ಒಂದೂವರೆ ಲಕ್ಷ ಹಾಗೂ ಫಲಾನುಭವಿಯಿಂದ 1 ಲಕ್ಷ ಪಡೆದು ಸುಸಜ್ಜಿತ ಮನೆಗಳನ್ನು ನಿರ್ಮಿಸಿಕೊಡಲಾಗಿದೆ ಎಂದರು. ಫಲಾನುಭವಿಗಳು ಇನ್ನು ಮುಂದೆ ಈ ನೂತನ ಮನೆಗಳಿಗೆ ನೀವೇ ಮಾಲೀಕರಾಗುತ್ತಿದ್ದು, ಮುಂದಿನ ನಿಮ್ಮ ಕುಟುಂಬದ ಜೀವನ ಸುಖಮಯವಾಗಿರಲಿ ಎಂದು ಆಶಯ ವ್ಯಕ್ತಪಡಿಸಿದರು.ನಗರಸಭೆ ನಿಕಟಪೂರ್ವ ಅಧ್ಯಕ್ಷ ಎಂ.ಸಮೀವುಲ್ಲಾ ಮಾತನಾಡಿ, ಬಡವರ ಬಗ್ಗೆ ವಿಶೇಷ ಕಾಳಜಿ ಹೊಂದಿರುವ ಶಾಸಕರು, ಎಲ್ಲರಿಗೂ ಮನೆ ಯೋಜನೆಯಂತಹ ಒಂದು ಬೃಹತ್ ಯೋಜನೆಯನ್ನು ತಾಲೂಕಿಗೆ ತಂದು ಸಾವಿರಾರು ವಸತಿ ರಹಿತ ಕುಟುಂಬಗಳಿಗೆ ಅನುಕೂಲ ಜೊತೆಗೆ ಆತ್ಮಸ್ಥೈರ್ಯ ತುಂಬುವ ನಿಟ್ಟಿನಲ್ಲಿ ಶಾಸಕರ ಈ ಜನಪರ ಕಾಳಜಿ ಎಲ್ಲರಿಗೂ ಆದರ್ಶವಾಗಿದೆ ಎಂದರು.



ಈ ನೂತನ ಬಡಾವಣೆಯು ಸಕಲ ಮೂಲಭೂತ ಸೌಕರ್ಯಗಳಿಂದ ಕೂಡಿದ್ದು, ಫಲಾನಭವಿಗಳು ಸಾಮರಸ್ಯದಿಂದ ಇಲ್ಲಿ ತಮ್ಮ ಬದುಕು ಕಟ್ಟಿಕೊಳ್ಳಿ ಎಂದು ಶುಭ ಹಾರೈಸಿದರು.ಫಲಾನುಭವಿಗಳೇ ತಮ್ಮ ಅದೃಷ್ಟದ ಮನೆಗಳನ್ನು ತಮ್ಮ ಅಮೃತ ಹಸ್ತದಿಂದ ತಾವೇ ಲಾಟರಿ ಮೂಲಕ ಆಯ್ದುಕೊಂಡಿದ್ದು ಸಹಜವಾಗಿ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು.

ಸಮಾರಂಭದಲ್ಲಿ ನಗರಯೋಜನಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅರುಣ್ ಕುಮಾರ್, ತಾ.ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಗೀಜಿಹಳ್ಳಿ ಧರ್ಮಶೇಖರ್, ನಗರಸಭೆ ಪೌರಾಯುಕ್ತ ಕೃಷ್ಣಮೂರ್ತಿ, ಮಾಜಿ ಸದಸ್ಯರಾದ ಜಿ.ಟಿ.ಗಣೇಶ್, ದರ್ಶನ್, ಯುವರಾಜ್, ಮೇಲುಗಿರಿಗೌಡ, ಆಶ್ರಯ ಸಮಿತಿ ಸದಸ್ಯರಾದ ಶ್ರೀನಿವಾಸ್, ಮಹಮದ್ ಪಾಷ, ಅಣ್ಣಾದೊರೆ ಮೊದಲಾದವರಿದ್ದರು.

ಲೋಪವಿಲ್ಲ: ಫಲಾನುಭವಿಗಳ ಆಯ್ಕೆ ಪ್ರಕ್ರಿಯೆಯನ್ನು ಪಾರದರ್ಶಕವಾಗಿ ಮಾಡಲಾಗಿದೆ. ಸ್ಥಳೀಯ ಚುನಾಯಿತ ನಗರಸಭೆ ಸದಸ್ಯರನ್ನು ಒಡಗೂಡಿ, ವಾರ್ಡ್‌ವಾರು ಸಭೆ ನಡೆಸಿ ವಸತಿರಹಿತ ಅರ್ಹ ಫಲಾನುಭವಿಗಳನ್ನು ಸಾರ್ವಜನಿಕರ ಸಮ್ಮುಖದಲ್ಲಿ ಆಯ್ಕೆ ಮಾಡಿ, ಅರ್ಹರ ಪಟ್ಟಿ ಸಿದ್ಧಪಡಿಸಲಾಗಿದೆ. ಯಾವುದೇ ಜಾತಿ, ಧರ್ಮ ನೋಡದೆ ಅರ್ಹರಿಗಷ್ಟೇ ಮನೆಗಳನ್ನು ವಿತರಿಸಲಾಗುತ್ತಿದ್ದು, ಇದಕ್ಕೆ ರಾಜಕೀಯ ಬಣ್ಣ ಕಟ್ಟುವುದಾಗಲೀ, ಅನವಶ್ಯಕ ಟೀಕೆ-ಟಿಪ್ಪಣಿ ಮಾಡುವುದನ್ನು ಸಹಿಸುವುದಿಲ್ಲ ಎಂದು ಶಾಸಕ ಕೆ.ಎಂ.ಶಿವಲಿಂಗೇಗೌಡ ಇದೇ ಸಂದರ್ಭದಲ್ಲಿ ಖಡಕ್ ಎಚ್ಚರಿಕೆ' ನೀಡಿದರು.

ಯಕ್ಷಗಾನ ಮೇಳ ಯಶಸ್ವಿ

ಬೇಲೂರು: ದೇವಸ್ಥಾನಗಳ ತವರೂರಾದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯಕ್ಷಗಾನ ಮೇಳವು ಬಹಳ ಪ್ರಾಮುಖ್ಯತೆ ಪಡೆದುಕೊಂಡಿದ್ದು ಹಿಂದೂ ಧರ್ಮದವರಿಗೆ ಮನೋರಂಜನೆ ಜತೆಗೆ ಧಾರ್ಮಿಕ ಬೋಧನೆ ನೀಡುತ್ತಿದೆ ಎಂದು ಶ್ರೀ ಕಟೀಲು ಕ್ಷೇತ್ರದ ಪ್ರಧಾನ ಅರ್ಚಕ ಲಕ್ಷ್ಮೀ ನಾರಾಯಣ ಅಸರಣ್ಣ ಹೇಳಿದರು.

ಬೇಲೂರು ತಾಲೂಕು ಅರೇಹಳ್ಳಿ ಹೋಬಳಿಯ ಉತ್ತೊಳಲು ಗ್ರಾಮದಲ್ಲಿರುವ ಶ್ರೀ ಅಮೃತೇಶ್ವರ ದೇವಸ್ಥಾನದ ಆವರಣದಲ್ಲಿ ಕಾರ್ತಿ ಸೇವಾ ಸಮಿತಿ ಅಧ್ಯಕ್ಷ ಇಂದಿರಾ ಶಿವಾನಂದ್ ನೇತೃತ್ವದಲ್ಲಿ ಕಟೀಲು ಶ್ರೀ ದುರ್ಗಾ ಪರಮೇಶ್ವರಿ ಪ್ರಸಾದಿತ ದಶಾವತಾರ ಯಕ್ಷಗಾನ ಮಂಡಳಿ ವತಿಯಿಂದ ಆಯೋಜಿಸಲಾಗಿದ್ದ ಶ್ರೀದೇವಿ ಮಹಾತ್ಮೆ ಯಕ್ಷಗಾನ ಕಾರ್ಯಕ್ರಮದಲ್ಲಿ ನೆರೆದಿದ್ದ ಭಕ್ತಾದಿಗಳಿಗೆ ಧಾರ್ಮಿಕ ಬೋಧನೆ ನೀಡಿದ ಅವರು, ದುರ್ಗಾಪರಮೇಶ್ವರಿಗೆ ಯಕ್ಷಗಾನ ಸೇವೆಯು ಅಚ್ಚುಮೆಚ್ಚು, ಆರಂಭದಲ್ಲಿದ್ದಂತಹ ಒಂದು ಮೇಳ ಇಂದು ಏಳು ಮೇಳಗಳಾಗಿ ಮಾರ್ಪಟ್ಟಿದೆ. ನಮಗೆ ಕಷ್ಟಗಳು ಬಂದಾಗ ಮನಸ್ಸಿನಲ್ಲಿ ನಮಗಿಷ್ಟವಾದ

ಈ ಕಾರ್ಯಕ್ರಮದಲ್ಲಿ ಕಾರ್ತಿ ಸೇವಾ ಸಮಿತಿ ಅಧ್ಯಕ್ಷ ಇಂದಿರಾ ಶಿವಾನಂದ್, ಶಾಸಕ ಹುಲ್ಲಳ್ಳಿ ಸುರೇಶ್, ಸಕಲೇಶಪುರ ಶಾಸಕ ಸಿಮೆಂಟ್ ಮಂಜು,ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ, ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅಮಿತ್ ಶೆಟ್ಟಿ, ಮಾಜಿ ಶಾಸಕ ವಿಶ್ವನಾಥ್, ಕಾರ್ತಿ ಸೇವಾ ಸಮಿತಿ ಕಾರ್ಯದರ್ಶಿ, ಖಜಾಂಚಿ ಹಾಗೂ ಎಲ್ಲಾ ಪದಾಧಿಕಾರಿಗಳು, ಗ್ರಾಮಸ್ಥರು ಇದ್ದರು.



ಸಾಂಪ್ರದಾಯಿಕ ಕಲೆ ಬೆಳೆಸಿ; ದೇವರನ್ನು ಕುರಿತು ಪ್ರಾರ್ಥಿಸಿದರೆ ಅರ್ಧ ಭಾರ ಕಡಿಮೆಯಾದಂತೆ ಭಾಸವಾಗುತ್ತದೆ. ನಾವು ದೇವರನ್ನು ಗಟ್ಟಿ ಯಾಗಿ ಹಿಡಿದುಕೊಂಡಾಗ ದೇವರು ಸಹ ನಮ್ಮನ್ನು ಗಟ್ಟಿಯಾಗಿ ಹಿಡಿದಿಟ್ಟುಕೊಳ್ಳುತ್ತಾನೆ. ವಿಶ್ವಶಾಂತಿಯನ್ನು ಸಾರುವ ಸನಾತನ ಧರ್ಮವನ್ನು ಉಳಿಸುವ, ರಕ್ಷಿಸುವ ಜವಾಬ್ದಾರಿ ನಮ್ಮ ಮೇಲಿದ್ದು ಧಾರ್ಮಿಕ ಸಾಂಪ್ರದಾಯಿಕ ಕಲೆಯನ್ನು ಇನ್ನಷ್ಟು ಬೆಳೆಸಬೇಕು ಎಂದು ಲಕ್ಷ್ಮೀ ನಾರಾಯಣ ಅಸರಣ್ಣ ತಿಳಿಸಿದರು.

ಗರಿಷ್ಠ 34° | ಕನಿಷ್ಠ 21°

ಹೊಸದಿಗಂತ

ಬುಧವಾರ
1 ಏಪ್ರಿಲ್ 2026

ತುಮಕೂರು

ಗದ್ದುಗೆ ದರ್ಶನ...



ತುಮಕೂರು ಸಿದ್ದಗಂಗಾ ಮಠದ ಲಿಂಗೈಕ್ಯ ಡಾ. ಶ್ರೀ ಶಿವಕುಮಾರ ಸ್ವಾಮೀಜಿಯವರ 119ನೇ ಜಯಂತಿ ಹಿನ್ನೆಲೆಯಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಶ್ರೀಮಠಕ್ಕೆ ಭೇಟಿ ನೀಡಿ ಶ್ರೀಗಳ ಗದ್ದುಗೆ ದರ್ಶನ ಪಡೆದರು.

ಏತ ನೀರಾವರಿ ಯೋಜನೆಗೆ ಚಾಲನೆ |೨
ಪರೀಕ್ಷೆಗೆ 203 ವಿದ್ಯಾರ್ಥಿಗಳ ಗೈರು |೩
ಸಹಿ ಸಂಗ್ರಹ ಆಂದೋಲನ |೪

ಕಿರುಸುದ್ದಿ

ಶ್ರೀಮಠಕ್ಕೆ ಬಿಎಸ್‌ವೈ ಭೇಟಿ

ತುಮಕೂರು: ಕಾಯಕ ಯೋಗಿ, ಕರ್ನಾಟಕ ರತ್ನ, ತ್ರಿವಿಧ ದಾಸೋಹ ಮೂರ್ತಿ, ಆಧುನಿಕ ಬಸವಣ್ಣ ಸಿದ್ದಗಂಗಾ ಮಠದ ಲಿಂಗೈಕ್ಯ ಡಾ. ಶ್ರೀ ಶಿವಕುಮಾರ ಸ್ವಾಮೀಜಿಯವರ 119ನೇ ಜಯಂತಿ ಹಿನ್ನೆಲೆಯಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರು ಇಂದು ಶ್ರೀಮಠಕ್ಕೆ ಭೇಟಿ ನೀಡಿ ಶ್ರೀಗಳ ಗದ್ದುಗೆ ದರ್ಶನ ಪಡೆದರು. ಸಿದ್ದಗಂಗಾ ಮಠಕ್ಕೆ ಭೇಟಿ ನೀಡಿದ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರು ಲಿಂಗೈಕ್ಯ ಡಾ. ಶ್ರೀ ಶಿವಕುಮಾರ ಸ್ವಾಮೀಜಿಯವರ ಗದ್ದುಗೆ ಮಂದಿರಕ್ಕೆ ತೆರಳಿ ಗದ್ದುಗೆಗೆ ವಿಶೇಷ ಪೂಜೆ ಸಲ್ಲಿಸಿ ಆಶೀರ್ವಾದ ಪಡೆದರು. ನಂತರ ಮಠಾಧ್ಯಕ್ಷರಾದ ಶ್ರೀ ಸಿದ್ದಲಿಂಗ ಸ್ವಾಮೀಜಿಯವರನ್ನು ಭೇಟಿ ಮಾಡಿ ಫಲತಾಂಬೂಲ ನೀಡಿ ಆಶೀರ್ವಾದ ಪಡೆದರು. ಶ್ರೀಗಳೊಂದಿಗೆ ಸ್ವಲ್ಪ ಹೊತ್ತು ಸಮಾಲೋಚನೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಬಿ.ಎಸ್. ಯಡಿಯೂರಪ್ಪನವರು, ಶ್ರೀಗಳ 119ನೇ ಜನ್ಮ ಜಯಂತ್ಯೋತ್ಸವದ ಶುಭ ಸಂದರ್ಭದಲ್ಲಿ ಗದ್ದುಗೆ ದರ್ಶನ ಪಡೆಯುವಂತಹ ಸೌಭಾಗ್ಯ ನನಗೆ ಸಿಕ್ಕಿದೆ ಎಂದರು. ನಾಳೆ ಶ್ರೀಗಳ 119ನೇ ಜಯಂತಿ ಮತ್ತು ಗುರುವಂದನಾ ಮಹೋತ್ಸವ ನಡೆಯುತ್ತಿದ್ದು, ಈ ಅಭೂತ ಪೂರ್ವ ಕಾರ್ಯಕ್ರಮದಲ್ಲಿ ದೇಶದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಭಾಗವಹಿಸುತ್ತಿರುವುದು ಸ್ವಾಗತಾರ್ಹ. ರಾಷ್ಟ್ರಪತಿಗಳು ಶ್ರೀಕ್ಷೇತ್ರಕ್ಕೆ ಆಗಮಿಸುತ್ತಿರುವುದು ತುಮಕೂರಿನ ಮೆರಗನ್ನು ಮತ್ತಷ್ಟು ಹೆಚ್ಚಿಸಿದೆ ಎಂದರು. ಉಪಚುನಾವಣೆಯಲ್ಲಿ ಬಿಜೆಪಿ ಗೆಲುವು ರಾಜ್ಯದ ಎರಡು ವಿಧಾನಸಭಾ ಕ್ಷೇತ್ರಗಳಿಗೆ ನಡೆಯಲಿರುವ ಉಪಚುನಾವಣೆಯಲ್ಲಿ ಭಾರತೀಯ ಜನತಾ ಪಾರ್ಟಿ ಅಭ್ಯರ್ಥಿಗಳು ನೂರಕ್ಕೆ ನೂರರಷ್ಟು ಗೆಲುವು ಸಾಧಿಸಲಿದ್ದಾರೆ ಎಂಬ ವಿಶ್ವಾಸವನ್ನು ಅವರು ವ್ಯಕ್ತಪಡಿಸಿದರು. ಶಾಸಕ ಜ್ಯೋತಿಗಣೇಶ್, ಜಿಲ್ಲಾ ಬಿಜೆಪಿ ಅಧ್ಯಕ್ಷ ರವಿಶಂಕರ್ ಹೆಬ್ಬಾಕ, ರುದ್ರೇಶ್, ಮೈದಾಳ ಮಂಜುನಾಥ್, ಮರಿಸ್ವಾಮಿ, ಹೆಚ್.ಎನ್. ದೀಪಕ್, ಬಿಜೆಪಿ ಮುಖಂಡರಾದ ಧನುಷ್, ವಿರೂಪಾಕ್ಷಪ್ಪ, ಚೇತನ್, ಗಣೇಶ್, ರಾಜಶೇಖರ್, ಶಂಕರ್, ಮಾಜಿ ಮೇಯರ್ ಬಿ.ಜಿ. ಕೃಷ್ಣಪ್ಪ ಉಪಸ್ಥಿತರಿದ್ದರು.

ಫಲಾನುಭವಿಗೆ ವ್ಹೀಲ್‌ಚೇರ್ ವಿತರಣೆ

ಹುಳಿಯಾರು: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ಜನಸಾಮಾನ್ಯರ ಕಷ್ಟಗಳಿಗೆ ಸ್ಪಂದಿಸುವ 'ಜನಮಂಗಲ' ಕಾರ್ಯಕ್ರಮದ ಅಡಿಯಲ್ಲಿ ಚಿಕ್ಕನಾಯಕನಹಳ್ಳಿ ತಾಲೂಕಿನ ಹುಳಿಯಾರು ವಲಯದ ಇಂದಿರಾನಗರದ ಫಲಾನುಭವಿಗೆ ವೀಲ್ ಚೇರ್ ವಿತರಿಸಲಾಯಿತು. ಇಂದಿರಾನಗರ ಕಾರ್ಯಕ್ಷೇತ್ರದ ಮೆಹರೂನ್ನಿಸಾ ಎಂಬುವವರಿಗೆ ಪೂಜ್ಯ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆಯವರು ಮಂಜೂರು ಮಾಡಿದ್ದ ವೀಲ್ ಚೇರ್ ಅನ್ನು ತಾಲೂಕು ಯೋಜನಾಧಿಕಾರಿಗಳಾದ ಡಿ. ರಾಮಚಂದ್ರ ಅವರು ಫಲಾನುಭವಿಯ ನಿವಾಸಕ್ಕೆ ಭೇಟಿ ನೀಡಿ ಹಸ್ತಾಂತರಿಸಿದರು. ವಲಯದ ಮೇಲ್ವಿಚಾರಕಿ ಭಾಗ್ಯಮ್ಮ, ಸೇವಾ ಪ್ರತಿನಿಧಿ ಶಾರದಮ್ಮ, ಒಕ್ಕೂಟದ ಪದಾಧಿಕಾರಿಗಳು ಹಾಗೂ ಸಂಘದ ಸದಸ್ಯರು ಉಪಸ್ಥಿತರಿದ್ದರು.

ನೇಣುಬಿಗಿದ ಸ್ಥಿತಿಯಲ್ಲಿ ಹೆಲ್ತ್ ಇನ್‌ಸ್ಪೆಕ್ಟರ್ ಶವಪತ್ತೆ

ತುಮಕೂರು: ಖಾಸಗಿ ಜಾಗವೊಂದರಲ್ಲಿ ನೇಣುಬಿಗಿದ ಸ್ಥಿತಿಯಲ್ಲಿ ಹೆಲ್ತ್ ಇನ್‌ಸ್ಪೆಕ್ಟರ್ ಶವಪತ್ತೆ ಆಗಿರುವಂತಹ ಘಟನೆ ತುಮಕೂರು ಜಿಲ್ಲೆಯ ಕುಣಿಗಲ್ ತಾಲೂಕಿನ ತಾವರೆಕೆರೆ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ಉಮೇಶ್ ಮೃತ ಹೆಲ್ತ್ ಇನ್‌ಸ್ಪೆಕ್ಟರ್. ಹುಟ್ಟುಹಬ್ಬದ ದಿನವೇ ನೇಣು ಬಿಗಿದ ಸ್ಥಿತಿಯಲ್ಲಿ ಶವ ಪತ್ತೆ ಆಗಿದ್ದು, ಸದ್ಯ ಸಾಕಷ್ಟು ಅನುಮಾನಗಳಿಗೆ ಕಾರಣವಾಗಿದೆ. ಸಾವಿನ ಬಗ್ಗೆ ದೂರು ನೀಡಿದ ಬಳಿಕ ಪೊಲೀಸರು ಮುಂದಿನ ತನಿಖೆ ಕೈಗೊಳ್ಳಲಿದ್ದಾರೆ. ವರ್ಷದ ಹಿಂದೆ ಸ್ಕ್ಯಾವೆಂಜರ್ ಆಕ್ಟ್ ಅಡಿ ಉಮೇಶ್ ಅಮಾನತಾಗಿದ್ದರು. ನಾಲ್ಕು ತಿಂಗಳ ಬಳಿಕ ಮತ್ತೆ ಹೆಲ್ತ್ ಆಫೀಸರ್ ಆಗಿ ಕರ್ತವ್ಯಕ್ಕೆ ಹಾಜರಾಗಿದ್ದರು. ಪ್ರಸ್ತುತ ಹುಲಿಕುಂಟೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು. ಆದರೆ ಇದೀಗ ನೇಣುಬಿಗಿದ ಸ್ಥಿತಿಯಲ್ಲಿ ಅವರ ಶವ ಪತ್ತೆ ಆಗಿದೆ. ಅದರಲ್ಲೂ ಹುಟ್ಟುಹಬ್ಬದ ದಿನದಂದೇ ಹೀಗಾಗಿರುವುದು ಸಾಕಷ್ಟು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ. ಸದ್ಯ ಸ್ಥಳಕ್ಕೆ ತಾವರೇಕೆರೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ಮಾಡಿದ್ದಾರೆ. ತಂದೆಯ ಸಾವಿನ ಸಂಗತಿ ತಿಳಿದು ಉತ್ತರ ಭಾರತದಿಂದ ಉಮೇಶ್ ಅವರ ಮಗಳು ಬರುತ್ತಿದ್ದಾರೆ. ಮಗಳು ಬಂದ ನಂತರ ಸಾವಿನ ಬಗ್ಗೆ ದೂರು ನೀಡಿದ ಬಳಿಕ ಪೊಲೀಸರು ಮುಂದಿನ ತನಿಖೆ ಕೈಗೊಳ್ಳಲಿದ್ದಾರೆ.

ತೀವ್ರ ಕ್ರಮಕ್ಕೆ ಕಟ್ಟುನಿಟ್ಟಿನ ಸೂಚನೆ: ಗೃಹಸಚಿವ ಡಾ.ಜಿ.ಪರಮೇಶ್ವರ್

ಕುಡಿವ ನೀರು ಒದಗಿಸಿ

ತುಮಕೂರು: ಮಾರ್ಚ್ 15ರ ನಂತರ ತೀವ್ರ ಬೇಸಿಗೆ ಆರಂಭವಾಗಿದ್ದು, ತುಮಕೂರು ಜಿಲ್ಲೆಯಲ್ಲಿ 100 ಹಳ್ಳಿಗಳಲ್ಲಿ ಕುಡಿಯುವ ನೀರಿಗೆ ಸಮಸ್ಯೆ ಆಗುವ ಬಗ್ಗೆ ಗುರುತಿಸಿದ್ದು, ಈ ಹಳ್ಳಿಗಳಿಗೆ ಕುಡಿಯುವ ನೀರಿನ ಯಾವುದೇ ಸಮಸ್ಯೆಯಾಗದಿರುವಂತೆ ಸೂಕ್ತ ಕ್ರಮ ವಹಿಸಲು ಅಧಿಕಾರಿಗಳಿಗೆ ಸೂಚಿಸಿರುವುದಾಗಿ ಗೃಹ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ. ಜಿ. ಪರಮೇಶ್ವರ ಹೇಳಿದ್ದಾರೆ.

ನಗರದ ಸ್ಮಾರ್ಟ್ ಸಿಟಿ ಸಭಾಂಗಣದಲ್ಲಿ ಜಿಲ್ಲೆಯ ಎಲ್ಲಾ ಹಂತದ ಅಧಿಕಾರಿಗಳೊಂದಿಗೆ ಕುಡಿಯುವ ನೀರಿನ ಕುರಿತು ಪ್ರಗತಿ ಪರಿಶೀಲನಾ ಸಭೆ ನಡೆಸಿದ ಬಳಿಕ ಅವರು ಸುದ್ದಿಗಾರರಿಗೆ ಮಾಹಿತಿ ನೀಡಿದರು.

ಇದಲ್ಲದೆ 4ನೇ ಹಂತವಾಗಿ ಈ ಮೂರೂ ಕ್ರಮಗಳು ಸಾಧ್ಯವಾಗದಿದ್ದಲ್ಲಿ ಬೋರ್‌ವೆಲ್ ಕೊರೆಸಿ ನೀರು ಸರಬರಾಜು ಮಾಡುವಂತೆ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ಬೋರ್‌ವೆಲ್ ಕೊರೆಸಲು ಬೇಕಿರುವ ಅನುಮತಿಯನ್ನು ಜಿಲ್ಲಾಧಿಕಾರಿ ಅಥವಾ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಕ್ಷಣ ನೀಡುವಂತೆ ಹಾಗೂ ಬೆಸ್ಕಾಂ ಅಧಿಕಾರಿಗಳು ಕುಡಿಯುವ ನೀರಿನ ಯೋಜನೆಗಳಿಗೆ ಸಂಬಂಧಿಸಿದಂತೆ ತಕ್ಷಣ ವಿದ್ಯುತ್ ಸಂಪರ್ಕ ಕಲ್ಪಿಸುವಂತೆ ಸೂಚನೆ ನೀಡಲಾಗಿದೆ. ಈ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಪ್ರಸಕ್ತ ಬೇಸಿಗೆಗೆ ಯಾವುದೇ ನೀರಿನ ಸಮಸ್ಯೆ ಉದ್ಭವಿಸದಂತೆ ಕ್ರಮವಹಿಸಲು ಅಧಿಕಾರಿಗಳಿಗೆ ಸೂಚಿಸಿರುವುದಾಗಿ ಅವರು ತಿಳಿಸಿದರು.

ಭಾರತೀಯ ಭೂವಿಜ್ಞಾನ ಸಮೀಕ್ಷೆ ವರದಿ ಪ್ರಕಾರ ತುಮಕೂರು ಜಿಲ್ಲೆಯ ಬಹುತೇಕ ಎಲ್ಲಾ ಪ್ರದೇಶವು ಭೂಭಾಗದ ತಳಭಾಗದಲ್ಲಿ ಗ್ರಾನೈಟ್ ಪದರ ಇರುವುದನ್ನು ಪತ್ತೆಹಚ್ಚಿದ್ದು, ಈ ಕಾರಣದಿಂದ ಜಿಲ್ಲೆಯ ಬಹುತೇಕ ಭಾಗಗಳಲ್ಲಿ ನೀರಿನ ಅಂತರ್ಜಲಮಟ್ಟ ಬೇಗ ಕುಸಿಯಲು ಕಾರಣವಾಗಿದೆ. ಇದರಲ್ಲಿ ಕೋಲಾರ ಮತ್ತು ತುಮಕೂರು ಜಿಲ್ಲೆಗಳನ್ನು ಅತಿಹೆಚ್ಚು ನೀರಿನ ಶೋಷಣೆ ಮಾಡಿದ ಜಿಲ್ಲೆಗಳೆಂದು ಅದು ಗುರುತಿಸಿದೆ. ಈ ಹಿಂದೆ ಕೋಲಾರ ಜಿಲ್ಲೆಯಲ್ಲಿ ಬೋರ್‌ವೆಲ್ ಕೊರೆಯದಂತೆ ನಿರ್ಬಂಧ ಹೇರಲಾಗಿತ್ತು. ಅಂತೆಯೇ, ತುಮಕೂರು ಜಿಲ್ಲೆಯಲ್ಲಿಯೂ ಅಂತಹ ಸ್ಥಿತಿ ನಿರ್ಮಾಣವಾಗಲು ಅಚ್ಚರಿಯಿಲ್ಲ. ಈ ಹಿನ್ನೆಲೆಯಲ್ಲಿ ಅಂತರ್ಜಲ ವೃದ್ಧಿಸಿಕೊಳ್ಳುವ ಹಾಗೂ ನೀರಿನ ಸಮಸ್ಯೆ ನೀಗಿಸಲು ಶಾಶ್ವತ ಯೋಜನೆಗಳನ್ನು ರೂಪಿಸುವಂತೆ ಅಧಿಕಾರಿಗಳಿಗೆ ಸೂಚಿಸಿರುವುದಾಗಿ ಅವರು ತಿಳಿಸಿದರು.



> ತುಮಕೂರು ಜಿಲ್ಲೆಯ ಪಾವಗಡ ಹೊರತುಪಡಿಸಿ ಎಲ್ಲಾ ತಾಲ್ಲೂಕುಗಳೂ ಸೇರಿದಂತೆ 100 ಹಳ್ಳಿಗಳಲ್ಲಿ ಕುಡಿಯುವ ನೀರಿನ ತತ್ವಾರ ಎದುರಾಗಬಹುದೆಂದು ಗುರುತಿಸಲಾಗಿದ್ದು, ಈ ಹಳ್ಳಿಗಳಲ್ಲಿ ಈಗಾಗಲೇ ಟ್ಯಾಂಕರ್ ಮೂಲಕ, ಖಾಸಗಿ ಬೋರ್‌ವೆಲ್‌ಗಳ ಮೂಲಕ ಹಾಗೂ ಸಮೀಪದ ನೀರಿನ ಲಭ್ಯತೆಯನುಸಾರ ಸರಬರಾಜಿಗೆ ಕ್ರಮಕೈಗೊಳ್ಳಲಾಗಿದೆ.
>
> ■ ಡಾ.ಜಿ. ಪರಮೇಶ್ವರ್, ಜಿಲ್ಲಾ ಉಸ್ತುವಾರಿ ಸಚಿವ

ನಗರ ಸ್ಥಳೀಯ ಸಂಸ್ಥೆಗಳಲ್ಲೂ ನೀರಿನ ಸಮಸ್ಯೆ ಎದುರಾಗುವ ಸಾಧ್ಯತೆಗಳಿದ್ದು, ಕನಿಷ್ಠ 2 ದಿನಕ್ಕೊಮ್ಮೆಯಾದರೂ ನೀರು ಸರಬರಾಜು ಮಾಡುವ ಮೂಲಕ ಸಾರ್ವಜನಿಕರಿಗೆ ನೆರವಾಗುವಂತೆ ಸೂಚಿಸಿರುವುದಾಗಿ ಸಚಿವರು ತಿಳಿಸಿದರು.

ತುಮಕೂರು ನಗರದ ನೀರಿನ ಮೂಲವಾಗಿರುವ ಹೇಮಾವತಿ ನೀರಿನ ಶೇಖರಣಾ ಘಟಕ ಬುಗುಡನಹಳ್ಳಿ ಕೆರೆಯಲ್ಲಿ ನೀರಿನ ಪ್ರಮಾಣದ ಆಧಾರದ ಮೇಲೆ ಹೇಮಾವತಿ ನೀರು ಹರಿಸುವಂತೆ ಈಗಾಗಲೇ ಹಾಸನದ ಜಿಲ್ಲಾ ಉಸ್ತುವಾರಿ ಸಚಿವರೊಂದಿಗೆ ಚರ್ಚಿಸಲಾಗಿದೆ. ಜಿಲ್ಲಾಡಳಿತವು ಸರ್ಕಾರಕ್ಕೆ ಮನವಿಯನ್ನೂ ಸಲ್ಲಿಸಲಿದ್ದು, ಕನಿಷ್ಠ 2 ಟಿಎಂಸಿ ನೀರು ಹರಿಸುವಂತೆ ಕೋರುವುದಾಗಿ ಅವರು ತಿಳಿಸಿದರು.

ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಬಿರುಬೇಸಿಗೆ ಕಾರಣ ಕಾಡ್ಗಿಚ್ಚು ಹಬ್ಬುವ ಸಂದರ್ಭವಿದೆ. ಈ ಹಿನ್ನೆಲೆಯಲ್ಲಿ ಅಗ್ನಿಶಾಮಕ ಇಲಾಖೆಯವರು ತಮ್ಮ ವ್ಯಾಪ್ತಿಯ ಘಟಕಗಳೊಂದಿಗೆ ಪರಿಶೀಲನೆ ನಡೆಸಿ ತೀವ್ರ ನಿಗಾವಹಿಸುವಂತೆ ಸೂಚಿಸಲಾಗಿದೆ. ಅಲ್ಲದೆ, ಜಿಲ್ಲೆಯ ಕೆಲವೆಡೆ ಚಿರತೆಯ ಕಾಟ ಹೆಚ್ಚಿರುವ ಕಾರಣ ಸಾಕಷ್ಟು ಬೋನುಗಳ ದಾಸ್ತಾನು ಇಟ್ಟುಕೊಳ್ಳುವಂತೆ ಸೂಚಿಸಿರುವುದಾಗಿ ಅವರು ಹೇಳಿದರು.

ಮಾರ್ಚ್ 17ರಂದು ಜಿಲ್ಲೆಯ ಶಿರಾ ಭಾಗದಲ್ಲಿ ಸುರಿದ ಭಾರಿ ಆಲಿಕಲ್ಲು ಮಳೆಯಿಂದಾಗಿ ಅಂದಾಜು ಸುಮಾರು 4ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ದಾಳಿಂಬೆ, ಅಡಿಕೆ, ರೇಷ್ಮೆ ಇತ್ಯಾದಿ ಬೆಳೆಗಳು ನಷ್ಟವಾಗಿವೆ. ಈ ಬಗ್ಗೆ ಮಂಗಳವಾರ ಸ್ಥಳ ಪರಿಶೀಲನೆ ನಡೆಸಲಾಯಿತು. ನಷ್ಟಕ್ಕೊಳಗಾದ ರೈತರಿಗೆ ಬೆಳೆ ವಿಮೆ ಪರಿಹಾರ ನೀಡುವ ಸಂಬಂಧ ಹಾಗೂ ವಿಪತ್ತು ನಿರ್ವಹಣೆ ನಿಧಿಯಿಂದ ರೈತರಿಗೆ ಪರಿಹಾರ ನೀಡುವ ಸಂಬಂಧ ಚರ್ಚಿಸಲಾಗಿದೆ ಎಂದರು.

ಕೋಟ್ಯಾಂತರ ರೂಪಾಯಿ ಹೂಡಿಕೆ ಮಾಡಿ ತೋಟಗಾರಿಕೆ ಬೆಳೆ ಬೆಳೆದಿರುವ ರೈತರು ಸಂಕಷ್ಟಕ್ಕೀಡಾಗಿರುವುದು ಅತ್ಯಂತ ನೋವಿನ ವಿಚಾರ. ಸರ್ಕಾರ ಎಂದಿಗೂ ರೈತರ ಪರವಾಗಿ ನಿಲ್ಲಲಿದ್ದು, ಪರಿಹಾರ ಒದಗಿಸಲು ಸೂಕ್ತ ಕ್ರಮವಹಿಸಲಿದೆ. ರೈತರು ಯಾವುದೇ ಕಾರಣಕ್ಕೂ ಆತಂಕ ಪಡುವ ಅಗತ್ಯವಿಲ್ಲ ಎಂದು ಸಚಿವರು ತಿಳಿಸಿದರು. ಇಂದಿನ ಶಿರಾ ಭೇಟಿ ಸಂದರ್ಭದಲ್ಲಿ ಅಲ್ಲಿನ ಆಸ್ಪತ್ರೆಗೆ ಭೇಟಿ ನೀಡಲಾಯಿತು. ಶಿರಾ ತಾಲ್ಲೂಕಿನಲ್ಲಿ ಸುಸಜ್ಜಿತ ಆಸ್ಪತ್ರೆ ನಿರ್ಮಿಸುವ ಸಂಬಂಧ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗುವುದು ಎಂದ ಅವರು, ಕೊಳಚೆ ನಿರ್ಮೂಲನ ಮಂಡಳಿಯಿಂದ ಬಡವರಿಗಾಗಿ ನಿರ್ಮಿಸಿರುವ 1800 ಮನೆಗಳನ್ನು ಸದ್ಯ ದಲ್ಲಿಯೇ ಹಂಚಿಕೆ ಮಾಡಲು ಕ್ರಮವಹಿಸಲಾಗುವುದು ಎಂದು ಸಚಿವರು ತಿಳಿಸಿದರು. ಜಿಲ್ಲಾಧಿಕಾರಿ ಶುಭಾಕಲ್ಯಾಣ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ವಿ. ಅಶ್ವಿಜಾ ಮಾಧ್ಯಮಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಮಹಾವೀರ ಪುತ್ಥಳಿ ಅದ್ದೂರಿ ಮೆರವಣಿಗೆ

ಅಹಿಂಸಾ ಮಾರ್ಗ ಪಾಲಿಸಿ



ತುಮಕೂರು: ದಿಗಂಬರಜೈನಸಮಾಜದಿಂದ ಶ್ರೀ ಮಹಾವೀರ ಜಯಂತಿ ಅಂಗವಾಗಿ ಮಹಾವೀರ ಪುತ್ಥಳಿ ಮೆರವಣಿಗೆಯು ನಗರದಲ್ಲಿ ವೈಭವಯುತವಾಗಿ ನಡೆಯಿತು.

ನಗರದ ಚಿಕ್ಕಪೇಟೆಯಲ್ಲಿರುವ ಜೈನ ಸಮುದಾಯದ ದೇವಾಲಯದಿಂದ ಆರಂಭವಾದ ಶ್ರೀ ಮಹಾವೀರ ಪುತ್ಥಳಿ ಮೆರವಣಿಗೆಯು ಜಿಲ್ಲಾಧಿಕಾರಿ ಕಚೇರಿ ಮುಂಭಾಗದಿಂದ ಎಂ.ಜಿ. ರಸ್ತೆ ಮುಖೇನ ಅದ್ದೂರಿಯಾಗಿ ಸಾಗಿತು. ಬಿ.ಎಚ್.ರಸ್ತೆಯಲ್ಲಿರುವ ಜೈನಭವನಕ್ಕೆ ಮೆರವಣಿಗೆ ತಲುಪಿತು.

ನಗರದ ಎಂ.ಜಿ. ರಸ್ತೆ, ಬಿ.ಎಚ್.ರಸ್ತೆಯಲ್ಲಿ ಸಾಗಿದ ಮಹಾವೀರರ ಪುತ್ಥಳಿ ಮೆರವಣಿಗೆಯಲ್ಲಿ ನಡೆದ ಆಕರ್ಷಕ ಪ್ರದರ್ಶನಗಳು ನೋಡುಗರ ಮನಸೂರೆಗೊಂಡವು. ದಿಗಂಬರ ಜೈನ ಸಮಾಜದ ವತಿಯಿಂದ ಬಿ.ಎಚ್.ರಸ್ತೆಯಲ್ಲಿರುವ ಜೈನ ಭವನದಲ್ಲಿ ಮಹಾವೀರ ಜಯಂತಿಯನ್ನು ಆಚರಿಸಲಾಯಿತು.

ಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ದಿಗಂಬರ ಸಮಾಜದ ಮುಖಂಡರುಗಳು, ಮಹಾವೀರರ ಅಹಿಂಸೆ, ಶಾಂತಿಯ ಸಂದೇಶವನ್ನು ಪುನರುಚ್ಚರಿಸಿದರು. ಬದುಕು, ಬದುಕುವರನ್ನು ಬಿಡು ಎಂಬ ಸಂದೇಶದ ಮುಖಾಂತರ ಮಹಾವೀರ ಜಯಂತಿ ಆಚರಿಸಲಾಗುತ್ತಿದೆ. ಪ್ರಪಂಚದಲ್ಲಿ ಯುದ್ಧ ಕಾರ್ಮೋಡ ಕವಿದಿದ್ದು, ರಕ್ತಪಾತ ಆಗುತ್ತಿದೆ. ಯುದ್ಧವನ್ನು ನಿಲ್ಲಿಸಬೇಕು ಎಂದು ಜೈನಸಮಾಜದ ಮುಖಂಡರು ಪ್ರತಿಪಾದಿಸಿದರು.

ಜೈನ ಸಮುದಾಯದ ಮುಖಂಡ ಸುರೇಶ್‌ಕುಮಾರ್ ಮಾತನಾಡಿ, ಜಗತ್ತು ಮಹಾವೀರರ ಅಹಿಂಸಾಮಾರ್ಗವನ್ನು ಪಾಲಿಸಬೇಕು. ಎಲ್ಲರೂ ಶಾಂತಿಯಿಂದ ಬದುಕು ನಡೆಸಬೇಕು ಎಂಬುದು ಮಹಾವೀರ ಸ್ವಾಮಿಯ ಮೂಲ ಸಂದೇಶವಾಗಿದೆ. ಇದನ್ನು ನಾವೆಲ್ಲರೂ ಚಾಚೂ ತಪ್ಪದೇ ಪಾಲಿಸೋಣ ಎಂದರು. ದಿಗಂಬರ ಜೈನ ಸಮಾಜದ ಮುಖಂಡ ರಾದ ಟಿ.ಡಿ. ಬಾಹುಬಲಿ ಬಾಬು, ಸುಭೋದಕುಮಾರ್ ಜೈನ್, ಟಿ.ಜೆ. ನಾಗರಾಜು, ಸುರೇಶ್ ಕುಮಾರ್, ವಿನಯ್ ಜೈನ್ ಇದ್ದರು.

ಜಾನುವಾರು ಮೇವು ವಿತರಣಾ ಕೇಂದ್ರ ಆರಂಭ

ಪಾವಗಡ: ಬೇಸಿಗೆಯಲ್ಲಿ ಗೋವುಗಳ ಸಂರಕ್ಷಣೆ ಮತ್ತು ರೈತರ ಹಿತದೃಷ್ಟಿಯಿಂದ ಉಚಿತವಾಗಿ ಮೇವು ವಿತರಿಸಲು ಜಾನುವಾರು ಮೇವು ವಿತರಣಾ ಕೇಂದ್ರ ಪ್ರಾರಂಭಿಸಲಾಗುತ್ತಿದೆ. ಗೋಪಾಲಕರು ಕಾರ್ಯಕ್ರಮದ ಸದುಪಯೋಗ ಪಡೆದುಕೊಳ್ಳಬೇಕು ಎಂದು ಆಶ್ರಮದ ಅಧ್ಯಕ್ಷ ಡಾ.ಜಪಾನಂದ ಸ್ವಾಮೀಜಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಏ.1ರ ಬುಧವಾರ ಬೆಳಿಗ್ಗೆ 10.30ಕ್ಕೆ ಸ್ವಾಮಿ ವಿವೇಕಾನಂದ ಸಂಘಟಿತ ಗ್ರಾಮಾಂತರ ಆರೋಗ್ಯ ಕೇಂದ್ರದ ಆವರಣದಲ್ಲಿ ಕಾರ್ಯಕ್ರಮಕ್ಕೆ ಶಾಸಕ ಎಚ್.ವಿ.ವೆಂಕಟೇಶ್ ಚಾಲನೆನೀಡಲಿದ್ದಾರೆ, ಮುಖ್ಯ ಅತಿಥಿಗಳಾಗಿ ತಹಸೀಲ್ದಾರ್ ವೈ.ರವಿ. ರೈತಸಂಘದ ಜಿಲ್ಲಾದ್ಯಕ್ಷ ಪೂಜಾರಪ್ಪ, ನರಸಿಂಹರೆಡ್ಡಿ, ಪುರಸಭೆ ಮಾಜಿ ಅಧ್ಯಕ್ಷ ಜಿ.ಎಸ್. ಸುದೇಶ್ ಬಾಬು, ವಕೀಲರಾದ ಭಗವಂತಪ್ಪ ಭಾಗವಹಿಸಲಿದ್ದಾರೆ ಎಂದು ವಿವರಿಸಿದ್ದಾರೆ.

ಅವ್ಯವಸ್ಥೆ ಕೂಡಲೇ ಸರಿಪಡಿಸಿ

ಕುಣಿಗಲ್: ತಾಲೂಕಿನ ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ಸಾಕಷ್ಟು ಅವ್ಯವಹಾರಗಳು ನಡೆಯುತ್ತಿರುವುದಲ್ಲದೇ, ಕೆಲವು ಕಾರ್ಯದರ್ಶಿಗಳು ನಿವೃತ್ತಿಯ ಅವಧಿ ಪೂರ್ಣಗೊಂಡಿದ್ದರು ಕೆಲಸ ನಿರ್ವಹಿಸುತ್ತಿರುವುದು, ಒಂದೇ ಕುಟುಂಬದ ಇಬ್ಬರು ಸದಸ್ಯರು ಕೆಲಸ ನಿರ್ವಹಿಸುತ್ತಿರುವುದು, ಇಂತಹ ಅವ್ಯವಸ್ಥೆಯನ್ನು ಕೂಡಲೇ ಸರಿಪಡಿಸಬೇಕೆಂದು ದೊಡ್ಡಕಲ್ಲಹಳ್ಳಿ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ನಿರ್ದೇಶಕ ಕೆ.ಎಂ.ಮಾಸ್ತಿಕರಿಗೌಡ ಆಗ್ರಹಿಸಿದ್ದಾರೆ.

ತಾಲೂಕಿನ ಅಮೃತೂರು ಹೋಬಳಿ ದೊಡ್ಡ ಕಲ್ಲಹಳ್ಳಿ ಗ್ರಾಮದಲ್ಲಿ 20 ವರ್ಷಗಳ ನಂತರ ಹಾಲು ಉತ್ಪಾದಕರ ಸಹಕಾರ ಸಂಘದ ನಿರ್ದೇಶಕರ ಸ್ಥಾನಕ್ಕೆ ಚುನಾವಣೆ ನಡೆದಿದ್ದು ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳು ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ಶಾಸಕರ ಕಚೇರಿಯಲ್ಲಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿ ದೊಡ್ಡ ಕಲ್ಲಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಚುನಾವಣೆಯಲ್ಲಿ 12 ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳೇ ಗೆಲುವು ಸಾಧಿಸಿದ್ದಾರೆ ಎಂದರು.

ಸುಮಾರು ಇಪ್ಪತ್ತೈದು ವರ್ಷದಿಂದಲೂ ಜಿಲ್ಲಾ ನಿರ್ದೇಶಕ ಸ್ಥಾನಕ್ಕೆ ಡಿ.ಕೃಷ್ಣಕುಮಾರ್ ಹೊರತು ಪಡಿಸಿ ಯಾರು ಸ್ಪರ್ಧೆ ಮಾಡಿರಲಿಲ್ಲ, ಈ ಬಾರಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಯಾಗಿ ಡಿ.ಕೃಷ್ಣಕುಮಾರ್ ವಿರುದ್ಧ ನಾನು ಸ್ಪರ್ಧೆ ಮಾಡಿದ್ದೆ, ಕುತಂತ್ರ ರಾಜಕಾರಣ, ಚುನಾವಣಾ ಅಧಿಕಾರಿಗಳನ್ನು ದುರುಪಯೋಗಪಡಿಸಿಕೊಂಡು ಅವರು ಗೆಲುವು ಸಾಧಿಸಿದರು ಎಂದರು.



ದೊಡ್ಡ ಕಲ್ಲಹಳ್ಳಿ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ನಿರ್ದೇಶಕರ ಸ್ಥಾನಕ್ಕೆ ಚುನಾವಣೆ ನಡೆಸಲು ಅಧಿಕಾರಿಗಳು ಸಿದ್ಧತೆ ಮಾಡಿಕೊಳ್ಳುತ್ತಿದ್ದರೆ ವಿರೋಧ ಪಕ್ಷದ ಮುಖಂಡರುಗಳು ಚುನಾವಣೆ ನಡೆಯದಂತೆ ಸಾಕಷ್ಟು ಕುತಂತ್ರಗಳನ್ನು ಮಾಡಿದ್ದರು.

ಸಾಕಷ್ಟು ತೊಂದರೆಗಳನ್ನು ಕೊಟ್ಟರು, ಅಧಿಕಾರಿಗಳನ್ನ ಬೆದರಿಸಿದರು, ನಮ್ಮನ್ನ ಸೋಲಿಸಲು ಸಾಕಷ್ಟು ಪ್ರಯತ್ನ ಪಟ್ಟರೂ ಯಾವುದಕ್ಕೂ ಜಗ್ಗದೆ, ಬಗ್ಗದೆ ಹೋರಾಟ ನಡೆಸಿ ಎನ್‌ಡಿಎ ಬೆಂಬಲಿತ ಅಭ್ಯರ್ಥಿಗಳಿಗೆ ಹೀನಾಯ ಸೋಲು ಉಣಿಸಿದ್ದೇವೆ ಎಂದರು.

ನಿರ್ದೇಶಕರ ಸ್ಥಾನಕ್ಕೆ ಚನ್ನೇಗೌಡ ಉರುಫ್ ರಮೇಶ, ಪದ್ಮ, ಮಾಸ್ತಿಕರಿಗೌಡಕೆಎಂ, ರಾಮಕೃಷ್ಣಯ್ಯ, ರಾಮಣ್ಣ, ಶ್ರೀನಿವಾಸ, ಶಿವಲಿಂಗಮ್ಮ, ಸಾಕಮ್ಮ, ಸುರೇಶ, ಗೆದ್ದ ಅಭ್ಯರ್ಥಿಗಳಾದರೆ ಜವರೇಗೌಡ, ಕೃಷ್ಣ, ತಿಮ್ಮಮ್ಮ, ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದರು.

ಪಿಗ್ಮಿ ಹಣದಲ್ಲಿ ವಂಚನೆ| ವಾರ ಕಳೆದರೂ ಬಾರದ ಅಧಿಕಾರಿಗಳು

ಅರಸು ಸಹಕಾರ ಸಂಘದ ಗ್ರಾಹಕರ ಆಕ್ರೋಶ

ಹುಳಿಯಾರು: ದೇವರಾಜ ಅರಸು ಪತ್ತಿನ ಸಹಕಾರ ಸಂಘದಲ್ಲಿ ಲಕ್ಷಾಂತರ ರೂಪಾಯಿ ಪಿಗ್ಮಿ ಹಣ ವಂಚನೆಯಾಗಿ ವಾರ ಕಳೆದಿದ್ದರೂ, ಹೂಡಿಕೆದಾರರ ನೆರವಿಗೆ ಯಾವೊಬ್ಬ ಅಧಿಕಾರಿಯೂ ಬಾರದಿರುವುದು ಸಾರ್ವಜನಿಕರ ತೀವ್ರ ಆಕ್ರೋಶಕ್ಕೆ ಕಾರಣವಾಗಿದೆ. ಈ ಬಗ್ಗೆ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಗ್ರಾಹಕರ ವೇದಿಕೆಯ ರಾಜ್ಯ ಕಾರ್ಯದರ್ಶಿ ಕಾರ್ಗಿಲ್ ಸತೀಶ್, ಅಧಿಕಾರಿಗಳ ಈ ಮೌನವನ್ನು ಕಟುವಾಗಿ ಟೀಕಿಸಿದರು.

ಘಟನೆ ನಡೆದು ಒಂದು ವಾರ ಉರುಳಿದೆ. ಸಂಘದ ಪಿಕ್ಮಿ ಸಂಗ್ರಹಕಾರ ದಿವಾಕರ್ ಆತ್ಮಹತ್ಯೆ ಮಾಡಿಕೊಂಡ ದಿನದಿಂದ ಕಚೇರಿಗೆ ಬೀಗ ಹಾಕಲಾಗಿದೆ. ಲಕ್ಷಾಂತರ ರೂಪಾಯಿ ಹಣ ಕಳೆದುಕೊಂಡ ನೂರಾರು ಬಡ ಗ್ರಾಹಕರು ಬೀದಿಯಲ್ಲಿ ನಿಂತು ಕಣ್ಣೀರು ಹಾಕುತ್ತಿದ್ದಾರೆ.

ಸಾಮಾಜಿಕಜಾಲತಾಣಮತ್ತುಮಾಧ್ಯಮಗಳಲ್ಲಿ ಈ ವಂಚನೆ ಸುದ್ದಿಯಾದರೂ ಸಹಕಾರ ಇಲಾಖೆಯ ಉಪ ನಿಬಂಧಕರು ಅಥವಾ ಸಹಾಯಕ ನಿಬಂಧಕರು ಕನಿಷ್ಠ ಪಕ್ಷ ಸ್ಥಳಕ್ಕೆ ಭೇಟಿ ನೀಡಿ ಗ್ರಾಹಕರಿಗೆ ಧೈರ್ಯ ತುಂಬುವ ಕೆಲಸ ಮಾಡಿಲ್ಲ ಎಂದು ಅಸಮಧಾನ ವ್ಯಕ್ತಪಡಿಸಿದರು.



ಇಲ್ಲಿ ಹಣ ಕಳೆದುಕೊಂಡವರು ಯಾರೂ ಸಾಹುಕಾರರಲ್ಲ, ಪ್ರತಿದಿನ ಕೂಲಿ ನಾಲಿ ಮಾಡುವವರು, ಬೀದಿ ಬದಿಯ ಸಣ್ಣ ವ್ಯಾಪಾರಿಗಳು ತಮಗಿರುವ ನಂಬಿಕೆಯ ಮೇಲೆ ಲಕ್ಷಾಂತರ ರೂಪಾಯಿ ಹಣವನ್ನು ಈ ಸಂಘದಲ್ಲಿ ಕಟ್ಟಿದ್ದಾರೆ. ಡಿಸಿಸಿ ಬ್ಯಾಂಕ್ ಮತ್ತು ಎಆರ್ ಆಫೀಸ್ ಅನುಮತಿ ಮೇರೆಗೆ ನಡೆಯುವ ಇಂತಹ ಸಂಘಗಳ ಮೇಲೆ ಅಧಿಕಾರಿಗಳ ನಿಯಂತ್ರಣ ಇಲ್ಲದಿರುವುದು ಅನುಮಾನಕ್ಕೆ ಎಡೆಮಾಡಿಕೊಟ್ಟಿದೆ, ಎಂದು ಸತೀಶ್ ಕಿಡಿಕಾರಿದರು.

ಫೆಬ್ರವರಿ ಮತ್ತು ಮಾರ್ಚ್ ತಿಂಗಳ ಪಿಗ್ಮಿ ಹಣಕ್ಕೆ ರಶೀದಿ ನೀಡದೆ ವಂಚಿಸಲಾಗಿದೆ. ಸಂಗ್ರಹಕಾರನ ಆತ್ಮಹತ್ಯೆಯ ನಂತರ ಸಂಘದಆಡಳಿತಮಂಡಳಿನಾಪತ್ತೆಯಾಗಿದೆ. ಪೊಲೀಸ್ ಠಾಣೆಗೆ ದೂರು ನೀಡಿದರೂ ತನಿಖೆಯ ವೇಗ ಕುಂಠಿತವಾಗಿದೆ ಎಂದು ಆರೋಪಿಸಿದರಲ್ಲದೆ ಬಡ ಗ್ರಾಹಕರು ಕಷ್ಟಪಟ್ಟು ಉಳಿಸಿದ ಹಣಕ್ಕೆ ನ್ಯಾಯ ಸಿಗಬೇಕು. ಅಧಿಕಾರಿ ವರ್ಗವು ತಕ್ಷಣ ಎಚ್ಚೆತ್ತುಕೊಂಡು, ತನಿಖೆ ಆರಂಭಿಸಿ ಹೂಡಿಕೆದಾರರ ಹಣವನ್ನು ಮರಳಿಸಲು ಕ್ರಮ ಕೈಗೊಳ್ಳಬೇಕು ಎಂದು ಕಾರ್ಗಿಲ್ ಸತೀಶ್ ಆಗ್ರಹಿಸಿದರು.

ಕರವೇ ಜಿಲ್ಲಾ ಉಪಾಧ್ಯಕ್ಷ ಮೆಡಿಕಲ್ ಚನ್ನಬಸವಯ್ಯ, ಕರವೇ ತಾಲೂಕು ಅಧ್ಯಕ್ಷ ಬೇಕರಿ ಪ್ರಕಾಶ್, ಕರವೇ ಹುಳಿಯಾರು ಅಧ್ಯಕ್ಷ ಗೌಡಿ, ಪಪಂ ಮಾಜಿ ಉಪಾಧ್ಯಕ್ಷ ಗಣೇಶ್, ಮಾಜಿ ಸದಸ್ಯ ರಾಘವೇಂದ್ರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಕೆರೆಯಿಂದ ಮಣ್ಣು ತುಂಬಲು ರೈತರಿಗೆ ಬೆದರಿಕೆ: ಬೃಹತ್ ಪ್ರತಿಭಟನೆ

ರೈತರ ವಿರುದ್ಧ ಪ್ರಕರಣ ದಾಖಲಿಸಿದರೆ ಚಳವಳಿಗೆ ಸಿದ್ಧ

ಕುಣಿಗಲ್: ರೈತರ ಹೊಲಗಳಿಂದ ಕೆರೆಗೆ ಹರಿದು ಬಂದ ಮಣ್ಣು ರೈತರಿಗೆ ಸೇರಿದ್ದು, ರೈತರ ಹೊಲಕ್ಕೆ ಮಣ್ಣು ಕೊಡುವುದಿಲ್ಲ, ಅನುಮತಿ ಪಡೆಯಬೇಕು ಅನ್ನುವುದಕ್ಕೆ ನಿಮಗೇನು ಹಕ್ಕಿದೆ. ನಾವು ನಮ್ಮ ಜಮೀನುಗಳಿಗೆ ಕೆರೆಯಿಂದ ಮಣ್ಣನ್ನು ತೆಗೆಯುತ್ತೇವೆ. ಅಡ್ಡಿಪಡಿಸಬೇಡಿ, ಪ್ರಕರಣ ದಾಖಲಿಸಬೇಡಿ. ರೈತರ ವಿರುದ್ಧ ಪ್ರಕರಣ ದಾಖಲಿಸಿದರೆ ನಾವು ನಿಮ್ಮ ವಿರುದ್ಧ ಬಾರ್ ಗೋಲ್ ಚಳುವಳಿ ಮಾಡುತ್ತೇವೆ ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಜಿಲ್ಲಾಧ್ಯಕ್ಷ ಯೋಗೀಶ್ (ಕರಿಗೌಡ) ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

ರೈತರು ತಮ್ಮ ಹೊಲಗಳಿಗೆ ಕೆರೆಯಲ್ಲಿ ಮಣ್ಣು ತುಂಬಿಕೊಳ್ಳಲು ಹೋದಾಗ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಪ್ರಕರಣ ದಾಖಲಿಸುತ್ತೇವೆ ಎಂದು ರೈತರನ್ನ ಬೆದರಿಸುತ್ತಿರುವ ಮತ್ತು ಅಡ್ಡಿಪಡಿಸುತ್ತಿರುವ ಹಿನ್ನೆಲೆಯಲ್ಲಿ, ತಾಲೂಕಿನ ಹುಲಿಯೂರು ದುರ್ಗ ಹೋಬಳಿಯ ಕೇಂದ್ರ ಸ್ಥಾನದ ಹೊಸಪೇಟೆ ಸರ್ಕಲ್ ಬಳಿ ಕರ್ನಾಟಕ ರಾಜ್ಯ ರೈತ ಸಂಘ ಹಸಿರು ಸೇನೆವತಿಯಿಂದ ಹಮ್ಮಿಕೊಳ್ಳಲಾಗಿದ್ದ ಟ್ರ್ಯಾಕ್ಟರ್ ಮೆರವಣಿಗೆಯೊಂದಿಗೆ ಪ್ರತಿಭಟನೆ ನಡೆಸಿ ಮಾತನಾಡಿ ರೈತರು ಕೆರೆಯಿಂದ ಮಣ್ಣನ್ನು ತಮ್ಮ ಜಮೀನುಗಳಿಗೆ ತೆಗೆದುಕೊಳ್ಳಲು ಅವಕಾಶ ಕಲ್ಪಿಸಬೇಕು ಅಡ್ಡಿಪಡಿಸಬಾರದು ಎಂದರು.



ರೈತರು ತಮ್ಮ ಜಮೀನುಗಳಲ್ಲಿ ಫಲವತ್ತಾದ ಬೆಳೆ ಬೆಳೆಯುವ ಉದ್ದೇಶದಿಂದ ಕೆರೆಯಲ್ಲಿ ಮಣ್ಣನ್ನು ತೆಗೆಯುತ್ತಿದ್ದಾರೆ. ಯಾರಿಗೂ ಮಾರಾಟ ಮಾಡುವ ಉದ್ದೇಶ ಹೊಂದಿಲ್ಲ. ತೆಗೆದ ಮಣ್ಣನ್ನು ಎಲ್ಲಿಯೂ ಲೋಡ್ ಗಟ್ಟಲೆ ಸ್ಟಾಕ್ ಮಾಡಿಕೊಳ್ಳುವುದಿಲ್ಲ, ತೆಗೆದ ಮಣ್ಣನ್ನ ತೋಟ, ಹೊಲ ಗದ್ದೆಗಳಿಗೆ ಹಾಕುತ್ತಿದ್ದಾರೆ. ಆದ್ದರಿಂದ ಕೆರೆಯಲ್ಲಿ ಮಣ್ಣನ್ನು ತೆಗೆಯಲು ರೈತರಿಗೆ ತೊಂದರೆ ಕೊಡಬೇಡಿ. ಅವಕಾಶ ಮಾಡಿಕೊಡಿ, ಆದರೆ ಮಣ್ಣು ಮಾರಾಟ ಮಾಡುವವರ ವಿರುದ್ಧ ಮುಲಾಜಿಲ್ಲದೆ ಕ್ರಮ ಕೈಗೊಳ್ಳಿ ಎಂದರು. ಮನವಿ ಸ್ವೀಕರಿಸಿದ ತಹಸೀಲ್ದಾರ್ ಕರಿಯ ನಾಯಕ್ ಮಾತನಾಡಿ ಭೂಮಿ ಮೇಲೆ ಸಿಗುವ ಪ್ರತಿಯೊಂದು ನಿಕ್ಷೇಪಗಳು ಸರ್ಕಾರಕ್ಕೆ ಸೇರಿವೆ ಎಂದರು. ನೂರಾರು ರೈತರು ಡಾಕ್ಟರ್ ಮೂಲಕ ಮೆರವಣಿಗೆ ನಡೆಸಿದರು. ರೈತ ಮುಖಂಡರಾದ ಪುಟ್ಟಸ್ವಾಮಿ. ಲೋಕೇಶ್, ರಾಜಣ್ಣ, ಶಿವಲಿಂಗಯ್ಯ, ಕುಮಾರ್, ಮಹಾದೇವಯ್ಯ, ಶಿವಪ್ರಸಾದ್, ಚಂದ್ರಶೇಖರ್, ನೂರಾರು ಮುಖಂಡರು ಅಮೃತೂರು ಸರ್ಕಲ್ ಇನ್‌ಸ್ಪೆಕ್ಟರ್ ನವೀನ್‌ಗೌಡ ಇದ್ದರು.

ಆದಿನಾಯಕನಹಳ್ಳಿ ಗ್ರಾಮದಲ್ಲಿ ಮೂಡಲಪಾಯ ಯಕ್ಷಗಾನ ಬಯಲಾಟ ಪ್ರದರ್ಶನ

ಗ್ರಾಮದೇವತೆ ಕೆಂಪಮ್ಮದೇವಿ ಜಾತ್ರೋತ್ಸವ

ತಿಪಟೂರು: ತಾಲೂಕಿನ ಆದಿನಾಯಕನಹಳ್ಳಿ ಗ್ರಾಮದಲ್ಲಿ, ಭಾನುವಾರ ರಾತ್ರಿ ಗ್ರಾಮದೇವತೆ ಕೆಂಪಮ್ಮದೇವಿ ಜಾತ್ರಾ ಮಹೋತ್ಸವದ ಅಂಗವಾಗಿ ಮೂಡಲಪಾಯ ಯಕ್ಷಗಾನ ಬಯಲಾಟ ಯಶಸ್ವಿಯಾಗಿ ನಡೆಯಿತು.

ಮತ್ತಿಹಳ್ಳಿ ಬಿದಿರಾಂಬಿಕ ಕೃಪಾಪೋಷಿತ ಯಕ್ಷಗಾನ ಬಯಲಾಟ ಮಂಡಳಿ ಇವರಿಂದ ಶ್ರೀ ಅಂಬಿಕಾ ವಿಜಯ ಅಥವಾ ರಕ್ತ ಬೀಜಾಸುರನವಧೆ ಎಂಬ ಪ್ರಸಂಗವನ್ನು ಪ್ರದರ್ಶಿಸಲಾಯಿತು. ಭಾಗವತರಾಗಿ ಮಂಜುನಾಥ್ ಎಂ.ಎಂ.ಸೇವೆ ಸಲ್ಲಿಸಿದರು. ಮೃದಂಗದಲ್ಲಿ ನಾಗರಾಜು, ಮುಖವೀಣೆಯಲ್ಲಿ ರಂಗನಾಥ್, ಹಿನ್ನೆಲೆ ಗಾಯನದಲ್ಲಿ ಸಿದ್ದೇಗೌಡ, ಲೋಕೇಶ್ ಎಂ.ಎಂ ಹಾಗೂ ಪರಮೇಶ್ ಭಾಗವಹಿಸಿದ್ದರು.

ಮತ್ತಿಹಳ್ಳಿ ಗ್ರಾಮದ ಹಿರಿಯ ಹಾಗೂ ಕಿರಿಯ ಕಲಾವಿದರುಗಳು ವಿಭಿನ್ನ ಪಾತ್ರಗಳನ್ನು ನಿರ್ವಹಿಸಿ ಪ್ರೇಕ್ಷಕರ ಮೆಚ್ಚುಗೆ ಗಳಿಸಿದರು. ಅಪಾರ ಸಂಖ್ಯೆಯಲ್ಲಿ ಸೇರಿದ್ದ ಜನಸ್ತೋಮ ಕಾರ್ಯಕ್ರಮವನ್ನು ಕಣ್ತುಂಬಿಕೊಂಡರು. ಮಂಡಳಿ ಅಧ್ಯಕ್ಷ ಯಶ್ವಂತ್ ಎಂ.ಆರ್.ಮಾತನಾಡಿ ಇಂದಿನ ವಿದ್ಯುನ್ಮಾನ ಯಂತ್ರಗಳು ಮಾನವನನ್ನು ನಿಯಂತ್ರಿಸುತ್ತಿರುವ ಕಾಲಘಟ್ಟದಲ್ಲಿ ಇಂತಹ ಜನಪದ ಕಲೆಗಳನ್ನು ಉಳಿಸಿ ಬೆಳೆಸಲು ಅವಕಾಶ ಮಾಡಿಕೊಟ್ಟ ದೇವಸ್ಥಾನದ ಆಡಳಿತ ಮಂಡಳಿ ಶ್ಲಾಘನೀಯರು. ಯಾವುದೇ ವಿಶೇಷ ತರಬೇತಿ ಪಡೆಯದೆ ನೇರವಾಗಿ ರಂಗಭೂಮಿಯಲ್ಲಿ ಪ್ರದರ್ಶನ ನೀಡುತ್ತಿರುವುದು ಮತ್ತಿಹಳ್ಳಿ ಗ್ರಾಮದ ಕಲಾವಿದರ ವೈಶಿಷ್ಟ್ಯ ಎಂದರು.



ಭಾಗವತ್ ಮಂಜುನಾಥ್ ಎಂ.ಎಂ ಮಾತನಾಡಿ ಮೂಡಲಪಾಯ ಯಕ್ಷಗಾನವು ತನ್ನ ವಿಶಿಷ್ಟ ವೇಷಭೂಷಣ, ಸಂಗೀತ ಮತ್ತು ನೃತ್ಯ ಶೈಲಿಗಳ ಮೂಲಕ ಪ್ರಸಿದ್ಧವಾಗಿದ್ದು ಪುರಾಣ ಕಥೆಗಳನ್ನು ಜೀವಂತವಾಗಿ ಪ್ರದರ್ಶಿಸುವ ಈ ಕಲೆ, ಗ್ರಾಮೀಣ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿದೆ. ಆದರೆ, ಆಧುನಿಕ ಮನರಂಜನಾ ಮಾಧ್ಯಮಗಳ ಪ್ರಭಾವದಿಂದ ಈ ಕಲೆಗೆ ಪ್ರೇಕ್ಷಕರ ಸಂಖ್ಯೆ ಕಡಿಮೆಯಾಗುತ್ತಿದೆ. ಯುವಪೀಳಿಗೆಯಲ್ಲಿ ಆಸಕ್ತಿ ಕುಂಠಿತವಾಗಿರುವುದು ಹಾಗೂ ಕಲಾವಿದರಿಗೆ ಸಮರ್ಪಕ ಆರ್ಥಿಕ ನೆರವು ಲಭ್ಯವಿಲ್ಲದಿರುವುದು ಪ್ರಮುಖ ಸಮಸ್ಯೆಗಳಾಗಿವೆ. ಇದರಿಂದ ಅನೇಕ ಕಲಾವಿದರು ಬೇರೆ ಉದ್ಯೋಗಗಳತ್ತ ಮುಖ ಮಾಡುತ್ತಿದ್ದಾರೆ ಎಂದರು.

ಇದೇ ವೇಳೆ ಯಕ್ಷಗಾನ ಕೃತಿಯ ಮೂಲ ಕರ್ತೃ ದಿ.ಭಾಗವತ್ ಸಣ್ಣ ದೊಡ್ಡಯ್ಯನವರನ್ನು ಸ್ಮರಿಸಿ, ಸಪ್ತಶ್ರೀ ಕಲಾ ಸಂಘದ ಅಧ್ಯಕ್ಷ ಬಸವರಾಜು ಟಿ.ಎಚ್ ಅವರ ಸಂಯೋಜನೆ ನಡೆಸಿದರು.

ಕಿರುಸುದ್ದಿ

ನೂತನ ಶ್ರೀ ಮಾತಾ ಶಾರದಾಶ್ರಮ ಉದ್ಘಾಟನೆ

ಕನಕಪುರ: ನಗರದ ಕೋಟೆ ಬೀದಿಯಲ್ಲಿ ಶ್ರೀ ರಾಮಕೃಷ್ಣ ಪರಮಹಂಸ, ಶ್ರೀ ಶಾರದಾದೇವಿ, ಮತ್ತು ವಿವೇಕಾನಂದರ ಚಿಂತನೆ ಮತ್ತು ತತ್ವಗಳನ್ನು ಆದರ್ಶದಲ್ಲಿ ನೂತನ ಶ್ರೀ ಮಾತಾ ಶಾರದಾಶ್ರಮವನ್ನು ಭಾನುವಾರ ಗದಗ ವಿವೇಕಾನಂದ ಮತ್ತು ರಾಮಕೃಷ್ಣ ಆಶ್ರಮ ಅಧ್ಯಕ್ಷರಾದ ಶ್ರೀ ನಿರ್ಭಯಾನಂದ ಸ್ವಾಮೀಜಿ ಉದ್ಘಾಟಿಸಿದರು. ಆರ್.ಇ.ಎಸ್ ಸಂಸ್ಥೆಯ ಅಧ್ಯಕ್ಷರಾದ ಎಚ್.ಕೆ.ಶ್ರೀಕಂಠ ಮಾತನಾಡಿ, ಸ್ವಾಮಿ ವಿವೇಕಾನಂದ ಹಾಗೂ ರಾಮಕೃಷ್ಣ ಪರಮಹಂಸರ ಚಿಂತನೆಯನ್ನು ಆದರ್ಶವಾಗಿಟ್ಟುಕೊಂಡು ಉದ್ಘಾಟಿಸಿರುವ ಶ್ರೀ ಶಾರದಾಶ್ರಮ ಸಮಾಜದಲ್ಲಿರುವ ಅಂಕುಡೊಂಕುಗಳನ್ನು ತಿದ್ದಲಿದೆ. ಸಾಮಾಜಿಕ ಮೌಲ್ಯವೇ ಸಮಾಜದಲ್ಲಿ ನಶಿಸಿ ಹೋಗುತ್ತಿದೆ. ಕನಕಪುರದಲ್ಲಿ ಈ ಆಶ್ರಮ ಆರಂಭವಾಗುತ್ತಿರುವುದು ನಿಜಕ್ಕೂ ಸ್ವಾಗತ ನಾನು ಸದಾ ಈ ರೀತಿಯ ಕಾರ್ಯಕ್ರಮಗಳಿಗೆ ಬೆನ್ನೆಲುಬಾಗಿರುತ್ತೇನೆ ಎಂದರು. ಕಾರ್ಯಕ್ರಮದಲ್ಲಿ ಎಂ.ಎಲ್.ಸಿ ರವಿ, ವಿವಿಧ ಜಿಲ್ಲೆಗಳಲ್ಲಿರುವ ರಾಮಕೃಷ್ಣ ಮಠದ ಸ್ವಾಮೀಜಿಗಳು, ಸ್ಥಳೀಯ ಮುಖಂಡರುಗಳು ಸೇರಿದಂತೆ ನಾಗರೀಕರು ಹಾಜರಿದ್ದರು

ಜನಗಣತಿಗೆ ಸಹಕರಿಸಿ

ರಾಮನಗರ: ಕೇಂದ್ರ ಸರ್ಕಾರದ ಮಹಾತ್ವಾಕಾಂಕ್ಷೆ ಯೋಜನೆಗಳಲ್ಲಿ ಜನಗಣತಿ ಕಾರ್ಯ ಮಹತ್ವದ್ದಾಗಿದೆ. ಜನಗಣತಿ ಕಾಯ್ದೆ 1948ರ ಸೆಕ್ಷನ್ 4ರ ಉಪವಿಭಾಗ (2)ಯಲ್ಲಿ ನೀಡಲಾದ ಅಧಿಕಾರವನ್ನು ಚಲಾಯಿಸಿ (1948ರ ಕಾಯ್ದೆ ಸಂಖ್ಯೆ 37) ಕರ್ನಾಟಕ ಸರ್ಕಾರವು ಜನಗಣತಿ-2027 ಕಾರ್ಯವನ್ನು 1ನೇ ಹಂತದಲ್ಲಿ ಮನೆ ಮನೆ ಪಟ್ಟಿ 2026ರ ಏಪ್ರಿಲ್ ನಿಂದ 2026ರ ಸೆಪ್ಟೆಂಬರ್‌ವರೆಗೆ ಹಾಗೂ 2ನೇ ಹಂತದಲ್ಲಿ ಜನಗಣತಿ ಕಾರ್ಯ 2027ರ ಫೆಬ್ರವರಿಯಿಂದ ನಡೆಸಲು ತೀರ್ಮಾನಿಸಲಾಗಿರುತ್ತದೆ. ಅದರಂತೆ, 2026ರ ಏಪ್ರಿಲ್ 1 ರಿಂದ 15ರ ವರೆಗೆ ಸಾರ್ವಜನಿಕರು ಸ್ವಯಂ ಎಣಿಕೆ ಮಾಡಿಕೊಳ್ಳಲು ಸರ್ಕಾರವು ಅನುವು ಮಾಡಿಕೊಟ್ಟಿರುತ್ತದೆ. ಸಾರ್ವಜನಿಕರು ತಮ್ಮ ಮೊಬೈಲ್‌ನಿಂದ http://se.census.gov.in ಲಿಂಕ್ ಮೂಲಕ ಮನೆ ಗಣತಿಯ ಬಗ್ಗೆ ಕೇಳಲಾಗುವ ಪ್ರಶ್ನೆಗಳಿಗೆ ಉತ್ತರಿಸಿ, ನಂತರ ಜನರೇಟ್ ಆಗುವ ಯುನಿಕ್ ನಂಬರ್ ಅನ್ನು 2026ರ ಏಪ್ರಿಲ್ 16 ರಿಂದ ಖುದ್ದಾಗಿ ಗಣತಿದಾರರು ಮನೆ ಗಣತಿ ಕಾರ್ಯಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಆ ಯೂನಿಕ್ ನಂಬರ್ ಅನ್ನು ನೀಡಬೇಕು ಹಾಗೂ ಸ್ವಯಂ ಗಣತಿ ಘೋಷಿಸದೇ ಇರುವ ಸಾರ್ವಜನಿಕರು ಸೂಕ್ತ ಮಾಹಿತಿಯನ್ನು ಗಣತಿದಾರರಿಗೆ ನೀಡಿ, ಮನೆ ಗಣತಿ ಕಾರ್ಯ ಯಶಸ್ವಿಯಾಗಲು ಸಾರ್ವಜನಿಕರು ಸಹಕರಿಸುವಂತೆ ಚನ್ನಪಟ್ಟಣ ತಾಲೂಕಿನ ಚಾರ್ಜ್ ಆಫೀಸರ್ ಹಾಗೂ ತಹಸೀಲ್ದಾರ್ ಬಿ.ಎನ್.ಗಿರೀಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಂಪಿಸಿಎಸ್ ಚುನಾವಣೆ

ಚನ್ನಪಟ್ಟಣ: ತಾಲೂಕಿನ ವಿರುಪಾಕ್ಷಿಪುರ ಹೋಬಳಿ ರಾಮೇಗೌಡನದೊಡ್ಡಿ ಹಾಲು ಉತ್ಪಾದಕರ ಸಹಕಾರ ಸಂಘದ ಆಡಳಿತ ಮಂಡಳಿ ನಿರ್ದೇಶಕರ ಆಯ್ಕೆಗೆ ಏ.10ರಂದು ಚುನಾವಣೆ ನಿಗದಿಯಾಗಿದೆ. ಆಕಾಂಕ್ಷೆಯುಳ್ಳ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಲು ಏ.2 ಕೊನೆಯ ದಿನವಾಗಿರುತ್ತದೆ. ಏ.3ರಂದು ನಾಮಪತ್ರಗಳ ಪರಿಶೀಲನೆ ನಡೆಯಲಿದ್ದು, ಅದೇ ದಿನ ಕ್ರಮಬದ್ಧ ಅಭ್ಯರ್ಥಿಗಳ ಪಟ್ಟಿ ಪ್ರಕಟಿಸಲಾಗುವುದು. ಏ.4ರಂದು ಮಧ್ಯಾಹ್ನ 3 ಗಂಟೆವರೆಗೆ ನಾಮಪತ್ರ ಹಿಂಪಡೆಯಲು ಅವಕಾಶ ಇರುತ್ತದೆ ಹಾಗೂ ಇದೇ ದಿನ ಅಂತಿಮವಾಗಿ ಕಣದಲ್ಲಿ ಉಳಿದ ಅಭ್ಯರ್ಥಿಗಳ ಪಟ್ಟಿಯು ಚಿಹ್ನೆ ಸಮೇತ ಪ್ರಕಟವಾಗಲಿದೆ. ಮತದಾನದ ಅವಶ್ಯಕತೆ ಇದ್ದಲ್ಲಿ ಏ.10 ಶುಕ್ರವಾರ ಬೆಳಗ್ಗೆ 11ರಿಂದ ಮಧ್ಯಾಹ್ನ 2 ಗಂಟೆಯವರೆಗೆ ರಾಮೇಗೌಡನದೊಡ್ಡಿ ಹಾಲು ಉತ್ಪಾದಕರ ಸಹಕಾರ ಸಂಘದ ಕಚೇರಿಯಲ್ಲಿ ಮತದಾನ ನಡೆಯಲಿದ್ದು, ಫಲಿತಾಂಶ ಪ್ರಕಟವಾಗಲಿದೆ ಎಂದು ರಿಟರ್ನಿಂಗ್ ಅಧಿಕಾರಿ ಉಮೇಶ್ ಕೆ.ಟಿ. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕುಡಿಯುವ ನೀರಿಗೆ ತೊಂದರೆ ಆಗದಿರಲಿ

ಕೊಡಿಗೇನಹಳ್ಳಿ: ಬೇಸಿಗೆ ಕಾಲದಲ್ಲಿ ಯಾವುದೇ ಕಾರಣಕ್ಕೂ ಜನರಿಗೆ ಕುಡಿಯುವ ನೀರಿಗೆ ತೊಂದರೆ ಇಲ್ಲದಂತೆ ನೋಡಿಕೊಳ್ಳಬೇಕೆಂದು ಪಂಚಾಯಿತಿ ಸಿಬ್ಬಂದಿಗಳಿಗೆ ತಾಲೂಕು ಆಡಳಿತಾಧಿಕಾರಿ ಹಾಗೂ ಬಿ ಇ ಒ ಕೆ ಎನ್ ಹನುಮಂತರಾಯಪ್ಪ ಸಲಹೆ ನೀಡಿದರು. ಕೊಡಿಗೇನಹಳ್ಳಿ ಗ್ರಾಮ ಪಂಚಾಯಿತಿಯ ದಂಡಿಪುರದಲ್ಲಿ ಕೆಟ್ಟು ನಿಂತ ಪಂಪ್ ಸೆಟ್ ಗಳನ್ನು ಖುದ್ದು ಮುಂದೆ ನಿಂತು ದಿನಾಪೂರ ಬಿಸಿಲನ್ನು ಲೆಕ್ಕಿಸದೆ ರಿಪೇರಿ ಮಾಡಿಸಿ ಮಾತನಾಡಿದ ಅವರು ಬೇಸಿಗೆ ಕಾಲವಾದ ಕಾರಣ ಪಂಪ್ಸೆಟ್ಟುಗಳು ಹೆಚ್ಚು ಕಾಲ ಓಡಿ ಮೋಟರ್ ಸುಟ್ಟು ಹೋಗುವ ಸಾಧ್ಯತೆಯಿದ್ದು ಆಗಾಗ ಆಫ್ ಮಾಡಿ ನಂತರ ಸ್ವಿಚ್ ಆನ್ ಮಾಡಿದರೆ ಮೋಟರ್‌ಗಳು ರಿಪೇರಿಗೆ ಬಾರದೆ ಹೆಚ್ಚು ಕಾಲ ಬಾಳಿಕೆ ಬರುವುದಲ್ಲದೆ ಜನರಿಗೂ ನೀರಿಗೆ ಯಾವುದೇ ತೊಂದರೆ ಇಲ್ಲದಂತೆ ನೋಡಿಕೊಳ್ಳಬಯದೆಂದು ಸಿಬ್ಬಂದಿಗೆ ತಿಳಿಸಿದರು.




ಕನಕಪುರ ನಗರದ ಸಾರ್ವಜನಿಕ ಸರ್ಕಾರಿ ಆಸ್ಪತ್ರೆಯಲ್ಲಿ 36 ವರ್ಷಗಳ ಕಾಲ ಡಿ ಗ್ರೂಪ್ ನೌಕರರಾಗಿ ಸೇವೆ ಸಲ್ಲಿಸಿ ನಿವೃತ್ತಿಗೊಂಡಿರುವ ನಾಗರಾಜು ಬೀಳ್ಕೊಡುಗೆ ಕಾರ್ಯಕ್ರಮದಲ್ಲಿ ಕನಕಪುರ ಬ್ಲಾಕ್ ಕಾಂಗ್ರೆಸ್ ಸಮಿತಿಯಿಂದ ಸನ್ಮಾನಿಸಲಾಯಿತು.

ಕಂಪ್ಯೂಟರ್ ಉಚಿತ ಕೊಡುಗೆ

ರಾಮನಗರ: ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೂ ಆಧಾರಿತ ಶಿಕ್ಷಣ ಸಿಗಬೇಕೆಂಬ ಆಶಯದೊಂದಿಗೆ ಬಿಡದಿ ಸಮೀಪದ ನಿಂಗೇಗೌಡನದೊಡ್ಡಿ ಗ್ರಾಮದ ಜಿಎಲ್‌ಪಿಎಸ್ ಸರ್ಕಾರಿ ಶಾಲೆಗೆ ಬೆಂಗಳೂರಿನ ಭರವಸೆ ಸಂಸ್ಥೆ ವತಿಯಿಂದ ಉಚಿತ ಕಂಪ್ಯೂಟರ್‌ಗಳನ್ನು ವಿತರಿಸಲಾಯಿತು.

ತಾಲೂಕಿನ ಮಂಚನಾಯ್ಕನಹಳ್ಳಿ ಕ್ಲಸ್ಟರ್ ವ್ಯಾಪ್ತಿಯ ನಿಂಗೇಗೌಡನದೊಡ್ಡಿ ಶಾಲೆಗೆ ಕಂಪ್ಯೂಟರ್‌ಗಳನ್ನು ಹಸ್ತಾಂತರಿಸಿದ ಬಳಿಕ ಭರವಸೆ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾದ ಸುನೀಲ್‌ಗೌಡ ಮಾತನಾಡಿ, ನಗರ ಪ್ರದೇಶದ ವಿದ್ಯಾರ್ಥಿಗಳ ಜತೆಗೆ ಗ್ರಾಮೀಣ ಭಾಗದ ಮಕ್ಕಳಿಗೆ ತಂತ್ರಜ್ಞಾನ ಆಧಾರಿತ ಶಿಕ್ಷಣವನ್ನು ಉತ್ತೇಜಿಸುವ ಉದ್ದೇಶದಿಂದ ಈ ಉಪಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಶಾಲೆಯಲ್ಲಿ ಸುಮಾರು 40ಕ್ಕೂ ಹೆಚ್ಚು ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದು, ಕಂಪ್ಯೂಟರ್ ಸೌಲಭ್ಯಗಳ ಕೊರತೆಯಿಂದ ಡಿಜಿಟಲ್ ಕಲಿಕೆಯಲ್ಲಿ ಹಿಂದುಳಿದಿದ್ದರು.

ಮುಂದಿನ ದಿನಗಳಲ್ಲಿಯೂ ಶಿಕ್ಷಣ, ಆರೋಗ್ಯ ಸಂಬಂಧಿತ ಸಮಾಜಮುಖಿ ಕಾರ್ಯಗಳನ್ನು ಮುಂದುವರಿಸುವುದಾಗಿ ತಿಳಿಸಿದರು. ಈ ವೇಳೆ ಶಾಲೆಯ ಮುಖ್ಯಶಿಕ್ಷಕ ಕೆ.ಎಲ್.ಶಂಕರ್, ಸಹಶಿಕ್ಷಕಿ ಶಕುಂತಲಾ, ಹಾಗೂ ಗ್ರಾಮಸ್ಥರು ಕಂಪ್ಯೂಟರ್‌ಗಳನ್ನು ಕೊಡುಗೆ ನೀಡಿದ ಭರವಸೆ ಸಂಸ್ಥೆಯ ಈ ಸಾಮಾಜಿಕ ಸೇವೆಯನ್ನು ಪ್ರಶಂಸಿಸಿ ಕೃತಜ್ಞತೆ ಸಲ್ಲಿಸಿದರು. ಶಾಲೆಯ ಮಕ್ಕಳು ಕಂಪ್ಯೂಟರ್ ಶಿಕ್ಷಣ ಕಲಿಕೆಯನ್ನು ಉತ್ಸಾಹದಿಂದ ಆರಂಭಿಸಿದರು.



ರಾಮನಗರದ ಬಿಡದಿಯ ನಿಂಗೇಗೌಡನದೊಡ್ಡಿ ಸರ್ಕಾರಿ ಶಾಲೆಗೆ ಭರವಸೆ ಸಂಸ್ಥೆಯಿಂದ ಕಂಪ್ಯೂಟರ್‌ಗಳನ್ನು ವಿತರಿಸಲಾಯಿತು.

ಪಂಪ್‌ಹೌಸ್‌ನಿಂದ ನೀರು ಹರಿಸುವ ಮೂಲಕ ಏತ ನೀರಾವರಿಗೆ ಚಾಲನೆ

ಗ್ರಾಮಗಳಿಗೆ ಹರಿದ ನೀರು

ರಾಮನಗರ: ರೈತರ ಬಹುದಿನಗಳ ಕನಸಾಗಿದ್ದ ಮೊಟ್ಟೆದೊಡ್ಡಿ ಏತ ನೀರಾವರಿ ಯೋಜನೆಗೆ ಶಾಸಕ ಎಚ್.ಎ.ಇಕ್ಬಾಲ್ ಹುಸೇನ್ ಚಾಲನೆ ನೀಡಿದರು. ರಾಮನಗರ-ಕನಕಪುರ ರಸ್ತೆಯ ಪಕ್ಕದಲ್ಲಿ ನಿರ್ಮಾಣ ಮಾಡಿರುವ ಅರ್ಕಾವತಿ ನದಿ ಪಕ್ಕದ ಪಂಪ್‌ಹೌಸ್‌ನಿಂದ ನೀರು ಹರಿಸುವ ಮೂಲಕ ಯೋಜನೆಗೆ ಶಾಸಕರು ಗ್ರಾಮದ ಮುಖಂಡರ ಜೊತೆಗೂಡಿ ಹಸಿರು ನಿಶಾನೆ ತೋರಿಸಿದರು.

ಅರ್ಕಾವತಿ ನದಿಯಿಂದ ನೀರೆತ್ತಿ ಮೊಟ್ಟೆದೊಡ್ಡಿ, ಲಕ್ಕಪ್ಪನಹಳ್ಳಿ ಗ್ರಾಮಗಳ ಭಾಗಕ್ಕೆ ನೀರು ಒಯ್ಯುವ ಯೋಜನೆ ಇದಾಗಿದ್ದು, ಕಳೆದ 25 ವರ್ಷಗಳಿಂದ ನೆನೆಗುದಿಗೆ ಬಿದ್ದಿತ್ತು. ಇದೀಗ ಶಾಸಕ ಇಕ್ಬಾಲ್ ಹುಸೇನ್ ರವರು ಯೋಜನೆಗೆ ಮರು ಜೀವ ನೀಡಿರುವುದು ರೈತರ ಮೊಗದಲ್ಲಿ ಹರ್ಷ ತರಿಸಿದೆ.

ಕೆಂಗಲ್ ಹನುಮಂತಯ್ಯನವರು ಮುಖ್ಯಮಂತ್ರಿಯಾಗಿದ್ದ (1979) ಅವಧಿಯಲ್ಲಿ ತಮ್ಮ ಹುಟ್ಟೂರು ಲಕ್ಕಪ್ಪನಹಳ್ಳಿ ಮತ್ತು ಮೊಟ್ಟೆದೊಡ್ಡಿ ಗ್ರಾಮಗಳಿಗೆ ಅರ್ಕಾವತಿ ನದಿ ನೀರು ಹರಿಸಿ ಅನುಕೂಲ ಕಲ್ಪಿಸಲು ಮೊಟ್ಟೆದೊಡ್ಡಿ ಏತ ನೀರಾವರಿ ಯೋಜನೆ ಜಾರಿಗೆ ತಂದರು. ಇದಕ್ಕೆ ಅಂದಿನ ನೀರಾವರಿ ಸಚಿವ ಡಿ.ಬಿ.ಚಂದ್ರೇಗೌಡ ಚಾಲನೆ ನೀಡಿದ್ದರು.

ರೈತರ ಒತ್ತಡಕ್ಕೆ ಮಣಿದ ಶಾಸಕ ಇಕ್ಬಾಲ್ ಹುಸೇನ್ ಸುಮಾರು 5 ಕೋಟಿ ರುಪಾಯಿ ವೆಚ್ಚದಲ್ಲಿ ಸಣ್ಣ ನೀರಾವರಿ ಇಲಾಖೆ ಮೂಲಕ ಮೊಟ್ಟೆದೊಡ್ಡಿ ಏತ ನೀರಾವರಿ ಯೋಜನೆಗೆ ಕಾಯಕಲ್ಪ ನೀಡಿದ್ದಾರೆ. ಹಳೇ ಮೋಟಾರ್ ತೆಗೆದು ಹೊಸ ವಿದ್ಯುತ್ ಮೋಟಾರ್, ಪೈಪ್ ಅಳವಡಿಸಿ ಚೆಕ್ ಡ್ಯಾಂ ನಿರ್ಮಿಸಿ ನೀರೊದಗಿಸುವ ಕಾರ್ಯಕ್ಕೆ ಚಾಲನೆ ನೀಡಿದರು.

ಶಾಸಕ ಎಚ್.ಎ. ಇಕ್ಬಾಲ್ ಹುಸೇನ್ ಮಾತನಾಡಿ



ಅಧಿಕಾರಿಗಳಿಗೆ ಒತ್ತಡ

ಈ ಯೋಜನೆಯಿಂದಾಗಿ ಸುಮಾರು ಎರಡು ದಶಕಗಳ ಕಾಲ ಕೃಷಿ ಚಟುವಟಿಕೆ ಉತ್ತಮವಾಗಿ ನಡೆದಿತ್ತು. ಆನಂತರ ನದಿಯಲ್ಲಿ ನೀರಿನ ಕೊರತೆ ಉಂಟಾಗಿ ಯೋಜನೆ ಹಳ್ಳ ಹಿಡಿಯಿತು. ರೈತರು ಯೋಜನೆಗೆ ಮರುಜೀವ ನೀಡುವಂತೆ ಜನಪ್ರತಿನಿಧಿಗಳು ಹಾಗೂ ನೀರಾವರಿ ಇಲಾಖೆ ಅಧಿಕಾರಿಗಳನ್ನು ಒತ್ತಾಯಿಸುತ್ತಲೇ ಬಂದಿದ್ದರು.

ಮೊಟ್ಟೆದೊಡ್ಡಿ ಏತ ನೀರಾವರಿ ಯೋಜನೆಯ ಪುನಶ್ಚೇತನಕ್ಕೆ ಒಟ್ಟು 5 ಕೋಟಿ ಖರ್ಚಾಗಿದ್ದು, ಇದರಿಂದ 450 ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ದೊರೆಯಲಿದೆ. 1.5 ಕಿ.ಮೀ. ಉದ್ದ ನೀರು ಹರಿಯಲಿದ್ದು, 60 ಅಶ್ವಶಕ್ತಿ ಸಾಮರ್ಥ್ಯದ ವಿದ್ಯುತ್ ಮೋಟಾರ್ ಅಳವಡಿಸಲಾಗಿದೆ. ಅರ್ಕಾವತಿ ನದಿಗೆ ಅಡ್ಡಲಾಗಿ ನೀರು ನಿಲ್ಲುವಂತೆ ಚೆಕ್ ಡ್ಯಾಂ ಸಹ ನಿರ್ಮಿಸಲಾಗಿದ್ದು, ಪಂಪ್ ಹೌಸ್ ಹೊಸ ಮನೆ, ವಿದ್ಯುತ್ ಸ್ಥಾವರ ಹೊಸ ಪೈಪ್ ಲೈನ್ ಅಳವಡಿಸಲಾಗಿದೆ ಎಂದು ತಿಳಿಸಿದರು.

ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ಕೆ.ರಾಜು, ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಎ.ಬಿ.ಚೇತನ್ ಕುಮಾರ್, ಮುಖಂಡರಾದ ವಾಸು, ಜಯಣ್ಣ, ರೈಡ್ ನಾಗರಾಜ್ ಹಾಗೂ ಇತರರು ಉಪಸ್ಥಿತರಿದ್ದರು.

ಶ್ರೀಅವಸರದಮ್ಮ ಕ್ಷೇತ್ರದಲ್ಲಿ ಜಾತ್ರೆ, ಅಗ್ನಿಕೊಂಡೋತ್ಸವ

ರಾಮನಗರ: ತಾಲೂಕಿನ ಹೆಸರಾಂತ ಶ್ರೀಅವಸರದಮ್ಮ(ಪಾರ್ವತಿದೇವಿ) ಕ್ಷೇತ್ರದಲ್ಲಿ ಜಾತ್ರೆ ಹಾಗೂ ಬಸವೇಶ್ವರ ಸ್ವಾಮಿ ಅಗ್ನಿಕೊಂಡ ಮಹೋತ್ಸವವು ಸಾವಿರಾರು ಭಕ್ತರ ಆರಾಧನೆಯೊಂದಿಗೆ ವಿಜೃಂಭಣೆಯಿಂದ ನೆರವೇರಿತು. ಬಿಡದಿ ಹೋಬಳಿ ತಾಳಕುಪ್ಪೆ, ಚಿನ್ನೇಗೌಡನದೊಡ್ಡಿ ಗ್ರಾಮದ ಬಳಿಯಿರುವ ಶ್ರೀ ಅವ ಸರದಮ್ಮ(ಪಾರ್ವತಿದೇವಿ) ಜಾತ್ರಾ ಮಹೋತ್ಸವದ ಅಂಗವಾಗಿ ಪ್ರತಿವರ್ಷದಂತೆ ಶ್ರೀಕ್ಷೇತ್ರದಲ್ಲಿರುವ ಬಸವೇಶ್ವರಸ್ವಾಮಿ ಹಾಗೂ ಮುತ್ತರಾಯಸ್ವಾಮಿ ದೇವರುಗಳ ಪೂಜೆ ಹಾಗೂ ಮೆರವಣಿಗೆಯನ್ನು ಶ್ರದ್ಧಾಭಕ್ತಿಯಿಂದ ಆಚರಿಸಲಾಯಿತು. ಸೋಮವಾರ ಬೆಳಿಗ್ಗೆ 10 ಗಂಟೆಗೆ ದೇವಾಲಯದ ಅರ್ಚಕಬಸವರಾಜುರವರುಭಕ್ತಾಧಿಗಳ ಹರ್ಷೋದ್ಗಾರದೊಂದಿಗೆ ಯಶಸ್ವಿಯಾಗಿ ಬಸವೇಶ್ವರ ಅಗ್ನಿಕೊಂಡ ಪ್ರವೇಶ ಮಾಡಿದ್ದನ್ನು ಸಾವಿರಾರು ಭಕ್ತರು ಕಣ್ತುಂಬಿಕೊಂಡರು. ಬಿದಿರಿನಿಂದ ತಯಾರಿಸಿದ ಬುಟ್ಟಿಯಲ್ಲಿ ನಾನಾ ಪುಷ್ಪಗಳು ಹಾಗೂ ಹೊಂಬಾಳೆಯಿಂದ ಆಕರ್ಷಕವಾಗಿ ಅಲಂಕರಿಸಿದ ಕುರ್ಜಿನ ಆರತಿಗಳನ್ನು ಮಹಿಳೆಯರಾಧಿಯಾಗಿ ಭಕ್ತರು ತಲೆಯ ಮೇಲೆ ಹೊತ್ತುತಂದು ಶ್ರೀದೇವಿಗೆ ಪೂಜೆ ಅರ್ಪಿಸಿದರು. ದೇಗುಲದ ಮುಂಭಾಗದಲ್ಲಿ ನಿರ್ಮಿಸಿರುವ ಮಂಟಪದಲ್ಲಿ ಶ್ರೀ



ಬಸವೇಶ್ವರಸ್ವಾಮಿ, ಅವಸರದಮ್ಮ ಮತ್ತು ಮುತ್ತುರಾಯಸ್ವಾಮಿ ದೇವರುಗಳ ಉತ್ಸವ ಮೂರ್ತಿಗಳಿಗೆ ಪೂಜೆ ಸಲ್ಲಿಸಲಾಯಿತು. ನಂತರ ತಮಟೆ ವಾದ್ಯ ಮತ್ತು ಕುರ್ಜಿನ ಆರತಿಗಳೊಂದಿಗೆ ದೇವರುಗಳ ಮೂರ್ತಿಯನ್ನು ಗ್ರಾಮಗಳಲ್ಲಿ ಮೆರವಣಿಗೆ ಮಾಡಲಾಯಿತು.

ಅವಸರದಮ್ಮ ದೇವಿಯ ಅಗ್ನಿಕೊಂಡ ಮಹೋತ್ಸವವನ್ನು ಕೆಲವು ಕಟ್ಟನಿಟ್ಟಿನ ಶಿಸ್ತುಪಾಲನೆಯಿಂದ 4 ದಿನಗಳ ಕಾಲ ಆಚರಣೆ ಮಾಡಲಾಗುತ್ತದೆ. ಬಿಡದಿ ಹೋಬಳಿಯ ಸುಮಾರು 33 ಹಳ್ಳಿಗಳ ಗ್ರಾಮಸ್ಥರು ಸೇರಿ ಆಚರಿಸುವುದರಿಂದ ಇದೊಂದು ದೊಡ್ಡ ಹಬ್ಬವೆಂದು ಹೆಸರಾಗಿದೆ. ಸಾವಿರಾರು ಜನ ಭಕ್ತರು, ನೆಂಟರಿಷ್ಟರು ಪಾಲ್ಗೊಂಡು ಸಂಭ್ರಮಿಸುವುದು ವಿಶೇಷವಾಗಿದೆ.

ಶಾಲಾ ಸಾವಯವ ಚಟುವಟಿಕೆಗೆ ಕೃಷಿ ಇಲಾಖೆ ಅಪರ್ಣಾ ಮೆಚ್ಚುಗೆ

ಚನ್ನಪಟ್ಟಣ: ಪಟ್ಟಣದ ಬಾಲು ಪಬ್ಲಿಕ್ ಶಾಲೆಯಲ್ಲಿ ಸಾವಯವ ಕೃಷಿ ಚಟುವಟಿಕೆಗಳು ವಿದ್ಯಾರ್ಥಿಗಳಲ್ಲಿ ಪ್ರಕೃತಿ ಪ್ರೀತಿ ಮತ್ತು ಕೃಷಿಯ ಅರಿವು ಮೂಡಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತಿವೆ. ಈ ಹಿನ್ನೆಲೆಯಲ್ಲಿ ಕೃಷಿ ಇಲಾಖೆಯ ಸಹಾಯಕ ನಿರ್ದೇಶಕಿ ಅಪರ್ಣ ಅವರು ಶಾಲೆಗೆ ಭೇಟಿ ನೀಡಿ ಮಕ್ಕಳಿಂದ ಬೆಳೆಸಲಾಗಿರುವ ಸಾವಯವ ತೋಟವನ್ನು ವೀಕ್ಷಿಸಿ ಸಂತೋಷ ವ್ಯಕ್ತಪಡಿಸಿದರು. ಶಾಲಾ ಆವರಣದಲ್ಲಿ ವಿದ್ಯಾರ್ಥಿಗಳಿಂದಲೇ ಬೆಳೆಸಲ್ಪಟ್ಟಿರುವ ತರಕಾರಿ ಹಾಗೂ ಹಸಿರು ಸೊಪ್ಪುಗಳನ್ನು ಗಮನಿಸಿದ ಅಪರ್ಣ ಅವರು, ಇಂದಿನ ತಲೆಮಾರಿನ ಮಕ್ಕಳಲ್ಲಿ ಕೃಷಿಯ ಬಗ್ಗೆ ಆಸಕ್ತಿ ಮೂಡಿಸುವುದು ಅತ್ಯಂತ ಅಗತ್ಯವಾಗಿದೆ ಎಂದು ಹೇಳಿದರು. ಬೇಸಿಗೆ ರಜಾದಿನಗಳಲ್ಲಿ ತಮ್ಮ ಮನೆಯಲ್ಲಿರುವ ಸಣ್ಣ ಜಾಗವನ್ನು ಬಳಸಿಕೊಂಡು ಸಾವಯವ ವಿಧಾನದಲ್ಲಿ ತರಕಾರಿ ಮತ್ತು ಸೊಪ್ಪುಗಳನ್ನು ಬೆಳೆಸುವಂತೆ ಮಕ್ಕಳಿಗೆ ಸಲಹೆ ನೀಡಿದರು.

ಶಾಲೆಯ ಸಾವಯವ ತೋಟದಲ್ಲಿ ಬೆಳೆದ ವಿವಿಧ ತರಕಾರಿ ಮತ್ತು ಸೊಪ್ಪುಗಳನ್ನು ಏಳನೇ ತರಗತಿಯ ವಿದ್ಯಾರ್ಥಿಗಳಿಂದ ಕಟಾವು ಮಾಡಿಸಲಾಯಿತು. ತಮ್ಮ ಕೈಯಿಂದ ಬೆಳೆದ ಬೆಳೆಗಳನ್ನು ಕಟಾವು ಮಾಡುವ ಸಂತೋಷ ಮಕ್ಕಳಲ್ಲಿ ಸ್ಪಷ್ಟವಾಗಿ ಕಾಣಿಸಿಕೊಂಡಿತು.

ಮಕ್ಕಳು ತಾವು ಬೆಳೆದ ತರಕಾರಿ ಮತ್ತು ಸೊಪ್ಪುಗಳನ್ನು ಶಾಲೆಯ ಶಿಕ್ಷಕರಿಗೆ ಉಡುಗೊರೆಯಾಗಿ ನೀಡಿ ತಮ್ಮ ಸಂತಸವನ್ನು ಹಂಚಿಕೊಂಡರು. ಶಾಲಾ ಆಡಳಿತ ಮಂಡಳಿ ಈ ರೀತಿಯ ಕಾರ್ಯಕರ್ತ್ಮಕ ಕಲಿಕೆಯ ಮೂಲಕ ವಿದ್ಯಾರ್ಥಿಗಳಿಗೆ ಪಾಠ್ಯೇತರ ಚಟುವಟಿಕೆಗಳ ಜೊತೆಗೆ ಜೀವನ ಕೌಶಲ್ಯಗಳನ್ನು ಕಲಿಸುವ ಪ್ರಯತ್ನ ಮಾಡುತ್ತಿರುವುದು ಶ್ಲಾಘನೀಯವಾಗಿದೆ. ಶಾಲೆಯ ಜಂಟಿ ಕಾರ್ಯದರ್ಶಿ ವಿ ಬಾಲಸುಬ್ರಹ್ಮಣ್ಯಂ ಶಾಲೆಯ ಧರ್ಮದರ್ಶಿ ಕವಿತಾ ಬಾಲಸುಬ್ರಹ್ಮಣ್ಯಂ, ಮುಖ್ಯ ಶಿಕ್ಷಕಿ ಕವಿತಾ, ಶಿಕ್ಷಕ ವರ್ಗದವರು ಉಪಸ್ಥಿತರಿದ್ದರು.



ದಲಿತರಿಗೆ ಸೌಲಭ್ಯ ನೀಡಲು ಪಿಡಿಒ ನಿರ್ಲಕ್ಷ್ಯ ಆರೋಪ

ಹಾರೋಹಳ್ಳಿ: ದಲಿತರಅಭ್ಯುದಯಕ್ಕಾಗಿಯೇ ಇರುವ 15ನೇ ಹಣಕಾಸು ಯೋಜನೆಯಲ್ಲಿ ಶವಸಂಸ್ಕಾರದ ಹಣ ನೀಡುವುದಕ್ಕೂ ಪಿಡಿಒ ನಿರ್ಲಕ್ಷ ತೋರಿಸುತ್ತಿದ್ದಾರೆ. ಅಲ್ಲದೇ ದಲಿತರಿಗೆ ಸರಕಾರಿ ಸೌಲಭ್ಯ ನೀಡಲು ತಾರತಮ್ಯ ಎಣಿಸುತ್ತಿದ್ದಾರೆ ಎಂದು ಗ್ರಾಮಸ್ಥರು ಆರೋಪಿಸಿದರು.

ಹಾರೋಹಳ್ಳಿ ತಾಲೂಕಿನ ಟಿ.ಹೊಸಹಳ್ಳಿ ಗ್ರಾಮ ಪಂಚಾಯಿತಿ ಆವರಣದಲ್ಲಿ ಜರುಗಿ ಸಾಮಾಜಿಕ ಲೆಕ್ಕ ಪರಿಶೋಧನಾ ಗ್ರಾಮಸಭೆಯಲ್ಲಿ ಈ ಆರೋಪ ಕೇಳಿ ಬಂದಿದ್ದು ಹೊಸದಾಗಿ ಪಿಡಿಒ ಬಂದು ಹಲವು ತಿಂಗಳುಗಳೇ ಕಳೆದಿವೆ. ಹೀಗಿದ್ದರೂ ಸಹ ಇಲ್ಲಿನ ಪಿಡಿಒ ಸರಿಯಾಗಿ ಕಾರ್ಯ ನಿರ್ವಹಿಸುತ್ತಿಲ್ಲ. ದಲಿತರು ಕೇವಲ ಶವ ಸಂಸ್ಕಾರಕ್ಕಾಗಿ ಹಣ ಕೇಳಿದರೂ ಸಹ ಸ್ಪಂದಿಸುತ್ತಿಲ್ಲ, ಇನ್ನಾವ ಪುರುಷಾರ್ಥಕ್ಕೆ ಇವರು



ಕರ್ತವ್ಯ ನಿರ್ವಹಿಸಬೇಕು ಎಂದು ಸಭೆಯಲ್ಲಿ ದಲಿತ ಮುಖಂಡ ನಾಗರಾಜು.ವಿ. ಆಕ್ರೋಶ ವ್ಯಕ್ತಡಪಸಿದರು.

ಸಭೆಯುದ್ದಕ್ಕೂ ಟಿ.ಹೊಸಹಳ್ಳಿ ಪಿಡಿಒ ಅಅವರ ವಿರುದ್ಧ ಆಕ್ರೋಶಗಳ ಸುರಿಮಳೇಯೇ ಸುರಿಯಿತು. ಗ್ರಾಮದಲ್ಲಿ ನೀರಿನ ಸಮಸ್ಯೆ ಉದ್ಭವಿಸಿದೆ. ದಲಿತರ ಕಲ್ಯಾಣಕ್ಕಾಗಿ ಕೋಟಗಟ್ಟಲೆ ಹಣ ಬಿಡುಗಡೆಯಾಗುತ್ತದೆ.

ಆದರೆ ಆ ಹಣವೆಲ್ಲಾ ಎಲ್ಲಿ ಹೋಗುತ್ತದೆ ಕುಡಿಯುವ ನೀರಿಗೂ ಸಹ ನಮ್ಮ ಗ್ರಾಮದಲ್ಲಿ ಸಮರ್ಪಕ ವ್ಯವಸ್ಥೆ ಇಲ್ಲ. ಕೇಳದರೆ ಉಡಾಫೆ ಉತ್ತರ ನೀಡುತ್ತಾರೆ ನಿಮ್ಮ ಕೈ ಮುಗಿತೀವಿ ಸಮರ್ಪಕಾದ ನೀರಿನ ವ್ಯವಸ್ಥೆ ಮಾಡಿಕೊಡಿ ಎಂದು ಟಿ.ಹೊಸಹಳ್ಳಿ ಗ್ರಾಮದ ಅಶ್ವಥ್ ಪಿಡಿಒ ವರ ಬಳಿ ಅಲವತ್ತುಕೊಂಡರು.

ನರೇಗಾ ತಾಲೂಕು ಸಂಯೋಜಕಿ ಕಮಲಮ್ಮ ಟಿ ಹೊಸಹಳ್ಳಿ ಗ್ರಾಮದಲ್ಲಿ ಜಲ್ಲಿ ಮೆಟ್ಲಿಂಗ್ ಕಾಮಗಾರಿಯನ್ನು ಕೈಗೊಳ್ಳಲಾಗಿದ್ದು ದಪ್ಪ,ದಪ್ಪ ಕಲ್ಲುಗಳನ್ನು ರಸ್ತೆಗೆ ಹಾಕಲಾಗಿದೆ. ಈ ಬಗ್ಗೆ ತನಿಖೆಯಾಗಬೇಕು. ಎಂದು ಗ್ರಾಮಸ್ಥರು ಆಗ್ರಹಿಸಿದರು. ಸಭೆಯಲ್ಲಿ ಪಿಡಿಒ ಮಂಜುಳಾ,ರೇಷ್ಮೆ ಇಲಾಖೆಯ ಸರಸ್ವತಮ್ಮ, ಸಿಬ್ಬಂದಿಗಳಾದ ಮಲ್ಲಪ್ಪ, ಗ್ರಾಮಸ್ಥರಾದ ಶ್ರೀನಿವಾಸ್, ಕೃಷ್ಣಯ್ಯ,ವೆಂಕಟೇಶ್ ಸೇರಿದಂತೆ ಇನ್ನಿತರರು ಹಾಜರಿದ್ದರು.

ಮತದಾರರ ಪಟ್ಟಿ ಪರಿಷ್ಕರಣೆ: ಜೆಡಿಎಸ್ ಸಭೆ

ಚನ್ನಪಟ್ಟಣ: ಚುನಾವಣಾ ಆಯೋಗವು ಕೈಗೊಂಡಿರುವ ಮತದಾರರ ಪಟ್ಟಿಯ ಪರಿಷ್ಕರಣೆ ಬಿಎಲ್‌ಒ ಪ್ರಕ್ರಿಯೆಯನ್ನು ಗಮನದಲ್ಲಿಟ್ಟುಕೊಂಡು, ಜೆಡಿಎಸ್ ಪಕ್ಷವು ಚನ್ನಪಟ್ಟಣದಲ್ಲಿ ಮಹತ್ವದ ಪೂರ್ವಭಾವಿ ಸಭೆಯನ್ನು ಇಂದು (ಬುಧವಾರ) ಏರ್ಪಡಿಸಿದೆ.

ನಗರದ ಪ್ರವಾಸಿ ಮಂದಿರದಲ್ಲಿ ಬೆಳಗ್ಗೆ 11 ಗಂಟೆಗೆ ನಡೆಯಲಿರುವ ಈ ಸಭೆಯನ್ನು ಬೆಂಗಳೂರು ದಕ್ಷಿಣ ಜಿಲ್ಲಾ ಜೆಡಿಎಸ್ ಅಧ್ಯಕ್ಷ ಎಚ್.ಸಿ. ಜಯಮುತ್ತು ಅವರ ನೇತೃತ್ವದಲ್ಲಿ ನಡೆಸಲಾಗುತ್ತಿದೆ. ಈ ಕಾರ್ಯಕ್ರಮದಲ್ಲಿ ಚನ್ನಪಟ್ಟಣ ತಾಲ್ಲೂಕು ಜೆಡಿಎಸ್ ಅಧ್ಯಕ್ಷ ಗೋವಿಂದಹಳ್ಳಿ ನಾಗರಾಜು ಹಾಗೂ ನಗರ ಜೆಡಿಎಸ್ ಅಧ್ಯಕ್ಷ ಸಿ.ಅಜಯ್ ಕುಮಾರ್ ಸಹ ಭಾಗವಹಿಸಿ ಸಭೆಯನ್ನು ಮುನ್ನಡೆಸಲಿದ್ದಾರೆ.

ಮತದಾರರ ಪಟ್ಟಿಯ ಪರಿಷ್ಕರಣೆ ಪ್ರಕ್ರಿಯೆ ಹಿನ್ನೆಲೆಯಲ್ಲಿ ಪಕ್ಷದ ಸಂಘಟನೆ ಬಲಪಡಿಸುವುದು, ಬೂತ್ ಮಟ್ಟದ ಕಾರ್ಯಕರ್ತರ ಜವಾಬ್ದಾರಿಗಳನ್ನು ಸ್ಪಷ್ಟಗೊಳಿಸುವುದು ಹಾಗೂ ಬಿಎಲ್‌ಒಗಳೊಂದಿಗೆ ಸಮನ್ವಯ ಸಾಧಿಸುವ ಬಗ್ಗೆ ಈ ಸಭೆಯಲ್ಲಿ ಚರ್ಚೆ ನಡೆಯಲಿದೆ. ಮುಂದಿನ ಚುನಾವಣಾ ಸನ್ನಾಹದ ದೃಷ್ಟಿಯಿಂದ ಮತದಾರರ ವಿವರಗಳನ್ನು ಸಮಗ್ರವಾಗಿ ಪರಿಶೀಲಿಸುವ ಅಗತ್ಯತೆಯನ್ನೂ ಸಭೆಯಲ್ಲಿ ಒತ್ತಿ ಹೇಳಲಾಗುತ್ತದೆ. ಈ ಸಭೆಗೆ ಚನ್ನಪಟ್ಟಣ ನಗರ ಹಾಗೂ ತಾಲ್ಲೂಕಿನ ಜೆಡಿಎಸ್ ಪಕ್ಷದ ಎಲ್ಲಾ ಮುಖಂಡರು, ಪದಾಧಿಕಾರಿಗಳು, ನಗರಸಭೆಯ ಹಾಲಿ ಹಾಗೂ ಮಾಜಿ ಸದಸ್ಯರು ಮತ್ತು ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಪ್ರಕಟಣೆ ಮೂಲಕ ಮನವಿ ಮಾಡಲಾಗಿದೆ.

ರಾಜಕೀಯ ವಲಯದಲ್ಲಿ ಈ ಸಭೆಗೆ ವಿಶೇಷ ಮಹತ್ವ ದೊರೆತಿದ್ದು, ಪಕ್ಷದ ಸಂಘಟನೆ ಬಲಪಡಿಸಲು ಹಾಗೂ ಬೂತ್ ಮಟ್ಟದಲ್ಲಿ ಚಟುವಟಿಕೆಗಳನ್ನು ಚುರುಕುಗೊಳಿಸಲು ಇದು ವೇದಿಕೆಯಾಗಲಿದೆ ಎಂಬ ನಿರೀಕ್ಷೆ ವ್ಯಕ್ತವಾಗಿದೆ.

ಶಾಸಕ ಬಾಲಕೃಷ್ಣ ಕ್ರಮಕ್ಕೆ ಕೆಂಪೇಗೌಡ ಅಭಿವೃದ್ಧಿ ಸಮಿತಿ ಅಧ್ಯಕ್ಷ ಕೃಷ್ಣಮೂರ್ತಿ ಖಂಡನೆ

ಅಭಿವೃದ್ಧಿ ಹೆಸರಲ್ಲಿ ಕೆಂಪೇಗೌಡ ಪ್ರತಿಮೆ ಸ್ಥಳಾಂತರ

ಮಾಗಡಿ: ಪಟ್ಟಣದ ಹೃದಯಭಾಗದಲ್ಲಿರುವ ಕೆಂಪೇಗೌಡರ ಪ್ರತಿಮೆಯನ್ನು ಅಭಿವೃದ್ಧಿ ಅಥವಾ ಆಸ್ಪತ್ರೆ ನಿರ್ಮಾಣದ ಹೆಸರಿನಲ್ಲಿ ಸ್ಥಳಾಂತರಿಸಲು ಮುಂದಾಗಿರುವ ಶಾಸಕ ಬಾಲಕೃಷ್ಣ ಅವರ ಕ್ರಮವನ್ನು ಕೆಂಪೇಗೌಡ ಅಭಿವೃದ್ಧಿ ಸಮಿತಿ ಅಧ್ಯಕ್ಷ ಎಚ್.ಎಂ. ಕೃಷ್ಣಮೂರ್ತಿ ತೀವ್ರವಾಗಿ ಖಂಡಿಸಿದ್ದಾರೆ. ಪಟ್ಟಣದ ಕೆಂಪೇಗೌಡರ ಪ್ರತಿಮೆ ಎದುರು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಶಾಸಕರು ಆಸ್ಪತ್ರೆ ನಿರ್ಮಾಣದ ನೆಪದಲ್ಲಿ ಇತಿಹಾಸ ಪ್ರಸಿದ್ಧ ಪ್ರತಿಮೆಯನ್ನು ಇಲ್ಲಿಂದ ಎತ್ತಂಗಡಿ ಮಾಡಲು ಸಂಚು ರೂಪಿಸಿದ್ದಾರೆ. ಇದಕ್ಕೆ ಯಾವುದೇ ಕಾರಣಕ್ಕೂ ಅವಕಾಶ ನೀಡುವುದಿಲ್ಲ ಎಂದು ಎಚ್ಚರಿಸಿದರು.

ಪ್ರತಿಮೆ ಜಾಗದಲ್ಲಿ ಸುಂದರ ಉದ್ಯಾನವನದಲ್ಲಿರುವ ನೂರಾರು ಮರಗಳನ್ನು ಕಡಿಯುವ ಮೂಲಕ ಸಾರ್ವಜನಿಕರಿಗೆ ಸಿಗುತ್ತಿರುವ ನೆರಳನ್ನು ಕಸಿದುಕೊಳ್ಳಲಾಗುತ್ತಿದೆ ಅಭಿವೃದ್ಧಿಯ ಹೆಸರಿನಲ್ಲಿ ಮರಗಳನ್ನು ಕಡಿದು ಪರಿಸರ ನಾಶ ಮಾಡುತ್ತಿರುವುದು ಸರಿಯಲ್ಲ ಈ ಹಿಂದೆ ಕೆಂಪೇಗೌಡ ಉದ್ಯಾನವನದ ಜಾಗದಲ್ಲಿ ಆಸ್ಪತ್ರೆ ನಿರ್ಮಾಣಕ್ಕೆ ಸಂಬಂಧಿಸಿದಂತೆ ಹೈಕೋರ್ಟ್ ಮಧ್ಯಪ್ರವೇಶಿಸಿದ್ದು, ಯಾವುದೇ



ಮರಗಳನ್ನು ಕಡಿಯಬಾರದು ಎಂದು ಆದೇಶ ನೀಡಿದೆ ನ್ಯಾಯಾಲಯದ ಆದೇಶವಿದ್ದರೂ ಶಾಸಕರು ಅದನ್ನು ಉಲ್ಲಂಘಿಸಿ ಮರಗಳನ್ನು ಕಡಿಯುವ ಕೆಲಸ ಮಾಡುತ್ತಿದ್ದಾರೆ ಎಂದು ಯಾವುದೇ ಕಾರಣಕ್ಕೂ ಒಂದು ಮರ ಕಡಿಯಲು ಬಿಡುವುದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸರ್ಕಾರ ಮತ್ತು ಅಧಿಕಾರ ನಿಮ್ಮ ಕೈಯಲ್ಲಿದೆ ಎಂದು ಜನರ ಆಸ್ತಿಯನ್ನು ಹಾಳು ಮಾಡಬೇಡಿ ಮಾಗಡಿಯ ಇತಿಹಾಸ ಮತ್ತು ಭಾವನೆಗಳಿಗೆ ಧಕ್ಕೆ ತರುವ ಕೆಲಸ ನಿಲ್ಲಿಸಿ ಎಂದು ಕೃಷ್ಣಮೂರ್ತಿ ಒತ್ತಾಯಿಸಿದರು. ಹೈಕೋರ್ಟ್ ಮರಗಳನ್ನು ಕಡೆಯಬಾರದು ಎಂದು ಆದೇಶ ಕೊಟ್ಟಿದ್ದು ಈಗ ಪುರಸಭಾ ಮುಖ್ಯ ಅಧಿಕಾರಿಗಳು ಏ.4 ರಂದು ಚರ್ಚೆಗೆ ಬರುವಂತೆ ನನಗೆ ಆಹ್ವಾನ ಕೊಟ್ಟಿದ್ದು ಅದರಂತೆ ನಾನು ಚರ್ಚೆಗೆ ಬರಲು ಸಿದ್ದನಿದ್ದೇನೆ ಯಾವುದೇ ಕಾರಣಕ್ಕೂ ಈ ಜಾಗದಲ್ಲಿ ಮರ ಕಡಿಯುವುದು ಮತ್ತು ಪ್ರತಿಮೆ ಸ್ಥಳಾಂತರ ಮಾಡಲು ಅವಕಾಶ ಕೊಡುವುದಿಲ್ಲ.

ಶಾಸಕ ಬಾಲಕೃಷ್ಣರವರಿಗೆ ಚರ್ಚೆ ಮೂಲಕವೇ ಉತ್ತರ ಕೊಡಲು ಸಿದ್ದನಿದ್ದೇನೆ ಒಂದು ವೇಳೆ ಕೆಂಪೇಗೌಡ ಪ್ರತಿಮೆ ಸ್ಥಳಾಂತರ ಮಾಡಿದರೆ ನಿಮ್ಮ ಅವನತಿ ಇಲ್ಲಿಂದಲೇ ಶುರುವಾಗಲಿದ್ದು ಇದೇ ಜಾಗದಲ್ಲಿ ಮತ್ತೆ ಕೆಂಪೇಗೌಡ ಪ್ರತಿಮೆ ಸ್ಥಾಪಿಸಿ ಉದ್ಘಾಟನೆ ಕೂಡ ಮಾಡುತ್ತೇನೆ.

ಇದು ನನ್ನ ಸವಾಲು ಎಂದು ಬಾಲಕೃಷ್ಣ ವಿರುದ್ಧ ಕೃಷ್ಣಮೂರ್ತಿ ಹೇಳಿದರು. ಜೆಡಿಎಸ್ ಯುವ ಮುಖಂಡ ಮರೂರು ಸಾಗರ್,ಮುಖಂಡರಾದ ಮಾಡಬಾಳ್ ಜಯರಾಂ, ಅನಿಲ್ ಕುಮಾರ್, ರಮೇಶ್, ಗೋಪಿ, ಮಾಜಿ ನಿವೃತ್ತ ಸೈನಿಕರಾದ ಶಿವಲಿಂಗಯ್ಯ, ಕೆಂಪೇಗೌಡ, ಸೈಯದ್, ದೊಡ್ಡಸೋಮಹಳ್ಳಿ ಆನಂದ್, ಕುಮಾರ್, ಮೋಹನ್, ಎನ್ ಇಎಸ್ ಆನಂದ್ ಸೇರಿದಂತೆ ಸಾರ್ವಜನಿಕರು ಭಾಗವಹಿಸಿದ್ದರು.

ಆರ್.ಕೆ.ಗೇಟ್ ಬಳಿ ಮುಸ್ಲಿಮರಿಗೆ ಸೇರಿದ ಸ್ಮಶಾನಕ್ಕೆ ಪರ್ಯಾಯ ರಸ್ತೆ

ಅಂಡರ್‌ಪಾಸ್‌ಗೆ ಅಭ್ಯಂತರವಿಲ್ಲ: ಸ್ಪಷ್ಟನೆ

ಚನ್ನಪಟ್ಟಣ: ಪಟ್ಟಣದ ಆರ್.ಕೆ.ಗೇಟ್ ಬಳಿ ಮುಸ್ಲಿಂ ಸಮುದಾಯಕ್ಕೆ ಸೇರಿದ್ದ ಸ್ಮಶಾನಕ್ಕೆ ಪರ್ಯಾಯ ರಸ್ತೆ ನಿರ್ಮಿಸಿಕೊಟ್ಟರೆ ರೈಲ್ವೆ ಅಂಡರ್‌ಪಾಸ್ ನಿರ್ಮಾಣದ ವಿಚಾರದಲ್ಲಿ ನಮ್ಮದು ಯಾವುದೇ ತಕಾರಾರು ಇಲ್ಲ ಎಂದು ನಗರಸಭೆ ಮಾಜಿ ಅಧ್ಯಕ್ಷ ವಾಸಿಲ್ ಅಲಿಖಾನ್ ಸ್ಪಷ್ಟಪಡಿಸಿದರು. ಪಟ್ಟಣದ ಕೋಟೆಯ ಅಸ್ಲಂ ಬೀಡಿ ಬಾಬು ನಿವಾಸದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಸುಮಾರು ವರ್ಷಗಳ ಹಿಂದೆ ಈ ಮಾರ್ಗದ ಮೂಲಕ ತಿಟ್ಟಮಾರನಹಳ್ಳಿ, ದಶವಾರ, ಮಾಕಳಿ, ಬೇವೂರು ಇನ್ನೂ ಮುಂತಾದ ಊರುಗಳಿಗೆ ತೆರಳಲು ರಸ್ತೆ ಇತ್ತು.

ರಸ್ತೆ ಮೂಲಕ ಸ್ಮಶಾನಕ್ಕೆ ಶವವನ್ನು ತೆಗೆದುಕೊಂಡು ಹೋಗುತ್ತಿದ್ದೆವು. ಆದರೆ ರೈಲ್ವೆ ಇಲಾಖೆಯಿಂದ ತಿಟ್ಟಮಾರನಹಳ್ಳಿ ರಸ್ತೆಗೆ ಮೇಲ್ಸೇತುವೆ ನಿರ್ಮಿಸಿದ ಮೇಲೆ ರೈಲ್ವೆ ಇಲಾಖೆಯವರು ಆರ್.ಕೆ.ಗೇಟ್‌ಅನ್ನು ಮುಚ್ಚಿದರು. ಆಗ ನಮಗೆ ಶ್ಮಾನಕ್ಕೆ ತೆರಳು ಯಾವುದೇ ರಸ್ತೆ ಇಲ್ಲದೆ ರೈಲ್ವೆ ಕಂಬಿಗಳ ಮೇಲೆ ತೆಗೆದುಕೊಂಡು ಹೋಗುವ ಅನಿವಾರ್ಯತೆ ಎದುರಾಗಿದೆ. ಕೆಲವು ಸಂದರ್ಭದಲ್ಲಿ ಶವವನ್ನು ತೆಗೆದುಕೊಂಡು ಹೋಗುವಾಗ ಸರಿಯಾಗೆ ತೆಗೆದುಕೊಂಡು ಹೋಗಲಾಗದೆ ಶವ ಜಾರಿ ಕೆಳಗೆ ಬಿದ್ದ ಪ್ರಸಂಗಗಳು ಕೂಡ ನಡೆದಿವೆ. ಈ ವಿಚಾರಕ್ಕೆ ಸಂಬಂಧಿಸಿದಂತೆ ಅಂದಿನ ಸಂಸದರಾಗಿದ್ದ ಡಿ.ಕೆ.ಸುರೇಶ್ ಅವರಲ್ಲಿ ಮನವಿ ಮಾಡಿ, ನಮ್ಮ ಸಮುದಾಯದ ಸ್ಮಶಾನಕ್ಕೆ ಹಾಗೂ ಅಲ್ಲಿರುವ ಸುತ್ತಮುತ್ತಲ ಹೊಲ ಗದ್ದೆಗಳಿಗೆ, ಮನೆಗಳಿಗೆ ತೆರಳಲು ಅಂಡರ್‌ಪಾಸ್ ರಸ್ತೆ ನಿರ್ಮಿಸಿಕೊಡುವಂತೆ ಮನವಿ ಮಾಡಿದ್ದೆವು ಎಂದು ಹೇಳಿದರು.

ನಮ್ಮ ಮನವಿಗೆ ಸ್ಪಂಧಿಸಿದ ಸಂಸದ ಡಿ.ಕೆ.ಸುರೇಶ್ ಅವರು ಸ್ಥಳ



ಪರಿಶೀಲನೆ ಮಾಡಿ, ಇಲ್ಲಿ ಅಂಡರ್‌ಪಾಸ್ ನಿರ್ಮಿಸಲು ಆಗುವುದಿಲ್ಲ. ಬದಲಿಗೆ ರೈಲ್ವೆ ಹಳಿಯಿಂದ ಸುಮಾರು 10 ರಿಂದ 15 ಅಡಿ ಜಾಗವನ್ನು ತೆಗೆದುಕೊಂಡು ಕೆಳಗೆ ಇಳಿದು ಹೋಗುವ ರೀತಿಯಲ್ಲಿ ಅಂಡರ್ ಪಾಸ್ ನಿರ್ಮಿಸಿದರೆ ಇಲ್ಲಿರುವ ನಿವಾಸಿಗಳಿಗೆ ಯಾವುದೇ ತೊಂದರೆ ಯಾಗುವುದಿಲ್ಲ ಎಂದು ಹೇಳಿದ್ದರು.

ಕೋಟೆಯ ಜಾಮೀಯ ಮಸೀದಿ ಅಧ್ಯಕ್ಷ ಅಬ್ದುಲ್ ಖದೀರ್, ಮದಿನ ಮಸೀದಿಯ ಅಧ್ಯಕ್ಷ ಯಜಾಜ್, ನಗರಸಭೆ ಮಾಜಿ ಅಧ್ಯಕ್ಷ ಸೊಯಬ್, ಅಸ್ಲಂ ಬೀಡಿ ಬಾಬು, ಮುಖಂಡ ತೌಸಿಬ್, ಜಿಲ್ಲಾ ಯುವ ಕಾಂಗ್ರೆಸ್ ಕಾರ್ಯದರ್ಶಿ ಸೂಪಿಸಾಜು, ಜಾಯಿದ್ ಅಜರತ್, ನಯಾಜ್, ಮಹಮ್ಮದ್ ಕೌಸರ್, ಕೋಟೆ ಮಸಿದಿ ಕಮಿಟಿ ಮೆಂಬರ್ ಅಬ್ದುಲ್ ಅಲಿ, ಸನಾವುಲ್ಲಾ, ಅಪ್ಸರ್ ಮುಂತಾದವರು ಹಾಜರಿದ್ದರು.

ಕಿರುಸುದ್ದಿ

ಮಹಾವೀರ ಜಯಂತಿ ಆಚರಣೆ



ಬಂಗಾರಪೇಟೆ: ಪಟ್ಟಣದ ಭಗವಾನ್ ಮಹಾವೀರ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸುವ ಮೂಲಕ ಜೈನ್ ಸಮುದಾಯದವರು ಶ್ರದ್ಧಾಭಕ್ತಿಗಳಿಂದ ಭಗವಾನ್ ಮಹಾವೀರ ಜಯಂತಿಯನ್ನು ಆಚರಿಸಿದರು.

ಪಟ್ಟಣದ ಜೈನ್ ಸಂಘದ ವತಿಯಿಂದ ಭಗವಾನ್ ಮಹಾವೀರರ ವಿಶೇಷ ಪ್ರತಿಮೆಯನ್ನು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು. ಸಾರ್ವಜನಿಕರಿಗೆ ಸಿಹಿಯನ್ನು ಹಂಚಿದರು, ವಿಶೇಷ ವಾದ್ಯಗೋಷ್ಠಿಯೊಂದಿಗೆ ಮೆರವಣಿಗೆ ನಡೆಸಲಾಯಿತು. ಶಾಸಕ ಎಸ್.ಎನ್.ನಾರಾಯಣಸ್ವಾಮಿ ಭಾಗವಹಿಸಿ ಸ್ವಾಮಿಯ ದರ್ಶನ ಪಡೆದು ಮಾತನಾಡಿದ ಅವರು ಜೈನ ಸಮುದಾಯದವರು ಬಡವರಿಗೆ ರೈತರಿಗೆ ಸ್ಪಂದಿಸುವ ಸಮುದಾಯವಾಗಿದೆ, ಪ್ರತಿಯೊಬ್ಬರಿಗೂ ಪ್ರೀತಿ ವಿಶ್ವಾಸದಿಂದ ಕಾಣುತ್ತಾರೆ, ಸಮುದಾಯವು ಪಕ್ಷಾತೀತವಾಗಿ ನನ್ನ ಚುನಾವಣೆಯಲ್ಲಿ ಬೆಂಬಲಿಸಿ ಮತ ನೀಡಿ ಗೆಲ್ಲಿಸಿದ್ದಾರೆ, ನಾನು ಸದಾ ನಿಮ್ಮೊಂದಿಗೆ ಇರುತ್ತೇನೆ. ಪಟ್ಟಣದ ಬಜಾರ್ ರಸ್ತೆ ಹಾಗೂ ಜೈನ್ ದೇವಾಲಯದ ರಸ್ತೆಯನ್ನು ಇನ್ನು ಹದಿನೈದು ದಿನಗಳ ಒಳಗಾಗಿ ಸಿಮೆಂಟ್ ರಸ್ತೆಯನ್ನು ಮಾಡಿಸಿಕೊಡಲಾಗುವುದು ಎಂದು ತಿಳಿಸಿದರು, ಸಕಾಲಕ್ಕೆ ಮಳೆ ಬೆಳೆಯಾಗಲಿ, ಮಹಾವೀರರು ಎಲ್ಲರಿಗೂ ಒಳ್ಳೆಯದನ್ನು ಮಾಡಲಿ ಎಂದರು. ಈ ವೇಳೆ ಜೈನ್ ಸಂಘದ ಪಧಾಧಿಕಾರಿಗಳು ಹಾಜರಿದ್ದರು.

ಎಸ್ಸೆಸ್ಸೆಲ್ಸಿ ತೃತೀಯ ಭಾಷೆ ರದ್ದು ಖಂಡನೀಯ: ವಾಸುದೇವ

ಕೋಲಾರ: ಎಸ್ಸೆಸ್ಸೆಲ್ಸಿಯಲ್ಲಿ ತೃತೀಯ ಭಾಷೆಯನ್ನು ರದ್ದು ಮಾಡುವ ಮೂಲಕ ಕಾಂಗ್ರೆಸ್ ಸರ್ಕಾರ ಮಕ್ಕಳು ಕಲಿಯುವ ಜ್ಞಾನವನ್ನು ಕಿತ್ತುಕೊಳ್ಳವ ಕೆಲಸ ಮಾಡಿದೆ ಎಂದು ಕರ್ನಾಟಕ ಮಾವು ಅಭಿವೃದ್ಧಿ ಮಂಡಳಿ ಮಾಜಿ ಅಧ್ಯಕ್ಷ ವಾಸುದೇವ ಟೀಕಿಸಿದ್ದಾರೆ. ಶಿಕ್ಷಣ ಇಲಾಖೆಯಿಂದ ಏಕಾಏಕಿ ತೃತೀಯ ಭಾಷೆ ರದ್ದುಗೊಳಿಸಿದ್ದು, ಮಕ್ಕಳು ತೃತೀಯ ಭಾಷೆಯಾಗಿ ಹಿಂದಿ ಮಾತ್ರವಲ್ಲ ಇಂಗ್ಲೀಷ್,ಕನ್ನಡವನ್ನು ಕಲಿಯುತ್ತಿದ್ದು, ಅದೆಲ್ಲವನ್ನು ತೆಗೆದುಹಾಕಲಾಗಿದೆ.

ವಿದ್ಯಾರ್ಥಿಗಳು ಪರೀಕ್ಷೆ ಬರೆಯುತ್ತಿರುವ ಸಮಯದಲ್ಲೇ ಹಿಂದೆ ಭಾಷೆ ವಿರೋಧಿ ನಡೆ ಅನುಸರಿಸಿರುವುದು ಬೇಕಾಗಿರಲಿಲ್ಲ, ಲಕ್ಷಾಂತರ ವಿದ್ಯಾರ್ಥಿಗಳು ಹಿಂದಿ ಪಾಠ ಓದಿ ಅಭ್ಯಾಸ ಮಾಡಿದ್ದಾರೆ. ಈಗ ದಿಢೀರನೆ ಈ ತೀರ್ಮಾನ ಕೈಗೊಂಡಿರುವುದು ಮಕ್ಕಳಿಗೆ ದೊಡ್ಡ ನಷ್ಟವಾಗಿದೆ.

ವರ್ಷಪೂರ್ತಿ ಕಲಿಸಿದ ಗುರುಗಳ ಹಾಗೂ ವಿದ್ಯಾರ್ಥಿಗಳ ಪಾಡೇನು, ಶಿಕ್ಷಕರ ಶ್ರಮಕ್ಕೆ ಹಾಗೂ ಮಕ್ಕಳ ಕಲಿಕೆಗೆ ಬೆಲೆ ಇಲ್ಲವೇ ಎಂದು ಪ್ರಶ್ನಿಸಿರುವ ಅವರು ನಮ್ಮ ಕನ್ನಡದ ಮಕ್ಕಳನ್ನು ಬರೀ ಕನ್ನಡಕ್ಕೆ ಸೀಮಿತಗೊಳಿಸಬಾರದು ಹಿಂದಿ ಕಲಿತರೆ ರಾಷ್ಟ್ರ ಮಟ್ಟದಲ್ಲಿ ಮಕ್ಕಳು ಪ್ರತಿ ನಿಧಿಸಲು, ಬೆಳೆಯಲು ಸಹಾಯವಾಗುತ್ತದೆ. ಸರ್ಕಾರಿ, ಅನುದಾನಿತ ಹಾಗೂ ಅನುದಾನ ರಹಿತ ಶಾಲೆಗಳಲ್ಲಿ ಮಕ್ಕಳಿಗೆ ನಿತ್ಯ ಹಿಂದಿ ಕಲಿಸುತ್ತಿರುವ ರಾಜ್ಯದಲ್ಲಿನ ಸಾವಿರಾರು ಶಿಕ್ಷಕರ ಭವಿಷ್ಯವನ್ನು ಸರ್ಕಾರ ಹಾಳುಗೇಡವಿದೆ.

ಸರ್ಕಾರ ಏಕಾಏಕಿ ದ್ವಿಭಾಷಾ ಸೂತ್ರ ಅಳವಡಿಸುವ ಮುಂಚೆ ಶಿಕ್ಷಣ ತಜ್ಞರ ಜೊತೆ ಸಮಾಲೋಚನೆ ನಡೆಸಿ ಸಾಧಕಬಾಧಕಗಳ ಬಗ್ಗೆ ಚರ್ಚೆ ನಡೆಸಬೇಕಿತ್ತು ಎಂದು ತಿಳಿಸಿ, ಸರ್ಕಾರದ ನಿರ್ಧಾರಕ್ಕೆ ಆಕ್ರೋಷ ವ್ಯಕ್ತಪಡಿಸಿದ್ದಾರೆ.

ಚಿಕ್ಕತಿರುಪತಿ: ನಾದಸ್ವರ ಗಾಯನ, ಮಂಜುನಾಥ್‌ಗೆ ಸನ್ಮಾನ

ಕೋಲಾರ: ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿ ದೇವಾಲಯ ಚಿಕ್ಕತಿರುಪತಿ ಮಾಲೂರು ತಾಲ್ಲೂಕು ಬ್ರಹ್ಮರಥೋತ್ಸವದ ಅಂಗವಾಗಿ ಮಾ.29 ರ ಸಂಜೆ ನಡೆದ ಕಲ್ಯಾಣೋತ್ಸವದಲ್ಲಿ ಪಿಟೀಲು ಟಿ.ಚೌಡಯ್ಯ ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತ, ಕರ್ನಾಟಕ ಕಲಾಶ್ರೀ ಪ್ರಶಸ್ತಿ ಪುರಸ್ಕೃತ ನಾದಸ್ವರ ವಿದ್ವಾನ್ ಆರ್.ಶ್ರೀರಾಮುಲು ರವರ ಪುತ್ರರಾದ ಎಸ್. ಮಂಜುನಾಥ ನೇತೃತ್ವದಲ್ಲಿ ನಾದಸ್ವರ ಕಚೇರಿ ನಡೆಯಿತು.

ಶ್ರೀರಾಮುಲು ಶಿಷ್ಯ ವೃಂದದ ನಾದಸ್ವರ ಕೋಲಾರದ ಎಸ್.ಕೆಂಪರಾಜು, ನಾದಸ್ವರ ಆಲಂಬಾಡಿ ಮುನಿರಾಜು, ಮಂಜಲನಗರ ವೇಣು, ಎಮ್.ಕೃಷ್ಣಮೂರ್ತಿ ಡೋಲು, ಡಿ.ಎಸ್.ಎಸ್.ಸಂತೋಷ್ ಡೋಲು, ತಾಳ ಕೃಷ್ಣ ನಾದಸ್ವರ ಕಚೇರಿಯನ್ನು ನಡೆಸಿಕೊಟ್ಟರು. ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿ ದೇವಾಲಯದ ಆಡಳಿತ ಮಂಡಳಿಯ ಅಧ್ಯಕ್ಷರು, ಕಾರ್ಯನಿರ್ವಾಹಕ ಅಧಿಕಾರಿಗಳು, ಆಡಳಿತ ಮಂಡಳಿಯ ಸದಸ್ಯರಿಂದ ಕಲಾವಿದರನ್ನು ಅಭಿನಂದಿಸಲಾಯಿತು.



ಕೋಲಾರದಲ್ಲಿ ನಡೆದ ಭಗವಾನ್ ಮಹಾವೀರರ ಜಯಂತಿ ಭವ್ಯ ಮೆರವಣಿಗೆಗೆ ಅಪರ ಜಿಲ್ಲಾಧಿಕಾರಿ ಮಂಗಳಾ ಚಾಲನೆ ನೀಡಿದ್ದು, ಸಮುದಾಯದ ಅಧ್ಯಕ್ಷ ಜಯಂತಿಲಾಲ್ ಮತ್ತಿತರರು ಜತೆಗಿದ್ದರು.

ಡಾ.ಶಿವಕುಮಾರ ಸ್ವಾಮೀಜಿಗಳ ಜಯಂತಿಗೆ ದವಸ, ಧಾನ್ಯ ಕೊಡುಗೆ

ಕೋಲಾರ: ಕರ್ನಾಟಕ ರತ್ನ ತ್ರಿವಿಧ ದಾಸೋಹಿ ನಡೆದಾಡುವ ದೇವರು ಡಾ. ಶಿವಕುಮಾರ ಮಹಾಸ್ವಾಮಿಗಳ 119ನೇ ಜಯಂತೋತ್ಸವ ಹಾಗೂ ಗುರುವಂದನಾ ಕಾರ್ಯಕ್ರಮಕ್ಕೆ ಕೋಲಾರ ಮುಳಬಾಗಿಲು ಸುತ್ತಮುತ್ತಲ ಗ್ರಾಮಗಳಲ್ಲಿ ಭಕ್ತರಿಂದ ಸಂಗ್ರಹಿಸಿದ್ದ ದವಸ ಧಾನ್ಯ ತರಕಾರಿಗಳನ್ನು ಎರಡು ಲಾರಿಗಳಲ್ಲಿ ಸಿದ್ದಗಂಗಾ ಮಠಕ್ಕೆ ತಲುಪಿಸಿದಾಗ ಖುದ್ದು ಮಠ ಅಧ್ಯಕ್ಷರಾದ ಶ್ರೀ ಸಿದ್ದಲಿಂಗ ಮಹಾಸ್ವಾಮಿಗಳು ಸ್ವೀಕರಿಸಿದರು.ಶ್ರೀಗಳು ಕೋಲಾರ ಜಿಲ್ಲೆಯ ಜನತೆ ಜಾತಿ ಧರ್ಮವೆನ್ನದೆ ಮಠದ ಮೇಲಿರುವ ಭಕ್ತಿಯನ್ನು ಪ್ರಶಂಸಿಸಿ ಸಂತೋಷ ವ್ಯಕ್ತಪಡಿಸಿ ಆಶೀರ್ವದಿಸಿದರು. ಜಿಲ್ಲೆಯಿಂದ ನೀವು ತಂದಿರುವ ದವಸ ನಾಳಿನ ಗುರುವಂದನ ಕಾರ್ಯಕ್ರಮಕ್ಕೆ ಬಳಸಲಾಗುತ್ತದೆ ಎಂದು ಹೇಳಿ ಸಣ್ಣ ಚೀಲದಲ್ಲಿದ್ದ ಅವರೇ ,ಹುರಳಿ ಕಾಳುಗಳನ್ನು ಕಂಡು ತುಂಬಾ ಸಂತೋಷ ವ್ಯಕ್ತಪಡಿಸಿದರು. ಶಿವಕುಮಾರ ಮಹಾ ಸ್ವಾಮಿಗಳ 119ನೇ ಜಯಂತೋತ್ಸವ ಮತ್ತು ಗುರುವಂದನಾ ಕಾರ್ಯಕ್ರಮಕ್ಕೆ ಕೋಲಾರ ಜಿಲ್ಲೆಯಿಂದ ಹೆಚ್ಚು ಹೆಚ್ಚು ಜನ ಆಗಮಿಸಲು ಆಹ್ವಾನ ನೀಡಿದರು. ಶಿವಕುಮಾರ್, ಕಳ್ಳಿಪುರ ನಟರಾಜ್, ನಾಗರಾಜಪ್ಪ, ರಾಮಸಂದ್ರ ಕುಮಾರ್, ತೋಟಪ್ಪ, ಭರತ್, ಎಳನೀರಪ್ಪ ಮಂಜು, ಕಾರ್ತಿಕ್, ಜೈದೇವ್, ಮಂಜುನಾಥ್ ಉಪಸ್ಥಿತರಿದ್ದರು.



ಡಾ. ಶಿವಕುಮಾರ ಮಹಾಸ್ವಾಮಿಗಳ 119ನೇ ಜಯಂತ್ಯುತ್ಸವ ಹಾಗೂ ಗುರುವಂದನಾ ಕಾರ್ಯಕ್ರಮಕ್ಕೆ ಕೋಲಾರ ಮುಳಬಾಗಿಲು ಸುತ್ತಮುತ್ತಲ ಗ್ರಾಮಗಳಲ್ಲಿ ಭಕ್ತರಿಂದ ದವಸ, ಧಾನ್ಯ ತರಕಾರಿಗಳನ್ನು ಸಂಗ್ರಹಿಸಲಾಯಿತು.

ತೇರ್ಗಡೆಗೆ ತೃತೀಯ ಭಾಷೆ ಮಾನದಂಡವಲ್ಲ ಘೋಷಣೆ ಹಿನ್ನೆಲೆ

203 ವಿದ್ಯಾರ್ಥಿಗಳ ಗೈರು

ಕೋಲಾರ: ಸರ್ಕಾರ ತೇರ್ಗಡೆಗೆ ತೃತೀಯ ಭಾಷೆ ಅಂಕ ಮಾನದಂಡವಲ್ಲ ಎಂದು ಘೋಷಿಸಿದ ಬೆನ್ನಲ್ಲೆ ಜಿಲ್ಲೆಯ 65 ಕೇಂದ್ರಗಳಲ್ಲಿ ನಡೆದ ಎಸ್ಸೆಸ್ಸೆಲ್ಸಿ ತೃತೀಯ ಭಾಷೆಗಳಾದ ಹಿಂದಿ, ಇಂಗ್ಲೀಷ್, ಕನ್ನಡದ 5ನೇ ದಿನದ ಪರೀಕ್ಷೆ ಮಂಗಳವಾರ ಯಾವುದೇ ಗೊಂದಲಗಳಿಗೆ ಅವಕಾಶವಿಲ್ಲದಂತೆ ಅತ್ಯಂತ ಯಶಸ್ವಿಯಾಗಿ ನಡೆದಿದ್ದು 203 ವಿದ್ಯಾರ್ಥಿಗಳು ಗೈರಾಗಿದ್ದಾರೆ ಎಂದು ಡಿಡಿಪಿಐ ಅಲ್ಮಾಸ್ ಫರ್ವೀನ್ ತಾಜ್ ತಿಳಿಸಿದರು.

ಪರೀಕ್ಷೆ ಮುಗಿದ ನಂತರ ಮಾಧ್ಯಮಗಳಿಗೆ ಮಾಹಿತಿನೀಡಿದಅವರು,ತೃತೀಯಭಾಷೆಪರೀಕ್ಷೆಗೆ ಹೆಸರು ನೊಂದಾಯಿಸಿದ್ದ 18768 ಹೊಸ ವಿದ್ಯಾರ್ಥಿಗಳ ಪೈಕಿ 18565 ಮಂದಿ ಹಾಜರಾಗಿದ್ದು, 203 ಮಂದಿ ಗೈರಾಗಿದ್ದರು. ಪರೀಕ್ಷೆ ಯಾವುದೇ ಗೊಂದಲಗಳಿಲ್ಲದೇ ಸುಗಮವಾಗಿ ನಡೆದಿದ್ದು, ಶೇ.98.92 ಹಾಜರಿ ಇದೆ ಎಂದು ತಿಳಿಸಿದರು.

ತಾಲೂಕುವಾರು ಹಾಜರಿ ವಿವರ: ಬಂಗಾರಪೇಟೆ ತಾಲೂಕಿನ 8 ಕೇಂದ್ರಗಳಲ್ಲಿ ತೃತೀಯ ಭಾಷೆ 2476 ಮಂದಿ ನೊಂದಾಯಿಸಿದ್ದು, 2456 ಮಂದಿ ಹಾಜರಾಗಿ 20 ಮಂದಿ ಗೈರಾಗಿದ್ದಾರೆ, ಕೆಜಿಎಫ್ ತಾಲೂಕಿನ 9 ಕೇಂದ್ರಗಳಲ್ಲಿ 3231 ಮಕ್ಕಳು ಹೆಸರು ನೊಂದಾಯಿಸಿದ್ದು, 3195 ಮಂದಿ ಹಾಜರಾಗಿ 36 ಮಂದಿ ಗೈರಾಗಿದ್ದಾರೆ.

ಕೋಲಾರತಾಲ್ಲೂಕಿನ18ಕೇಂದ್ರಗಳಲ್ಲಿ4,764 ಮಂದಿ ಹೆಸರು ನೊಂದಾಯಿಸಿದ್ದು, 4,723 ಮಂದಿ ಹಾಜರಾಗಿ 41 ಮಂದಿ ಗೈರಾಗಿದ್ದಾರೆ. ಮಾಲೂರು ತಾಲ್ಲೂಕಿನ 8 ಕೇಂದ್ರಗಳಲ್ಲಿ 2941 ಮಂದಿಹೆಸರುನೊಂದಾಯಿಸಿದ್ದು, 2910ಮಂದಿ ಹಾಜರಾಗಿದ್ದು, 31 ಮಂದಿ ಗೈರಾಗಿದ್ದಾರೆ.

ಮುಳಬಾಗಿಲು ತಾಲೂಕಿನ 12 ಕೇಂದ್ರಗಳಲ್ಲಿ 2,804 ಮಂದಿ ನೊಂದಾಯಿಸಿದ್ದು, 2750 ಮಂದಿಹಾಜರಾಗಿದ್ದು, 54 ಮಂದಿ ಗೈರಾಗಿದ್ದಾರೆ, ಶ್ರೀನಿವಾಸಪುರ ತಾಲೂಕಿನ 10 ಕೇಂದ್ರಗಳಲ್ಲಿ 2552 ಮಂದಿ ಹೆಸರು ನೊಂದಾಯಿಸಿದ್ದು, 2531 ಮಂದಿ ಹಾಜರಾಗಿದ್ದು, 21 ಮಂದಿ ಗೈರಾ ಗಿದ್ದಾರೆ. ಐದನೇ ದಿನದ ಪರೀಕ್ಷೆಯಲ್ಲಿ ಜಿಲ್ಲಾದ್ಯಂತಎಲ್ಲೂಯಾವುದೇಅವ್ಯವಹಾರಗಳು ನಡೆದ ಬಗ್ಗೆ ವರದಿಯಾಗಿಲ್ಲ ಎಂದರು. ಡಿಡಿಪಿಐ ಅಲ್ಮಾಸ್ ಫರ್ವೀನ್ ತಾಜ್, ಶಿಕ್ಷಣಾಧಿಕಾರಿ ಡಾ.ವೀಣಾ, ಎಸ್ಸೆಸ್ಸೆಲ್ಸಿ ನೋಡಲ್ ಅಧಿಕಾರಿ ಶಂಕರೇಗೌಡ, ಡಿವೈಪಿಸಿಗಳಾದ ರಾಜೇಶ್ವರಿ, ಸೈಹಿದಾನಾಹಿದಾಫಾತಿಮಾ,ಬಿಇಒಗಳಾದಮಧು ಮಾಲತಿ ಪಡುವಣೆ, ವಿವಿಧ ತಾಲ್ಲೂಕುಗಳ ಬಿಇಒಗಳಾದಶಶಿಕಲಾ,ನಾರಾಯಣಸ್ವಾಮಿ,ಕೆಂಪಯ್ಯ, ರಾಮಚಂದ್ರ, ಮುನಿಲಕ್ಷ್ಮಯ್ಯ, ಎವೈಪಿಸಿ ಗಾಯತ್ರಿ,ವಿಷಯಪರಿವೀಕ್ಷಕರಾದಸಮೀವುಲ್ಲಾ, ಕ್ರಿಸ್ಟಿನಾಬಬಿತಾ,ತಾಲ್ಲೂಕು ನೋಡಲ್ ಅಧಿಕಾರಿ ಇಸಿಒ ರಾಧಾ ಮತ್ತಿತರರು ವಿವಿಧ ಕೇಂದ್ರಗಳಿಗೆ ಭೇಟಿನೀಡಿ ಪರಿಶೀಲನೆನಡೆಸಿದ್ದು, ಅಂಜುಮಾನ್ ಶಾಲೆ ಕೇಂದ್ರದಲ್ಲಿ ಮುಖ್ಯ ಅಧೀಕ್ಷಕರಾಗಿ ವೇಣುಗೋಪಾಲ್, ಪ್ರಶ್ನೆಪತ್ರಿಕಾ ಪಾಲಕರಾಗಿ ಮಂಜುಳಾ, ಸ್ಥಾನಿಕ ಜಾಗೃತದಳ ಅಧಿಕಾರಿಯಾಗಿ ವಿ.ಮುರಳಿಮೋಹನ್ ಕಾರ್ಯನಿರ್ವಹಿಸಿದರು.



ಸಿಸಿ ಕ್ಯಾಮರಾ ಕಣ್ಗಾವಲು

ಸಿಸಿ ಕ್ಯಾಮರಾ,ವೆಬ್ ಕಾಸ್ಟಿಂಗ್ ಕಣ್ಗಾವಲಿನಲ್ಲಿ ನಡೆಯುತ್ತಿರುವ 4ನೇ ವರ್ಷದ ಪರೀಕ್ಷೆ ಇದಾಗಿದ್ದು, ಜಿಲ್ಲೆಯ ಎಲ್ಲ ಪರೀಕ್ಷಾ ಕೇಂದ್ರಗಳಲ್ಲೂ ಸಿಸಿ ಕ್ಯಾಮೆರಾ ಸುಸ್ಥಿತಿಯಲ್ಲಿಡಲಾಗಿದೆ. ಪರೀಕ್ಷಾ ಅವಧಿಯಲ್ಲಿ ವೆಬ್ ಕಾಸ್ಟಿಂಗ್ ಮೂಲಕ ಅಧಿಕಾರಿಗಳು ವೀಕ್ಷಿಸುತ್ತಿದ್ದು, ಯಾವುದೇ ಲೋಪ ಕಂಡುಬರಲಿಲ್ಲ ಎಂದರು.

ವೇಮಗಲ್‌ನಲ್ಲಿ ಕುರುಬರ ದೊಡ್ಡದ್ಯಾವರ ಜಾತ್ರೆ

ದೇವರು, ಸಂಸ್ಕೃತಿ, ಧರ್ಮ ಆಚರಿಸೋಣ: ಮಂಜುನಾಥ್

ಕೋಲಾರ: ತಾಲೂಕಿನ ವೇಮಗಲ್ ಪಟ್ಟಣದಲ್ಲಿ ಕುರುಬ ಸಮುದಾಯದ ಆರಾಧ್ಯ ದೈವವಾದ ಬೀರೇಶ್ವರ,ಭತ್ತೇಶ್ವರ ದೊಡ್ಡ ದ್ಯಾವರ ಜಾತ್ರೆ ಭಕ್ತಿಭಾವದಿಂದ ಹಾಗೂ ವೈಭವದಿಂದ ನೆರವೇರಿತು.

ಗ್ರಾಮದಲ್ಲಿನ ಶ್ರೀ ಬೀರೇಶ್ವರ, ಶ್ರೀ ಸಿದ್ದೇಶ್ವರ, ಭತ್ತೇಶ್ವರ, ಶ್ರೀ ಬೆಳ್ಳೂರು ಬೇರೆಶ್ವರ, ಶ್ರೀ ಬಿಡದೀಶ್ವರಸ್ವಾಮಿ ದೇವಾಲಯದಲ್ಲಿ ಮನೆ ದೇವರ ದೊಡ್ಡಜಾತ್ರೆ ಬೆಳಗ್ಗೆ ಆರಂಭಗೊಂಡಿತು. ದೊಡ್ಡ ಜಾತ್ರೆಯ ಕೇಂದ್ರಬಿಂದುವಾದ ಬಸವ ಸಮೇತ ಗುರುಗಳನ್ನು ಆಹ್ವಾನಿಸುವ ಕಾರ್ಯ ನಡೆದು ಸಂಜೆ ಗಂಗಾಪೂಜೆ, ನವಗ್ರಹ ಪೂಜೆ ನೆರವೇರಿತು.

ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಶಾಸಕ ಕೊತ್ತೂರು ಮಂಜುನಾಥ್, ದೇವರು, ಸಂಸ್ಕೃತಿ, ಧರ್ಮ, ಸಂಪ್ರದಾಯ ಆಚಾರ-ವಿಚಾರಗಳನ್ನು ಮರೆಯದೇ ಮುಂದಿನ ಪೀಳಿಗೆಗೆ ಇದನ್ನು ಮುಂದುವರೆಸುವಂತೆ ಈ ರೀತಿಯ ದೊಡ್ಡ ಜಾತ್ರಾ ಮಹೋತ್ಸವ ಮಾಡುತ್ತಿರುವುದು ಬಹಳ ನೆಮ್ಮದಿ, ಸಂತೋಷ ಜೊತೆಗೆ ಉತ್ತಮ ಸಂದೇಶ ಸಾರುತ್ತಿರುವುದು ಕಾಣುತ್ತಿದೆ ಎಂದರು.

ಶ್ರೀ ಬೀರೇಶ್ವರ ಸ್ವಾಮಿ ದೇವಾಲಯ ಟ್ರಸ್ಟ್ ಗೆ ಕಾರ್ಯಕ್ರಮ ವೇದಿಕೆ ನಿರ್ಮಿಸಿರುವ ಸರ್ಕಾರಿ ಜಾಗವನ್ನು ಮಂಜೂರು ಮಾಡಿ ಕೊಡಲಾಗುವುದು ಎಂದು ಭರವಸೆ ನೀಡಿದರು. ಯುವಪೀಳಿಗೆ ಕೂಡ ಈ ಸಂಪ್ರದಾಯಗಳಲ್ಲಿ ಭಾಗವಹಿಸುವುದು ಸಂತೋಷಕರ ವಿಷಯ ಎಂದು ಹೇಳಿದರು

ಮಾಜಿ ಸಭಾಪತಿ ವಿ.ಆರ್ ಸುದರ್ಶನ್ ಮಾತನಾಡಿ, ದೊಡ್ಡ ದ್ಯಾವರ ಜಾತ್ರೆ ನಮ್ಮ ನಾಡಿನ ಶ್ರೀಮಂತ ಸಂಸ್ಕೃತಿ ಮತ್ತು ಪರಂಪರೆಯ ಸಂಕೇತವಾಗಿದೆ. ಗ್ರಾಮೀಣ ಸಂಸ್ಕೃತಿ ಮತ್ತು ಪರಂಪರೆಯನ್ನು ಉಳಿಸಲು ಇಂತಹ ಜಾತ್ರೆಗಳು ಮಹತ್ವದ ಪಾತ್ರವಹಿಸುತ್ತವೆ ಎಂದು ಹೇಳಿದರು. ಎಂಎಲ್‌ಸಿ ಅನಿಲ್‌ಕುಮಾರ್ ಮಾತನಾಡಿ, ಕುರುಬ ಸಮುದಾಯವು ತನ್ನ ಪರಿಶ್ರಮ, ಸಂಸ್ಕೃತಿ ಮತ್ತು ಪರಂಪರೆಯ ಮೂಲಕ ನಾಡಿಗೆ ಬಹಳಷ್ಟು ಹೆಸರು ತಂದಿದೆ ಎಂದರು. ಪಟ್ಟಣ ಪಂಚಾಯಿತಿ ಉಪಾಧ್ಯಕ್ಷ ಸಿ.ಎಸ್.ವೆಂಕಟೇಶ್, ಪಪಂ ಅಧ್ಯಕ್ಷೆ ಅನುಷಾ ಮುನಿರಾಜು, ತಹಸೀಲ್ದಾರ್ ನಯನ, ಪ್ರಾಧಿಕಾರ ಅಧ್ಯಕ್ಷ ಉರಟ ಅಗ್ರಹಾರ ಚೌಡರೆಡ್ಡಿ, ಕೋಮುಲ್ ನಿರ್ದೇಶಕ ಚಂಜಿಮಲೆ ರಮೇಶ್, ಸಿಂಡಿಕೇಟ್ ಸದಸ್ಯ ಸೀಸಂದ್ರ ಗೋಪಾಲಗೌಡ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮುರಳಿಗೌಡ, ಮುನಿಯಪ್ಪ, ವೆಂಕಟೇಶ್, ಇನ್ಸ್‌ಪೆಕ್ಟರ್ ಬಿ.ಪಿ ಮಂಜು, ಭಕ್ತರು ಉಪಸ್ಥಿತರಿದ್ದರು.



ಜನಸ್ನೇಹಿಯಾಗಿ ಕೆಲಸ ಮಾಡಲು: ಪ್ರವೀಣ್ ಬಾಗೇವಾಡಿ ಸೂಚನೆ

ಕೋಲಾರ: ಗ್ರಾಮಾಭಿವೃದ್ಧಿ ವಿಚಾರದಲ್ಲಿ ಪಂಚಾಯತ್ ರಾಜ್ ಇಲಾಖಾಧಿಕಾರಿಗಳ ಪಾತ್ರ ಮಹತ್ವವಾದದ್ದು, ವೃತ್ತಿ ಗೌರವಕ್ಕೆ ಧಕ್ಕೆಯಾಗದಂತೆ ಜನಸ್ನೇಹಿಯಾಗಿ ಅಧಿಕಾರಿಗಳು ಕಾರ್ಯ ನಿರ್ವಹಿಸಬೇಕು ಎಂದು ಜಿಪಂ ಸಿಇಒ ಡಾ. ಪ್ರವೀಣ್ ಪಿ.ಬಾಗೇವಾಡಿ ಹೇಳಿದರು.

ನಗರದ ಜಿಪಂ ಕಚೇರಿಯಲ್ಲಿ ಜಿಲ್ಲಾ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಕ್ಷೇಮಾಭಿವೃದ್ಧಿಸಂಘದನೂತನಪದಾಧಿಕಾರಿಗಳಿಗೆ ಶುಭಕೋರಿ ಅವರು ಮಾತನಾಡಿ, ಗ್ರಾಮ ಪಂಚಾಯಿತಿಗಳು ಆದಾಯ ಮೂಲಗಳನ್ನು ವೃದ್ಧಿಸಿಕೊಂಡು ಸ್ವಾವಲಂಬನೆ ರೀತಿ ಆಡಳಿತ ನಡೆಸಬೇಕು, ಇದಕ್ಕಾಗಿ ತಮ್ಮಕಡೆಯಿಂದ ನಿರಂತರ ನೀಡಲಾಗುವುದು ಎಂದು ಭರವಸೆ ನೀಡಿದರು. ವಾರ್ಷಿಕವಾಗಿ ಹೆಚ್ಚು ಆದಾಯ ಇರುವ ಪಂಚಾಯಿತಿಗಳು ಗ್ರಾಮಗಳಲ್ಲಿ ಕ್ರಿಡಾಂಗಣ, ಒಳಾಂಗಣ ಕ್ರೀಡಾಂಗಣ, ಗರಡಿ ಮನೆ ವಿನೂತನ ನಿರ್ಮಾಣ ಮಾಡಲು ಕ್ರಿಯಾ ಯೋಜನೆ ತಯಾರಿಸಿ ಕಳುಹಿಸಿದರೆ ಅದನ್ನು ಅನುಮೋದಿಸಲಾಗುವುದು ಎಂದು ತಿಳಿಸಿದರು. ತೆರಿಗೆ ಸಂಗ್ರಹದಲ್ಲಿ ಇಂದಿಗೆ ಶೇ.97 ಸಾಧನೆ ಯಾಗಿದ್ದು, ರಾಜ್ಯ ಮಟ್ಟದಲ್ಲಿ 10ನೇ ಸ್ಥಾನದಲ್ಲಿದೆ. ಬುಧವಾರಕ್ಕೆ ಶೇ.100ರಷ್ಟು ಸಾಧನೆಯಾಗಿವ ನಿರೀಕ್ಷೆಯಿದೆ. ಬಾಕಿ ತೆರಿಗೆ ವಸೂಲಿ ಮಾಡುವ ಮೂಲಕ ಸಾಧನೆಗೆ ಸಹಕರಿಸಬೇಕು ಎಂದರು. ಕುಡಿಯುವ ನೀರಿನ ಸಮಸ್ಯೆ ಎದುರಾಗದಂತೆ ಪ್ರತಿಯೊಬ್ಬರು ಎಚ್ಚರವಹಿಸಬೇಕು ಎಂದು ಸಲಹೆ ನೀಡಿದರು. ಸಂಘದ ಜಿಲ್ಲಾಧ್ಯಕ್ಷ ಕೆ.ಮಹೇಶ್ ಕುಮಾರ್, ಖಜಾಂಚಿ ಎನ್.ಸಂಪರಾಜ್, ಉಪಾಧ್ಯಕ್ಷರಾದ ಎಂ.ಮಂಗಳಾಂಭ, ಕೆ.ಸಿ.ಮೋಹನ್ ಕುಮಾರ್, ಸಂಘಟನಾ ಕಾರ್ಯದರ್ಶಿಗಳಾದ ಎಸ್. ರಮೇಶ್, ವಿ.ಸುನೀತಾ, ರಾಜ್ಯ ಪರಿಷತ್ ಸದಸ್ಯೆ ಎನ್.ದೀಪಾ, ಎನ್.ನಾಗರಾಜ್, ವೈ.ಆರ್ .ಭವಾನಿ, ರಾಮಕೃಷ್ಣಪ್ಪ ಇದ್ದರು.



ಜಿಪಂ ಸಿಇಒ ಡಾ.ಪ್ರವೀಣ್ ಪಿ.ಬಾಗೇವಾಡಿ ಕೋಲಾರ ನಗರದ ಜಿಪಂ ಕಚೇರಿಯಲ್ಲಿ ಜಿಲ್ಲಾ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ನೂತನ ಪದಾಧಿಕಾರಿಗಳಿಗೆ ಶುಭಕೋರಿದರು.

ರೈಲ್ವೆ ಪ್ರಯಾಣಿಕರ ಸುರಕ್ಷತೆಗೆ ಪೊಲೀಸರ ಜಾಗೃತಿ

ಬಂಗಾರಪೇಟೆ: ನಗರದ ರೈಲ್ವೆನಿಲ್ದಾಣದಲ್ಲಿ ರೈಲ್ವೆ ರಕ್ಷಣಾ ದಳ ಹಾಗೂ ರೈಲ್ವೆ ಪೊಲೀಸ್ ವತಿಯಿಂದ ಪ್ರಯಾಣಿಕರ ಸುರಕ್ಷತಾ ಕ್ರಮಗಳ ಕುರಿತು ವಿಶೇಷ ಜಾಗೃತಿ ಕಾರ್ಯಕ್ರಮ ನಡೆಯಿತು. ಈ ವೇಳೆ ಸಬ್ ಇನ್‌ಸ್ಪೆಕ್ಟರ್ ನಲ್ಲರಾಜು ಮಾತನಾಡಿ ಚಲಿಸುವ ರೈಲಿನಲ್ಲಿಬಾಗಿಲಬಳಿನಿಂತುಪ್ರಯಾಣಮಾಡುವುದು ಅಥವಾ ಫುಟ್‌ಬೋರ್ಡ್ ಮೇಲೆ ಕುಳಿತುಕೊಳ್ಳುವುದು ಪ್ರಾಣಕ್ಕೆ ಅಪಾಯಕಾರಿ, ರೈಲಿನಲ್ಲಿ ಕಿಟಕಿ ಪಕ್ಕದಲ್ಲಿ ಕುಳಿತು ಮೊಬೈಲ್ ಬಳಸುವ ಪ್ರಯಾಣಿಕರನ್ನು ಗುರಿಯಾಗಿಸಿಕೊಂಡುದಾಳಿಮಾಡುವಕಿಡಿಗೇಡಿಗಳ ಬಗ್ಗೆ ಎಚ್ಚರಿಕೆಯಿಂದ ಇರಬೇಕು, ರೈಲು ನಿಲ್ದಾಣ ಬಿಡುವಾಗಅಥವಾವೇಗಕಡಿಮೆಇರುವಾಗಮೊಬೈಲ್ ಕಸಿದು ಓಡಿಹೋಗುವ ಜಾಲದ ಬಗ್ಗೆ ಪ್ರಯಾಣಿಕರಿಗೆ ಪ್ರಾಯೋಗಿಕ ಮಾಹಿತಿ ನೀಡಲಾಯಿತು.

ಪ್ರಯಾಣದ ಸಮಯದಲ್ಲಿ ಅಪರಿಚಿತರು ನೀಡುವ ತಿಂಡಿ, ಪಾನೀಯ ಅಥವಾ ಆಹಾರ ಪದಾರ್ಥಗಳನ್ನು ಯಾವುದೇ ಕಾರಣಕ್ಕೂ ಸ್ವೀಕರಿಸಬಾರದು. ಅದರಲ್ಲಿ ಅಮಲು ಪದಾರ್ಥ ಬೆರೆಸಿ ಚಿನ್ನಾಭರಣ ಹಾಗೂ ನಗದು ದೋಚುವ ಸಾಧ್ಯತೆಇರುತ್ತದೆ,ಪ್ಲಾಟ್‌ಫಾರ್ಮ್‌ಬದಲಾಯಿಸಲು ಪಾದಚಾರಿ ಮೇಲ್ಸೇತುವೆಯನ್ನು ಮಾತ್ರ ಬಳಸಿ, ಹಳಿಗಳನ್ನು ದಾಟುವುದು ಕಾನೂನುಬಾಹಿರ ಮತ್ತು ಜೀವಕ್ಕೆ ಕುತ್ತು ತರುವಂತದ್ದು ಎಂದು ತಿಳಿಸಿದರು, ಪ್ರಯಾಣಿಕರ ಸುರಕ್ಷತೆಯೇ ನಮ್ಮ ಮೊದಲ ಆದ್ಯತೆ ಆದರೆ ಪ್ರಯಾಣಿಕರು ಜಾಗೃತರಾಗಿದ್ದರೆ ಮಾತ್ರ ಅಪರಾಧ ತಡೆಯಲು ಸಾಧ್ಯ ಎಂದರು. ದಳದ ರೈಲ್ವೆ ರಕ್ಷಣಾ ಇನ್‌ಸ್ಪೆಕ್ಟರ್ ಸುರೇಶ್, ರೈಲ್ವೆ ಪೊಲೀಸ್ ಸಿಬ್ಬಂದಿ ಗಳಾದ ವೆಂಕಟೇಶ್, ಮಲ್ಲಿಕಾರ್ಜುನ್, ಕನಕ, ಪೃಥ್ವಿ, ರಫೀಕ್ ಉಪಸ್ಥಿತರಿದ್ದರು.



ಬಂಗಾರಪೇಟೆ ನಗರದ ರೈಲ್ವೆ ನಿಲ್ದಾಣದಲ್ಲಿ ರೈಲ್ವೆ ರಕ್ಷಣಾ ದಳ ಹಾಗೂ ರೈಲ್ವೆ ಪೊಲೀಸ್ ವತಿಯಿಂದ ಪ್ರಯಾಣಿಕರ ಸುರಕ್ಷತಾ ಕ್ರಮಗಳ ಕುರಿತು ಜಾಗೃತಿ ಮೂಡಿಸಿದರು.

ರಾಷ್ಟ್ರೀಯ ಕನ್ನಡ ಸಮ್ಮೇಳನಕ್ಕೆ ಅಧ್ಯಕ್ಷರಾಗಿ ಆಯ್ಕೆ

ಬಂಗಾರಪೇಟೆ: ಗೋವಾದ ಪಣಜಿಯಲ್ಲಿ ಆಯೋಜಿಸಿರುವ 21 ನೇ ರಾಷ್ಟ್ರೀಯ ಕನ್ನಡ ಸಂಸ್ಕೃತಿ ಸಮ್ಮೇಳನದ ಸರ್ವಾಧ್ಯಕ್ಷರನ್ನಾಗಿ ಕನ್ನಡ ಸಂಘದ ಅಧ್ಯಕ್ಷ ಡಾ. ಎಂ.ಪಲ್ಲವಿಮಣಿ ಆಯ್ಕೆಯಾಗಿದ್ದಾರೆ.



ಪಲ್ಲವಿಮಣಿರವರು ನಾಡು ನುಡಿಗೆ ನೀಡಿದ ಅನುಪಮ ಕೊಡುಗೆಯನ್ನು ಪರಿಗಣಿಸಿ ಸಮ್ಮೇಳನಾ ಸಮಿತಿಯು ಸರ್ವಾನುಮತದಿಂದ ಆಯ್ಕೆ ಮಾಡಿರುವುದು ಕನ್ನಡಾಭಿಮಾನಿಗಳಲ್ಲಿ ಸಂತಸ ತಂದಿದೆ, ಹೃದಯವಾಹಿನಿ ಮಂಗಳೂರು ಮತ್ತು ಗೋವಾ ಕದಂಬ ಪ್ರತಿಷ್ಠಾನ ಪಣಜಿ ಸಂಯುಕ್ತವಾಗಿ ಪಣಜಿಯ ಅಶೋಕ ಪ್ಲಾಜಾ ಸಭಾಂಗಣದಲ್ಲಿ ಏ. 12ರಂದು ಒಂದು ದಿನದ 21ನೇರಾಷ್ಟ್ರೀಯಕನ್ನಡಸಂಸ್ಕೃತಿಸಮ್ಮೇಳನವನ್ನು ಆಯೋಜಿಸಿದ್ದಾರೆ. ಈಸಮ್ಮೇಳನವು 2004ರಿಂದ ಆರಂಭಗೊಂಡಿದ್ದು, ಪ್ರತಿ ವರ್ಷ ವಿವಿಧ ರಾಜ್ಯಗಳ ಕನ್ನಡ ಸಂಘಗಳ ಸಹಯೋಗದೊಂದಿಗೆ ಹಮ್ಮಿಕೊಂಡು ಯಶಸ್ವಿಯಾಗಿ ನಡೆಸಿಕೊಂಡು ಬರಲಾಗುತ್ತಿದೆ, ಮುಂಬೈಯಲ್ಲಿ 3 ಬಾರಿ, ನವದೆಹಲಿಯಲ್ಲಿ 2 ಬಾರಿ, ಪಣಜಿ, ಗುಜರಾತ್ ವಾಪಿಯಲ್ಲಿ, ಸೂರತ್, ಕಾಸರಗೋಡು, ಕೊಚಿನ್ ಮತ್ತು ಬರೋಡಗಳಲ್ಲಿ ಅನುಕ್ರಮವಾಗಿ ಜರುಗಿ ಕನ್ನಡಾಭಿಮಾನಿಗಳ ಮನಸ್ಸನ್ನು ಗೆದ್ದಿದೆ, ಡಾ. ಎಂ. ಪಲ್ಲವಿಮಣಿ ಅವರು ಉಪನ್ಯಾಸಕರಾಗಿ, ಪದವಿ ಪೂರ್ವ ಕಾಲೇಜು ಪ್ರಾಂಶುಪಾಲರಾಗಿ ನಿವೃತ್ತಿಯಾಗಿದ್ದಾರೆ, ಪ್ರಸ್ತುತ ಬೆಂಗಳೂರಿನ ವಕೀಲರಾಗಿ ಸೇವೆ ಸಲ್ಲಿಸುತ್ತಿದ್ದಾರೆ, ಬೌದ್ಧಿಕ ಪ್ರತಿಭೆ, ನಿಸ್ವಾರ್ಥ ಸೇವೆ, ಸಾಂಸ್ಕೃತಿಕ ಭಕ್ತಿ ಮತ್ತು ದೂರದರ್ಶಿ ನಾಯಕತ್ವದ ಅಪರೂಪದ ಸಂಗಮ ವಾಗಿದ್ದಾರೆ. ಇವರು ಮೇ 20, 1956 ರಂದು ಬಂಗಾರಪೇಟೆಯಲ್ಲಿ ಲಕ್ಷ್ಮಮ್ಮ ಮತ್ತು ಮುನಿಸ್ವಾಮಿ ದಂಪತಿಗಳ ಸುಪುತ್ರರಾಗಿ ಜನಿಸಿದರು. ಕಳೆದ ಎರಡು ದಶಕಗಳಿಂದಲೂ, ಯಾವುದೇ ಬಾಹ್ಯ ಆರ್ಥಿಕ ನೆರವಿಲ್ಲದೆ, ಕನ್ನಡ ಸಂಘದ ಅಧ್ಯಕ್ಷರಾಗಿ ತಮ್ಮ ಸಹವರ್ತಿಗಳೊಂದಿಗೆ ಸೇರಿ ಪ್ರತಿ ತಿಂಗಳೂ ಕನ್ನಡ ರಾಜ್ಯೋತ್ಸವವನ್ನು ನಿರಂತರವಾಗಿ ಆಚರಿಸಿಕೊಂಡುಬರುತ್ತಿರುವುದು ಇವರಅತಿದೊಡ್ಡಸಾಧನೆಯಾಗಿದೆ, ಇದು ಕೇವಲ ಒಂದು ಸಮಾರಂಭ ವಲ್ಲ ಬದಲಿಗೆ ಕನ್ನಡದ ಅಸ್ಮಿತೆಯನ್ನು ಜೀವಂತವಾಗಿರಿಸುವ ಸಾಂಸ್ಕೃತಿಕ ಚಳುವಳಿಯಾಗಿದೆ ಎಂದರು.

ಸಾಲ ವಿತರಣೆ, ವಸೂಲಾತಿ ದಾಖಲೆಗಳ ನಿರ್ವಹಣೆ ಮಾಡದ ಮಹಿಳೆಯರು

ಸಂಜೀವಿನಿ ಒಕ್ಕೂಟದ ಸದಸ್ಯರಿಗೆ ತರಾಟೆ

ಮುಳಬಾಗಿಲು: ಮುದಿಗೆರೆ ಮ.ಗಡ್ಡೂರು ಗ್ರಾ.ಪಂ. ಸಂಜೀವಿನಿ ಒಕ್ಕೂಟದಲ್ಲಿ ಸಾಲ ವಿತರಣೆ ಮತ್ತು ಸಾಲ ವಸೂಲಾತಿ ಹಾಗೂ ಇತರೆ ದಾಖಲೆಗಳನ್ನು ಒಕ್ಕೂಟದ ಮಹಿಳೆಯರು ಸರಿಯಾಗಿ ನಿರ್ವಹಣೆ ಮಾಡಿಲ್ಲ, ನೀವೇನು ಮಾಡುತ್ತಿದ್ದೀರಿ ಎಂದು ಎನ್‌ಆರ್‌ಎಲ್‌ಎಂ ಯೋಜನೆಯ ತಾಲೂಕು ಸಂಯೋಜಕ ರತ್ನಯ್ಯ ಹಾಗೂ ಡಿಇಒ ವಿಜಿಯಮ್ಮರನ್ನು ತಾ.ಪಂ. ನರೇಗಾ ಸಹಾಯಕ ನಿರ್ದೇಶಕ ರವಿಚಂದ್ರ ತೀವ್ರ ತರಾಟೆಗೆ ತೆಗೆದುಕೊಂಡ ಘಟನೆ ನಡೆಯಿತು.

ತಾಲೂಕಿನ ಮುದಿಗೆರೆ ಮ.ಗಡ್ಡೂರು ಗ್ರಾ.ಪಂ.ಗೆ ಬೇಟಿ ನೀಡಿ ಸಂಜೀವಿನಿ ಒಕ್ಕೂಟದ 66 ಫಲಾನುಭವಿಗಳಿಗೆ ಸರ್ಕಾರದ ಸಹಾಯಧನ ತಲಾ 10 ಸಾವಿರ ರೂ.ಗಳಂತೆ 6.60 ಲಕ್ಷ ರೂ.ಗಳ ಚೆಕ್‌ಗಳನ್ನು ಒಕ್ಕೂಟದ ಅಧ್ಯಕ್ಷರಿಗೆ ವಿತರಿಸಿ ಮಾತನಾಡಿದರು, 2022 ಮತ್ತು 2023ನೇ ಸಾಲಿನ ಎಸ್‌ಸಿಪಿ ಮತ್ತು ಎಸ್‌ಪಿ ಯೋಜನೆಡಿಯಲ್ಲಿ ತಾಲೂಕಿನ 486 ಫಲಾನುಭವಿಗಳು ಆಯ್ಕೆ ಮಾಡಿದ್ದು ಸದರಿಯವರಿಗೆ ತಲಾ 10 ಸಾವಿರ ರೂ ನಂತೆ ಸಹಾಯ ಧನ ಕೆಲವು ವರ್ಷಗಳ ಹಿಂದೆಯೇ ಬಿಡುಗಡೆ ಯಾಗಿದೆ, ಆದರೆ ಹೆಬ್ಬಣಿ ಮತ್ತು ಮುದಿಗೆರೆ ಮ.ಗಡ್ಡೂರು ಹಾಗೂ ಪಿಚ್ಚಗುಂಟ್ಲಹಳ್ಳಿ ಗ್ರಾ.ಪಂ.ಗಳ ವ್ಯಾಪ್ತಿಯ 3 ಒಕ್ಕೂಟಗಳಲ್ಲಿರುವ ಎಸ್‌ಎಸ್‌ಜಿ ಸಂಜೀವಿನ ಸಂಘದ ಸದಸ್ಯರಿಗೆ ಚೆಕ್ ಬುಕ್ ಇಲ್ಲ ಎಂಬ ನೆಪವೊಡ್ಡಿದ ತಾಲೂಕು ಉಸ್ತುವಾರಿಗಳು, ಸಂಜೀವಿನಿ ಸದಸ್ಯರಿಗೆ ಸಹಾಯದನ ವಿತರಣೆ ಮಾಡಿರಲಿಲ್ಲ ಎಂಬ ಆರೋಪ ಕೇಳಿ ಬಂದಿತ್ತು.

ತಾ.ಪಂ. ನರೇಗಾ ಸಹಾಯಕ ನಿರ್ದೇಶಕ ರವಿಚಂದ್ರ, ಬಹುಜನ ಸಂಘಟನೆಗಳ ಒಕ್ಕೂಟದ ಸಂಸ್ಥಾಪಕ ಅಧ್ಯಕ್ಷ ಸಂಗಸಂದ್ರ ಡಾ.ವಿಜಯಕುಮಾರ್, ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಸಂಜೀವಿನಿ ಒಕ್ಕೂಟ ಅಧ್ಯಕ್ಷೆ ಭಾಗ್ಯಮ್ಮ, ಎಂಬಿಕೆ ಅಮರಾವತಿ, ಲಾವಣ್ಯ, ಎಲ್‌ಸಿಆರ್‌ಪಿ ವರಲಕ್ಷ್ಮಿ, ಬಹುಜನ ಸಂಘಟನೆಗಳ ಒಕ್ಕೂಟದ ತಾಲೂಕು ಅಧ್ಯಕ್ಷ ರಾಜಣ್ಣ, ಜನ ಸಮೂಹ ಸಂಸ್ಥೆಯ ನಿರ್ದೇಶಕ ಗುಮ್ಮಕಲ್ ಸತೀಶ್ ಸೇರಿದಂತೆ ಮಹಿಳೆಯರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.



ಮಹಾವೀರರ ಜಯಂತಿಯಲ್ಲಿ ಜಿಪಂ ಸಿಇಒ ಪ್ರವೀಣ್ ಬಾಗೇವಾಡಿ ಅಭಿಮತ

ಅಹಿಂಸೆಯಿಂದ ಸಶಕ್ತ ಸಮಾಜ ನಿರ್ಮಾಣ ಸಾಧ್ಯ

ಕೋಲಾರ: ಜಗತ್ತಿಗೆ ಶಾಂತಿ ಮತ್ತು ಅಹಿಂಸೆಯ ಪಾಠವನ್ನು ಬೋಧಿಸಿದ ಭಗವಾನ್ ಮಹಾವೀರರ ತತ್ವಗಳು ಇಂದಿನ ಸಮಾಜಕ್ಕೆ ಅತ್ಯಂತ ಪ್ರಸ್ತುತವಾಗಿದ್ದು, ನಾವು ಅಹಿಂಸೆ ಮತ್ತು ಸಮಾನತೆಯ ಹಾದಿಯಲ್ಲಿ ಸಾಗುವುದರಿಂದ ಮಾತ್ರ ಪ್ರಬಲ ಸಮಾಜ ಕಟ್ಟಲು ಸಾಧ್ಯ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ಪ್ರವೀಣ್ ಪಿ. ಬಾಗೇವಾಡಿ ತಿಳಿಸಿದರು.

ಮಂಗಳವಾರ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಭಗವಾನ್ ಮಹಾವೀರ ಜಯಂತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡುತ್ತಿದ್ದರು.

ವರ್ಧಮಾನ ಮಹಾವೀರರ ಜೀವನದ ಕುರಿತು ಮಾತನಾಡಿದ ಅವರು ರಾಜಮನೆತನದಲ್ಲಿ ಜನಿಸಿದರೂ, ಜನಸಾಮಾನ್ಯರ ಕಷ್ಟಗಳನ್ನು ಕಂಡು ಮನನೊಂದ ಅವರು ಎಲ್ಲವನ್ನೂ ತ್ಯಜಿಸಿ ತಪಸ್ಸಿನ ಮೂಲಕ ಜ್ಞಾನೋದಯ ಪಡೆದು ಮಹಾವೀರರಾದರು. ಜೈನ ಧರ್ಮದ 24ನೇ ಹಾಗೂ ಕೊನೆಯ ತೀರ್ಥಂಕರರಾಗಿ ಅವರು ಅಹಿಂಸೆ, ಸತ್ಯ ಮತ್ತು ಕದಿಯದಿರುವಂತಹ ಉನ್ನತ ತತ್ವಗಳನ್ನು ಬೋಧಿಸಿದರು. ಮನುಷ್ಯ ತನ್ನೊಳಗಿನ ದೌರ್ಬಲ್ಯಗಳನ್ನು ಗೆಲ್ಲುವುದೇ ನಿಜವಾದ ವಿಜಯ. ಅಂತಹ ವಿಜೇತನನ್ನು 'ಜಿನ' ಎಂದು ಕರೆಯಲಾಗುತ್ತದೆ, ಇದರಿಂದಲೇ ಜೈನ ಧರ್ಮ ಎಂಬ ಹೆಸರು ಬಂದಿದೆ ಎಂದರು.

ಇಂದು ನಾವು ಚಲನಚಿತ್ರಗಳಲ್ಲೂ ಹಿಂಸೆಯನ್ನೇ ಹೆಚ್ಚು ಇಷ್ಟಪಡುವ ಮನಸ್ಥಿತಿ ಬೆಳೆಸಿಕೊಂಡಿದ್ದೇವೆ. ಆದರೆ, ಸಮಾಜದಲ್ಲಿ ಶಾಂತಿ ನೆಲೆಸಬೇಕಾದರೆ ಅಹಿಂಸೆ ಮತ್ತು ಸಮಾನತೆ ಅತ್ಯಗತ್ಯ. ಮಹಾವೀರರು, ಬುದ್ಧ, ಬಸವಣ್ಣ, ಗಾಂಧೀಜಿ ಹಾಗೂ ಅಂಬೇಡ್ಕರ್ ಅವರಂತಹ ಮಹಾನ್ ಪುರುಷರು ಭಾರತದ ಇತಿಹಾಸವನ್ನು ಇಂತಹ ಉದಾತ್ತ ತತ್ವಗಳ ಮೂಲಕವೇ ರೂಪಿಸಿದ್ದಾರೆ ಎಂದರು. ಎಲ್ಲಾ ಧರ್ಮಗಳ ಉತ್ತಮ ಅಂಶಗಳನ್ನು ಅಳವಡಿಸಿಕೊಂಡು ಅನ್ಯೋನ್ಯವಾಗಿ ಬಾಳುವುದೇ ನಾವು ಆ ಮಹಾನ್ ಪುರುಷರಿಗೆ ನೀಡುವ ನಿಜವಾದ ಗೌರವ ಎಂದು ಅವರು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿ ರವಿಚಂದ್ರ, ಸಹಾಯಕ ಯೋಜನಾಧಿಕಾರಿ ವೆಂಕಟಾಚಲಪತಿ, ಮುಖ್ಯ ಲೆಕ್ಕಾಧಿಕಾರಿ ರಘುನಾಥ ರೆಡ್ಡಿ, ಯೋಜನಾ ನಿರ್ದೇಶಕ ಮಂಜುನಾಥ ಸ್ವಾಮಿ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.



ಕಿರುಸುದ್ದಿ

ಕ್ರೀಡಾಕೂಟ: ಚಿಕ್ಕಬಳ್ಳಾಪುರ ಜಿಲ್ಲೆಗೆ ಕಂಚಿನ ಪದಕ

• **ಚಿಕ್ಕಬಳ್ಳಾಪುರ:** ಮಾ.24ರಿಂದ ಮಾ.29ರವರೆಗೆ ಪಂಜಾಬ್ ರಾಜ್ಯದ ಚಂಡೀಗಡ್‌ದಲ್ಲಿ ನಡೆದ 20ವರ್ಷದ ವಯೋಮಿತಿಯರಾಷ್ಟ್ರಮಟ್ಟದ ಸ್ಪರ್ಧೆಯಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟ ತಾಲ್ಲೂಕಿನ ಭಕ್ತರಹಳ್ಳಿ ಗ್ರಾಮದ ಸಿರಿನಾಗರಾಜು ಅವರು 4★100 ಮೀಟರ್ ಓಟದ ಸ್ಪರ್ಧೆಯಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿ ಕಂಚಿನ ಪದಕವನ್ನು ಪಡೆದಿರುತ್ತಾರೆ. ಹಿಂದೆ 14, 16, 18, ವಯೋಮಿತಿಯಲ್ಲಿ 100 ಮೀಟರ್, ಉದ್ದಜಿಗಿತ 4★100 ಮೀಟರೋಟದ ಸ್ಪರ್ಧೆಯಲ್ಲಿ ಭಾಗವಹಿಸಿ ಕರ್ನಾಟಕ, ದಕ್ಷಿಣ ಭಾರತ, ರಾಷ್ಟ್ರೀಮಟ್ಟದಲ್ಲಿ ಮತ್ತು ಪ್ರೌಢಶಾಲಾ ಮತ್ತುಕಾಲೇಜು ಮಟ್ಟದಕ್ರೀಡಾಕೂಟದ ಪದಕಗಳನ್ನು ಪಡೆದಿದ್ದರು. ಈ ಪದಕ ಪಡೆದ ಕ್ರೀಡಾಪಟುಗಳನ್ನು ಇಂದು ಚಿಕ್ಕಬಳ್ಳಾಪುರ ಜಿಲ್ಲೆಯ ಅಂಥ್ಲೇಟಿಕ್ಸ್ ಸಂಸ್ಥೆಯ ಅಧ್ಯಕ್ಷ ಕೆ.ವಿ.ನವೀನ್‌ಕಿರಣ್ ಅವರ ಸ್ವಗೃಹದಲ್ಲಿ ನಿರ್ಮಲಾ ಸಾಯಿ ಪ್ರಭು ಅವರು ಜಿಲ್ಲಾ ಅಂಥ್ಲೇಟಿಕ್ಸ್ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಮಂಚನಬಲೆ ಶ್ರೀನಿವಾಸ್ ಜಿಲ್ಲಾಜಂಟಿ ಕಾರ್ಯದರ್ಶಿ ಭಕ್ತರಹಳ್ಳಿ ನಾಗರಾಜು ಹಾಗೂ ರಾಷ್ಟ್ರೀಯಕ್ರೀಡಾಪಟು ಭೂಮಿಕಾ ಅಭಿನಂದಿಸಿದರು.

ರಾಷ್ಟ್ರೀಯ ಜನಗಣತಿ ಇಂದಿನಿಂದ ಪ್ರಾರಂಭ

• **ಚಿಂತಾಮಣಿ:** ಜಿಲ್ಲಾಧಿಕಾರಿಗಳ ಮತ್ತು ಆಡಳಿತಾಧಿಕಾರಿಗಳ ಆದೇಶದಂತೆ ಚಿಂತಾಮಣಿ ನಗರ ಮತ್ತು ತಾಲ್ಲೂಕಿನ ಜನಗಣತಿ 2027 ಆರಂಭಿಸಿದ್ದು ಗ್ರಾಮಾಂತರ ವ್ಯಾಪ್ತಿಗೆ ತಹಶೀಲ್ದಾರ್ ಹಾಗೂ ನಗರ ಭಾಗಕ್ಕೆ ಪೌರಾಯುಕ್ತ ಚಾರ್ಜ್ ಆಫೀಸರ್‌ಗಳಾಗಿ ಕರ್ತವ್ಯ ನಿರ್ವಹಿಸುತ್ತೇವೆಂದು ನಗರಸಭಾ ಪೌರಾಯುಕ್ತ ಜಿ.ಎನ್.ಚಲಪತಿ ತಿಳಿಸಿದರು. ನಗರದ ನಗರಸಭೆಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ ರಾಷ್ಟ್ರೀಯ ಜನಗಣತಿಯನ್ನು ಸುಗಮವಾಗಿ ನಡೆಸಲು ಎಲ್ಲಾ ಪೂರ್ವಸಿದ್ಧತೆಗಳನ್ನು ಮಾಡಿಕೊಂಡಿದ್ದು, 200 ಮನೆಗೆ ಒಂದು ಬ್ಲಾಕ್ ಮಾಡಿದ್ದು ಅದರಂತೆ ಒಟ್ಟಾರೆ ನಗರಭಾಗದಲ್ಲಿ 140 ಬ್ಲಾಕ್‌ಗಳಾಗಿ ವಿಂಗಡಿಸಲಾಗಿದೆ. 140 ಬಿಎಲ್‌ಓ ಶಿಕ್ಷಕರನ್ನು ಆಯ್ಕೆ ಮಾಡಿಕೊಂಡಿದ್ದು ಇದು ಒಂದು ರಾಷ್ಟ್ರೀಯ ಕಾರ್ಯಕ್ರಮವಾಗಿರುವುದರಿಂದ ಏಪ್ರಿಲ್ 1ರಿಂದ 15ನೇ ತಾರೀಖಿನವರೆಗೆ ಒಂದು



ನಿರ್ದಿಷ್ಟ ಲಾಗಿನ್ ಮೂಲಕ ಸ್ವಯಂ ಘೋಷಿತವಾಗಿ ಮಾಹಿತಿಯನ್ನು ವೆಬ್ ಸೈಟ್‌ಮೂಲಕ ನೋಂದಣಿ ಮಾಡಿಕೊಳ್ಳಬಹುದಾಗಿದೆಯೆಂದರು.

ತಾವುಗಳ ಹಂಚಿಕೊಂಡ ಮಾಹಿತಿಯನ್ನು ಗೌಪ್ಯವಾಗಿಡಲಾಗುತ್ತದೆಂದ ಅವರು ಭಾರತ ಸರ್ಕಾರ ರಾಷ್ಟ್ರೀಯ ಜನಕಲ್ಯಾಣ ಮತ್ತು ಜನಹಿತಕ್ಕಾಗಿ ರೂಪಿಸಲಾಗಿರುವ ರಾಷ್ಟ್ರೀಯ ಕಾರ್ಯಕ್ರಮವೆಂದು ಪ್ರತಿಯೊಬ್ಬರೂ ಭಾಗವಹಿಸಿ ಯಶಸ್ವಿಗೊಳಿಸುವಂತೆ ಕರೆ ನೀಡಿದರು. ಜನಗಣತಿಯಲ್ಲಿ ಎಲ್ಲಾ ವಿವರಗಳನ್ನು ಒಳಗೊಂಡಿರುತ್ತದೆಯೆಂದರು. ಏಪ್ರಿಲ್ 15ರ ನಂತರ ಮನೆ ಮನೆಗೆ ಬಿಎಲ್‌ಒಗಳು ಭೇಟಿ ನೀಡಿ ವಿವರಣೆಯನ್ನು ಪಡೆಯುತ್ತಾರೆಂದರು.

ಜಿಲ್ಲಾಮಟ್ಟದ ಜನತಾ ದರ್ಶನ

• **ತುಮಕೂರು:** ಜಿಲ್ಲೆಯ ನಾಗರಿಕರಿಂದ ಅಹವಾಲುಗಳನ್ನು ಸ್ವೀಕರಿಸಿ/ಸಮಸ್ಯೆಗಳನ್ನು ಆಲಿಸಿ ಸಮಸ್ಯೆಗಳಿಗೆ ಪರಿಹಾರೋಪಾಯವನ್ನು ಒದಗಿಸಲು ಏಪ್ರಿಲ್ 8ರಂದು ಬೆಳಿಗ್ಗೆ 11 ಗಂಟೆಗೆ ತುಮಕೂರಿನ ನಗರ ಕೇಂದ್ರ ಗ್ರಂಥಾಲಯ ಸಭಾಂಗಣದಲ್ಲಿ ಗೃಹ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಜಿ.ಪರಮೇಶ್ವರ್ ಅವರ ಅಧ್ಯಕ್ಷತೆಯಲ್ಲಿ ಜಿಲ್ಲಾಮಟ್ಟದ ಜನತಾ ದರ್ಶನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಶುಭಾಕಲ್ಯಾಣ್ ತಿಳಿಸಿದ್ದಾರೆ. ಈಗಾಗಲೇ ತುಮಕೂರು ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ತಾಲ್ಲೂಕು ಮಟ್ಟದ ಜನತಾ ದರ್ಶನ ಕಾರ್ಯಕ್ರಮವನ್ನು ಆಯೋಜಿಸಿ ಸಾರ್ವಜನಿಕರ ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರಗಳನ್ನು ನೀಡಲಾಗಿದೆ. ಅಲ್ಲದೆ, ಹಲವಾರು ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಜಟಿಲ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ ಸಾರ್ವಜನಿಕರ ಅಹವಾಲುಗಳಿಗೆ ಪರಿಹಾರವನ್ನು ನೀಡಲಾಗಿದೆ. ಏಪ್ರಿಲ್ 8ರಂದು ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದಲ್ಲಿ ಜಿಲ್ಲಾ ಮಟ್ಟದ ಜನತಾ ದರ್ಶನ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ. ಅಂದು ಬೆಳಿಗ್ಗೆ 11 ಗಂಟೆಗೆ ನಗರ ಕೇಂದ್ರ ಗ್ರಂಥಾಲಯ ಸಭಾಂಗಣದಲ್ಲಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಈ ಜಾಗದಲ್ಲಿ 10 ವಿವಿಧ ಪ್ರಮುಖ ಇಲಾಖೆಗಳ ಮಳಿಗೆಗಳನ್ನು ತೆರೆಯಲಾಗಿದ್ದು, ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸಲಾಗುವುದು. ಅಲ್ಲದೆ, ಸಂಬಂಧಿಸಿದ ಇಲಾಖೆಯ ಮುಖ್ಯಸ್ಥರು ಸ್ಥಳದಲ್ಲಿ ಹಾಜರಿದ್ದು, ಸಾರ್ವಜನಿಕರ ಸಮಸ್ಯೆಗಳಿಗೆ ಪರಿಹಾರ ಒದಗಿಸುವ ಕಾರ್ಯಕ್ರಮ ಇದಾಗಿದೆ ಎಂದು ಅವರು ತಿಳಿಸಿದ್ದಾರೆ. ಕಾರ್ಯಕ್ರಮ ಸ್ಥಳದಲ್ಲಿ ನಿರ್ಮಿಸಲಾಗುವ ತಾತ್ಕಾಲಿಕ ಮಳಿಗೆಗಳಲ್ಲಿ ಐಪಿಜಿಆರ್‌ಎಸ್ ತಂತ್ರಾಂಶ ಒಳಗೊಂಡ ಡಾಟಾ ಎಂಟ್ರಿ, ಕಂಪ್ಯೂಟರ್ ವ್ಯವಸ್ಥೆ, ಇತ್ಯಾದಿ ಸೌಲಭ್ಯಗಳನ್ನು ಒದಗಿಸಲಾಗಿದ್ದು, ಜಿಲ್ಲಾ ಮಟ್ಟದ ಜನತಾ ದರ್ಶನ ಕಾರ್ಯಕ್ರಮದಲ್ಲಿ ಸಾರ್ವಜನಿಕರ ಸಮಸ್ಯೆಗಳಿಗೆ ಪರಿಹಾರ ಒದಗಿಸುವ ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ತಿಳಿಸಿದರು.



ತಿಪಟೂರು ನಗರದಲ್ಲಿರುವ ಡಾ.ರಾಜಕುಮಾರ್ ಅವರ ಬಾಲ್ಯಸ್ನೇಹಿತ ತಿಪಟೂರು ರಾಮಸ್ವಾಮಿ ಅವರ ನಿವಾಸಕ್ಕೆ ಚಿತ್ರನಟ ವಿನಯ್ ರಾಜಕುಮಾರ್ ಭೇಟಿ ನೀಡಿ ಆಶೀರ್ವಾದ ಪಡೆದರು. ಚಿತ್ರ ನಿರ್ದೇಶಕ ದೇವನೂರು ಚಂದ್ರು, ಬ್ಯಾಂಕ್ ಪರ ಶಿವಮೂರ್ತಿ, ಕಿರುತೆರೆ ನಟ ದಯಾನಂದ ಸಾಗರ್ ಸೇರಿದಂತೆ ಕುನಲ್ ಅಭಿಮಾನಿ ಬಳಗದ ಲೋಕೇಶ್, ಸೋಮಶೇಖರ್, ಪ್ರಕಾಶ್, ಚಂದ್ರು, ಹೇಮಂತ್, ಶಿವು, ಸಂಪತ್ ಮತ್ತು ಇತರರು ಉಪಸ್ಥಿತರಿದ್ದರು.

ಸಹಬಾಳ್ವೆ ಸಂದೇಶ ಸಾರಿದ ಸಂತ

• **ಗೌರಿಬಿದನೂರು:** ಜೈನ ಧರ್ಮ ಮತ್ತು ತತ್ವಶಾಸ್ತ್ರ ಅನಾದಿ ಕಾಲದಿಂದಲೂ ಹರಿಯುತ್ತಿದೆ. ಪ್ರತಿ ಯುಗದಲ್ಲಿ ಕ್ರಮವಾಗಿ ಒಂದರಿಂದ ಇಪ್ಪತ್ತನಾಲ್ಕು ತೀರ್ಥಂಕರರು ದೈವಿಕ ಧರ್ಮ ಘೋಷಿಸಿದ್ದಾರೆ ಎಂದು ಉಪ ತಹಸೀಲ್ದಾರ್ ಆಶಾ ತಿಳಿಸಿದರು. ಅವರು ನಗರದ ತಾಲೂಕು ಕಚೇರಿಯ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಮಹಾವೀರ ಜಯಂತಿ ಅಂಗವಾಗಿ ಮಹಾವೀರರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿದ ಅವರು, ದೇಶದ ಸಾಮಾಜಿಕ ಮತ್ತು ಧಾರ್ಮಿಕ ಪರಿಸ್ಥಿತಿ ಅತ್ಯಂತ ಅನಿಶ್ಚಯದಲ್ಲಿ ಸಿಲುಕಿದ್ದಾಗ ಭಗವಾನ್ ಮಹಾವೀರರು ಪರಸ್ಪರ ಸಹಬಾಳ್ವೆಯ ಸಂದೇಶ ಸಾರಿದ ಮಹಾನ್ ಸಂತ. ಅವರ ಆದರ್ಶ ಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಂಡು ಬದುಕನ್ನು ಹಸನಾಗಿಸಿಕೊಳ್ಳಬೇಕು ಎಂದರು. ರಾಜ್ಯ ಜೈನ ಸಂಘಟನೆಯ ಜಿಲ್ಲಾ ಸಮಿತಿ ದೇವರಾಜ್ ಸದಸ್ಯ ಮಾತನಾಡಿ, ಭಗವಾನ್ ಮಹಾ ವೀರರು ಅಹಿಂಸೆ, ಸತ್ಯ ಮತ್ತು ಸದ್ಭಾವನೆಯ ಸಂದೇಶವನ್ನು ಸಮಾಜದ ಪ್ರತಿಯೊಂದು ವರ್ಗಕ್ಕೂ ಹರಡಲು ನಿರಂತರವಾಗಿ ಶ್ರಮಿಸಿದರು. ಅವರ ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಮೂಲಕ ಸಾರ್ಥಕ ಜೀವನ ನಮ್ಮದಾಗಿಸಿಕೊಳ್ಳಬೇಕು. ಏ.5ರಂದು ಸಮುದಾಯದ ವತಿಯಿಂದ ಮಹಾವೀರ ಜಯಂತಿಯನ್ನು ಜೈನ ನಗರದಲ್ಲಿ ವಿಜೃಂಭಣೆಯ ಎಂದು ಮಹಾವೀರರ ಮೆರವಣಿಗೆ ಮೂಲಕ ಆಚರಿಸಲಾಗುವುದು ತಿಳಿಸಿದರು. ಜೆ. ದೇವಕುಮಾರ್, ಮುಖಂಡರಾದ ಬಿ.ಜೆ. ವಿಜಯ್‌ಕುಮಾರ್, ಉಜ್ವಲ್, ದಿನೇಶ್, ಪ್ರಜ್ವಲ್, ಸುರೇಶ್‌ಬಾಬು, ಭಾರತಿ, ಪದ್ಮಾ ಜೈನ್, ಪ್ರಭು, ಸುರೇಶ್ ಜೈನ್ ಹಾಗೂ ಇನ್ನಿತರರು ಹಾಜರಿದ್ದರು.



ತಾಲೂಕು ಕಚೇರಿಯ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಮಹಾವೀರ ಜಯಂತಿ ಅಂಗವಾಗಿ ಮಹಾವೀರರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು.

ಟ್ರಾನ್ಸ್ ಜೆಂಡರ್ ಮಸೂದೆ 2026 ತಿರಸ್ಕರಿಸಲು ತೃತೀಯಲಿಂಗಿಗಳ ಒತ್ತಾಯ

ಸಹಿಸಂಗ್ರಹ ಆಂದೋಲನ



ಕಾನೂನಿನ ನೆರವು ನೀಡಿ

ಕೇಂದ್ರ ಸರಕಾರವು ಲಿಂಗತ್ವ ಅಲ್ಪಸಂಖ್ಯಾತರ ಕಾಯ್ದೆ 2019ಕ್ಕೆ ತಿದ್ದುಪಡಿ ಮಾಡಲು ಮುಂದಾಗಿದೆ. ಈ ಸಂಬಂಧ ಲೋಕಸಭೆ, ರಾಜ್ಯ ಸಭೆಯಲ್ಲಿ ಮಸೂದೆ ಅಂಗೀಕಾರವೂ ಆಗಿದೆ. ನಿಜವಾದ ಸಂತ್ರಸ್ತರಿಗೆ ಕಾನೂನಿನ ನೆರವು ಸಿಗುವಂತೆ ಮಾಡುವ ಉದ್ದೇಶದಿಂದ ಮಸೂದೆ ರೂಪಿಸಲಾಗಿದೆ ಎಂದು ಕೇಂದ್ರ ಹೇಳಿದೆ.

• **ಚಿಕ್ಕಬಳ್ಳಾಪುರ:** ಕೇಂದ್ರ ಸರಕಾರ ಇತ್ತೀಚೆಗೆ ಲೋಕಸಭೆಯಲ್ಲಿ ಮಂಡಿಸಿದ ಟ್ರಾನ್ಸ್ ಜೆಂಡರ್ 2026ರ ಮಸೂದೆಯನ್ನು ಈ ಕೂಡಲೇ ವಾಪಸ್ಸು ಪಡೆಯಬೇಕು. ಸದರಿ ಕಾಯ್ದೆಯು ಟ್ರಾನ್ಸ್ ಜೆಂಡರ್ ಸಮುದಾಯದ ವೈಯಕ್ತಿಕ ಹಕ್ಕು, ಘನತೆಯ ಬದುಕು ಮತ್ತು ಗುರುತನ್ನು ಸಮರ್ಪಕವಾಗಿ ರಕ್ಷಿಸುವಲ್ಲಿ ವಿಫಲವಾಗಲಿದೆ ಎಂದು ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದರು.

ನಗರದ ಖಾಸಗಿ ಬಸ್‌ನಿಲ್ದಾಣದ ಬಳಿ ಏರ್ಪಡಿಸಿದ್ದ 2026ರ ಕಾಯ್ದೆಯ ವಿರುದ್ಧದ ಸಹಿ ಸಂಗ್ರಹ ಆಂದೋಲನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಆದರೆ ಲಿಂಗತ್ವ ಅಲ್ಪಸಂಖ್ಯಾತರು ಯಾರು ಎಂಬುದನ್ನು ಸಂಕುಚಿತವಾಗಿ ವ್ಯಾಖ್ಯಾನಿಸಲಾಗಿದೆ. ಅವರ ಲಿಂಗತ್ವದ ಗುರುತಿನ ಸ್ವಯಂಘೋಷಣೆ ಮತ್ತು ಇತರೆ ಹಕ್ಕುಗಳನ್ನು ಮೊಟಕುಗೊಳಿಸುವಂತಹ ಅಂಶಗಳು ಮಸೂದೆಯಲ್ಲಿವೆ ಎಂದು ಸಂಘಟನೆ ಮುಖಂಡರು ಆರೋಪಿಸಿದರು. 2026ರ ತಿದ್ದುಪಡಿ ಮಸೂದೆಯು ಹಿಜ್ರಾ, ಕಿನ್ನರ್, ಮಂಗಳಮುಖಿ, ತಿರುನಂಬಿ, ನುಪಿಮಾನ್ಬಿ, ಕೋಥಿ, ಶಿವಶಕ್ತಿ, ಜೋಗಿನಿ, ಮರುಳಾಡಿ, ಯೆಜ್ಜೋಡು, ಮತ್ತು ಧುರಾನಿ ಮುಂತಾದ ಟ್ರಾನ್ಸ್ ಜೆಂಡರ್ ಮಹಿಳೆಯರು, ಟ್ರಾನ್ಸ್ಜೆಂಡರ್‌ಗಳು, ಇಂಟರ್‌ಸೆಕ್ಸ್ ಮತ್ತು ಲಿಂಗ ವೈವಿಧ್ಯಮಯ ಸಮುದಾಯದ ಹಿತಾಸಕ್ತಿಗಾಗಿ ಕೇಂದ್ರ ಈ ಕೂಡಲೇ 2026ರ ಮಸೂದೆ ವಾಪಸ್ಸು ಪಡೆಯಬೇಕು ಎಂದು ಮನವಿ ಮಾಡಿದರು. ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ ವರ್ಸಸ್ ಭಾರತ ಒಕ್ಕೂಟ ಎನ್‌ಎಲ್‌ಎಸ್‌ಎ-2026ರ ಪ್ರಕರಣದಲ್ಲಿ ಸುಪ್ರೀಂಕೋರ್ಟ್ ಲಿಂಗ ಗುರುತಿನ ಕಾನೂನು ಮಾನ್ಯತೆಯನ್ನು ಜೈವಿಕ ಸಂಗತಿಗಳಿಗಿಂತ ವ್ಯಕ್ತಿಯ ಸ್ವಯಂ ಗ್ರಹಿಕೆಯೇ ಆಧಾರವಾಗಿತ್ತು.

ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವ ಡಾ.ವೀರೇಂದ್ರ ಕುಮಾರ್ ಅವರು ಮಾ.12ರಂದು ಲೋಕಸಭೆಯಲ್ಲಿ ಮಂಡಿಸಿದ ಟ್ರಾನ್ಸ್ಜೆಂಡರ್ ವ್ಯಕ್ತಿಗಳ ಹಕ್ಕುಗಳ ರಕ್ಷಣೆ ತಿದ್ದುಪಡಿ ಮಸೂದೆ-2026 ತಮ್ಮದೇ ಆದ ತಪ್ಪಿಲ್ಲದೆ ಮತ್ತು ತಮ್ಮದೇ ಆದ ಆಯ್ಕೆಯಿಲ್ಲದೆ ಜೈವಿಕ ಕಾರಣಗಳಿಂದ ತೀವ್ರ ಸಾಮಾಜಿಕ ಬಹಿಷ್ಕಾರವನ್ನು ಎದುರಿಸುವವರನ್ನು ಮಾತ್ರ ರಕ್ಷಿಸುವ ಉದ್ದೇಶವನ್ನು ಹೊಂದಿದೆ ಎಂದು ದೂರಿದರು.

ಲಿಂಗತ್ವ ಅಲ್ಪಸಂಖ್ಯಾತ ಸಮುದಾಯದ ಶಿಲ್ಪಾ ಮಾತನಾಡಿ 2019ರ ಕಾಯ್ದೆಯ ಪ್ರಕಾರ ಲಿಂಗತ್ವ ಅಲ್ಪಸಂಖ್ಯಾತರು ಎಂದರೆ ಹುಟ್ಟಿನಿಂದ ದತ್ತವಾದ ಲಿಂಗತ್ವಕ್ಕಿಂತ ಭಿನ್ನವಾದ ಲಿಂಗತ್ವ ಹೊಂದಿರುವವರು. ಅಂದರೆ ಹುಟ್ಟಿದಾಗ ಗಂಡಾಗಿದ್ದು ನಂತರ ಹೆಣ್ಣಾಗಿ ಬದಲಾಗಿರಬಹುದು.ಹುಟ್ಟಿದಾಗ ಗಂಡಾಗಿ ಇದ್ದವರು ನಂತರ ಹೆಣ್ಣಾಗಿರಬಹುದು.ಅಂತರ ಲಿಂಗತ್ವ ಹೊಂದಿರಬಹುದು. ಇಲ್ಲವೆ ಕಿನ್ನರ್, ಹಿಜ್ರಾ ಅರವಣಿ, ಮತ್ತು ಜೋಗತಿ ಇಂತಹ ಸಾಮಾಜಿಕ ಸಾಂಸ್ಕೃತಿಕ ಚಹರೆಗಳನ್ನು ಹೊಂದಿರುವವರು ಲಿಂಗ ಬದಲಾವಣೆಯ ಶಸ್ತ್ರಚಿಕಿತ್ಸೆಗೆ ಲೇಸರ್ ಥೆರಪಿ, ಹಾರ್ಮೋನ್ ಥೆರಪಿ ಇತಾದಿಗಳಿಗೆ ಒಳಗಾಗಿರಬಹುದು.ಇಲ್ಲದಿರಬಹುದು, 100ಕ್ಕೂ ಹೆಚ್ಚು ಲಿಂಗತ್ವ ಅಲ್ಪಸಂಖ್ಯಾತ ಸಮುದಾಯವರು ಭಾಗಿಯಾಗಿ ಸಹಿ ಸಂಗ್ರಹ ಮಾಡಿ ರಾಷ್ಟ್ರಪತಿಗಳಿಗೆ ಕಳಿಸಿಕೊಡುವ ಕೆಲಸ ಮಾಡಿದರು. ಅಭಿಯಾನದಲ್ಲಿ ಭೂಮಿ ಹಕ್ಕು ಸಂಘಟನೆ ಮುಖಂಡರು, ಹಳ್ಳಿ ಮಕ್ಕಳ ಸಂಘದ ಮುಖಂಡರು ಇದ್ದರು.

ಪರವಾನಿಗೆ ಪಡೆಯದೆ ಪಿಯು ಕಾಲೇಜು ನಿರ್ವಹಣೆ: ಆರೋಪ



• **ಚಿಂತಾಮಣಿ:** ಅನಧಿಕೃತ ಜೆಪಿ ಅಕಾಡೆಮಿ ಫ್ಲೇಕ್ಸ್ ಗಳನ್ನು ಅಳವಡಿಸಿಕೊಂಡು ನಗರದ ಅಂಜನಿ ಬಡಾವಣೆಯ ಪ್ರಭಾಕರ್ ಲೇಔಟ್‌ನ ಎನ್‌ಎನ್‌ಕೆ ಬಿಲ್ಡಿಂಗ್ ಎರಡನೇ ಮಹಡಿಯಲ್ಲಿ ಜೆ.ಪಿ.ಅಕಾಡೆಮಿ ಹೆಸರಿನಲ್ಲಿ ಸರ್ಕಾರ ಮತ್ತು ಶಿಕ್ಷಣ ಇಲಾಖೆಯಿಂದ ಅನುಮತಿ ಪಡೆಯದೇ ಪಿಯು ಕಾಲೇಜನ್ನು ನಡೆಸಲಾಗುತ್ತಿದೆಂದು ಸಾಮಾಜಿಕ ಪರಿವರ್ತನಾ ಸಂಘಟನೆಯ ಜಿಲ್ಲಾ ಕಾರ್ಯದರ್ಶಿ ಮದುಲತಾ ದೂರಿದರು.

ನಗರದ ಪ್ರವಾಸಿ ಮಂದಿರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ ಚಿಂತಾಮಣಿ ತಾಲ್ಲೂಕಿನಲ್ಲಿ ಎರಡು ಕಡೆ ಜೆ.ಪಿ ಅಕಾಡೆಮಿ ಎಂದು ನಮೂದಿಸಿದ್ದು ಕೈವಾರ ಕ್ರಾಸ್‌ನಲ್ಲಿರುವ ಜೆ.ಪಿ ಅಕಾಡೆಮಿ ಮತ್ತು ಚಿಂತಾಮಣಿಯಲ್ಲಿರುವ ಜೆ.ಪಿ.ಅಕಾಡೆಮಿ ಇದ್ದು ಇದರಲ್ಲಿ ಚಿಂತಾಮಣಿಯಲ್ಲಿರುವ ಜೆ.ಪಿ.ಅಕಾಡೆಮಿ ಯಾವುದೇ ಪರವಾನಿಗೆ ಪಡೆಯದೇ ಅನಧಿಕೃತವಾಗಿ ಫ್ಲೇಕ್ಸ್ ಅಳವಡಿಸಿಕೊಂಡುವಿದ್ಯಾರ್ಥಿಗಳಿಗೆಬೋಧನೆ ಮಾಡುತ್ತಿದ್ದಾರೆಂದು ನುಡಿದ ಅವರು ನಮ್ಮ ಮುಖ್ಯ ಧ್ಯೇಯ ವಿದ್ಯಾರ್ಥಿಗಳಿಗೆ ಹಾಗೂ ಲಕ್ಷಾಂತರ ರೂ ನೀಡಿ ಉತ್ತಮ ಶಿಕ್ಷಣ ಪಡೆಯಲೆಂಬ ಪೋಷಕರ ಶ್ರಮಕ್ಕೆ ಬೆಲೆಯಿಲ್ಲದಂತಾಗಿದ್ದು, ಯಾವುದೇ ಕಾರಣಕ್ಕೂ ವಿದ್ಯಾರ್ಥಿಗಳಿಗೆ ಅನ್ಯಾಯ ವಾಗದಂತೆ ಶಿಕ್ಷಣವನ್ನು ಒದಗಿಸಬೇಕೆಂಬುದೇ ನಮ್ಮ ಹೋರಾಟವಾಗಿದೆಯೆಂದರು.

ಡಿಡಿಪಿಯು ಶ್ರೀಷಾದ್ರಿರಾವ್‌ರಿಗೆ ಜಿಲ್ಲಾಧಿಕಾರಿಗಳು ಖುದ್ದು ಕರೆ ಮಾಡಿ ಅನಧಿಕೃತವಾಗಿರುವ ಅಕಾಡೆಮಿಯ ಮೇಲೆ ಕೇಸು ದಾಖಲಿಸುವಂತೆ ಪೊಲೀಸರ ಸಹಕಾರದೊಂದಿಗೆ ತೆರಳುವಂತೆ ತಿಳಿಸಿದ್ದಾರೆಂದು ಮಧುಲತಾ ತಿಳಿಸಿದರು. ಜಿಲ್ಲಾಧ್ಯಕ್ಷ ಎ.ಎ. ವೆಂಕಟರಾಮ ಮಾತನಾಡಿ ಶಿಕ್ಷಣ ಇಲಾಖೆಯು ಯಾವುದೇ ಕ್ರಮ ವಹಿಸದೇ ಮೌನವಾಗಿರುವುದು ಹಲವು ಅನುಮಾನಗಳಿಗೆ ಎಡ ಮಾಡಿಕೊಟ್ಟಿದ್ದು, ಈಗಾಗಲೇ ಪ್ರವೇಶ ದಾಖಲಾತಿ ಪ್ರಾರಂಭವಾಗಿವೆಯೆಂದು ಶಿಕ್ಷಣ ಇಲಾಖೆಯ ನಿಯಮಗಳನ್ನು ಉಲ್ಲಂಘಿಸಿ ಜೆಪಿ ಅಕಾಡೆಮಿ ವಂಚನೆ ಮಾಡುತ್ತಿರುವ ಬಗ್ಗೆ ಉಪನಿರ್ದೇಶಕರು ಪದವಿಪೂರ್ವ ಶಿಕ್ಷಣ ಇಲಾಖೆರಿಗೆ ಮನವಿ ನೀಡಲಾಗಿದೆ. ಜಿಲ್ಲಾ ಕಾರ್ಯದರ್ಶಿ ಮದುಲತಾ, ರೈತ ಸಂಘದ ತಾಲೂಕು ಅಧ್ಯಕ್ಷ ರವಿಪ್ರಕಾಶ್, ಟಿಪ್ಪು ಸೆಕ್ಯುಲರ್ ಸೇನೆಯ ಜಿಲ್ಲಾಧ್ಯಕ್ಷ ಮೊಹಿಯುದ್ದಿನ್ ಪಾಷಾ ಇದ್ದರು.

ನೂತನ ಕಟ್ಟಡಗಳ ಪರಿಶೀಲನೆ

• **ಬಾಗೇಪಲ್ಲಿ:** ನೂತನ ತಾಲೂಕು ಚೇಳೂರು ಕೇಂದ್ರದಲ್ಲಿ ನ್ಯಾಯಾಲಯ ಅತಿ ಶೀಘ್ರದಲ್ಲೇ ಪ್ರಾರಂಭಿಸಲು 12 ಗ್ರಾಪಂಗಳ ಜನರಿಗೆ ಅನುಕೂಲಕರವಾಗುವ ಸ್ಥಳದಲ್ಲಿ ಬಾಡಿಗೆ ಕಟ್ಟಡದಲ್ಲಿ ಪ್ರಾರಂಭ ಮಾಡಲು ಇಂದು ಸಂಜೆ ಬಾಗೇಪಲ್ಲಿ ತಾಲೂಕು ಸಿವಿಲ್ ನ್ಯಾಯಾಲಯದ ನ್ಯಾಯಾಧೀಶರಾದ ಮಂಜುನಾಥಚಾರಿ ಮತ್ತು ಹಿರಿಯ ಶ್ರೇಣಿ ನ್ಯಾಯಾಲಯದ ನ್ಯಾಯಧೀಶೆ ಭಾರತಿ ಚೇಳೂರು ನೂತನ ತಾಲೂಕಿಗೆ ಕಟ್ಟಡಗಳ ಪರಿ ಶೀಲನೆ ಮಾಡಿದರು. ಬಾಗೇಪಲ್ಲಿ ರಸ್ತೆಯಲ್ಲಿ ಉತ್ತಮ ಕಟ್ಟಡವೊಂದು ನೋಡಿದರು ಉಳಿದ ಕಟ್ಟಡಗಳನ್ನು ನ್ಯಾಯಾಧೀಶರು ಜಂಟಿಯಾಗಿ ಪರೀಲೀಸಿದರು.

ಬಾಗೇಪಲ್ಲಿ ತಾ.ವಕೀಲರ ಸಂಘದ ಜೆ.ಎನ್.ಮಂಜುನಾಥ್, ಮಾಜಿ ಅಧ್ಯಕ್ಷರಾದ ಎ.ಜಿ.ಸುಧಾಕರ್, ನಂಜುಂಡಪ್ಪ, ವಕೀಲರಾದ ರಘು, ಚಾಂದ್ ಬಾಷ, ನಾರಾಯಣ್, ಸಿ.ವಿ.ನರೇಂದ್ರರೆಡ್ಡಿ, ಕಂದಾಯ ನೀರಿಕ್ಷಕ ಎಂ.ಎನ್.ಈಶ್ವರ್. ವೈ.ವೆಂಕಟೇಶ್, ಚೇಳೂರು ತಾ. ಅಭಿವೃದ್ಧಿ ಹೋರಾಟ ಸಮಿತಿಯ ಗುನ್ನಾ ಪಾಪಿರೆಡ್ಡಿ, ಪೇಪರ್ ಜೆ.ವಿ.ಚಲಪತಿ, ಆರ್.ವೆಂಕಟೇಶ್‌ರವರುಗಳು ಹಾಜರಿದ್ದು ಸಲಹೆಗಳನ್ನು ನೀಡಿದರು. ಈ ಹಿಂದೆ ಚೇಳೂರು ತಾಲೂಕಿಗೆ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಸ್ಥಾಪನೆ ಮಾಡಲು ಕೆಲ ಮಾಹಿತಿಗಳನ್ನು ನೀಡಲು ರಾಜ್ಯ ಹೈಕೋರ್ಟ್‌ನಿಂದ ಜಿಲ್ಲಾಪ್ರಧಾನ ಸತ್ರ ನ್ಯಾಯಾಧೀಶರಿಗೆ ಆದೇಶ ಹೊರಡಿಸಿದ್ದರು.

ನ್ಯಾಯಾಲಯ ಸ್ಥಾಪಿಸಲು ಕಾರ್ಯಸಾಧ್ಯತೆ. ಚೇಳೂರು ತಾಲೂಕಿನ 12 ಗ್ರಾ.ಪಂ.ಗಳು ಚಿಂತಾಮಣಿ ಮತ್ತು ಬಾಗೇಪಲ್ಲಿ ವ್ಯಾಪ್ತಿಗೆ ಬಂದಿದ್ದು ಎರಡು ತಾಲೂಕುಗಳಲ್ಲಿ 12 ಗ್ರಾ.ಪಂ. ಗಳಲ್ಲಿ ಜಮೀನು ವಿವಾದ. ಖಾಲೀ ನಿವೇಶನ. ಮನೆ. ಹಣಕಾಸಿನ ವ್ಯವಹಾರ. ಗಂಡ ಹೆಂಡತಿಯರ ವ್ಯಾಜ್ಯ. ಇತರೆ ಪ್ರಕರಣ ಗಳು ಬಾಕಿ ಎಷ್ಟಿವೆ. ಹಾಗೂ ಪ್ರಸ್ತಾವಿಕ ನ್ಯಾಯಾಲಯಕ್ಕೆ ಕಟ್ಟಡ. ವಸತಿ. ಎಂಬುದರ ಬಗ್ಗೆ ಮಾಹಿತಿ ಸಂಗ್ರಹಿಸಲು ಸೂಚಿಸಿದ್ದು ಸ್ಮರಿಸಬಹುದು.



ಬಾಗೇಪಲ್ಲಿ ತಾಲೂಕು ಸಿವಿಲ್ ನ್ಯಾಯಾಲಯದ ನ್ಯಾಯಾಧೀಶರಾದ ಮಂಜುನಾಥಾಚಾರಿ ಮತ್ತು ಹಿರಿಯ ಶ್ರೇಣಿ ನ್ಯಾಯಾಲಯದ ನ್ಯಾಯಧೀಶೆ ಭಾರತಿ ಜಂಟಿಯಾಗಿ ಪರಿಶೀಲನೆ ನಡೆಸಿದರು.

ಸೀಕಲ್ ರಾಮಚಂದ್ರಗೌಡಗೆ ಮಣ್ಣಿನ ಮಗ ಪ್ರಶಸ್ತಿ

• **ಶಿಡ್ಲಘಟ್ಟ:** ಚಿಕ್ಕಬಳ್ಳಾಪುರ ಜಿಲ್ಲೆಯ ಬಿಜೆಪಿ ಅಧ್ಯಕ್ಷ ಹಾಗೂ ಪ್ರಗತಿಪರ ರೈತ ಕೃಷಿ ಕ್ಷೇತ್ರದಲ್ಲಿ ಸಾಕಷ್ಟು ಸಾಧನೆ ಮಾಡಿ ಯಶಸ್ಸುಗಳಿಸಿದ ಸೀಕಲ್ ರಾಮಚಂದ್ರಗೌಡಗೆ ಆಸ್ಟ್ರೇಲಿಯಾದ ಸಮಾರಂಭದಲ್ಲಿ ಮೆಲ್ಬೋರ್ನ್ ಕನ್ನಡ ಸಂಘ ಮತ್ತು ಒಕ್ಕಲಿಗ ಯುವ ಬ್ರಿಗೇಡ್ ವತಿಯಿಂದ ಆಯೋಜಿಸಿದ ಪ್ರತಿಷ್ಠಿತ ಮಣ್ಣಿನ ಮಗ ಪ್ರಶಸ್ತಿ ನೀಡಿ ಗೌರವಿಸಲಾಯಿತು.



ಪ್ರಶಸ್ತಿ ಸ್ವೀಕರಿಸಿ ತಾಯ್ನಾಡಿಗೆ ಹಿಂತಿರುಗಿದ ನಂತರ ಸುದ್ದಿಗಾರರೊಂದಿಗೆ ಪ್ರತಿಕ್ರಿಯಿಸಿದ ರಾಮಚಂದ್ರಗೌಡ ರವರು ತಮಗೆ ಈ ಪ್ರಶಸ್ತಿ ದೊರಕಿರುವುದು ಸಂತೋಷ ತಂದಿದೆ.ಈ ಪ್ರಶಸ್ತಿ ನೀಡಿದ ಕಾರಣಕರ್ತರಾದವರಿಗೆ ನಾನು ಕೃತಜ್ಞನಾಗಿದ್ದೇನೆ ಎಂದರು.ಪ್ರತಿಷ್ಠಿತ ಪ್ರಶಸ್ತಿಯನ್ನು ಆದಿಚುಂಚನಗಿರಿ ಮಹಾ ಸಂಸ್ಥಾನ ಮಠದ ನಿರ್ಮಲಾನಂದನಾಥ ರವರಿಂದ ಮಹಾಸ್ವಾಮೀಜಿ ಸ್ವೀಕರಿಸಿದ್ದು ನನಗೆ ದೊರಕಿದ ಅತ್ಯಂತ ದೊಡ್ಡ ಗೌರವವಾಗಿದೆ ಎಂದು ಸಹ ವಿಶ್ಲೇಷಿಸಿದರು. ಭಾಗವಹಿಸಿದ ಮೈಸೂರು ಮತ್ತು ಕೊಡಗು ಕ್ಷೇತ್ರದ ಲೋಕಸಭಾ ಸಂಸದರಾದ ರಾಜು ವಂಶಸ್ಥರಾದ ಶ್ರೀ ಯದುವೀರ್ ಒಡೆಯರ್ ಅವರಿಗೂ ಲೋಕಸಭಾ ಸಂಸದರು ಹಾಗೂ ಗೌರವವನ್ನು ಸಲ್ಲಿಸಲಾಯಿತು ಎಂದು ತಿಳಿಸಿದರು. ವಿಕ್ಟೋರಿಯಾ ಸರ್ಕಾರದ ಸಚಿವೆ ಕ್ಯಾಸ್ಸೇನ್ಸ ಫೆರ್ನಾಂಡೋ,ಮೇಲ್ಬೋರ್ನ್ ಸಂಸದೆ ಈಡನ್ ಫಾಸ್ಟರ್,ಸಂಸದ ಜೋಹಾನ್ ಮುಲ್ಲಾಹೇಯ್ ಭಾರತೀಯ ರಾಯಭಾರಿ ಅನಿಶ್ ರಂಜನ್, ರವಾಂಡಾ ಹೈ ಕಮಿಷನರ್ ಮೋಹನ್ಸು ರೇಶ,ವಿಕ್ಟೋರಿಯಾ,ಮೇಯರ್ ಸೊಫಿನಾಥ್,ಪೂಜ್ಯ ಶ್ರೀ ಪ್ರಸನ್ನನಾಥ ಸ್ವಾಮೀಜಿಗಳು ಶ್ರೀನಿವಾಸ್ ಶರ್ಮ ಉಪಸ್ಥಿತರಿದ್ದರು. ಈ ಕಾರ್ಯಕ್ರಮದ ವಿವರವನ್ನು ನೀಡಿದರು. ವಿದೇಶದಲ್ಲಿನ ಸಂಘ ಸಂಸ್ಥೆ ನೀಡಿದ ಪ್ರತಿಷ್ಠಿತ ಮಣ್ಣಿನ ಮಗ ಪ್ರಶಸ್ತಿ ಪುರಸ್ಕೃತ ರಾಮಚಂದ್ರಗೌಡ ರವರನ್ನು ಅವರ ಅಭಿಮಾನಿಗಳು ತುಂಬು ಹೃದಯದಿಂದ ಶ್ಲಾಘಿಸಿದ್ದಾರೆ.

ಏ.3ರಿಂದ ಭಕ್ತರಹಳ್ಳಿಯಲ್ಲಿ ರಾಷ್ಟ್ರ ಸೇವಾ ದಳದ ಶಿಬಿರ

• **ಶಿಡ್ಲಘಟ್ಟ:** ಮಕ್ಕಳ ಭೌದ್ಧಿಕ ವಿಕಸನಕ್ಕೆ ನೆರವಾಗಲೆಂದು ಭಕ್ತರಹಳ್ಳಿಯ ಬಿ.ಎಂ.ವಿ ಎಜುಕೇಷನ್ ಟ್ರಸ್ಟ್ ಹಾಗೂ ಸಮಾಜವಾದಿ ಅಧ್ಯಯನ ಕೇಂದ್ರದ ಜಂಟಿ ಆಶ್ರಯದಲ್ಲಿ ತಾಲ್ಲೂಕಿನ ಭಕ್ತರಹಳ್ಳಿಯ ಬಿ.ಎಂ.ವಿ ವಿದ್ಯಾಸಂಸ್ಥೆಯಲ್ಲಿ ರಾಷ್ಟ್ರ ಸೇವಾ ದಳದ 8 ದಿನಗಳ ವಸತಿ ಶಿಬಿರವನ್ನು ಏಪ್ರಿಲ್ 3ರಿಂದ 10ರವರೆಗೂ ಯೋಜಿಸಿದ್ದೇವೆ ಎಂದು ಬಿ.ಎಂ.ವಿ ಸಂಸ್ಥೆಯ ಕಾರ್ಯದರ್ಶಿ ಎಲ್.ಕಾಳಪ್ಪ ತಿಳಿಸಿದರು . ನಗರದ ಪತ್ರಕರ್ತರ ಭವನದಲ್ಲಿ ಸೋಮವಾರ ಅವರು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಪ್ರೌಢಶಾಲಾ ಮಕ್ಕಳಿಗೆ ಕಿರಿಯ ವಯಸ್ಸಿನಲ್ಲಿಯೇ ಸಮಾಜವಾದದಮೂಲಪರಿಕಲ್ಪನೆಗಳಾದಸ್ವಾತಂತ್ರ್ಯ, ಸಮಾನತೆ ಹಾಗೂ ಸಹೋದರಭಾವಗಳ ಜೊತೆಗೆ ರಾಷ್ಟ್ರೀಯತೆ ಮತ್ತು ವೈಜ್ಞಾನಿಕ ಮನೋಭಾವಗಳನ್ನು ಬೆಳೆಸಿಕೊಳ್ಳಬೇಕೆಂಬ ಉದ್ದೇಶದಿಂದ ಈ ಶಿಬಿರವನ್ನು ನಡೆಸುತ್ತಿದ್ದೇವೆ. ರಾಷ್ಟ್ರ ಸೇವಾ ದಳವು ರಾಷ್ಟ್ರೀಯತೆ, ಪ್ರಜಾಪ್ರಭುತ್ವ, ಸಮಾಜವಾದ, ಸಮಾನತೆ, ಜಾತ್ಯಾತೀತ ಹಾಗೂ ಸಹೋದರಭಾವ ತತ್ವವನ್ನು ಹೊಂದಿದೆ ಎಂದರು. ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷ ಹಾಗೂ ಅಪ್ಪಟ ಸಮಾಜವಾದಿ ಹಾಗೂ ಗಾಂಧಿವಾದಿ ಬಿ.ಆರ್.ಪಾಟೀಲ್ ಶಿಬಿರವನ್ನು ಉದ್ಘಾಟಿಸಲಿದ್ದಾರೆ. ಎಂಟೂ ದಿನಗಳ ಶಿಬಿರದಲ್ಲಿ ನಾಡಿನ ಅತ್ಯುತ್ತಮ ಭಾಷಣಕಾರರು ಆಗಮಿಸಲಿದ್ದು, ವಿಜ್ಞಾನ, ತಂತ್ರಜ್ಞಾನ, ಕೃಷಿ, ಸಮಾನತೆ, ಭಾರತದ ಜನತಂತ್ರ ವ್ಯವಸ್ಥೆ ಮತ್ತು ಸಂವಿಧಾನ ಮುಂತಾದ ವಿಚಾರಗಳ ಬಗ್ಗೆ ಮಕ್ಕಳಿಗೆ ಅರ್ಥವಾಗುವ ಹಾಗೆ ವಿವರಿಸಲಿದ್ದಾರೆ. ಪಠ್ಯದಲ್ಲಿಲ್ಲದ ಅನೇಕ ಅತ್ಯವಶ್ಯಕ ವಿಚಾರಗಳನ್ನು ಮಕ್ಕಳು ಕಲಿಯಲಿದ್ದಾರೆ ಎಂದರು. ಬಿಎಂವಿ ವಿದ್ಯಾಸಂಸ್ಥೆಯ ಟ್ರಸ್ಟಿ ಸಂತೆ ನಾರಾಯಣಸ್ವಾಮಿ ಮಾತನಾಡಿ, ಗ್ರಾಮೀಣ ಭಾಗದಲ್ಲಿ ಮಕ್ಕಳಿಗೆ ಅತ್ಯುತ್ತಮ ಶಿಕ್ಷಣವನ್ನು ಕನ್ನಡ ಮಾಧ್ಯಮದಲ್ಲಿ ನೀಡುತ್ತಿರುವುದರ ಜೊತೆಗೆ, ವರ್ಷಕ್ಕೊಮ್ಮೆ ಮಕ್ಕಳ ದೈಹಿಕ ಮತ್ತು ಮಾನಸಿಕ ಬೆಳವಣಿಗೆಗೆ ಜೀವನಾವಶ್ಯಕ ಮಾರ್ಗದರ್ಶಿ ಶಿಬಿರವನ್ನು ಸಹ ಆಯೋಜಿಸುತ್ತಿದ್ದೇವೆ ಎಂದು ತಿಳಿಸಿದರು.

ಗೊಟ್ಲಗುಂಟೆಯಲ್ಲಿ ವಿಶ್ವ ರಂಗಭೂಮಿ ದಿನಾಚರಣೆ

ಕಲಾಸಂಘದಿಂದ ಕಲಾವಿದರಿಗೆ ಪ್ರೋತ್ಸಾಹ

• **ಗೌರಿಬಿದನೂರು:** ಕರ್ನಾಟಕ ನಾಟಕ ಅಕಾಡೆಮಿ ಬೆಂಗಳೂರು ಮತ್ತು ಗೊಟ್ಲಗುಂಟೆಯ ಗ್ರಾಮೀಣ ಯುವಕಲಾಸಂಘ ಇವರ ಸಹಯೋಗದಲ್ಲಿ ಗೊಟ್ಲಗುಂಟೆ ಗ್ರಾಮದ ನೆಲದೇವತೆ ಮಾರಮ್ಮನ ಗುಡಿಯ ಪ್ರಾಂಗಣದಲ್ಲಿ ವಿಶ್ವ ರಂಗಭೂಮಿ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.



ಕರ್ನಾಟಕ ನಾಟಕ ಅಕಾಡೆಮಿ ಸದಸ್ಯರಾದ ಅಮಾಸ ಕೆ.ವಿ.ನಾಯಕ್ ಪ್ರಾಸ್ತಾವಿಕವಾಗಿ ಮಾತನಾಡಿ, ವಿಶ್ವ ರಂಗಭೂಮಿ ದಿನ ರಂಗ ಚಟುವಟಿಕೆಗಳಲ್ಲಿ ನಿರತರಾದವರನ್ನು ಹಾಗೂ ಸೇವೆ ಸಲ್ಲಿಸಿದವರನ್ನು ಸ್ಮರಿಸುವ ದಿನ. ಈ ದಿನದಂದು ರಂಗಭೂಮಿಯ ಹಿನ್ನೋಟ ಮತ್ತು ಮುನ್ನೋಟದ ಬಗ್ಗೆ ಪರಾಮರ್ಶೆ ಮಾಡಿ, ರಂಗ ಪಯಣದ ಕುರಿತಂತೆ ಚಿಂತನ ಮಂಥನ ಮಾಡಲಾಗುವುದು. ಗ್ರಾಮೀಣ ಯುವಕಲಾಸಂಘ ಅಸಂಖ್ಯಾತ ಕಲಾವಿದರನ್ನು ಪೋಷಿಸಿದ ಹೆಗ್ಗಳಿಕೆಯನ್ನು ಹೊಂದಿದೆ. ನನ್ನ ಪ್ರೀತಿಯ ಮೇಷ್ಟ್ರು ರಂಗಭೂಮಿ ಕಲಾವಿದ ಹೊಸೂರಿನ ಡಾ.ಎಚ್. ನರಸಿಂಹಯ್ಯ ಪ್ರೌಢಶಾಲೆಯ ನಿವೃತ್ತ ಮುಖ್ಯ ಶಿಕ್ಷಕರಾದ ಬಿ.ಎಂ. ರಾಮ ಸಿದ್ದಪ್ಪನವರ ನೆನಪಿನಲ್ಲಿ ಪ್ರತಿ ವರ್ಷ ಈ ದಿನದಂದು ರಂಗಭೂಮಿಯಲ್ಲಿ ಶ್ರಮಿಸಿದ ಕಲಾವಿದರನ್ನು ಗುರುತಿಸಿ ಅಮಾಸ ಸಂಸ್ಥೆಯಿಂದ ಬಿಎಂಆರ್ ರಂಗ ಪುರಸ್ಕಾರವನ್ನು ನೀಡುತ್ತಿದ್ದೇವೆ. ಮುಂದಿನ ದಿನಗಳಲ್ಲಿ ಈ ರೀತಿಯಾಗಿ ದೊಡ್ಡ ಮಟ್ಟದಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಿ ರಂಗ ಕಲೆಯನ್ನು ಉತ್ತೇಜಿಸಲಾಗುವುದೆಂದು ತಿಳಿಸಿದರು. ಮುಖ್ಯ ಅತಿಥಿಗಳಾದ ರಂಗಕರ್ಮಿ ಮತ್ತು ಸಾಹಿತಿಗಳಾದ ತೀರ್ಥ ಶಾಲೆಯ ಡಾ. ಕೆ.ವಿ.ಪ್ರಕಾಶ್ , ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಆರ್. ಜಿ.ಜನಾರ್ಧನ ಮೂರ್ತಿ , ಹಿರಿಯ ರಂಗಕರ್ಮಿಗಳಾದ ಪಿ.ಓಬಳೇಶ್ ಗೆದರೆಯ ಜಿ.ಸಿ.ಶ್ರೀನಿವಾಸ್, ಕಲಾವಿದರು ಚಿಂತಾಮಣಿ ಜಿ ಮುನಿರೆಡ್ಡಿ, ಕಲಾವಿದ ರಾಮಕೃಷ್ಣ, ರಂಗ ನಿರ್ದೇಶಕ ಕಲ್ಲುಡಿಯ ಜಿ. ನಂಜುಂಡಪ್ಪ, ಪತ್ರ ನಾಟಕದ ನಿರ್ದೇಶಕ ಮತ್ತು ಕಾರ್ಯಕ್ರಮದ ಆಯೋಜಕರಾದ ಗೊಟ್ಲುಗುಂಟೆ ವೆಂಕಟರಮಣಪ್ಪ, ವಿ.ವಿ ಪುರಂ ಆದರ್ಶ ಮಹಿಳಾ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಸ್ಥೆಯ ರೋಜಮ್ಮ, ಗ್ರಾಮೀಣ ಯುವಕಲಾ ಸಂಘದ ಕಾರ್ಯದರ್ಶಿಗಳಾದ ಗಂಗರಾಜು,ಶ್ರೀರಾಮ್ ಕಲಾವಿದರಾದ ಶಮೀರ, ಗಂಗಮ್ಮ, ವೆಂಕಟಸ್ವಾಮಿ,ಬಾಲಕೃಷ್ಣ ಹಾಗೂ ಊರಿನ ಪ್ರಮುಖರಾದ ನಾಗರಾಜು ಇದ್ದರು.

ಪಿ.ಲಂಕೇಶ್ ಸಾಹಿತ್ಯ, ಸಾಮಾಜಿಕ ಕಳಕಳಿ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮ

ಸಮಾಜದ ಪರವಾಗಿ ಧ್ವನಿ ಎತ್ತಿದ ವ್ಯಕ್ತಿ ಲಂಕೇಶ್

• **ಚಿಕ್ಕಬಳ್ಳಾಪುರ:** ರಾಜ್ಯ ರಾಜಕಾರಣ ಹಾಗೂ ಸಮಾಜದ ಅಂಕು ಡೊಂಕುಗಳನ್ನು ವಿಮರ್ಶಿಸುವ ಕೆಲಸ ಲಂಕೇಶ್ ಪತ್ರಿಕೆ ಮಾಡಿತು. ಭೂಗತ ಪಾತಕರನ್ನು ಸಹ ನಿರ್ಭೀತಿಯಿಂದ ಬಯಲಿಗೆಳೆದ ಪತ್ರಕರ್ತರಾಗಿ ಯಾವುದೇ ಹಮ್ಮುಬಿಮ್ಮು ಇಲ್ಲದೆ ಸಮಾಜದ ಪರವಾಗಿ ಧ್ವನಿ ಎತ್ತಿದ ವ್ಯಕ್ತಿ ಪಿ.ಲಂಕೇಶ್ ಆಗಿದ್ದರು ಎಂದು ಮಾಧ್ಯಮ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಕಾರ್ಯನಿರತ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಕಾಗತಿ ನಾಗರಾಜಪ್ಪ ತಿಳಿಸಿದರು.



ನಗರದ ಕೃಷ್ಣ ರುಕ್ಮಿಣಿ ಪದವಿ ಕಾಲೇಜಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಚಕೋರ' ಸಾಹಿತ್ಯ ವಿಚಾರ ವೇದಿಕೆ ವತಿಯಿಂದ ನಡೆದ ಪಿ.ಲಂಕೇಶ್ ಸಾಹಿತ್ಯ ಮತ್ತು ಸಾಮಾಜಿಕ ಕಳಕಳಿ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ವಿದ್ಯಾರ್ಥಿಗಳಾದ ನೀವು ಸಮಾಜದಲ್ಲಿ ನಡೆಯುವ ಅನ್ಯಾಯ ಮತ್ತು ಅಕ್ರಮಗಳನ್ನು ಖಂಡಿಸುವಂತಹ ಧೈರ್ಯ ತೋರಬೇಕಿದೆ ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದ ಅವರು ಪಿ.ಲಂಕೇಶ್ ಅವರು ನೇರ ನಿಷ್ಠುರ ಬರಹಗಾರರಾದ್ದರು. ಇವರ ಸಾಹಿತ್ಯ ಬರಹಗಳಲ್ಲಿ ವೈಚಾರಿಕತೆ, ಮಾನವೀಯತೆ ಹಾಗೂ ಸಾಮಾಜಿಕ ಕಳಕಳಿ ತುಂಬಿರುತ್ತಿತ್ತು. ಅವರ ಕಾಲಘಟ್ಟದಲ್ಲಿ ಲಂಕೇಶ್ ಪತ್ರಿಕೆಗೆ ಯಾವುದೇ ಜಾಹಿರಾತಿನ ಹಂಗಿಲ್ಲದೆ ಪತ್ರಿಕೋದ್ಯಮ ನಡೆಸಿದ ಧೀಮಂತ ವ್ಯಕ್ತಿಯಾಗಿದ್ದರು. ಪಿ ಲಂಕೇಶ್ ಅವರು ನಾಟಕ, ಕಥೆ, ಕಾವ್ಯ, ಕವನ, ವಿಮರ್ಶೆ, ರಂಗಭೂಮಿ, ಸಿನಿಮಾ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಗಣನೀಯವಾದ ಕೊಡುಗೆ ಕನ್ನಡ ನಾಡಿಗೆ ನೀಡಿದ್ದಾರೆ ಎಂದರು. ಕನ್ನಡ ಸಾಹಿತ್ಯ ಪುಸ್ತಕಗಳನ್ನು ಓದುವ ಮೂಲಕ ತಮ್ಮ ಜ್ಞಾನವನ್ನು ಬೆಳಸಿಕೊಳ್ಳಬೇಕು. ಅಷ್ಟೇ ಅಲ್ಲದೆ ತಮ್ಮಲ್ಲಿರುವ ಪ್ರತಿಭೆಯ ಮುಖಾಂತರ ವಿವಿಧ ಕೌಶಲ್ಯಗಳನ್ನು ಕಲಿತು ಸಮಾಜಲ್ಲಿ ಮುನ್ನಡೆಯಬೇಕು. ಆ ಮುಖಾಂತರ ನಾಡಿನ ಪ್ರಗತಿಗೆ ಉತ್ತಮ ಸಮಾಜ ನಿರ್ಮಾಣಕ್ಕೆ ಕಾರಣೀಭೂತರಾಗಬೇಕೆಂದು ವಿದ್ಯಾರ್ಥಿಗಳಿಗೆ ಜ್ಯೋತಿ ಬೆಳಗಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿ ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾ ಗೌರವ ಕಾರ್ಯದರ್ಶಿ ಎಸ್.ಎನ್.ಅಮೃತ್ ಕುಮಾರ್ ತಿಳಿಸಿದರು ತಿಳಿಸಿದರು. ಗಾಯಕರು ಹಾಗೂ ರಂಗಕರ್ಮಿ ಗ.ನ ಅಶ್ವಥ್ , ಅಧ್ಯಕ್ಷತೆ ವಹಿಸಿದ್ದ ಕೃಷ್ಣ ರುಕ್ಮಿಣಿ ಕಾಲೇಜು ಪ್ರಾಂಶುಪಾಲ ಪ್ರವೀಣ್ ಎನ್.ಕವಿ ಸರ್ದಾರ್ ಚಾಂದ್ ಪಾಷಾ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಚಕೋರ ಜಿಲ್ಲಾ ಸಂಚಾಲಕರಾದ ಪಾತಮುತ್ತಕಹಳ್ಳಿ ಮು. ಚಲಪತಿಗೌಡ, ಈ ಧರೆ ಪ್ರಕಾಶ್, ಪ್ರೇಮಲೀಲಾ ವೆಂಕಟೇಶ್, ಕವಿ ಶಿವಕುಮಾರ್ ಭಾಗವಹಿಸಿದ್ದರು.